ಶುಕ್ರವಾರ, ಆಗಸ್ಟ್ 25, 2023 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾಮಗಾರಿಗೆ ಶೀಘ್ರ ಚಾಲನೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಶಾಂತಿಧಾಮಗಳಾಗಿ 27,903 ಸ್ಮಶಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದ 27,903 ಸ್ಮಶಾನ ಭೂಮಿಯನ್ನು ಶಾಂತಿಧಾಮಗಳಾಗಿ ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ಶೀಘ್ರ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳ ಅನುಷ್ಠಾನ ಕುರಿತು ಗುರುವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಅರಿವು ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವ ಮೂಲಕ ಡಿಜಿಟಲ್ ಕಲಿಕಾ ಸಾಮಗ್ರಿಗಳು, ವೃತ್ತಿಪರ ಮಾರ್ಗದರ್ಶನ, ಸಂವಿಧಾನ ಶೈಕ್ಷಣಿಕ ವ್ಯವಸ್ಥೆ, ಅಂಗವಿಕಲರ ಸ್ನೇಹಿ ತಾಂತ್ರಿಕ ಸೌಲಭ್ಯ ನೀಡಲಾಗುತ್ತಿದೆ. ಶಾಲೆಯಿಂದ ಹೊರಗುಳಿದವರಿಗೆ ಈ ಯೋಜನೆಯಿಂದ ಅನುಕೂಲವಾಗುತ್ತದೆ ಎಂದರು.

ನರೇಗಾ ಯೋಜನೆಯಡಿ 5 ಸಾವಿರ ಗೋಮಾಳ, 50 ಸಾವಿರ ಎಕರೆ ಹುಲ್ಲುಗಾವಲು ಪ್ರದೇಶಗಳ ಅಭಿವೃದ್ಧಿ, ಬರ ಪರಿಹಾರ ಕಾಮಗಾರಿ 2 ಲಕ್ಷ , 81 ಸಾವಿರ ಪ್ರವಾಹ ನಿಯಂತ್ರಣ ಹಾಗೂ 4,268 ಭೂ ಕುಸಿತ ತಡೆ ಕಾಮಗಾರಿ ಕೈಗೊಳ್ಳಲಾಗುವುದು. 5 ಸಾವಿರ ಶಾಲಾ ಆವರಣಗಳನ್ನು ವಿದ್ಯಾಧಾಮಗಳಾಗಿ ಉನ್ನತೀಕರಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದರು.

ಕೂಸಿನ ಮನೆ ಶೀಘ್ರ ಅನುಷ್ಠಾನ: ಆರು ವರ್ಷದ ಒಳಗಿನ ಮಕ್ಕಳ ಆರೋಗ್ಯ, ಪೌಷ್ಟಿಕತೆ ಮತ್ತು ಸುರಕ್ಷತೆಗಾಗಿ ರಾಜ್ಯದಲ್ಲಿ ನಾಲ್ಕು ಸಾವಿರ 'ಕೂಸಿನ ಮನೆ'ಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಲು ಮುಖ್ಯಮಂತ್ರಿ ಸೂಚಿಸಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಮತ್ತು ಆಯುಕ್ತ ಅಂಜುಮ್ ಪರ್ವೇಜ್ ಉಪಸ್ಥಿತರಿದ್ದರು.

ಕಾರ್ಮಿಕರ ಹಾಜರಾತಿ ಕಡ್ಡಾಯ ಆದೇಶ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಕಾರ್ಡ್ ನವೀಕರಣಕ್ಕೆ ವೇತನ ಚೀಟಿ ಮತ್ತು ಹಾಜರಾತಿ ಪಟ್ಟಿ ಕಡ್ಡಾಯಗೊಳಿಸಿರುವ ಕಾರ್ಮಿಕ ಇಲಾಖೆಯ ಆದೇಶ ಹಿಂಪಡೆಯುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಮಿತಿಯ ಸದಸ್ಯರು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಮಿತಿಯ ಸದಸ್ಯರು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ

'ರಾಜ್ಯದಲ್ಲಿ ಬಾಕಿ ಇರುವ 2021–22ನೇ ಶೈಕ್ಷಣಿಕ ಸಾಲಿನ ಅರ್ಜಿಗಳಿಗೆ ಕೂಡಲೇ ಹಣ ವರ್ಗಾವಣೆ ಮಾಡಬೇಕು. ಪಿಂಚಣಿಗೆ ಅರ್ಜಿ ಸಲ್ಲಿಸಲು ಇರುವ ಮಿತಿ ತೆಗೆಯಬೇಕು. ನಕಲಿ ಕಾರ್ಡ್‌ಗಳ ಹಾವಳಿ ನಿಯಂತ್ರಿಸಿ, ನೈಜ ಕಾರ್ಮಿಕರನ್ನು ಮಾತ್ರ ನೋಂದಣಿ ಮಾಡಿಕೊಳ್ಳಬೇಕು. ಆರೋಗ್ಯ ಸಂಜೀವಿನಿ ಯೋಜನೆಯನ್ನು ಕಟ್ಟಡ ಕಾರ್ಮಿಕರ ಕುಟುಂಬಗಳಿಗೂ ಕಲ್ಪಿಸಬೇಕು' ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಒತ್ತಾಯಿಸಿದರು.

'ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿ ದುರ್ಬಳಕೆ ತಡೆಯಬೇಕು. ಮನೆ ನಿರ್ಮಾಣಕ್ಕೆ ₹ 5 ಲಕ್ಷ ಸಹಾಯಧನ ನೀಡಬೇಕು. ನಿರ್ಮಾಣ ಕಾರ್ಮಿಕರಿಗೆ ಭವಿಷ್ಯನಿಧಿ ಯೋಜನೆ ಜಾರಿಗೊಳಿಸಿ, ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು' ಎಂದು ಆಗ್ರಹಿಸಿದರು.

'ಕೇಂದ್ರ ಸರ್ಕಾರ ಜಾರಿಗೊಳಿಸುತ್ತಿರುವ ಕಾರ್ಮಿಕರ ವಿರೋಧಿ ಸಂಹಿತೆಗಳನ್ನು ರದ್ದುಗೊಳಿಸಬೇಕು. 1996ರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ, 1996ರ ಸೆಸ್ ಕಾಯ್ದೆ ಹಾಗೂ 1979ರ ಅಂತರರಾಜ್ಯ ವಲಸೆ ಕಾರ್ಮಿಕರ ಕಾಯ್ದೆಗಳನ್ನು ಬಲಪಡಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯದರ್ಶಿ ಭಾರತಿ ಡಿ. ಅವರು ಸ್ಥಳಕ್ಕೆ ಆಗಮಿಸಿ ಮನವಿ ಪತ್ರ ಸ್ವೀಕರಿಸಿದರು.

ನೇತ್ರದಾನ ಜಾಗೃತಿಗೆ ಮಧ್ಯರಾತ್ರಿ ಓಟ

ಬೆಂಗಳೂರು: ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಪ್ರಯುಕ್ತ ನಾರಾಯಣ ನೇತ್ರಾಲಯವು ನೇತ್ರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅಂಧರಿಗೆ ದೃಷ್ಟಿ ನೀಡಲು ಕಣ್ಣುಗಳನ್ನು ದಾನ ಮಾಡುವಂತೆ ಮನವಿ ಮಾಡಿಕೊಂಡಿದೆ.

'ಮರಣದ ಬಳಿಕ ಕಣ್ಣುಗಳ ದಾನದಿಂದ 'ಕಾರ್ನಿಯಲ್ ಅಂಧತ್ವ'ಕ್ಕೆ ಒಳಗಾದವರಿಗೆ ದೃಷ್ಟಿ ನೀಡಲು ಸಾಧ್ಯ. ಆದ್ದರಿಂದ ಪ್ರತಿಯೊಬ್ಬರೂ ನೇತ್ರದಾನದ ಮಹತ್ವ ಅರಿತು ಕಣ್ಣುಗಳನ್ನು ದಾನ ಮಾಡಬೇಕು. ನೇತ್ರದಾನ ಪಾಕ್ಷಿಕದ ಭಾಗವಾಗಿ ಸೆ.2ರ ರಾತ್ರಿ 11.59ಕ್ಕೆ 'ಮಧ್ಯರಾತ್ರಿ ಓಟ' ಹಮ್ಮಿಕೊಳ್ಳಲಾಗಿದೆ. ಎಂ.ಜಿ. ರಸ್ತೆಯ ರಾಜೇಂದ್ರ ಸಿಂಗ್‌ಜಿ ಆರ್ಮಿ ಅಫೀಸರ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಾರಂಭವಾಗುವ ಓಟ, ಅದೇ ಸ್ಥಳದಲ್ಲಿ ಕೊನೆಗೊಳ್ಳುತ್ತದೆ. ಪಾಲ್ಗೊಳ್ಳುವವರು ಇದೇ 30ರ ರಾತ್ರಿ 10 ಗಂಟೆಯೊಳಗೆ ನೋಂದಣಿ ಮಾಡಿಕೊಳ್ಳಬೇಕು' ಎಂದು ಹೇಳಿದೆ.

ಮೊ: 9741685555.

ಸಾಹಿತಿಗಳಿಗೆ ಜೀವ ಬೆದರಿಕೆ: ಸಿಸಿಬಿಗೆ ತನಿಖೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಸಾಹಿತಿಗಳು ಹಾಗೂ ಹೋರಾಟಗಾರರಿಗೆ ಜೀವ ಬೆದರಿಕೆ ಪತ್ರಗಳು ಬಂದಿರುವ ಪ್ರಕರಣಗಳ ತನಿಖೆ ಹೊಣೆಯನ್ನು ಬೆಂಗಳೂರು ಸಿಸಿಬಿ ಪೊಲೀಸರಿಗೆ ವಹಿಸಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಗುರುವಾರ ಆದೇಶ ಹೊರಡಿಸಿದ್ದಾರೆ.

ಸಾಹಿತಿಗಳಾದ ಕುಂ. ವೀರಭದ್ರಪ್ಪ, ಬಿ.ಎಲ್. ವೇಣು, ಬಂಜಗೆರೆ ಜಯಪ್ರಕಾಶ್, ಬಿ.ಟಿ. ಲಲಿತಾ ನಾಯಕ್, ವಸುಂಧರಾ ಭೂಪತಿ ಹಾಗೂ ಇತರರಿಗೆ ಜೀವ ಬೆದರಿಕೆ ಪತ್ರಗಳು ಬಂದಿದ್ದವು. ಕೊಟ್ಟೂರು, ಚಿತ್ರದುರ್ಗ, ಹಾರೋಹಳ್ಳಿ, ಬೆಂಗಳೂರಿನ ಸಂಜಯನಗರ ಹಾಗೂ ಬಸವೇಶ್ವರ ನಗರ ಠಾಣೆಗಳಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಪ್ರಕರಣ ದಾಖಲಾದರೂ ಪೊಲೀಸರು ಆರೋಪಿಗಳನ್ನು ಪತ್ತೆ ಮಾಡಿರಲಿಲ್ಲ. ಇದರಿಂದಾಗಿ ಬೆದರಿಕೆ ಪತ್ರಗಳು ಪುನಃ ಬರಲಾರಂಭಿಸಿದ್ದವು.ಹೀಗಾಗಿ, ಸಾಹಿತಿಗಳ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಆತಂಕ ವ್ಯಕ್ತಪಡಿಸಿತ್ತು.

'ಸಾಹಿತಿಗಳಿಗೆ ಪದೇಪದೇ ಜೀವ ಬೆದರಿಕೆ ಪತ್ರಗಳು ಬರುತ್ತಿವೆ. ಆತಂಕ ಹಾಗೂ ಮುಜುಗರದಿಂದ ಬದುಕುವ ಪರಿಸ್ಥಿತಿ ಉಂಟಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದ ವಾತಾವರಣ ಸೃಷ್ಟಿಯಾಗಿದೆ. ಜೀವ ಬೆದರಿಕೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಪೊಲೀಸರ ವಿಶೇಷ ತಂಡ ರಚಿಸಿ, ಆರೋಪಿಗಳನ್ನು ಪತ್ತೆ ಮಾಡಬೇಕು' ಎಂದು ಸಾಹಿತಿಗಳು ಕೋರಿದ್ದರು. ಇದರ ಬೆನ್ನಲ್ಲೇ ಸಿಸಿಬಿ ತನಿಖೆಗೆ ಆದೇಶ ಹೊರಬಿದ್ದಿದೆ.

ವಿಶೇಷ ತಂಡ: 'ಸಾಹಿತಿಗಳಿಗೆ ಜೀವ ಬೆದರಿಕೆಯೊಡ್ಡಿರುವ ಪ್ರಕರಣದ ತನಿಖೆಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಹೀಗಾಗಿ, ವಿಶೇಷ ತಂಡ ರಚಿಸಲಾಗಿದೆ. ಎಲ್ಲ ಠಾಣೆಗಳಿಂದ ಮಾಹಿತಿ ಪಡೆದು ತನಿಖೆ ಮುಂದುವರಿಸಲಾಗುವುದು' ಎಂದು ಸಿಸಿಬಿ ಮೂಲಗಳು ಹೇಳಿವೆ.

ಸರ್ವೆ, ಪೋಡಿಗೆ ಪಂಚಾಯಿತಿಗಳಲ್ಲೇ ಅರ್ಜಿ ಸೌಲಭ್ಯ

ಬೆಂಗಳೂರು: ಗ್ರಾಮೀಣ ಜನರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಗೆ ಸಂಬಂಧಿಸಿದ ಕಾರ್ಯಗಳಿಗೆ ಇನ್ನು ಮುಂದೆ ಆಯಾ ಗ್ರಾಮ ಪಂಚಾಯಿತಿಗಳ ಬಾಪೂಜಿ ಸೇವಾ ಕೇಂದ್ರಗಳಲ್ಲೇ ಅರ್ಜಿ ಸಲ್ಲಿಸಬಹುದು.

ಭೂ ಪರಿವರ್ತನೆ, ತತ್ಕಾಲ್ ಪೋಡಿ, ಹದ್ದು ಬಸ್ತು, 11–ಇ ನಕ್ಷೆ ಸೇರಿದಂತೆ ಇಲಾಖೆ ಒದಗಿಸುವ ಸೇವೆಗಳಿಗೆ ಅರ್ಜಿ ಸಲ್ಲಿ ಸಲು ಇದುವರೆಗೂ ಹೋಬಳಿ ಮಟ್ಟದ ನಾಡಕಚೇರಿ, ಇಲ್ಲವೇ ತಾಲ್ಲೂಕು ಕಚೇರಿಗಳಲ್ಲಿನ ಅಟಲ್‌ಜಿ ಜನಸ್ನೇಹಿ ಕೇಂದ್ರಗಳಿಗೆ ತೆರಳಬೇಕಿತ್ತು. ಪ್ರತಿ ತಾಲ್ಲೂಕು ಸುಮಾರು 30ರಿಂದ 40 ಹಾಗೂ ಹೋಬಳಿಗಳು ಐದಾರು ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದ್ದು, ಸಾವಿರಾರು ಜನರು ಸೇವೆಪಡೆಯಲು ಸರದಿಯಲ್ಲಿ ನಿಲ್ಲುವ ಸ್ಥಿತಿ ಇದೆ. ಬಾಪೂಜಿ ಕೇಂದ್ರಗಳಲ್ಲೇ ಅರ್ಜಿ ಸಲ್ಲಿಕೆಗೆ ಅವಕಾಶ ನೀಡುವುದರಿಂದ ಅನಗತ್ಯ ಅಲೆದಾಟ ತಪ್ಪಲಿದೆ. ಸಮಯ, ವೆಚ್ಚದ ಉಳಿತಾಯವಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆ ವಿವರಿಸಿದೆ.

11–ಇ ನಕ್ಷೆಗೆ ₹1,500, ಭೂ ಪರಿರ್ತನೆಗೆ ಎರಡು ಎಕರೆವರೆಗೂ ₹1,500 ನಂತರ ಪ್ರತಿ ಎಕರೆಗೆ ₹ 400 ಹಾಗೂ ಪೋಡಿಗೆ ₹ 400 (ಎರಡು ಎಕರೆವರೆಗೆ) ದರ ನಿಗದಿ ಮಾಡಲಾಗಿದೆ.

400 ಬೈಕ್ ಭಸ್ಮ

ವಿಜಯವಾಡ (ಪಿಟಿಐ): ವಿಜಯವಾಡದ ಬೈಕ್ ಶೋರೂಮ್‌ವೊಂದರಲ್ಲಿ ಗುರುವಾರ ಮುಂಜಾನೆ 5ಗಂಟೆಗೆ ಅಗ್ನಿ ಅವಘಡ ಸಂಭವಿಸಿದ್ದು ಸುಮಾರು ₹ 4 ಕೋಟಿ ಮೌಲ್ಯದ 400 ಹೊಸ ಬೈಕ್‌ಗಳು ಸುಟ್ಟು ಕರಕಲಾಗಿವೆ. ಆದರೆ ಯಾವುದೇ ಜೀವಹಾನಿ ಆಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಚೆನ್ನೈನಿಂದ ಬಂದ ಹೊಸ ವಾಹನಗಳನ್ನು ಟ್ರಕ್‌ನಿಂದ ಇಳಿಸಲಾಗುತ್ತಿತ್ತು. ಆಗ ಬೆಂಕಿ ಕಾಣಿಸಿಕೊಂಡಿದೆ. ನಂತರದ 90 ನಿಮಿಷಗಳ ಕಾಲ ಶೋರೂಮ್‌ನಲ್ಲಿ ಬೆಂಕಿ ಹೊತ್ತಿ ಉರಿದಿದೆ.

ಉತ್ತರಪ್ರದೇಶದಿಂದ ನಗರಕ್ಕೆ ಸಾಗಣೆ: ದಿನಸಿ, ಬೀಡಾ ಅಂಗಡಿಗಳಿಗೆ ಪೂರೈಕೆ

ಗಾಂಜಾಮಿಶ್ರಿತ ಚಾಕೊಲೇಟ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಜಾ ಮಿಶ್ರಿತ ಚಾಕೊಲೇಟ್ ಮಾರುತ್ತಿದ್ದ ಜಾಲ ಭೇದಿಸಿರುವ ಆರ್‌ಎಂಸಿ ಯಾರ್ಡ್ ಠಾಣೆ ಪೊಲೀಸರು, ಪ್ರಮುಖ ಆರೋಪಿ ಶಮೀನ್ ಅಕ್ತಾರ್‌ನನ್ನು ಬಂಧಿಸಿದ್ದಾರೆ.

‘ಉತ್ತರಪ್ರದೇಶದ ಶಮೀನ್ ಅಕ್ತಾರ್, ಬಟ್ಟೆ ವ್ಯಾಪಾರಿ. ಈತನನ್ನು ಬಂಧಿಸಿ, 300 ಕೆ.ಜಿ ತೂಕದ ಗಾಂಜಾ ಮಿಶ್ರಿತ ಚಾಕೊಲೇಟ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆವ್ಯಾಪ್ತಿಯಆಟೊವೊಂದರಲ್ಲಿ ಗಾಂಜಾ ಮಿಶ್ರಿತ ಚಾಕೊಲೇಟ್ ಸಾಗಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಆಗಸ್ಟ್ 23ರಂದು ವಿಶೇಷ ತಂಡ ರಚಿಸಿ ಕಾರ್ಯಾಚರಣೆ ನಡೆಸಲಾಗಿತ್ತು. ಆಟೊ ತಡೆದು ಪರಿಶೀಲಿಸಿದಾಗ, ಚಾಕೊಲೇಟ್ ತುಂಬಿದ್ದ ಚೀಲಗಳ ಸಮೇತ ಆರೋಪಿ ಶಮೀನ್ ಸಿಕ್ಕಿಬಿದ್ದ’ ಎಂದರು.

ಆರ್‌ಎಂಸಿ ಯಾರ್ಡ್ ಠಾಣೆ ಪೊಲೀಸರು ಜಪ್ತಿ ಮಾಡಿರುವ ಗಾಂಜಾ ಮಿಶ್ರಿತ ಚಾಕೊಲೇಟ್

‘ಬಟ್ಟೆ ವ್ಯಾಪಾರಿಯಾಗಿದ್ದ ಆರೋಪಿ ಶಮೀನ್‌ಗೆ ಉತ್ತರ ಪ್ರದೇಶದಲ್ಲಿ ವ್ಯಕ್ತಿಯೊಬ್ಬರ ಪರಿಚಯವಾಗಿತ್ತು. ಅದೇ ವ್ಯಕ್ತಿಯೇ ಈ ಬಗ್ಗೆ ಮಾಹಿತಿ ನೀಡಿದ್ದ. ಬಟ್ಟೆ ವ್ಯಾಪಾರ ಬದಲು ಶಮೀನ್, ಹೆಚ್ಚು ಹಣ ಸಂಪಾದಿಸುವುದಕ್ಕಾಗಿ ಗಾಂಜಾ ಮಿಶ್ರಿತ ಚಾಕೊಲೇಟ್ ಮಾರುತ್ತಿದ್ದ.

ಉತ್ತರಪ್ರದೇಶದಲ್ಲಿ ತಯಾರಿ, ರಾಜ್ಯಕ್ಕೆ ಸರಬರಾಜು: ‘ಉತ್ತರ ಪ್ರದೇಶದ ಕೆಲವೆಡೆ, ಗಾಂಜಾ ಮಿಶ್ರಿತ ಚಾಕೊಲೇಟ್‌ಗಳನ್ನು ತಯಾರಿಸಲಾಗುತ್ತಿದೆ. ಹಲವು ಹೆಸರಿನಲ್ಲಿ ಪೊಟ್ಟಣಗಳನ್ನು ಸಿದ್ಧಪಡಿಸಿ, ಅದರೊಳಗೆ ಚಾಕೊಲೇಟ್ ಇರಿಸಲಾಗುತ್ತಿದೆ. ಅದೇ ಚಾಕೊಲೇಟ್‌ಗಳನ್ನು ಕರ್ನಾಟಕಕ್ಕೆ ತರಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಕೊರಿಯರ್ ಕಂಪನಿಯೊಂದರ ಮೂಲಕ ಚಾಕೊಲೇಟ್ ಚೀಲಗಳನ್ನು ಆರೋಪಿ ಶಮೀನ್ ಬೆಂಗಳೂರಿಗೆ ತರಿಸುತ್ತಿದ್ದ. ನಗರದಲ್ಲಿರುವ ದಿನಸಿ, ಬೀಡಾ ಅಂಗಡಿ, ಬೇಕರಿ ಸೇರಿದಂತೆ ಹಲವೆಡೆ ಪೂರೈಸುತ್ತಿದ್ದ. ಮೂರು ಚಾಕೊಲೇಟ್‌ಗೆ ₹ 50 ಬೆಲೆ ನಿಗದಿಪಡಿಸಲಾಗಿತ್ತು’ ಎಂದು ತಿಳಿಸಿದರು.

‘ಶಾಲೆ–ಕಾಲೇಜು ವಿದ್ಯಾರ್ಥಿಗಳು, ಖಾಸಗಿ ಕಂಪನಿ ನೌಕರರು, ಕೂಲಿ ಕಾರ್ಮಿಕರು ಹಾಗೂ ಇತರರು ಚಾಕೊಲೇಟ್ ಖರೀದಿಸುತ್ತಿದ್ದರು. ಕ್ರಮೇಣ ಅವರೆಲ್ಲರೂ ಗಾಂಜಾ ವ್ಯಸನಿಗಳಾಗಿ ಬದಲಾಗುತ್ತಿದ್ದರು’ ಎಂದು ಹೇಳಿದರು.

‘ಆರೋಪಿ ಶಮೀನ್ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಸದ್ಯ ಅವರೆಲ್ಲ ತಲೆಮರೆಸಿಕೊಂಡಿದ್ದಾರೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಪೊಲಮ್ಮಾಸ್ ಹೋಟೆಲ್‌ನಲ್ಲಿ ಅವಘಡ • ಇಬ್ಬರಿಗೆ ತೀವ್ರ ಗಾಯ

ಅಡುಗೆ ಅನಿಲ ಸೋರಿಕೆ, ಬೆಂಕಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡುಗೋಡಿ ಬಳಿಯ ಚಿಕ್ಕಲಕ್ಕಯ್ಯ ಬಡಾವಣೆಯಲ್ಲಿರುವ ಪೊಲಮ್ಮಾಸ್ ಹೋಟೆಲ್‌ನಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಅವಘಡ ಸಂಭವಿಸಿದ್ದು, ರವಿ (40) ಅವರು ಮೃತಪಟ್ಟಿದ್ದಾರೆ.

‘ಗುರುವಾರ ಬೆಳಿಗ್ಗೆ 9 ಗಂಟೆ 50 ನಿಮಿಷ ಸುಮಾರಿಗೆ ಅವಘಡ ಸಂಭವಿಸಿದೆ. ಬಂಡೆ ನಿವಾಸಿ ರವಿ ಅವರು ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹೋಟೆಲ್‌ನ ಕೆಲಸಗಾರರಾದ ರೇಮಿಯೋ ಚಾರ್ಲಿ ಹಾಗೂ ನಾಗರಾಜ್ ಗಾಯ ಗೊಂಡಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಆಡುಗೋಡಿ ಪೊಲೀಸ್ ಮೂಲಗಳು ಹೇಳಿವೆ.

ಅಡುಗೆ ಅನಿಲ ಪೂರೈಸಲು ಪೈಪ್: ‘ಎರಡು ಮಹಡಿ ಕಟ್ಟಡದಲ್ಲಿ ಹೋಟೆಲ್ ಇದ್ದು, ನೆಲಮಹಡಿಯ ಕೊಠಡಿಯೊಂದರಲ್ಲಿ ಅಡುಗೆ ಅನಿಲ ಸಿಲಿಂಡರ್ ಇರಿಸಲಾಗಿದೆ. ಅಲ್ಲಿಂದಲೇ ಪೈಪ್ ಮೂಲಕ ಮೊದಲ ಮಹಡಿಯಲ್ಲಿರುವ ಅಡುಗೆ ಮನೆಗೆ ಅನಿಲ ಪೂರೈಕೆ ಆಗುವಂತೆ ವ್ಯವಸ್ಥೆ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಅಡುಗೆ ಅನಿಲ ಸೋರಿಕೆಯಿಂದ ಉಂಟಾದ ಬೆಂಕಿ ಅವಘಡದಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ವಸ್ತುಗಳು – ಪ್ರಜಾವಾಣಿ ಚಿತ್ರ

‘ನೆಲ ಮಹಡಿ ಕೊಠಡಿಯಲ್ಲಿ 6 ಸಿಲಿಂಡರ್‌ಗಳಿದ್ದವು. ಅದೇ ಕೊಠಡಿಗೆ ಶಟರ್ ಹಾಕಲಾಗಿದೆ. ಅದೇ ಶಟರ್‌ಗೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗದಲ್ಲಿ ರವಿ ಅವರು ಮಲಗಿದ್ದರು. ರವಿ, ನಿರ್ಗತಿಕ. ಹೋಟೆಲ್‌ನಲ್ಲಿ ಸಿಗುವ ಊಟಕ್ಕಾಗಿ ಅಲ್ಲಿಯೇ ಮಲಗುತ್ತಿದ್ದರು’ ಎಂದು ಹೇಳಿವೆ.

ಸಿಲಿಂಡರ್ ಬದಲಿಸುವಾಗ ಅವಘಡ: ‘ಅಸ್ಸಾಂನ ರೇಮಿಯೋ ಚಾರ್ಲಿ ಹಾಗೂ ಸ್ಥಳೀಯ ನಿವಾಸಿ ನಾಗರಾಜ್, ಹೋಟೆಲ್‌ನ ಅಡುಗೆ ಕೆಲಸಗಾರರು. ಬೆಳಿಗ್ಗೆ 11.30ಕ್ಕೆ ಹೋಟೆಲ್ ತೆರೆಯ ಬೇಕಿತ್ತು. ಹೀಗಾಗಿ, ಬೆಳಿಗ್ಗೆ 9ಕ್ಕೆ ಹೋಟೆಲ್‌ನಲ್ಲಿ ಅಡುಗೆ ತಯಾರಿ ಆರಂಭವಾಗಿತ್ತು. ಅಡುಗೆ ತಯಾರಿಸುವಾಗ ಒಂದು ಸಿಲಿಂಡರ್ ಖಾಲಿ ಆಗಿತ್ತು. ರೇಮಿಯೊ ಹಾಗೂ ನಾಗರಾಜ್, ಸಿಲಿಂಡರ್ ಬದಲಿಸಲು ನೆಲಮಹಡಿಯ ಕೊಠಡಿಗೆ ಹೋಗಿದ್ದರು. ಖಾಲಿ ಸಿಲಿಂಡರ್ ತೆಗೆದು, ಹೊಸ ಸಿಲಿಂಡರ್‌ಗೆ ಪೈಪ್ ಜೋಡಿಸಿದ್ದರು. ಇದೇ ವೇಳೆ ಪೈಪ್‌ನಿಂದ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿಕೊಂಡಿತ್ತು. ಸ್ಫೋಟದ ಪರಿಣಾಮ, ಕೊಠಡಿಯ ಶಟರ್ ಜಖಂಗೊಂಡಿತ್ತು’ ಎಂದು ಮೂಲಗಳು ತಿಳಿಸಿವೆ.

‘ಸಿಲಿಂಡರ್ ಇರಿಸಿದ್ದ ಕೊಠಡಿ ಸಮೀಪದಲ್ಲಿ ಮಲಗಿದ್ದ ರವಿ ಅವರಿಗೂ ಬೆಂಕಿ ಹೊತ್ತಿಕೊಂಡು, ಅವರು ಸ್ಥಳದಲ್ಲೇ ಮೃತಪಟ್ಟರು. ಗಾಯಾಳು ನಾಗರಾಜ್ ಹಾಗೂ ರೇಮಿಯೊ ಅವರನ್ನು ಸ್ಥಳೀಯರೇ ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಗ್ನಿಶಾಮಕ ದಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ’ ಎಂದು ತಿಳಿಸಿವೆ.

‘ಹೋಟೆಲ್ ವಿರುದ್ಧ ಪ್ರಕರಣ’

‘ಪೈಪ್‌ನಲ್ಲಿ ರಂಧ್ರ ಉಂಟಾಗಿ ಅನಿಲ ಸೋರಿಕೆಯಾಗಿದ್ದರಿಂದ ಬೆಂಕಿ ಅವಘಡ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ನಿರ್ಲಕ್ಷ್ಯ ಹಾಗೂ ಜೀವಕ್ಕೆ ಕುತ್ತು ತಂದ ಆರೋಪದಡಿ ಪೊಲಮ್ಮಾಸ್ ಹೋಟೆಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಅವಶೇಷ ಮಾದರಿ ಸಂಗ್ರಹಿಸಿದ್ದಾರೆ. ಅವಘಡಕ್ಕೆ ನಿಖರ ಕಾರಣವೇನು ಎಂಬುದು ವರದಿಯಿಂದ ತಿಳಿಯಬೇಕಿದೆ’ ಎಂದು ಮಾಹಿತಿ ನೀಡಿದರು.

ಶ್ರೀಲಂಕಾದಲ್ಲಿ ಐವರ ಕೊಲೆ: ಬೆಂಗಳೂರಿನಲ್ಲಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಕಸನ್‌ಕುಮಾರ್

ರಂಗಪ್ರಸಾದ್



ಅಮಿಲ್

ಪರಮೇಶ್

ಬೆಂಗಳೂರು: ಶ್ರೀಲಂಕಾದಲ್ಲಿ ಅಪರಾಧ ಕೃತ್ಯ ಎಸಗಿ ಭಾರತದೊಳಗೆ ಅಕ್ರಮವಾಗಿ ನುಸುಳಿದ್ದ ಮೂವರನ್ನು ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಶ್ರೀಲಂಕಾ ಪ್ರಜೆಗಳಾದ ಕಸನ್ ಕುಮಾರ್, ಅಮಿಲ್ ನುವಾನ್, ರಂಗ ಪ್ರಸಾದ್ ಬಂಧಿತರು. ಮೂವರಿಗೂ ಆಶ್ರಯ ನೀಡಿದ್ದ ಪರಮೇಶ್ ಅಲಿಯಾಸ್ ಜಾಕ್‌ನನ್ನು ಸಹ ಸೆರೆ ಹಿಡಿಯಲಾಗಿದೆ. ಜಾಕ್, ಕೊಲೆ ಪ್ರಕರಣದ ಆರೋಪಿ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘5 ಕೊಲೆ ಪ್ರಕರಣದ ಆರೋಪಿಗಳಾಗಿದ್ದ ಕಸನ್, ಅಮಿಲ್ ಹಾಗೂ ರಂಗಪ್ರಸಾದ್‌ಗಾಗಿ ಶ್ರೀಲಂಕಾ ಪೊಲೀಸರು ಹುಡುಕಾಟ ನಡೆಸುತ್ತಿದ್ದರು. ಬಂಧನ ಭೀತಿಯಲ್ಲಿದ್ದ ಮೂವರು, ಸಮುದ್ರ ಮಾರ್ಗವಾಗಿ ಬೋಟ್ ಮೂಲಕ ಭಾರತದೊಳಗೆ ಅಕ್ರಮವಾಗಿ ಪ್ರವೇಶಿಸಿದ್ದರು.’ ‘ಯಲಹಂಕ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯ-ವೊಂದರ ಫ್ಲ್ಯಾಟ್‌ನಲ್ಲಿ ಮೂವರು ನೆಲೆಸಿರುವ ಮಾಹಿತಿ ಬಂದಿತ್ತು. ಫ್ಲ್ಯಾಟ್ ಮೇಲೆ ಬುಧವಾರ ದಾಳಿ ನಡೆಸಿದಾಗ ಶ್ರೀಲಂಕಾ ಪ್ರಜೆಗಳು ಸಿಕ್ಕಿಬಿದ್ದರು. ಇವರಿಂದ 13 ಮೊಬೈಲ್, ಗುರುತಿನ ಚೀಟಿಗಳು ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ಓಮನ್ ದೇಶದಲ್ಲಿ ಜಲಾನ್ ಬಂಧನ: ‘ಕೊಲೆ ಆರೋಪಿಗಳಾದ ಕಸನ್, ಅಮಿಲ್ ಹಾಗೂ ರಂಗಪ್ರಸಾದ್‌ನನ್ನು ಜಲಾನ್ ಎಂಬಾತ ಭಾರತಕ್ಕೆ ಕರೆಸಿದ್ದ. ಮೂವರು ಭಾರತಕ್ಕೆ ಬರುತ್ತಿದ್ದಂತೆ ಜಲಾನ್, ಓಮನ್ ದೇಶಕ್ಕೆ ಹೋಗಿದ್ದ. ಆತನನ್ನು ಡ್ರಗ್ಸ್ ಪ್ರಕರಣದಲ್ಲಿ ಅಲ್ಲಿಯ ಪೊಲೀಸರು ಬಂಧಿಸಿದ್ದಾರೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಶ್ರೀಲಂಕಾ, ಭಾರತ ಹಾಗೂ ಪಾಕಿಸ್ತಾನ ದೇಶಗಳಿಗೆ ಡ್ರಗ್ಸ್ ಸಾಗಿಸುತ್ತಿದ್ದ ಜಲಾನ್, ಅಂತರರಾಷ್ಟ್ರೀಯ ಪೆಡ್ಲರ್ ಎಂಬುದು ಗೊತ್ತಾಗಿದೆ. ಕೆಲ ನಿಷೇಧಿತ ಸಂಘಟನೆಗಳ ಜೊತೆಯಲ್ಲೂ ಜಲಾನ್ ಒಡನಾಟ ಹೊಂದಿರುವ ಮಾಹಿತಿ ಇದೆ. ಆತನನ್ನು ಕಸ್ಟಡಿಗೆ ಪಡೆಯಲು ಪ್ರಯತ್ನಿಸಲಾಗುತ್ತಿದೆ’ ಎಂದು ತಿಳಿಸಿವೆ.

ಬೆಂಗಳೂರಿಗೆ: ‘ಶ್ರೀಲಂಕಾದಿಂದ ಬೋಟ್ ಮೂಲಕ ಚೆನ್ನೈಗೆ ಬಂದಿದ್ದ ಮೂವರು, ಅಲ್ಲಿಂದ ರಸ್ತೆ ಮಾರ್ಗವಾಗಿ ಬೆಂಗಳೂರು ತಲುಪಿದ್ದರು. 20 ದಿನಗಳಿಂದ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಬಂಧಿತರ ಬಗ್ಗೆ ಕೇಂದ್ರ ತನಿಖಾ ತಂಡಗಳ ಮೂಲಕ ಶ್ರೀಲಂಕಾ ಪೊಲೀಸರಿಗೆ ಮಾಹಿತಿ ರವಾನಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಮದ್ಯ ಕುಡಿಸಿ ಆಟೊ ಕಳ್ಳತನ

ಬೆಂಗಳೂರು: ನಿಲ್ದಾಣಗಳ ಬಳಿ ನಿಂತಿರುತ್ತಿದ್ದ ಚಾಲಕರನ್ನು ಪರಿಚಯ ಮಾಡಿಕೊಂಡು ಅವರಿಗೆ ಮದ್ಯ ಕುಡಿಸಿ ಆಟೊ ಕದ್ದೊಯ್ಯುತ್ತಿದ್ದ ಆರೋಪಿ ವಿಷ್ಣುನನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ವಿಷ್ಣು, ಕೆಂಗೇರಿಯ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಹೆಚ್ಚು ಹಣ ಸಂಪಾದಿಸುವ ಉದ್ದೇಶದಿಂದ ಕೃತ್ಯ ಎಸಗುತ್ತಿದ್ದ. ಈತನನ್ನು ಬಂಧಿಸಿ, 2 ಆಟೊ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ’ ಎಂದರು.

‘ಎಂಟನೇ ಮೈಲಿ ಬಳಿ ಚಾಲಕ ವಿಜಯ್‌ಕುಮಾರ್ ಅವರನ್ನು ಅಗಸ್ಟ್ 17ರಂದು ಪರಿಚಯ ಮಾಡಿಕೊಂಡಿದ್ದ ಆರೋಪಿ, ಸ್ನೇಹ ಬೆಳೆಸಿದ್ದ. ನಂತರ, ಮದ್ಯ ಕುಡಿಯೋಣವೆಂದು ಆಟೊ ಸಮೇತ ಕರೆದೊಯ್ದಿದ್ದ. ಇಬ್ಬರೂ ಸೇರಿ ಮದ್ಯ ಕುಡಿದಿದ್ದರು. ಆರೋಪಿಯೇ ಮದ್ಯದ ಬಿಲ್ ಪಾವತಿಸಿದ್ದ.’

‘ಪಾನಮತ್ತನಾಗಿದ್ದ ವಿಜಯ್ ಕುಮಾರ್ ಅವರನ್ನು ಜಾಗವೊಂದರಲ್ಲಿ ಮಲಗಿಸಿದ್ದ. ನಂತರ, ಅವರ ಆಟೊ ಸಮೇತ ಪರಾರಿಯಾಗಿದ್ದ. ವಿಜಯ್ ಕುಮಾರ್ ಅವರು ಮರುದಿನ ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

ಸುಲಿಗೆ: ನಾಲ್ವರ ಬಂಧನ

ಬೆಂಗಳೂರು: ರಸ್ತೆಯಲ್ಲಿ ಹೋಗುವ ಜನರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ ಪ್ರಕರಣಗಳ ಬಗ್ಗೆ ಪ್ರತ್ಯೇಕ ತನಿಖೆ ನಡೆಸಿದ್ದ ಜ್ಞಾನಭಾರತಿ ಹಾಗೂ ಜೆ.ಸಿ.ನಗರ ಠಾಣೆ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಸುಲಿಗೆ ಬಗ್ಗೆ ಸಂತ್ರಸ್ತರು ದೂರು ನೀಡಿದ್ದರು. ದೇವರ ಜೀವನಹಳ್ಳಿಯ (ಡಿ.ಜೆ.ಹಳ್ಳಿ) ಮೋದಿ ಗಾರ್ಡನ್ ನಿವಾಸಿ ಆಸೀಫ್ ಬಾಷಾ (28), ನೆಲಮಂಗಲ ರೇಣುಕಾನಗರದ ಇಮ್ರಾನ್ ಅಲಿಯಾಸ್ ಬೊಡ್ಕೆ (29) ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಆರೋಪಿಗಳಾದ ಆಸೀಫ್ ಹಾಗೂ ಇಮ್ರಾನ್, ಹೆಲ್ಮೆಟ್ ಧರಿಸಿ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಾ ಜನರಿಗೆ ಮಚ್ಚು ತೋರಿಸಿ ಬೆದರಿಕೆಯೊಡ್ಡಿ ಸುಲಿಗೆ ಮಾಡುತ್ತಿದ್ದರು. 14 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪತ್ರಕರ್ತ ಪಿ.ಸಾಯಿನಾಥ್

‘ಕೃಷಿಕರಿಗೆ ಅನುಕೂಲವಾಗುವ ಕಿಸಾನ್ ಕರಡು ರಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲವಾಗುವಂತೆ ಸರ್ಕಾರಗಳು ಕೃಷಿ ನೀತಿ ರೂಪಿಸುತ್ತಿವೆ. ಹೀಗಾಗಿ, ಪರ್ಯಾಯವಾಗಿ ರೈತರಿಗೆ ಅನುಕೂಲವಾಗುವಂತೆ ಮಾಡಲು ಕಿಸಾನ್ ಮಜ್ದೂರು ಮೂಲಕ ಕಿಸಾನ್ ಕರಡು ತಯಾರಿಸಲಾಗುತ್ತಿದೆ’ ಎಂದು ಪತ್ರಕರ್ತ ಪಿ.ಸಾಯಿನಾಥ್ ತಿಳಿಸಿದರು.

ನಗರದಲ್ಲಿ ಗುರುವಾರ ಕರ್ನಾಟಕ ಪ್ರಾಂತ ರೈತ ಸಂಘ ಆಯೋಜಿಸಿದ ಪರ್ಯಾಯ ಕೃಷಿ ಧೋರಣೆಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

‘ಕೃಷಿ ಕಾಯ್ದೆಗಳನ್ನು ಕೃಷಿಕರು, ಜನಪ್ರತಿನಿಧಿಗಳು ರೂಪಿಸುತ್ತಿಲ್ಲ. ಬದಲಾಗಿ ಕಾರ್ಪೊರೇಟ್ ಕಂಪನಿಗಳು ರೂಪಿಸುತ್ತಿವೆ. ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ಮೂರು ಕೃಷಿ ತಿದ್ದುಪಡಿ ಕಾಯ್ದೆಗಳನ್ನು ರೈತರು ಹೋರಾಟ ಮಾಡಿ ಹಿಮ್ಮೆಟ್ಟಿಸಿದರು. ಅವು ಹಿಂಬಾಗಿಲಿನಿಂದ ಬರುತ್ತಿವೆ. ಈ ಕಾಯ್ದೆಗಳು ಜಾರಿಯಾದರೆ ಎಲ್ಲ ವರ್ಗಗಳ ಮೇಲೆಯೂ ದುಷ್ಪರಿಣಾಮ ಉಂಟಾಗಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಪರ್ಯಾಯ ಕೃಷಿ ಧೋರಣೆಗಳ ಕುರಿತು ನಡೆದ ವಿಚಾರಸಂಕಿರಣವನ್ನು ಪತ್ರಕರ್ತ ಪಿ. ಸಾಯಿನಾಥ್ ಉದ್ಘಾಟಿಸಿದರು. ಎಐಕೆಎಸ್ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಡಿ.ರವೀಂದ್ರನ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಯಶವಂತ, ಉಪಾಧ್ಯಕ್ಷ ಎನ್.ವೆಂಕಟಚಲಯ್ಯ ಇದ್ದಾರೆ ಪ್ರಜಾವಾಣಿ ಚಿತ್ರ

‘ಗೋಹತ್ಯೆ ನಿಷೇಧ ಕಾಯ್ದೆಗಳಿಂದ ಗ್ರಾಮೀಣ ಪ್ರದೇಶ ಹಿಂದುಳಿದ ವರ್ಗಗಳ ಆರ್ಥಿಕತೆ ಕುಸಿಯುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಡಾ.ಸ್ವಾಮಿನಾಥನ್ ಆಯೋಗದ ವರದಿ ರೈತರಿಗೆ ಪರಿಪೂರ್ಣ ಅಥವಾ ಅಂತಿಮ ಅಲ್ಲ. ಆದರೆ, ಈ ವರದಿ ಜಾರಿಯಿಂದ ಕೃಷಿ ಉತ್ಪಾದನಾ ವಲಯಕ್ಕೆ ಅನುಕೂಲವಾಗುತ್ತದೆ. 2004ರಲ್ಲಿ ಸ್ವಾಮಿನಾಥನ್ ವರದಿ ನೀಡಿದ್ದರೂ ಯುಪಿಎ ಸರ್ಕಾರ ಅದನ್ನು ಜಾರಿ ಮಾಡದೇ ಅನ್ಯಾಯ ಮಾಡಿತ್ತು. ಸ್ವಾಮಿನಾಥನ್ ವರದಿ ಜಾರಿ ಮಾಡಿ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಭರವಸೆ ನೀಡಿ 2014ರಲ್ಲಿ ನರೇಂದ್ರ ಮೋದಿ ಅಧಿಕಾರ ಹಿಡಿದರು. ವರದಿ ಜಾರಿ ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರವನ್ನು ಅಧಿಕಾರ ದೊರೆತ ಒಂದೇ ತಿಂಗಳಲ್ಲಿ ಸಲ್ಲಿಸಿ ಮೋಸ ಮಾಡಿದರು’ ಎಂದು ಟೀಕಿಸಿದರು.

ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಡಿ.ರವೀಂದ್ರನ್ ಮಾತನಾಡಿ, ‘ಕೇಂದ್ರದಲ್ಲಿ ಮೋದಿ ನೇತೃತ್ವದ ಆಡಳಿತಾವಧಿಯಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗಿದೆ. ಒಂದು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡರೆ, 2.78 ಲಕ್ಷ ಕಾರ್ಮಿಕರು ಸಾವಿಗೆ ಶರಣಾಗಿದ್ದಾರೆ. ಎಂದರು.

ಶುಕ್ರವಾರ, ಆಗಸ್ಟ್ 25, 2023 | ₹ 7.00
www.prajavani.net prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು

ಹುಲಿವೇಷ ಕೇರಳದ ತಿರುವನಂತಪುರದಲ್ಲಿ ಓಣಂ ಹಬ್ಬದ ಆಚರಣೆಯಲ್ಲಿ ಪಾಲ್ಗೊಂಡಿದ್ದ ಹುಲಿ ವೇಷಧಾರಿ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ

ಭಾರತವನ್ನು ಚಂದ್ರನ ಅಂಗಳಕ್ಕೆ ತಲುಪಿಸಿದ

इसरो isro

ಇಸ್ರೋ ವಿಜ್ಞಾನಿಗಳಿಗೆ ಅಭಿನಂದನೆಗಳು

ವಿಕ್ರಂ ನೌಕೆಯನ್ನು ಯಶಸ್ವಿಯಾಗಿ ಚಂದ್ರನ ಅಂಗಳದಲ್ಲಿ ಇಳಿಸುವ ಮೂಲಕ ನಮ್ಮ ಇಸ್ರೋ ವಿಜ್ಞಾನಿಗಳು ಇಡೀ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಈ ಸಾಧನೆಯು ಭಾರತವನ್ನು ಚಂದ್ರನ ತಲುಪಿದ ಕೆಲವೇ ಕೆಲವು ಗಣ್ಯ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸಿದೆ ಮತ್ತು ಚಂದ್ರನ ದಕ್ಷಿಣ ಧ್ರುವಕ್ಕೆ ಹೆಜ್ಜೆ ಇಟ್ಟ ಮೊಟ್ಟ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆ ತಂದುಕೊಟ್ಟಿದೆ. ಈ ಐತಿಹಾಸಿಕ ಸಾಧನೆಯು ನಮ್ಮ ವಿಜ್ಞಾನಿಗಳ ಅನೇಕ ದಶಕಗಳ ಪರಿಶ್ರಮದ ಪ್ರತಿಫಲವಾಗಿದೆ.

ಇಸ್ರೋ ಸಂಸ್ಥೆಯ ಪ್ರಧಾನ ಕಛೇರಿ ಸೇರಿದಂತೆ ಅದರ ಅನೇಕ ಸಹ-ಸಂಸ್ಥೆಗಳಿಗೆ ತವರಾಗಿರುವ ಕರ್ನಾಟಕ, ಈ ಪಯಣದಲ್ಲಿ ಭಾಗಿಯಾಗಲು ಹೆಮ್ಮೆ ಪಡುತ್ತದೆ.

ಜೈ ಹಿಂದ್ . ಜೈ ಕರ್ನಾಟಕ.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ

ಕಪ್ಪು ಕುಳಿಗಳತ್ತ ಬೆಳಕಿನ ಹಾದಿ

‘ಚಂದ್ರಯಾನ-3’: ಯಶಸ್ಸಿನ ರೂವಾರಿಗಳು

ಎಸ್.ಸೋಮನಾಥ್, ಇಸ್ರೊ ಅಧ್ಯಕ್ಷ

ಕೇರಳದವರಾದ ಎಸ್. ಸೋಮನಾಥ್ ಕಳೆದ ವರ್ಷ ಜನವರಿಯಲ್ಲಿ ಇಸ್ರೊ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು. ‘ಸಿಸ್ಟಮ್ ಎಂಜಿನಿಯರಿಂಗ್’ನಲ್ಲಿ ಪರಿಣತಿ ಹೊಂದಿರುವ ಸೋಮನಾಥ್, ಈ ಬಾಹ್ಯಾಕಾಶ ಕಾರ್ಯಕ್ರಮದ ರಾಕೆಟ್ ಅಭಿವೃದ್ಧಿಗೆ ಅನನ್ಯ ಕೊಡುಗೆ ನೀಡಿದ್ದಾರೆ. ಚಂದ್ರಯಾನ-2ರ ವೈಫಲ್ಯ, ನಂತರ ಕಾಣಿಸಿಕೊಂಡ ಕೋವಿಡ್ ಪಿಡುಗಿನಿಂದ ಸಂಸ್ಥೆ ಚೇತರಿಸಿಕೊಳ್ಳುತ್ತಿದ್ದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇವರು ಇಸ್ರೊ ಸಾರಥ್ಯ ವಹಿಸಿಕೊಂಡರು. ಚಂದ್ರಯಾನ-3 ಕಾರ್ಯಕ್ರಮಕ್ಕೆ ಅಣಿಯಾಗುತ್ತಿದ್ದ ವಿಜ್ಞಾನಿಗಳು, ಎಂಜಿನಿಯರ್‌ಗಳಲ್ಲಿ ಆತ್ಮವಿಶ್ವಾಸ ತುಂಬಿ, ಯೋಜನೆ ಅನುಷ್ಠಾನಕ್ಕೆ ವೇಗ ನೀಡಿದರು.

ಪಿ.ವೀರಮುತ್ತುವೇಲ್, ಯೋಜನಾ ನಿರ್ದೇಶಕ

ಚಂದ್ರಯಾನ-2 ಕಾರ್ಯಕ್ರಮದ ಸಹಾಯಕ ಯೋಜನಾ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಪಿ.ವೀರಮುತ್ತುವೇಲ್ ಅವರನ್ನು 2019ರಲ್ಲಿ ಚಂದ್ರಯಾನ-3ರ ಯೋಜನಾ ನಿರ್ದೇಶಕರನ್ನಾಗಿ ನೇಮಕ ಮಾಡಲಾಯಿತು. ಪ್ರತಿಷ್ಠಿತ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ತಿರುಚಿರಾಪಳ್ಳಿ ಹಾಗೂ ಮದ್ರಾಸ್ ಐಐಟಿಯಲ್ಲಿ ಅಧ್ಯಯನ ಪೂರೈಸಿರುವ ವೀರಮುತ್ತುವೇಲ್, ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂಬ ತಮ್ಮ ಕನಸನ್ನು ನನಸು ಮಾಡುವ ಉದ್ದೇಶದೊಂದಿಗೆ ಇಸ್ರೊ ಸೇರಿದ್ದಾರೆ. ಶ್ರೀಹರಿಕೋಟಾದ ಉಡ್ಡಯನ ನೆಲೆಯಿಂದ ಜುಲೈ 14ರಂದು ಉಡ್ಡಯನವಾದಾಗಿನಿಂದಲೂ ಇವರು ಹಾಗೂ ಇವರ ನೇತೃತ್ವದ ತಂಡ ಈ ಬಾಹ್ಯಾಕಾಶ ಕಾರ್ಯಕ್ರಮದ ಮೇಲ್ವಿಚಾರಣೆ ನಡೆಸುತ್ತಿದ್ದರು.

ಎಸ್.ಮೋಹನ ಕುಮಾರ್, ಮಿಷನ್ ನಿರ್ದೇಶಕ

ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ (ವಿಎಸ್‌ಎಸ್‌ಸಿ) ಹಿರಿಯ ವಿಜ್ಞಾನಿಯಾಗಿರುವ ಎಸ್. ಮೋಹನಕುಮಾರ್, 2019ರಲ್ಲಿ ಚಂದ್ರಯಾನ-3ರ ಮಿಷನ್ ನಿರ್ದೇಶಕರಾಗಿ ನೇಮಕಗೊಂಡರು. ಇಸ್ರೊ ಈ ಹಿಂದೆ ಕೈಗೊಂಡಿದ್ದ ಮಾನವರಹಿತ ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿ, ಚಂದ್ರಯಾನ-1 ಮತ್ತು ಚಂದ್ರಯಾನ-2ರಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ. ಚಂದ್ರಯಾನ-3ರ ಸಿದ್ಧತೆ ಹಾಗೂ ಅನುಷ್ಠಾನಕ್ಕೆ ತಮ್ಮ 30 ವರ್ಷಗಳ ಅನುಭವವನ್ನು ಧಾರೆ ಎರೆದಿದ್ದಾರೆ. ಐಐಟಿ-ಮದ್ರಾಸ್‌ನಲ್ಲಿ ಅಧ್ಯಯನ ಮಾಡಿರುವ ಇವರು, ವಾಣಿಜ್ಯ ಉದ್ದೇಶದ ಉಪಗ್ರಹ ‘ಒನ್ ವೆಬ್ ಇಂಡಿಯಾ2’ರ ಉಡ್ಡಯನ ಕಾರ್ಯಕ್ರಮದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಎಸ್.ಉಣ್ಣಿಕೃಷ್ಣನ್ ನಾಯರ್, ವಿಎಸ್‌ಎಸ್‌ಸಿ ನಿರ್ದೇಶಕ

ಚಂದ್ರಯಾನ-3ರ ಗಗನನೌಕೆಯನ್ನು ಹೊತ್ತು ನಭಕ್ಕೆ ಚಿಮ್ಮಿದ್ದ ಶಕ್ತಿಶಾಲಿ ರಾಕೆಟ್ ಅಭಿವೃದ್ಧಿಪಡಿಸುವಲ್ಲಿ ಎಸ್.ಉಣ್ಣಿಕೃಷ್ಣನ್ ಮಹತ್ವದ ಪಾತ್ರ ವಹಿಸಿದ್ದಾರೆ. 1985ರಲ್ಲಿ ಪ್ರತಿಷ್ಠಿತ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರ (ವಿಎಸ್‌ಎಸ್‌ಸಿ) ಸೇರಿದ ಉಣ್ಣಿಕೃಷ್ಣನ್, ಐಐಟಿ-ಮದ್ರಾಸ್ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಧ್ಯಯನ ಪೂರೈಸಿದ್ದಾರೆ. ಪಿಎಸ್‌ಎಲ್‌ವಿ, ಜಿಎಸ್‌ಎಲ್‌ವಿ ಹಾಗೂ ಎಲ್‌ವಿಎಂ3 ಅಂತಹ ರಾಕೆಟ್‌ಗಳಲ್ಲಿ ಬಳಸುವ ವೈಮಾಂತರಿಕ್ಷ ಸಿಸ್ಟಮ್‌ಗಳ ಅಭಿವೃದ್ಧಿಯಲ್ಲಿ ಇವರದು ಪ್ರಮುಖ ಪಾತ್ರ. ಇವರು ಮಾನವಸಹಿತ ಬಾಹ್ಯಾಕಾಶ ನೌಕೆ ಕೇಂದ್ರದ ಸಂಸ್ಥಾಪಕ ನಿರ್ದೇಶಕ ಎಂಬುದು ಗಮನಾರ್ಹ.

ಎಂ.ಶಂಕರನ್, ನಿರ್ದೇಶಕ, ಯು.ಆರ್.ರಾವ್ ಉಪಗ್ರಹ ಕೇಂದ್ರ, ಬೆಂಗಳೂರು

ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಯು.ಆರ್.ರಾವ್ ಉಪಗ್ರಹ ಕೇಂದ್ರದ ಮುಖ್ಯಸ್ಥರಾಗಿರುವ ಎಂ.ಶಂಕರನ್, ಇಸ್ರೊದಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಸಂವಹನ, ನೆವಿ ಗೇಷನ್, ದೂರಸಂವೇದಿ, ಹವಾಮಾನ ವಿಜ್ಞಾನ ಹಾಗೂ ದೂರದ ಗ್ರಹಗಳ ಅನ್ವೇಷಣೆಗೆ ಬಳಸುವ ವಿವಿಧ ರೀತಿಯ ಉಪಗ್ರಹಗಳ ಅಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸಿದ ವಿಜ್ಞಾನಿಗಳನ್ನು ಮುನ್ನಡೆಸಿದ ಹೆಗ್ಗಳಿಕೆ ಇವರದು. ಇಸ್ರೊ ಉಡ್ಡಯನ ಮಾಡಿರುವ ಉಪಗ್ರಹಗಳಲ್ಲಿ ವಿದ್ಯುತ್ ಉತ್ಪಾದನೆಗೆ ಬಳಸುವ ವಿಶಿಷ್ಟ ಸಾಧನವನ್ನು ಅಭಿವೃದ್ಧಿಪಡಿಸುವಲ್ಲಿ ಹಾಗೂ ಈ ಹಿಂದಿನ ಚಂದ್ರಯಾನ ಕಾರ್ಯಕ್ರಮಗಳಲ್ಲಿ ಇವರ ಕೊಡುಗೆ ಅನನ್ಯ.

ಎ.ರಾಜರಾಜನ್, ಮುಖ್ಯಸ್ಥ, ಲಾಂಚ್ ಆಥರೈಜೇಷನ್ ಬೋರ್ಡ್ (ಎಲ್‌ಎಬಿ)

ಚಂದ್ರಯಾನ-3ರ ಗಗನನೌಕೆ ಹೊತ್ತ ರಾಕೆಟ್‌ನ ಉಡ್ಡಯ ನಕ್ಕೂ ಮುಂಚಿನ ಕ್ಷಣಗಣನೆ ಕಾರ್ಯದ ನಿರ್ವಹಣೆ ಮುಖ್ಯವಾದದ್ದು. ಸಂಕೀರ್ಣವಾದ ಈ ಮಹತ್ವದ ಕಾರ್ಯವನ್ನು ನಿಭಾಯಿಸಿದ್ದು ಎ.ರಾಜರಾಜನ್. ಗಗನನೌಕೆಗಳ ಉಡ್ಡಯನಕ್ಕೆ ಕರಾರುವಾಕ್ಕಾದ ಕ್ಷಣಗಣನೆ ಮತ್ತು ಅನುಮತಿ ನೀಡುವ ‘ಲಾಂಚ್ ಆಥರೈಜೇಷನ್ ಬೋರ್ಡ್’ನ ಮುಖ್ಯಸ್ಥರೂ ಆಗಿರುವ ರಾಜರಾಜನ್, ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ನಿರ್ದೇಶಕರೂ ಆಗಿದ್ದಾರೆ.

ನೀಲೇಶ್ ಎಂ.ದೇಸಾಯಿ, ನಿರ್ದೇಶಕ, ಸ್ಪೇಸ್ ಅಪ್ಲಿಕೇಷನ್ಸ್ ಸೆಂಟರ್, ಅಹಮದಾಬಾದ್

ಇಸ್ರೊದ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಅಗತ್ಯ ವಿರುವ ರಾಡಾರ್ ಸಿಸ್ಟಮ್ ಗಳ ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿ ನಿರತರಾಗಿರುವ ನೀಲೇಶ್ ದೇಸಾಯಿ, ಸಂಸ್ಥೆಯಲ್ಲಿ 35 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಚಂದ್ರಯಾನ-2ರ ಕಕ್ಷೆಗಾಮಿ ಎಸ್‌ಎಆರ್, ಆರ್‌ಐಎಸ್‌ಎಟಿ-1, ಸಿ-ಬ್ಯಾಂಡ್ ಸಿಂಥೆಟಿಕ್ ಅಪರ್ಚರ್ ರಾಡಾರ್, ಓಷಿಯನ್‌ಸ್ಯಾಟ್-2 ಹಾಗೂ ಸ್ಕಾಟ್‌ಸ್ಯಾಟ್-1 ನಂತಹ ದೂರ ಸಂವೇದಿ ಸಾಧನಗಳ ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿ ದೊಡ್ಡ ಕೊಡುಗೆ ನೀಡಿದ್ದಾರೆ

ಕೆ.ಕಲ್ಪನಾ, ಸಹ ಯೋಜನಾ ನಿರ್ದೇಶಕಿ

ಶಾಲಾ ದಿನಗಳಿಂದಲೂ ಅಂತರಿಕ್ಷ ವಿದ್ಯಮಾನಗಳ ಬಗ್ಗೆ ಕುತೂಹಲ, ಆಸಕ್ತಿ ಹೊಂದಿದ್ದ ಕಲ್ಪನಾ ಅವರು ಪ್ರತಿಷ್ಠಿತ ಐಐಟಿ-ಖರಗಪುರದಿಂದ ಏರೋನಾಟಿಕಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ವ್ಯಾಸಂಗ ಪೂರ್ಣಗೊಂಡ ಬೆನ್ನಲ್ಲೇ ಇಸ್ರೊ ಸೇರಿದರು. ಚಂದ್ರಯಾನ-3 ಕಾರ್ಯಕ್ರಮದಲ್ಲಿ ಪ್ರಮುಖವಾದ ಎರಡನೇ ಹಂತದ ನಾಯಕತ್ವ ವಹಿಸಿಕೊಂಡಿದ್ದು ಅವರ ಪ್ರತಿಭೆ, ಶ್ರದ್ಧೆ ಹಾಗೂ ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ಚಂದ್ರಯಾನ-2, ಮಂಗಳಯಾನ ಸೇರಿದಂತೆ ಹಲವು ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿಯೂ ಕಲ್ಪನಾ ಅವರು ಕಾರ್ಯನಿರ್ವಹಿಸಿದ್ದಾರೆ.

ಚಂದಿರನ ಹಾದಿಯ ನಿಗಾ ವಹಿಸಿದ್ದ ಶಿವಾನಿ

• ವೆಂಕಟೇಶ ಜಿ.ಎಚ್

ಕೆ.ಜಿ.ಶಿವಾನಿ

ಶಿವಮೊಗ್ಗ: ಚಂದಿರನ ದಕ್ಷಿಣ ಧ್ರುವದ ಅಂಗಳಕ್ಕೆ ಬುಧವಾರ ಸಂಜೆ ‘ಚಂದ್ರಯಾನ 3’ರ ಲ್ಯಾಂಡರ್ ವಿಕ್ರಮ್ ಸುರಕ್ಷಿತವಾಗಿ ಹೆಜ್ಜೆ ಇಟ್ಟ ಯಶೋಗಾಥೆಯ ಹಿಂದಿದ್ದ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೊ) ವಿಜ್ಞಾನಿಗಳ ತಂಡದಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕೋಣಂದೂರಿನ ಕೆ.ಜಿ.ಶಿವಾನಿ ಅವರು ಕೂಡ ಕೆಲಸ ಮಾಡಿದ್ದಾರೆ.

ಮಾಜಿ ಶಾಸಕ ಕೋಣಂದೂರು ಲಿಂಗಪ್ಪ ಅವರ ಪುತ್ರಿ ಶಿವಾನಿ, 1993ರಿಂದ ಬೆಂಗಳೂರಿನ ಇಸ್ರೊದಲ್ಲಿ ಕೆಲಸ ಮಾಡುತ್ತಿದ್ದಾರೆ. ‘ಚಂದ್ರಯಾನ 3’ ಯೋಜನೆಯಲ್ಲಿ ಇಸ್ರೊ ಸಂವಹನ ವಿಭಾಗದಲ್ಲಿ ಉಪ ನಿರ್ದೇಶಕಿಯಾಗಿದ್ದಾರೆ. ಲ್ಯಾಂಡರ್ ವಿಕ್ರಮ್ ಪಥದ ಮೇಲೆ ನಿಗಾ ಇಡುವ ಇಸ್ರೊ ಟೆಲಿಮೆಟ್ರಿಕ್ ಟ್ರ್ಯಾಕಿಂಗ್ ಅಂಡ್ ಕಮಾಂಡ್ ಸೆಂಟರ್‌ನಲ್ಲಿ ಹಿರಿಯ ವಿಜ್ಞಾನಿಯಾಗಿ ಅವರು ಕೆಲಸ ಮಾಡಿದ್ದಾರೆ.

‘ಲ್ಯಾಂಡರ್ ವಿಕ್ರಮ್ ಬುಧವಾರ ಸಂಜೆ ಚಂದ್ರನ ಅಂಗಳ ಸ್ಪರ್ಶಿಸಿದ ಕ್ಷಣ ಪದಗಳಲ್ಲಿ ಹೇಳಲಾಗದ ಸಂಗತಿ. ಅದನ್ನು ಅನುಭವಿಸಬೇಕು. ಕೊನೆಯ ಕ್ಷಣದಲ್ಲಿ ಏನಾಗಬಹುದೋ ಎಂಬ ಅವ್ಯಕ್ತ ಭಯದ ನಡುವೆಯೇ ಅದು ಗುರಿ ತಲುಪಿದ ಕ್ಷಣದ ಖುಷಿ, ಕುತೂಹಲ ಅದರಲ್ಲಿ ಸಮ್ಮಿಳಿತಗೊಂಡಿತ್ತು’ ಎಂದು ಶಿವಾನಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಶಿವಾನಿಯವರು ಶಿವಮೊಗ್ಗದ ಮಕ್ಕಳ ವಿದ್ಯಾ ಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣ, ನ್ಯಾಶನಲ್ ಗರ್ಲ್ಸ್ ಹೈಸ್ಕೂಲ್‌ನಲ್ಲಿ ಪ್ರೌಢಶಾಲೆ, ಡಿವಿಎಸ್ ಕಾಲೇಜಿನಲ್ಲಿ ಪಿಯುಸಿ, ಜೆಎನ್‌ಎನ್‌ಸಿಇಯಲ್ಲಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗದಲ್ಲಿ ಬಿ.ಇ ಪದವಿ, ಬೆಂಗಳೂರಿನ ರೇವಾ ಕಾಲೇಜಿನಲ್ಲಿ ಎಂ.ಟೆಕ್ ಪದವಿ ಪಡೆದಿದ್ದಾರೆ.

‘ಅಪ್ಪನ ಪ್ರೇರಣೆಯೇ ಇಸ್ರೊದಲ್ಲಿ ಕೆಲಸ ಮಾಡಲು ಕಾರಣ. ಓದಿ ಮನೆಯಲ್ಲಿ ಕುಳಿತುಕೋ ಎನ್ನದೇ, ಅಪ್ಪ-ಅಮ್ಮ ಬೆಂಗಳೂರಿಗೆ ಕಳುಹಿಸಿ ಧೈರ್ಯ ತುಂಬಿದ್ದರು’ ಎಂದು ಕೋಣಂದೂರು ಲಿಂಗಪ್ಪ ಅವರ ಮೂವರು ಮಕ್ಕಳಲ್ಲಿ ಮೊದಲಿಗರಾದ ಶಿವಾನಿ ನೆನಪಿಸಿಕೊಳ್ಳುತ್ತಾರೆ.

ಚಂದ್ರಯಾನ-3 ಭಾರಿ ಸವಾಲಿನ ಸಂಗತಿಯಾಗಿತ್ತು. ಅದನ್ನು ನಿಭಾಯಿಸಿದ್ದೇವೆ ಎನ್ನುವ ಶಿವಾನಿ, ವಿಜ್ಞಾನಿಯಾಗಿ ಉಪಗ್ರಹಗಳ ಉಡಾವಣೆ ಕೆಲಸದಲ್ಲೂ ತೊಡಗಿಕೊಂಡಿದ್ದಾರೆ.

‘ಪ್ರತಿ ವ್ಯಕ್ತಿಯಿಂದಲೂ ಸಾಧನೆ ಸಾಧ್ಯ’

ಪ್ರಜಾವಾಣಿ ವಾರ್ತೆ

ಚೆನ್ನೈ: ‘ಶಾಲಾ ದಿನಗಳಲ್ಲಿ ಸಾಧಾರಣ ಬುದ್ಧಿಮತ್ತೆ ವಿದ್ಯಾರ್ಥಿಯಾಗಿದ್ದ ನಾನು ಸರಳ ಜೀವನ ನಡೆಸುತ್ತಿರುವ ವ್ಯಕ್ತಿ. ಜೀವನದಲ್ಲಿ ಸಾಧನೆ ಮಾಡಲು ನನ್ನಂಥವನಿಗೆ ಸಾಧ್ಯವಾಗಿರುವಾಗ, ಉನ್ನತ ಸಾಧನೆ ಪ್ರತಿಯೊಬ್ಬರಿಗೂ ಸಾಧ್ಯವಾಗಲಿದೆ. ಕಠಿಣ ಪರಿಶ್ರಮಕ್ಕೆ ಪ್ರತಿಫಲ ಸಿಕ್ಕೇ ಸಿಗುತ್ತದೆ...’

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕೆಲ ತಿಂಗಳು ಹಿಂದೆ ಮಾತನಾಡಿದ್ದ ಇಸ್ರೊ ವಿಜ್ಞಾನಿ ಪಿ.ವೀರಮುತ್ತುವೇಲ್ ಅವರ ಈ ಮಾತುಗಳಿರುವ ವಿಡಿಯೊ ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ವೀರಮುತ್ತುವೇಲ್ ಅವರ ಮಾಜಿ ಸಹೋದ್ಯೋಗಿ, ಚಂದ್ರಯಾನ-1ರ ಯೋಜನಾ ನಿರ್ದೇಶಕರೂ ಆಗಿದ್ದ ಮೈಲಸ್ವಾಮಿ ಅಣ್ಣಾದೊರೈ ಅವರು ಕಳೆದ ವರ್ಷ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಕ್ಕೆ ವೀರಮುತ್ತುವೇಲ್ ಅವರನ್ನು ಆಹ್ವಾನಿಸಿದ್ದರು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ತಮಿಳಿನಲ್ಲಿ ಮಾಡಿದ್ದ ಭಾಷಣದ ಮೂರು ನಿಮಿಷಗಳ ವಿಡಿಯೊವನ್ನು ಈಗ ನೂರಾರು ಜನರು ಹಂಚಿಕೊಂಡಿದ್ದಾರೆ.

‘ನನಗೆ ವೃತ್ತಿ ಮಾರ್ಗದರ್ಶನ ಮಾಡುವವರು ಯಾರೂ ಇರಲಿಲ್ಲ. 10ನೇ ತರಗತಿ ನಂತರ ವಿಲ್ಲುಪುರಂನಲ್ಲಿ ಡಿಪ್ಲೊಮಾ ಕೋರ್ಸ್‌ಗೆ ಸೇರಿದೆ. ಎಂಜಿನಿಯರಿಂಗ್ ಅಧ್ಯಯನದ ಬಗ್ಗೆ ಅತೀವ ಆಸಕ್ತಿ ಇದ್ದ ಕಾರಣ, ಮೆಕಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮಾದಲ್ಲಿ ಶೇ 90ರಷ್ಟು ಅಂಕ ಗಳಿಸಿ, ಚೆನ್ನೈನ ಸಾಯಿರಾಂ ಎಂಜಿನಿಯರಿಂಗ್ ಕಾಲೇಜು ಸೇರಿದೆ. ಪದವಿಯ ಎಲ್ಲ ಸೆಮಿಸ್ಟರ್‌ಗಳಲ್ಲೂ ಅತ್ಯಧಿಕ ಅಂಕ ಗಳಿಸಿದೆ’ ಎಂದು ವಿವರಿಸಿದ್ದಾರೆ.

‘ಕೆಲ ಕಾಲ ಕೊಯಮತ್ತೂರಿನ ಕಂಪನಿಯೊಂದರಲ್ಲಿ ಕೆಲಸ ಮಾಡಿದೆ. ಇಸ್ರೊ ಸೇರಬೇಕು ಎಂಬ ಉತ್ಕಟ ಬಯಕೆ ಹೊಂದಿದ್ದೆ. ಕೊನೆಗೂ ಇಸ್ರೊ ಸೇರಿದೆ. ಹಲವಾರು ಯೋಜನೆಗಳಡಿ ಕೆಲಸ ಮಾಡುವ ಜೊತೆಗೆ, ‘ವೈಬ್ರೇಷನ್ ಅಂಡ್ ಸಪ್ರೆಷನ್ ಆಫ್ ಎಲೆಕ್ಟ್ರಾನಿಕ್ ಪ್ಯಾಕೇಜ್ ಇನ್ ಸೆಟಲೈಟ್’ ಎಂಬ ವಿಷಯದ ಮೇಲೆ ಐಐಟಿ-ಮದ್ರಾಸ್‌ನಿಂದ ಪಿಎಚ್‌.ಡಿ ಪದವಿ ಪಡೆದೆ’ ಎಂಬುದಾಗಿ ಹೇಳಿರುವುದು ವಿಡಿಯೊದಲ್ಲಿದೆ.

> **ಪ್ರತಿಯೊಬ್ಬರು ತಮಗೆ ಒದಗಿಬರುವ ಅವಕಾಶಗಳನ್ನು ಉಪಯೋಗಪಡಿಸಿಕೊಳ್ಳಬೇಕು. ಶಿಸ್ತು, ಕಠಿಣ ಶ್ರಮ, ಪ್ರತಿಫಲ ಅಪೇಕ್ಷಿಸದೇ ದುಡಿದರೆ ಯಶಸ್ಸು ನಿಶ್ಚಿತ**
>
>
>
> **ಪಿ.ವೀರಮುತ್ತುವೇಲ್,** ಇಸ್ರೊ ವಿಜ್ಞಾನಿ

‘ಕಡಿಮೆ ವೇತನ, ಮಹತ್ತರ ಸಾಧನೆ’

ಜಿ.ಮಾಧವನ್ ನಾಯರ್

ತಿರುವನಂತಪುರ(ಪಿಟಿಐ): ‘ಅಭಿವೃದ್ಧಿ ಹೊಂದಿದ ದೇಶಗಳ ಸಂಶೋಧನಾ ಸಂಸ್ಥೆಗಳಲ್ಲಿನ ವಿಜ್ಞಾನಿಗಳು ಪಡೆಯುವ ಸಂಬಳದ ಐದನೇ ಒಂದರಷ್ಟು ವೇತನ ಪಡೆಯುತ್ತಿದ್ದರೂ, ಇಸ್ರೊ ವಿಜ್ಞಾನಿಗಳು ಈ ಐತಿಹಾಸಿಕ ಯಶಸ್ಸು ಸಾಧಿಸಿದ್ದಾರೆ’ ಎಂದು ಇಸ್ರೊ ಮಾಜಿ ಅಧ್ಯಕ್ಷ ಜಿ.ಮಾಧವನ್ ನಾಯರ್ ಹೇಳಿದ್ದಾರೆ.

‘ಇಸ್ರೊ ವಿಜ್ಞಾನಿಗಳು ಅಂತರಿಕ್ಷ ಕಾರ್ಯಕ್ರಮಗಳನ್ನು ಕಡಿಮೆ ವೆಚ್ಚದಲ್ಲಿ ಅನುಷ್ಠಾನಗೊಳಿಸುವ ಮಾರ್ಗಗಳನ್ನು ಕಂಡುಕೊಳ್ಳುತ್ತಿರುವುದಕ್ಕೆ ಅವರು ಕಡಿಮೆ ವೇತನ ಪಡೆಯುತ್ತಿರುವುದು ಕೂಡ ಒಂದು ಕಾರಣ’ ಎಂದಿದ್ದಾರೆ.

‘ಚಂದ್ರಯಾನ-3’ರ ಯಶಸ್ಸಿನ ಹಿನ್ನೆಲೆಯಲ್ಲಿ ಪಿಟಿಐ ಜೊತೆ ಮಾತನಾಡಿದ ಅವರು, ‘ಇಸ್ರೊ ವಿಜ್ಞಾನಿಗಳಲ್ಲಿ ಯಾರೂ ಲಕ್ಷಾಧೀಶರಿಲ್ಲ. ಎಲ್ಲರೂ ಸಾಧಾರಣ ಜೀವನ ನಡೆಸುತ್ತಾರೆ’ ಎಂದರು.

‘ಸಂಸ್ಥೆಯ ವಿಜ್ಞಾನಿಗಳು ಹಾಗೂ ಇತರ ಸಿಬ್ಬಂದಿ ಹಣದ ಹಿಂದೆ ಬಿದ್ದವರಲ್ಲ. ಸಂಸ್ಥೆ ಕೈಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ಅವರು ಆಸಕ್ತಿ ಹಾಗೂ ಶ್ರದ್ಧೆ ಹೊಂದಿರುವ ಕಾರಣದಿಂದಲೇ ಈ ಸಾಧನೆ ಸಾಧ್ಯವಾಗಿದೆ’ ಎಂದರು.

ಇಸ್ರೊಗೆ ಸೋನಿಯಾ ಪತ್ರ

ನವದೆಹಲಿ (ಪಿಟಿಐ): ಚಂದ್ರನ ಮೇಲೆ ಲ್ಯಾಂಡರ್ ‘ವಿಕ್ರಮ್’ ಅನ್ನು ಸಾಫ್ಟ್ ಲ್ಯಾಂಡಿಂಗ್ ಮಾಡುವಲ್ಲಿ ಯಶಸ್ವಿಯಾದ ಇಸ್ರೊ ವಿಜ್ಞಾನಿಗಳ ತಂಡಕ್ಕೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅಭಿನಂದನೆ ಸಲ್ಲಿಸಿದ್ದಾರೆ.

ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರಿಗೆ ಈ ಕುರಿತು ಅವರು ಪತ್ರ ಬರೆದಿದ್ದಾರೆ. ಚಂದಿರನ ಅಂಗಳದ ಮೇಲೆ ಲ್ಯಾಂಡರ್ ಹೆಜ್ಜೆ ಇಟ್ಟ ಕ್ಷಣಗಳನ್ನು ವೀಕ್ಷಿಸಿ ಖುಷಿಪಟ್ಟಿದ್ದನ್ನು ಹಂಚಿಕೊಂಡಿದ್ದಾರೆ.

‘ದಶಕಗಳಿಂದ ಈ ಸಾಧನೆಗೆ ಇಸ್ರೊ ಶ್ರಮಿಸಿತ್ತು. ಹಲವು ಖ್ಯಾತ ವಿಜ್ಞಾನಿಗಳು ಇದಕ್ಕಾಗಿ ಸಾಮೂಹಿಕವಾಗಿ ಶ್ರಮಿಸಿದ್ದಾರೆ. ಬಾಹ್ಯಾಕಾಶ ವಿಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸಬೇಕೆಂಬ ಹಂಬಲ ಅರವತ್ತರ ದಶಕದಲ್ಲಿ ಮೊಳಕೆಯೊಡೆದಿತ್ತು. ಈಗ ಅದು ಫಲ ಕೊಟ್ಟಿದೆ’ ಎಂದಿದ್ದಾರೆ.

ಬೆಂಗಳೂರಿನ ಪೀಣ್ಯದಲ್ಲಿರುವ ಇಸ್ರೊ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ಚಂದ್ರಯಾನ 3’ರ ಯಶಸ್ಸಿಗೆ ಶ್ರಮಿಸಿದ ವಿಜ್ಞಾನಿಗಳಿಗೆ ಅಭಿನಂದನೆ ಸಲ್ಲಿಸಿದರು —ಪಿಟಿಐ ಚಿತ್ರ

‘ವಿಜ್ಞಾನಿಗಳ ತಂಡಕ್ಕೆ ಸನ್ಮಾನ ಶೀಘ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಂದ್ರನ ಮೇಲೆ ವಿಕ್ರಮ್ ಲ್ಯಾಂಡರ್ ಸುರಕ್ಷಿತವಾಗಿ ಇಳಿದಿರುವುದು ಐತಿಹಾಸಿಕ ಸಾಧನೆ. ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಿ ಇಸ್ರೊ ವಿಜ್ಞಾನಿಗಳನ್ನು ಸರ್ಕಾರದ ವತಿಯಿಂದ ಶೀಘ್ರದಲ್ಲಿಯೇ ಸನ್ಮಾನಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪೀಣ್ಯದಲ್ಲಿರುವ ಇಸ್ರೊ ಸಂಸ್ಥೆಗೆ ಗುರುವಾರ ಭೇಟಿ ನೀಡಿ ಅಧ್ಯಕ್ಷ ಎಸ್. ಸೋಮನಾಥ್ ಮತ್ತು ಇಸ್ರೊ ವಿಜ್ಞಾನಿಗಳನ್ನು ಅಭಿನಂದಿಸಿದ ನಂತರ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

‘ಚಂದ್ರಯಾನ-3 ಯಶಸ್ಸಿಗೆ ಇಸ್ರೊ ಅಧ್ಯಕ್ಷ ಸೋಮನಾಥ್ ಸೇರಿದಂತೆ ಕರ್ನಾಟಕದ 500 ವಿಜ್ಞಾನಿಗಳು ಹಗಲು ಇರುಳು ಎನ್ನದೆ ಶ್ರಮಿಸಿದ್ದಾರೆ. ಅವರೆಲ್ಲರನ್ನೂ ಸನ್ಮಾನಿಸಲಾಗುವುದು. ಸೆ.2ರ ನಂತರ ಸನ್ಮಾನ ಕಾರ್ಯಕ್ರಮದ ದಿನ ನಿಗದಿಪಡಿಸಲಾಗುವುದು’ ಎಂದರು.

ಶಿವಕುಮಾರ್ ಅಭಿನಂದನೆ: ಚಂದ್ರಯಾನ- 3 ಯೋಜನೆ ಯಶಸ್ವಿಯಾದ ಬುಧವಾರ ರಾತ್ರಿಯೇ ಇಸ್ರೊ ಸಂಸ್ಥೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಿ ವಿಜ್ಞಾನಿಗಳ ಸಂತಸದ ಕ್ಷಣಗಳಿಗೆ ಸಾಕ್ಷಿಯಾದರು.

ಸಂಸ್ಥೆಯ ಮುಖ್ಯಸ್ಥ ಎಸ್. ಸೋಮನಾಥ್, ಯು.ಆರ್. ರಾವ್ ಬಾಹ್ಯಕಾಶ ಕೇಂದ್ರದ ನಿರ್ದೇಶಕ ಶಂಕರನ್, ಯೋಜನೆಯ ನಿರ್ದೇಶಕ ವೀರಮುತ್ತು, ಸಹ ಯೋಜನಾ ನಿರ್ದೇಶಕಿ ಕಲ್ಪನಾ, ಯಂತ್ರ ನಿರ್ವಹಣೆ ನಿರ್ದೇಶಕ ಶ್ರೀಕಾಂತ್ ಮತ್ತಿತರ ವಿಜ್ಞಾನಿಗಳಿಗೆ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಶಿವಕುಮಾರ್ ಅಭಿನಂದಿಸಿದರು.

ವಿದೇಶಿ ಮಾಧ್ಯಮಗಳ ಶ್ಲಾಘನೆ

ವಾಷಿಂಗ್ಟನ್/ಲಂಡನ್ (ಪಿಟಿಐ): ಚಂದ್ರನ ದಕ್ಷಿಣ ಧ್ರುವದಲ್ಲಿ ‘ವಿಕ್ರಮ್’ ಲ್ಯಾಂಡರ್ ಅನ್ನು ಸುರಕ್ಷಿತ ಮತ್ತು ಸುಗಮವಾಗಿ ಇಳಿಸಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ (ಇಸ್ರೊ) ಸಾಧನೆಗೆ ವಿಶ್ವದಾದ್ಯಂತ ವ್ಯಾಪಕವಾಗಿ ಮೆಚ್ಚುಗೆ ವ್ಯಕ್ತವಾಗಿದೆ.

ಚಂದ್ರದ ಮೇಲೆ ಪಾದಸ್ಪರ್ಶ ಮಾಡಿದ ರಾಷ್ಟ್ರಗಳ ಗುಂಪಿಗೆ ಭಾರತದ ಸೇರ್ಪಡೆಯನ್ನು ವಿದೇಶಗಳ ಪ್ರಮುಖ ಮಾಧ್ಯಮಗಳು ಅದ್ವಿತೀಯ ಸಾಧನೆ, ಅಮೋಘ ಕ್ಷಣ, ಐತಿಹಾಸಿಕ ಎಂದೂ ಬಣ್ಣಿಸಿವೆ.

ನ್ಯೂಯಾರ್ಕ್ ಟೈಮ್ಸ್, ಬಿಬಿಸಿ, ದ ಗಾರ್ಡಿಯನ್, ದ ವಾಷಿಂಗ್ಟನ್ ಪೋಸ್ಟ್ ಸೇರಿದಂತೆ ಹಲವು ಪತ್ರಿಕೆಗಳು ಮುಖಪುಟದಲ್ಲಿಯೇ ಭಾರತದ ಸಾಧನೆಯ ಸುದ್ದಿಗೆ ಆದ್ಯತೆ ನೀಡಿವೆ.

> **ಇಸ್ರೊ ಇತಿಹಾಸದಲ್ಲಿ ಎಂತಹ ಅದ್ಭುತ ಗಳಿಗೆ. ಕನಸುಗಳಿರುವ ಯುವಜನರಷ್ಟೇ ಜಗತ್ತು ಬದಲಿಸಬಲ್ಲರು. ಒಳ್ಳೆಯದಾಗಲಿ**
>
> **ಫವಾದ್ ಚೌಧರಿ,** ಪಾಕಿಸ್ತಾನದ ಮಾಜಿ ಸಚಿವ

ನೆರೆಯ ಪಾಕಿಸ್ತಾನದ ಮಾಧ್ಯಮಗಳೂ ಮುಖಪುಟದಲ್ಲಿಯೇ ಆದ್ಯತೆ ನೀಡುವ ಮೂಲಕ ಭಾರತದ ಸಾಧನೆಗೆ ಶ್ಲಾಘಿಸಿವೆ. ‘ಚಂದ್ರನ ದಕ್ಷಿಣ ಧ್ರುವದಲ್ಲಿ ಹೆಜ್ಜೆ ಇಟ್ಟ ಮೊದಲ ರಾಷ್ಟ್ರ ಭಾರತ’ ಎಂದು ದೈನಿಕಗಳು, ವೆಬ್‌ಸೈಟ್‌ಗಳು ಉಲ್ಲೇಖಿಸಿವೆ.

ಜಿಯೊ ನ್ಯೂಸ್ ವೆಬ್‌ಸೈಟ್, ದೈನಿಕಗಳಾದ ನ್ಯೂಸ್ ಇಂಟರ್‌ನ್ಯಾಷನಲ್, ದ ಡಾನ್, ಬ್ಯುಸಿನೆಸ್ ರೆಕಾರ್ಡರ್, ದುನಿಯಾ ನ್ಯೂಸ್‌ಗಳು ವಿವಿಧ ಸುದ್ದಿಸಂಸ್ಥೆಗಳು ಒದಗಿಸಿದ ಸುದ್ದಿಯನ್ನು ಆದ್ಯತೆ ಮೇರೆಗೆ ಪ್ರಕಟಿಸಿವೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಸಂಶಯದಿಂದಲೇ ನೋಡುವ, ಕೆಲವೊಮ್ಮೆ ವ್ಯಂಗ್ಯಚಿತ್ರಗಳ ಮೂಲಕ ಹಾಸ್ಯ ಮಾಡುವ ಅಮೆರಿಕದ ಪತ್ರಿಕೆಗಳು, ‘ಇದು, ಭಾರತದ ಅದ್ಭುತವಾದ ಸಾಧನೆ’ ಎಂದಿವೆ.

‘ಚಂದ್ರನ ದಕ್ಷಿಣ ಧ್ರುವ ತಲುಪಿದ ಮೊದಲ ರಾಷ್ಟ್ರ ಎಂಬ ಹಿರಿಮೆಗೆ ಭಾರತ ಪಾತ್ರವಾಗಿದೆ. ಅಲ್ಲದೆ, ಬಾಹ್ಯಾಕಾಶ ಕ್ಷೇತ್ರದಲ್ಲಿನ ತನ್ನ ಕಾರ್ಯಕ್ರಮಗಳಿಗೆ ಹೊಸ ಸಾಧನೆ ಸೇರ್ಪಡೆಗೊಳಿಸಿದೆ’ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಚಂದ್ರಯಾನದ ವಿವಿಧ ಆಯಾಮಗಳನ್ನು ಕುರಿತ ವರದಿ ಹಾಗೂ ವಿಶ್ಲೇಷಣಾ ವರದಿಯೊಂದಿಗೆ ಭಾರತದ ಈ ಐತಿಹಾಸಿಕ ಸಾಧನೆಯನ್ನು ವಾಷಿಂಗ್ಟನ್ ಪೋಸ್ಟ್ ದಾಖಲಿಸಿದೆ.

‘ಇಸ್ರೊ ಯಶಸ್ಸಿನ ಲಾಭಕ್ಕೆ ಮೋದಿ ಯತ್ನ’

ವೇಣುಗೋಪಾಲ್

ನವದೆಹಲಿ (ಪಿಟಿಐ): ‘ಚಂದ್ರಯಾನ 3’ರ ಸಂಪೂರ್ಣ ಯಶಸ್ಸು ಇಸ್ರೊಗೆ ಸಲ್ಲುತ್ತದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಇದರ ಶ್ರೇಯ ಪಡೆಯಲು ಹವಣಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಟೀಕಿಸಿದೆ.

‘ಚಂದ್ರಯಾನ 3’ರ ಹೆಮ್ಮೆಯ ಕ್ಷಣಗಳು ದೀರ್ಘಕಾಲದವರೆಗೆ ನಮ್ಮೊಡನೆ ಮಿಳಿತವಾಗಿರಲಿವೆ. ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ನೇತೃತ್ವದ ನಾಯಕತ್ವ ಇತಿಹಾಸ ಸೃಷ್ಟಿಸಿದೆ. ಆದರೆ, ಇದರ ಯಶಸ್ಸಿನ ಲಾಭ ಪಡೆಯಲು ಮುಂದಾಗಿರುವ ಮೋದಿ ಅವರು ತಮ್ಮ ಈ ಬೂಟಾಟಿಕೆಗೆ ಉತ್ತರ ನೀಡಬೇಕಿದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ‘ಎಕ್ಸ್’ನಲ್ಲಿ (ಟ್ವಿಟರ್) ಆಗ್ರಹಿಸಿದ್ದಾರೆ.

‘ಲ್ಯಾಂಡರ್ ವಿಕ್ರಮ್ ಸಾಫ್ಟ್ ಲ್ಯಾಂಡಿಂಗ್ ಆಗಲು ಕೆಲವೇ ನಿಮಿಷಗಳಿದ್ದಾಗ ಪರದೆ ಮೇಲೆ ಮೋದಿ ಕಾಣಿಸಿಕೊಂಡರು. ವಿಜ್ಞಾನಿಗಳ ಎಲ್ಲಾ ಶ್ರಮ ತಮ್ಮದಾಗಿಸಿಕೊಂಡರು. ಆದರೂ, ಇಸ್ರೊ ವಿಜ್ಞಾನಿಗಳ ಕಾರ್ಯಕ್ಕೆ ಬೆಂಬಲ ನೀಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿರುವುದು ಏಕೆ’ ಎಂದು ಪ್ರಶ್ನಿಸಿದ್ದಾರೆ.

ಸಾಧನೆಗೆ ಡೂಡಲ್ ಗೌರವ



ನವದೆಹಲಿ (ಪಿಟಿಐ): ಭಾರತದ ‘ಚಂದ್ರಯಾನ-3’ರ ಯಶಸ್ಸನ್ನು ವಿಶೇಷ ಆ್ಯನಿಮೇಟೆಡ್ ಡೂಡಲ್ ಮೂಲಕ ಪ್ರಸಿದ್ಧ ಸರ್ಚ್ ಎಂಜಿನ್ ಗೂಗಲ್ ಗುರುವಾರ ಸಂಭ್ರಮಿಸಿದೆ.

‘ಚಂದಿರನ ದಕ್ಷಿಣ ಧ್ರುವದಲ್ಲಿ ಮೊದಲು ಇಳಿದಿರುವುದಕ್ಕೆ ಸಂಭ್ರಮ’ ಎಂಬ ಡೂಡಲ್ ಅನ್ನು ಅಳವಡಿಸುವ ಮೂಲಕ ಗೂಗಲ್, ಭಾರತದ ಸಾಧನೆಯನ್ನು ಕೊಂಡಾಡಿದೆ.

ಮಿನುಗುವ ನಕ್ಷತ್ರಗಳ ನಡುವೆ ಬಾಹ್ಯಾಕಾಶದಲ್ಲಿ ಇಂಗ್ಲಿಷ್ ಪದ ‘ಗೂಗಲ್’ನ ಅಕ್ಷರಗಳು ತೇಲುವುದು, ಚಂದಿರನೇ ಈ ಪದದ ಎರಡನೇ ಅಕ್ಷರ ‘ಒ’ ರೀತಿ ಕಾಣಿಸುವುದು ಹಾಗೂ ಚಂದ್ರನ ಅಂಗಳದಲ್ಲಿ ಗಗನನೌಕೆಯ ಸಾಫ್ಟ್ ಲ್ಯಾಂಡಿಂಗ್ ವಿವರಿಸುವುದನ್ನು ಈ ಡೂಡಲ್ ಒಳಗೊಂಡಿದೆ.

ದಕ್ಷಿಣ ಆಫ್ರಿಕಾದ ಜೋಹಾನಸ್‌ಬರ್ಗ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ, ‘ಚಂದ್ರಯಾನ 3’ ಯಶಸ್ವಿಯಾಗಿದ್ದಕ್ಕಾಗಿ ಅಲ್ಲಿರುವ ಭಾರತೀಯ ಸಮುದಾಯದವರು ಅಭಿನಂದನೆಯ ಸುರಿಮಳೆ ಸುರಿಸಿದರು —ಪಿಟಿಐ ಚಿತ್ರ

ಶೈಲಜಾ ಆತ್ಮಕಥೆ ಪಠ್ಯಕ್ಕೆ ಸೇರ್ಪಡೆ: ವಿರೋಧ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಮಾಜಿ ಆರೋಗ್ಯ ಸಚಿವೆ ಹಾಗೂ ಸಿಪಿಎಂ ನಾಯಕಿ ಕೆ.ಕೆ. ಶೈಲಜಾ ಅವರ ಆತ್ಮಕಥೆಯನ್ನು ಎಂ.ಎ (ಇಂಗ್ಲಿಷ್) ಪಠ್ಯಕ್ರಮಕ್ಕೆ ಸೇರ್ಪಡೆಗೊಳಿಸಿರುವ ಕಣ್ಣೂರು ವಿಶ್ವವಿದ್ಯಾಲಯದ ನಡೆ ವಿವಾದಕ್ಕೆ ಕಾರಣವಾಗಿದೆ.

ವಿಶ್ವವಿದ್ಯಾಲಯದ ಈ ಕ್ರಮಕ್ಕೆ ಕಾಂಗ್ರೆಸ್ ಪರವಿರುವ ಉಪನ್ಯಾಸಕರ ಸಂಘಟನೆ ವಿರೋಧ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರವು ತನ್ನ ಪಟ್ಟಭದ್ರ ಹಿತಾಸಕ್ತಿಯ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಯತ್ನಿಸುತ್ತಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೋಪಿಸಿದ ಮರುದಿನವೇ ಈ ವಿಚಾರ ಮುನ್ನೆಲೆಗೆ ಬಂದಿದೆ.

ಶೈಲಜಾ ಆತ್ಮಕಥೆ ‘ಮೈ ಲೈಫ್ ಆ್ಯಸ್ ಎ ಕಾಮ್ರೆಡ್’ ಅನ್ನು ಎಂ.ಎ ಇಂಗ್ಲಿಷ್‌ನ ಮೊದಲ ಸೆಮಿಸ್ಟರ್‌ಗೆ ಪಠ್ಯವಾಗಿ ಸೇರಿಸಲಾಗಿದೆ. ಮಹಾತ್ಮ ಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್, ಬುಡಕಟ್ಟು ಹೋರಾಟಗಾರ್ತಿ ಸಿ.ಕೆ. ಜಾನು ಅವರ ಆತ್ಮಕಥೆಗಳನ್ನೂ ಪಠ್ಯದಲ್ಲಿ ಅಳವಡಿಸಲಾಗಿದೆ. ಶೈಲಜಾ ಅವರು 2016ರಿಂದ 2021ರ ವರೆಗೆ ಪಿಣರಾಯಿ ವಿಜಯನ್ ಸರ್ಕಾರದಲ್ಲಿ ಆರೋಗ್ಯ ಸಚಿವೆಯಾಗಿ ಕಾರ್ಯ ನಿರ್ವಹಿಸಿದ್ದರು. ನಿಫಾ ಮತ್ತು ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಶೈಲಜಾ ಅವರ ಕಾರ್ಯ ನಿರ್ವಹಣೆ ಪ್ರಶಂಸೆಗೆ ಪಾತ್ರವಾಗಿತ್ತು.

ಪುತ್ರ, ಇಬ್ಬರು ಸಹೋದರರಿಗೆ ಬೆಂಕಿ ಹಚ್ಚಿದ್ದ ಆರೋಪದಿಂದಲೂ ಖುಲಾಸೆ

ವ್ಯಕ್ತಿಯ ಗಲ್ಲು ಶಿಕ್ಷೆ ರದ್ದುಪಡಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು

- ಭಾರತ ಹಾಗೂ ವಿದೇಶಿ ಕೋರ್ಟ್‌ಗಳ ತೀರ್ಪುಗಳ ಉಲ್ಲೇಖ
- ಮರಣಪೂರ್ವ ಹೇಳಿಕೆ ಪರಿಗಣಿಸುವ ಮುನ್ನ ಎಚ್ಚರಿಕೆ ಅಗತ್ಯ: ನ್ಯಾಯಪೀಠ

ನವದೆಹಲಿ: ವಿಚಾರಣಾ ನ್ಯಾಯಾಲಯವು ವ್ಯಕ್ತಿಗೆ ವಿಧಿಸಿದ್ದ ಮರಣ ದಂಡನೆಯನ್ನು ರದ್ದುಗೊಳಿಸಿರುವ ಸುಪ್ರೀಂಕೋರ್ಟ್, ಪುತ್ರ ಹಾಗೂ ಇಬ್ಬರು ಸಹೋದರರಿಗೆ ಬೆಂಕಿ ಹಚ್ಚಿದ್ದ ಆರೋಪಗಳಿಂದ ಆತನನ್ನು ಮುಕ್ತಗೊಳಿಸಿದೆ.

‘ಸಂತ್ರಸ್ತರ ಪೈಕಿ ಇಬ್ಬರ ಮರಣಪೂರ್ವ ಹೇಳಿಕೆಗಳಿಗೆ ಹಾಗೂ ಪ್ರಮುಖ ಸಾಕ್ಷಿಗಳು ನೀಡಿರುವ ಹೇಳಿಕೆಗಳಿಗೂ ಹೊಂದಿಕೆಯಾಗುತ್ತಿಲ್ಲ’ ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಜೆ.ಬಿ.ಪಾರ್ದೀವಾಲಾ ಹಾಗೂ ಪಿ.ಕೆ.ಮಿಶ್ರಾ ಅವರಿದ್ದ ನ್ಯಾಯಪೀಠವು ಅರ್ಜಿ ವಿಚಾರಣೆ ನಡೆಸಿ, ಕಳೆದ ಎಂಟು ವರ್ಷಗಳಿಂದ ಸೆರೆವಾಸ ಅನುಭವಿಸುತ್ತಿರುವ ಅರ್ಜಿದಾರ ಇರ್ಫಾನ್ ಅವರನ್ನು ತಕ್ಷಣವೇ ಜೈಲಿನಿಂದ ಬಿಡುಗಡೆ ಮಾಡುವಂತೆ ಆದೇಶಿಸಿದೆ.

‘ವ್ಯಕ್ತಿಯ ಮರಣಪೂರ್ವ ಹೇಳಿಕೆಯ ಸತ್ಯಾಸತ್ಯತೆ ಬಗ್ಗೆ ಸಂಶಯವಿದ್ದಾಗ, ಅದನ್ನು ಪುರಾವೆಯ ಭಾಗವಾಗಿ ಪರಿಗಣಿಸಬಹುದೇ ಹೊರತು ತೀರ್ಪು ನೀಡಲು ಅದೊಂದೇ ಆಧಾರವಾಗದು’ ಎಂದು ನ್ಯಾಯಪೀಠವು ತನ್ನ 36 ಪುಟಗಳ ತೀರ್ಪಿನಲ್ಲಿ ಹೇಳಿದೆ.

ತನ್ನ ಎರಡನೇ ಮದುವೆಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂಬ ಕಾರಣಕ್ಕೆ ಪುತ್ರ ಇಸ್ಲಾಮುದ್ದೀನ್, ಸಹೋದರರಾದ ಇರ್ಶಾದ್ ಮತ್ತು ನೌಶಾದ್ ಎಂಬುವವರಿಗೆ 2014ರ ಆಗಸ್ಟ್ 5ರ ರಾತ್ರಿ ಇರ್ಫಾನ್ ಬೆಂಕಿ ಹಚ್ಚಿದ್ದ ಎಂದು ಆರೋಪಿಸಲಾಗಿತ್ತು. ನಂತರ, ಮೂವರು ದೆಹಲಿಯ ಡಾ.ರಾಮಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಮೂವರು ನೀಡಿದ್ದ ಮರಣಪೂರ್ವ ಹೇಳಿಕೆಗಳನ್ನು ಪರಿಗಣಿಸಿ, ಇರ್ಫಾನ್ ಅವರಿಗೆ ಗಲ್ಲು ಶಿಕ್ಷೆ ವಿಧಿಸಿ ವಿಚಾರಣಾ ನ್ಯಾಯಾಲಯ ನೀಡಿದ್ದ ತೀರ್ಪನ್ನು ಎತ್ತಿ ಹಿಡಿದು ಅಲಹಾಬಾದ್ ಹೈಕೋರ್ಟ್ 2018ರಲ್ಲಿ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಇರ್ಫಾನ್, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಮಕ್ಕಳಿಗೆ ‘ಚಂದ್ರಯಾನ’ ಹೆಸರು

ಕೇಂದ್ರಪಾರ (ಪಿಟಿಐ): ಇಸ್ರೊದ ಚಂದ್ರಯಾನ-3 ಯೋಜನೆಯ ವಿಕ್ರಮ್ ಲ್ಯಾಂಡರ್ ಬುಧವಾರ ಚಂದಿರನ ಮೇಲೆ ಯಶಸ್ವಿಯಾಗಿ ಲ್ಯಾಂಡ್ ಆದ ಕೆಲವೇ ನಿಮಿಷಗಳಲ್ಲಿ ಒಡಿಶಾದ ಕೇಂದ್ರಪಾರ ಜಿಲ್ಲಾ ಆಸ್ಪತ್ರೆಯಲ್ಲಿ ಜನಿಸಿದ ಮಕ್ಕಳಿಗೆ ‘ಚಂದ್ರಯಾನ’ ಎಂದು ನಾಮಕರಣ ಮಾಡಲು ಪೋಷಕರು ನಿರ್ಧರಿಸಿದ್ದಾರೆ.

‘ಬುಧವಾರ ನಮ್ಮ ಸಂಭ್ರಮಕ್ಕೆ ಎರಡೆರಡು ಕಾರಣಗಳಿದ್ದವು. ಚಂದ್ರಯಾನದ-3 ಲ್ಯಾಂಡ್ ಆದ ಕೆಲವೇ ನಿಮಿಷಗಳಲ್ಲಿ ನಮಗೆ ಮಗು ಜನಿಸಿದೆ. ಹೀಗಾಗಿ ಮಗುವಿಗೆ ಚಂದ್ರಯಾನ ಎಂದು ಹೆಸರಿಡಲು ನಾವು ನಿರ್ಧರಿಸಿದ್ದೇವೆ’ ಎಂದು ಪ್ರವತ್ ಮಲ್ಲಿಕ್ ಎಂಬುವವರು ತಿಳಿಸಿದ್ದಾರೆ.

ಕೇಂದ್ರಪಾರ ಜಿಲ್ಲಾ ಆಸ್ಪತ್ರೆಯಲ್ಲಿ ಬುಧವಾರ ಸಂಜೆ ಮೂರು ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗು ಜನಿಸಿದೆ. ಈ ಮಕ್ಕಳಿಗೆ ‘ಚಂದ್ರಯಾನ’ ಎಂದು ಹೆಸರಿಡುವುದಾಗಿ ಪೋಷಕರು ಹೇಳಿದ್ದಾರೆ. ಮಗು ಜನಿಸಿದ 21 ದಿನಕ್ಕೆ ನಾಮಕರಣ ಮಾಡುವುದು ಕೇಂದ್ರಪಾರದಲ್ಲಿ ಆಚರಣೆಯಲ್ಲಿರುವ ಸಂಪ್ರದಾಯ.

ಜಿಲ್ಲಾ ಆಸ್ಪತ್ರೆಯಲ್ಲಿ ಬುಧವಾರ ಸಂಜೆ ಮಕ್ಕಳಿಗೆ ಜನ್ಮ ನೀಡಿದ ಮಹಿಳೆಯರೆಲ್ಲರೂ ತಮ್ಮ ಮಗುವಿಗೆ ಚಂದ್ರಯಾನ ಎಂದು ಹೆಸರಿಡುವ ಬಗ್ಗೆ ಉತ್ಸುಕತೆ ತೋರಿದ್ದಾರೆ ಎಂದು ಆಸ್ಪತ್ರೆಯ ಮುಖ್ಯ ನರ್ಸ್ ಅಂಜನಾ ಸಾಹೂ ಹೇಳಿದ್ದಾರೆ. ಆಸ್ಪತ್ರೆಯ ಹೆಚ್ಚುವರಿ ಜಿಲ್ಲಾ ವೈದ್ಯಾಧಿಕಾರಿ ಡಾ.ಪಿ.ಕೆ.ಪ್ರಹರಾಜ್ ಮಾತನಾಡಿ, ದೇಶದ ಐತಿಹಾಸಿಕ ಕ್ಷಣದಲ್ಲಿ ಮಗು ಜನಿಸಿರುವುದು ಪಾಲಕರಿಗೆ ಖುಷಿ ತರಿಸಿದೆ. ಹೀಗಾಗಿ ‘ಚಂದ್ರಯಾನ’ದ ಎಂದು ಹೆಸರಿಡುವ ಮೂಲಕ ಭಾರತದ ಬಾಹ್ಯಾಕಾಶ ಸಂಶೋಧನೆಯ ಸಾಧನೆಯನ್ನು ಸಂಭ್ರಮಿಸಲು ಅವರು ಬಯಸಿದ್ದಾರೆ ಎಂದು ವೈದ್ಯರು ಹೇಳಿದ್ದಾರೆ.

ಶುಕ್ರವಾರ, ಆಗಸ್ಟ್ 25, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 236 | ಪುಟ 18

www.prajavani.net

prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,252 ▼	19,387 ▼	₹60,500 (ಬೆಂಗಳೂರು) ▲	₹75,800 (ಬೆಂಗಳೂರು) ▲	82.56 ▲

ಸಿನಿಮಾ ಪುರವಣಿ

'ಟೋಬಿ' ಸಿನಿಮಾ ರಾಜ್ಯದ 175 ಏಕಪರದೆ ಚಿತ್ರಮಂದಿರಗಳಲ್ಲಿ ತೆರೆಕಂಡಿದೆ



ಪ್ರಜ್ಞಾನಂದ ರನ್ನರ್ ಅಪ್

ಬಾಕು: ಪ್ರಜ್ಞಾನ್ ರೋವರ್ ಚಂದ್ರನನ್ನು ತಲುಪಿದ ಮರುದಿನ ಪ್ರಜ್ಞಾನಂದ ಚೆಸ್ ವಿಶ್ವಕಪ್ ಗೆಲ್ಲಲೆಂಬ ಕ್ರೀಡಾಪ್ರಿಯರ ಹಾರೈಕೆ ಈಡೇರಲಿಲ್ಲ. ಚೆನ್ನೈ ಆಟಗಾರನನ್ನು ಗುರುವಾರ ಫೈನಲ್‌ನ ಟೈಬ್ರೇಕರ್‌ನಲ್ಲಿ 1.5–0.5 ರಿಂದ ಸೋಲಿಸಿದ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಮೊದಲ ಬಾರಿ ವಿಶ್ವಕಪ್ ಗೆದ್ದುಕೊಂಡರು.

ಮಂಗಳವಾರ ಮತ್ತು ಬುಧವಾರ ನಡೆದಿದ್ದ ಶಾಸ್ತ್ರೀಯ ರೀತಿಯ ಎರಡು ರೀತಿಯ ಪಂದ್ಯ ಗಳು 'ಡ್ರಾ' ಆಗಿದ್ದ ಕಾರಣ ಟೈಬ್ರೇಕ್ ಮೂಲಕ ವಿಜೇತ ರನ್ನು ನಿರ್ಧರಿಸಲಾಯಿತು. 11

ವಿಕ್ರಮ್, ಪ್ರಜ್ಞಾನ್ ಹೆಚ್ಚು ದಿನ ಕಾರ್ಯ ನಿರ್ವಹಿಸುವ ಸಾಧ್ಯತೆ

ಚಂದಿರನ ಶೋಧ ಶುರು

• ಎಸ್.ರವಿಪ್ರಕಾಶ್

ಬೆಂಗಳೂರು: ಸೂರ್ಯೋದಯದ ಎಳೆ ಕಿರಣಗಳು ವಿಕ್ರಮನಿಗೆ (ಲ್ಯಾಂಡರ್) ಚುಂಬಿಸಿದ ಕೆಲವೇ ನಿಮಿಷಗಳಲ್ಲಿ ಪ್ರಜ್ಞಾನ್ (ರೋವರ್) ಸುರಕ್ಷಿತವಾಗಿ ಹೊರಗೆ ಅಡಿ ಇಟ್ಟಿತು. ಇದಾದ ಕೆಲವೇ ಸಮಯದಲ್ಲಿ ಲ್ಯಾಂಡರ್‌ನಲ್ಲಿರುವ ಮೂರು ಉಪಕರಣಗಳು ಮಾಹಿತಿ ಸಂಗ್ರಹ ಕಾರ್ಯ ಆರಂಭಿಸಿವೆ.

ಮತ್ತೊಂದು ಅಚ್ಚರಿಯ ಸಂಗತಿ ಎಂದರೆ, ವಿಕ್ರಮ್ ಮತ್ತು ಪ್ರಜ್ಞಾನ್‌ಗೆ ನಿಗದಿಪಡಿಸಲಾಗಿರುವ ಚಂದ್ರನ ಒಂದು ದಿನಕ್ಕಿಂತಲೂ (ಭೂಮಿಯ 14 ದಿನಗಳು) ಹೆಚ್ಚು ಸಮಯ ಕಾರ್ಯ ನಿರ್ವಹಿಸುವ ಸಾಧ್ಯತೆಯೂ ಇದೆ.

ಆದರೆ, ವಿಕ್ರಮ್ ಮತ್ತು ಪ್ರಜ್ಞಾನ್‌ನಿಂದ ಬರಬೇಕಾಗಿರುವ ತಾಜಾ ಛಾಯಾಚಿತ್ರಗಳಿಗಾಗಿ ಇಸ್ರೊ ತುದಿಗಾಲಿನಲ್ಲಿ ಕಾದು ಕುಳಿತಿದೆ. ಈ ಮಧ್ಯೆ ವಿಕ್ರಮ್ ಲ್ಯಾಂಡಿಂಗ್ ಆಗುವ ವಿವಿಧ ಹಂತಗಳ ವಿಡಿಯೊವನ್ನು ಇಸ್ರೊ ಬಿಡುಗಡೆ ಮಾಡಿದೆ. ಲ್ಯಾಂಡರ್‌ನ ಇಮೇಜರ್ ಕ್ಯಾಮೆರಾ ಈ

ವಿಕ್ರಮ್ ಲ್ಯಾಂಡರ್‌ನ ಇಮೇಜರ್ ಕ್ಯಾಮೆರಾ ಸೆರೆಹಿಡಿದಿರುವ ಚಂದ್ರನ ಮೇಲ್ಮೈಯ ದೃಶ್ಯವನ್ನು ಇಸ್ರೊ ಗುರುವಾರ ಬಿಡುಗಡೆ ಮಾಡಿದೆ

ದೃಶ್ಯಗಳನ್ನು ಸೆರೆ ಹಿಡಿದಿದೆ.

'ಎಲ್ಲ ಚಟುವಟಿಕೆಗಳು ನಿಯಮಿತ ವಾಗಿ ನಡೆಯುತ್ತಿವೆ. ಎಲ್ಲ ವ್ಯವಸ್ಥೆಗಳು ಸಾಮಾನ್ಯವಾಗಿವೆ. ಲ್ಯಾಂಡರ್‌ನಲ್ಲಿ ಇರುವ ಉಪಕರಣಗಳಾದ ಇಲ್ಸಾ, ರಂಭಾ ಮತ್ತು ಚಾಸ್ಟೆಗಳು ಇವತ್ತು ಚಾಲೂ ಆಗಿವೆ' ಎಂದು ಇಸ್ರೊ ತನ್ನ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

ಕಕ್ಷೆಯಲ್ಲಿ ಬೀಡುಬಿಟ್ಟಿರುವ ನೋದನ ಕೋಶದಲ್ಲಿರುವ (ಪ್ರೊಪಲ್ಷನ್ ಮಾಡ್ಯೂಲ್) ಶೇಪ್ ಉಪಕರಣವು ಭಾನುವಾರದಿಂದ ತನ್ನ ಚಟುವಟಿಕೆ ಆರಂಭಿಸಲಿದೆ ಎಂದೂ ಇಸ್ರೊ ಹೇಳಿದೆ.

11ನೇ ಪುಟ ನೋಡಿ

'ಗುರುತಿಸಿದಲ್ಲೇ ಇಳಿಯಿತು'

'ನಾವು ಗುರುತಿಸಿದ ಸ್ಥಳದಲ್ಲೇ ಕರಾರುವಾಕ್ಕಾಗಿ ಲ್ಯಾಂಡರ್ ಇಳಿದಿದೆ. ಇದರಿಂದ ನಮ್ಮ ವೈಜ್ಞಾನಿಕ ಅಧ್ಯಯನದ ಉದ್ದೇಶ ಸಫಲವಾಗಲಿದೆ' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಗುರುವಾರ ಹೇಳಿದರು.

'ಲ್ಯಾಂಡರ್ ಇಳಿಸಲು 4.5X2.5 ಕಿ.ಮೀ ವಿಸ್ತೀರ್ಣವನ್ನು ಗುರುತಿಸ-ಲಾಗಿತ್ತು. ಇದರ ಮಧ್ಯ ಭಾಗದಲ್ಲೇ ಅಂದರೆ 300 ಮೀಟರ್‌ಗಳ ಒಳಗೇ ಇಳಿದಿದೆ. ಲ್ಯಾಂಡರ್ ಮತ್ತು ರೋವರ್‌ನಲ್ಲಿರುವ ಉಪಕರಣಗಳು ಹಂತ ಹಂತವಾಗಿ ಚಾಲೂ ಆಗಿ ಕಾರ್ಯವನ್ನು ಆರಂಭಿಸುತ್ತವೆ' ಎಂದು ವಿವರಿಸಿದರು.

ತನಿಖೆಗೆ ನ್ಯಾ. ಕುನ್ಹಾ ಆಯೋಗ?

ಕೋವಿಡ್ ಅಕ್ರಮ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆಯ ಹೆಸರಿನಲ್ಲಿ ಆರೋಗ್ಯ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ಆಯೋಗ ರಚಿಸಲು ಸರ್ಕಾರ ಮುಂದಾಗಿದೆ.

ನ್ಯಾ. ಕುನ್ಹಾ ಅವರು ಜಿಲ್ಲಾ ನ್ಯಾಯಾಧೀಶ, ಹೈಕೋರ್ಟ್ ರಿಜಿಸ್ಟ್ರಾರ್, ಹೈಕೋರ್ಟ್ ನ್ಯಾಯಮೂರ್ತಿ ಯಾಗಿ ಕರ್ತವ್ಯ ನಿರ್ವಹಿಸಿದವರು. ಐದು ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಿದ್ದಾರೆ.

ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದಾರೆ ಎಂದು ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕೋವಿಡ್ ಭ್ರಷ್ಟಾಚಾರದ ಆರೋಪ ಗಳಿಗೆ ಸಂಬಂಧಿಸಿದಂತೆ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ (ಪಿಎಸಿ) ವರದಿಯಲ್ಲಿ-ರುವ ಅಂಶಗಳ ತನಿಖೆಯ ಜೊತೆಗೆ, ಒಟ್ಟು ತನಿಖೆಯ ಕಾರ್ಯವ್ಯಾಪ್ತಿ, ಯಾವ ಅಂಶಗಳ ಮೇಲೆ ಪರಾಮರ್ಶೆ ನಡೆಸಬೇಕೆಂಬ ಬಗ್ಗೆ ಇನ್ನಷ್ಟೇ ಅಂತಿಮ ಗೊಳ್ಳಬೇಕಿದೆ ಎಂದು ಮೂಲಗಳು ಹೇಳಿವೆ.

4ನೇ ಪುಟ ನೋಡಿ

ಶೇ 40 ಲಂಚ: ಸಮಿತಿ ಬದಲು ಆಯೋಗ?

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಕಾಮಗಾರಿಗಳಲ್ಲಿ ಶೇ 40 ಲಂಚ ಆರೋಪದ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಇತ್ತೀಚೆಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಸಮಿತಿ ಕಾರ್ಯ ಸೀಮಿತವಾ-ಗಿರುವುದರಿಂದ, ಅದನ್ನು ತನಿಖಾ ಆಯೋಗವಾಗಿ ಮರು ರಚಿಸುವ ಬಗ್ಗೆ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಕಾಮಗಾರಿಗಳ ಟೆಂಡರ್, ಪ್ಯಾಕೇಜ್ ಪದ್ಧತಿ, ಪುನರ್ ಅಂದಾಜು, ಬಾಕಿ ಮೊತ್ತ ಬಿಡುಗಡೆ ಮತ್ತಿತರ ವಿಷಯಗಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪವಿದ್ದು, ತನಿಖೆ ನಡೆಸಬೇಕಾದ ವ್ಯಾಪ್ತಿಯು ವಿಸ್ತಾರವಾಗಿದೆ. ಹೀಗಾಗಿ ಸಮಿತಿಯ ಬದಲು ಆಯೋಗ ರಚಿಸುವುದೇ ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ ಎಂದೂ ಗೊತ್ತಾಗಿದೆ.

ಪಿಡಿಒ ವರ್ಗಾವಣೆ: ಅನುಮೋದನೆಗೆ ಮೊದಲೇ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಟ

ಅಧಿಕಾರಿಗಳಿಂದಲೇ ಪಟ್ಟಿ ಸೋರಿಕೆ!

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದ ಬಳಿಕ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಲ್ಲಿಸಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆ ಕರಡು ಪಟ್ಟಿಗಳು ಮುಖ್ಯಮಂತ್ರಿಯವರ ಅನುಮೋದನೆಗೂ ಮೊದಲೇ ಸೋರಿಕೆಯಾಗಿವೆ.

ಇಲಾಖೆಯ ಹಿರಿಯ ಅಧಿಕಾರಿಗಳ ವಾಟ್ಸ್ ಆ್ಯಪ್ ಗುಂಪುಗಳಲ್ಲೇ ಪಿಡಿಒ ವರ್ಗಾವಣೆಯ ಕರಡು ಪಟ್ಟಿ ಗಳನ್ನು ಹಂಚಿಕೊಳ್ಳಲಾಗಿದೆ. 223 ಪಿಡಿಒಗಳ ವರ್ಗಾ ವಣೆ ಪ್ರಸ್ತಾವಕ್ಕೆ ಅನುಮೋದನೆ ಕೋರಿ ಸಚಿವರು ಸಲ್ಲಿಸಿದ್ದ ಪಟ್ಟಿ ಸೋಮವಾರ (ಆ.21) ಸೋರಿಕೆಯಾ ಗಿತ್ತು. 40 ಪಿಡಿಒಗಳ ವರ್ಗಾವಣೆ ಆದೇಶದಲ್ಲಿ ಮಾರ್ಪಾಡು ಮಾಡಲು ಅನುಮತಿ ಕೋರಿ ಸಲ್ಲಿಸಿದ್ದ ಮತ್ತೊಂದು ಪಟ್ಟಿ ಮಂಗಳವಾರ (ಆ.22) ಸೋರಿಕೆಯಾಗಿದೆ.

4ನೇ ಪುಟ ನೋಡಿ

ಎಫ್‌ಐಆರ್ ದಾಖಲು

ಮುಖ್ಯಮಂತ್ರಿಯವರ ಅನುಮೋದನೆಗಾಗಿ ಸಲ್ಲಿಸಿರುವ ಪಿಡಿಒಗಳ ವರ್ಗಾವಣೆ ಪಟ್ಟಿ ಸೋರಿಕೆಯಾಗಿರುವ ಕುರಿತು ಕೇಂದ್ರ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

2013ರ ಬ್ಯಾಚ್ ಪಿಡಿಒ ಸ್ಟೇಟ್ ಯೂನಿಯನ್ ಎಂಬ ವಾಟ್ಸ್ ಆ್ಯಪ್ ಗ್ರೂಪ್ ನಲ್ಲಿ ಪಟ್ಟಿ ಸೋರಿಕೆಯಾಗಿದೆ. ನಿವಿತ್ ನಿಹಾಲ್ ಮತ್ತು ಮಂಕಾನಿ ಎಂಬುವವರ ಮೊಬೈಲ್ ಸಂಖ್ಯೆಗಳಿಂದ ಹಂಚಿಕೆಯಾಗಿದೆ. ಪಂಚಾಯತ್ ರಾಜ್ ಆಯುಕ್ತಾಲಯದ ಕಂಪ್ಯೂಟರ್ ಹ್ಯಾಕ್ ಮಾಡಿ ಪಟ್ಟಿಯನ್ನು ಸೋರಿಕೆ ಮಾಡಲಾಗಿದೆ ಎಂದು ಆಯುಕ್ತಾಲಯದ ಉಪ ನಿರ್ದೇಶಕಿ ಭಾಗ್ಯಶ್ರೀ ದೂರಿನಲ್ಲಿ ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಲ್ಲು ಅರ್ಜುನ್; ಆಲಿಯಾ – ಕೃತಿ ಅತ್ಯುತ್ತಮ ನಟ, ನಟಿ

ಕನ್ನಡದ ಅತ್ಯುತ್ತಮ ಚಿತ್ರ '777 ಚಾರ್ಲಿ'

ನವದೆಹಲಿ (ಪಿಟಿಐ): 2021ನೇ ಸಾಲಿನ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಗುರುವಾರ ಘೋಷಣೆಯಾಗಿದ್ದು, ಕನ್ನಡ ಭಾಷೆ ವಿಭಾಗದಲ್ಲಿ ರಕ್ಷಿತ್ ಶೆಟ್ಟಿ ನಟನೆಯ '777 ಚಾರ್ಲಿ' ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದಿದೆ.

69ನೇ ರಾಷ್ಟ್ರೀಯ ಪ್ರಶಸ್ತಿ ಇದಾಗಿದ್ದು, ಪುರಸ್ಕೃತರ ಪಟ್ಟಿಯನ್ನು ತೀರ್ಪುಗಾರರ ಮಂಡಳಿಯ ಅಧ್ಯಕ್ಷ ಕೇತನ್ ಮೆಹ್ತಾ ಘೋಷಿಸಿದರು.

ಈ ಮೂಲಕ ಚೊಚ್ಚಲ ನಿರ್ದೇಶನಕ್ಕೇ ಕಿರಣ್ ರಾಜ್ ಕೆ. ಅವರು ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ. ಪ್ರಶಸ್ತಿಯು ರಜತ ಕಮಲ ಹಾಗೂ ₹1 ಲಕ್ಷ ನಗದು ಒಳಗೊಂಡಿದೆ. ಸಾಕ್ಷ್ಯಚಿತ್ರ ವಿಭಾಗದಲ್ಲಿ ನಟಿ ಭಾರತಿ ವಿಷ್ಣುವರ್ಧನ್ ಅವರ ಜೀವನದ ಕುರಿತ 'ಬಾಳೆ ಬಂಗಾರ'ಕ್ಕೆ ಅನಿರುದ್ಧ ಜತ್ಕರ್ ತೀರ್ಪುಗಾರರ ಮೆಚ್ಚುಗೆ ಪಡೆದಿದ್ದಾರೆ. ಕನ್ನಡ ಸಿನಿಮಾ ಪತ್ರಕರ್ತ ರಾದ ಸುಬ್ರಹ್ಮಣ್ಯ ಬಾಡೂರು (ಬಿ.ಎನ್.ಸುಬ್ರಹ್ಮಣ್ಯ) ಅತ್ಯುತ್ತಮ ಸಿನಿಮಾ ವಿಮರ್ಶಕ (ವಿಶೇಷ ಉಲ್ಲೇಖ) ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡದಲ್ಲಿರುವ ಜೇಕಬ್ ವರ್ಗೀಸ್ ನಿರ್ದೇಶನದ 'ಆಯುಷ್ಮಾನ್' ಸಿನಿಮಾ, ಅತ್ಯುತ್ತಮ ಅನ್ವೇಷಣೆ/ ಅಡ್ವೆಂಚರ್ ಸಿನಿಮಾ ಪ್ರಶಸ್ತಿ ಪಡೆದಿದೆ.

ಕಿರಣ್ ರಾಜ್



ಅಲ್ಲು ಅರ್ಜುನ್

ಆಲಿಯಾ

ಕೃತಿ ಸೆನನ್

ಅಲ್ಲು ಅರ್ಜುನ್ ಅತ್ಯುತ್ತಮ ನಟ: ಆರ್.ಮಾಧವನ್ ನಟಿಸಿ, ನಿರ್ದೇಶಿಸಿರುವ ರಾಕೆಟ್ರಿ–ದಿ ನಂಬಿ ಎಫೆಕ್ಟ್ ಅತ್ಯುತ್ತಮ ಫೀಚರ್ ಫಿಲ್ಮ್ ಪ್ರಶಸ್ತಿ ಪಡೆದಿದೆ. 'ಪುಷ್ಪ' ಚಿತ್ರದಲ್ಲಿನ ನಟನೆಗಾಗಿ ನಟ ಅಲ್ಲು ಅರ್ಜುನ್ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. 'ಗಂಗೂಬಾಯಿ ಕಾಠಿಯಾವಾಡಿ' ಚಿತ್ರದಲ್ಲಿನ ನಟನೆಗಾಗಿ ಆಲಿಯಾ ಭಟ್ ಹಾಗೂ 'ಮಿಮಿ' ಚಿತ್ರದಲ್ಲಿನ ನಟನೆಗಾಗಿ ಕೃತಿ ಸೆನನ್ ಅತ್ಯುತ್ತಮ ನಟಿ ಪ್ರಶಸ್ತಿ ಹಂಚಿಕೊಂಡಿದ್ದಾರೆ.

ವಿವೇಕ್ ರಂಜನ್ ಅಗ್ನಿಹೋತ್ರಿ ನಿರ್ದೇಶನದ 'ದಿ ಕಾಶ್ಮೀರ್ ಫೈಲ್ಸ್' ರಾಷ್ಟ್ರೀಯ ಭಾವೈಕ್ಯ ಸಾರುವ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದಿದೆ. ಎಸ್.ಎಸ್.ರಾಜಮೌಳಿ ನಿರ್ದೇಶನದ 'ಆರ್‌ಆರ್‌ಆರ್' ಸಿನಿಮಾ ಆರು ಪ್ರಶಸ್ತಿ-ಗಳನ್ನು ಬಾಚಿಕೊಂಡಿದೆ.

11ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹಬ್ಬಕ್ಕೆ ಹೂವು–ಹಣ್ಣು ಖರೀದಿಸಲು ಹೆಚ್ಚು ಜನ ಆಗಮಿಸಿದ್ದರಿಂದ ಗುರುವಾರ ಬಾಲಗಂಗಾಧರನಾಥ ಮೇಲ್ಸೇತುವೆಯಲ್ಲಿ ಭಾರಿ ಸಂಚಾರ ದಟ್ಟಣೆ ಆಯಿತು (ಎಡ ಚಿತ್ರ). ಕೆ.ಆರ್. ಮಾರುಕಟ್ಟೆಯಲ್ಲೂ ಕಾಲಿಡಲು ಜಾಗವಿಲ್ಲದಂತಾಗಿತ್ತು.

ಹಬ್ಬಕ್ಕೆ ಖರೀದಿ ಭರಾಟೆ!

ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯಲ್ಲಿ ವರಮಹಾಲಕ್ಷ್ಮಿ ಹಬ್ಬದ ಮುನ್ನಾದಿನವಾದ ಗುರುವಾರ ಹೂವು ಹಾಗೂ ಹಣ್ಣು ಖರೀದಿಗೆ ಹರಿದುಬಂದ ಜನಸಾಗರ

ಪ್ರಜಾವಾಣಿ ಚಿತ್ರಗಳು: ರಂಜು ಪಿ

ಕೆ.ಆರ್. ಮಾರುಕಟ್ಟೆಯಲ್ಲಿ ಜನಸಾಗರ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಗುರುವಾರ ಬೆಳಿಗ್ಗೆ ಹೂವು ಮತ್ತು ಹಣ್ಣಿನ ಖರೀದಿಗಾಗಿ ಕೆ.ಆರ್. ಮಾರುಕಟ್ಟೆಗೆ ಜನಸಾಗರವೇ ಹರಿದು ಬಂದಿತ್ತು.

ಕೆ.ಆರ್.ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳಲ್ಲಿ ವಾಹನ ದಟ್ಟಣೆಯಾಗಿತ್ತು. ಮಾರುಕಟ್ಟೆಯಲ್ಲಿ ಎತ್ತ ನೋಡಿದರತ್ತ ಜನವೂ ಜನ. ಹಬ್ಬಕ್ಕೆ ಬೇಕಾದ ಪೂಜಾ ಸಾಮಾಗ್ರಿಗಳು ಸೇರಿ ಅಗತ್ಯ ವಸ್ತುಗಳ ಖರೀದಿಗೆ ಬೆಳಿಗ್ಗೆ 3 ಗಂಟೆಯಿಂದಲೇ ಖರೀದಿ ಪ್ರಾರಂಭಿಸಿದ್ದರು. ಗ್ರಾಹಕರಿಂದ ಕಿಕ್ಕಿರಿದು ತುಂಬಿದ್ದ ಮಾರುಕಟ್ಟೆಯಲ್ಲಿ ಚಳಿಯನ್ನು ಲೆಕ್ಕಿಸದೆ ವ್ಯಾಪಾರಿಗಳು ಮಾರಾಟ ಮಾಡುತ್ತಿದ್ದರು. ಮಾರುಕಟ್ಟೆ ಪ್ರದೇಶದ ರಸ್ತೆ ಇಕ್ಕೆಲಗಳಲ್ಲಿ ನಡೆದಾಡಲು ಕಷ್ಟವಾಗುವಷ್ಟು ಗ್ರಾಹಕರು ಜಮಾಯಿಸಿದ್ದರು. ಇದರಿಂದ, ಸಂಚಾರ ದಟ್ಟಣೆಯುಂಟಾಗಿ ವಾಹನ ಸವಾರರು ಪರದಾಡಬೇಕಾಯಿತು.

ಲಕ್ಷ್ಮಿ ಪೂಜೆಗೆ ಬಾಳೆ, ಸೀಬೆ, ಸೇಬು, ಸೀತಾಫಲ, ಅನಾನಸ್, ದ್ರಾಕ್ಷಿ ಹಣ್ಣುಗಳನ್ನು ಖರೀದಿಸುತ್ತಿದ್ದರು. ಬಾಳೆಕಂಬ ಮಾವಿನ ತೋರಣ, ಗಾಜಿನ ಬಳೆ ಸೇರಿದಂತೆ ವಿವಿಧ ಸಾಮಗ್ರಿಗಳ ವ್ಯಾಪಾರ ಜೋರಾಗಿತ್ತು. ಲಕ್ಷ್ಮಿ ಮೂರ್ತಿಗಳ ಅಲಂಕಾರಕ್ಕಾಗಿ ಬಣ್ಣದ ಕಾಗದಗಳು, ಬಲೂನು, ಕೃತಕ ಹಾರ, ಹೂವುಗಳಿಗೆ ಹೆಚ್ಚಿನ ಬೇಡಿಕೆ ಇತ್ತು.

ಮಾರುಕಟ್ಟೆಯಲ್ಲಿ ಹಲವರು ಮೊಬೈಲ್ ಮತ್ತು ಪರ್ಸ್‌ಗಳನ್ನು ಕಳೆದುಕೊಂಡು ಪರದಾಡಿದರು.

ನಗರದ ಪ್ರಮುಖ ಬಡಾವಣೆಗಳಲ್ಲಿಯೂ ಹಬ್ಬದ ಪ್ರಯುಕ್ತ ಮಳಿಗೆಗಳನ್ನು ತೆರೆಯಲಾಗಿದ್ದು, ಗ್ರಾಹಕರು ಹಬ್ಬಕ್ಕೆ ಬೇಕಾದ ಹೂವು, ಹಣ್ಣು, ತರಕಾರಿ ಹಾಗೂ ಪೂಜಾ ಸಾಮಗ್ರಿಗಳನ್ನು ಖರೀದಿಸಿದರು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ವಿಶೇಷ ತಹಶೀಲ್ದಾರ್‌ರವರ ಕಛೇರಿ, ಬೆಂಗಳೂರು ಗ್ರಾಮಾಂತರ ಶಾಖಾ ಕಛೇರಿ, ನಂ.197, ವೆಸ್ಟ್ ಆಫ್ ಕಾರ್ಡ್ ರಸ್ತೆ, 1ನೇ ಬ್ಲಾಕ್, 3ನೇ ಮಹಡಿ, ರಾಜಾಜಿನಗರ, ಬೆಂಗಳೂರು–560086, ದೂ: 080–23197995/996,
ಇ–ಮೇಲ್: rur.ksfc@karnataka.gov.in ವೆಬ್‌ಸೈಟ್: htpps://ksfc.karnataka.gov.in

ಕ.ರಾ.ಹ.ಸಂ/ಎಸ್.ಟಿ.ಆರ್/2023–24 ದಿನಾಂಕ: 24.08.2023

ಬಹಿರಂಗ ಹರಾಜು ಪ್ರಕಟಣೆ

ಈ ಕೆಳಗೆ ಕಾಣಿಸಿದ ಕಾಲಂ (1) ರ ಘಟಕಗಳ ಬಾಬ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ತೆಗೆದುಕೊಂಡ ಸಾಲದ ಬಾಕಿ ಹಣವನ್ನು ಸಂಸ್ಥೆಗೆ ಮರು ಪಾವತಿ ಮಾಡದೇ ಇದ್ದುದರಿಂದ, ಈ ಕೆಳಗೆ ಕಾಣಿಸಿರುವ ಕಾಲಂ (2) ರ ಸ್ಥಿರಾಸ್ತಿಯನ್ನು **"ಎಲ್ಲಿ ಹೇಗಿವೆಯೋ ಹಾಗೆಯೇ"** ಇರುವ ಸ್ಥಿತಿಯಲ್ಲಿ ಭೂಕಂದಾಯ ಬಾಕಿಯಂತೆ ಪರಿಗಣಿಸಿ ವಸೂಲು ಮಾಡಲು ಕೆಳಗೆ ಕಾಲಂ (3) ರಲ್ಲಿ ಕಾಣಿಸಿದ ಸ್ಥಳದಲ್ಲಿ ಮತ್ತು ದಿನಾಂಕದಂದು ಹರಾಜು ನಡೆಸಲಾಗುವುದು. ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲಿಚ್ಛಿಸುವವರು ಪ್ರತಿ ಹರಾಜಿಗೆ ತಲಾ **ರೂ.10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ)** ದಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ಗ್ರಾಮಾಂತರ ಶಾಖೆಯ ಹೆಸರಿಗೆ ಠೇವಣಿ ಮೊಬಲಗನ್ನು ಪಾವತಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಸ್ಥಿರಾಸ್ತಿ ಕೊಳ್ಳಲು ಹರಾಜಿನಲ್ಲಿ ಅಂತಿಮ ಬಿಡ್ಡುದಾರರು ಸ್ಥಳದಲ್ಲಿಯೇ ಬಿಡ್ ಮಾಡಿದ ಮೊತ್ತದ 1/4 ನೇ ಭಾಗದ ಹಣವನವನ್ನು ಪಾವತಿಸಿ ಉಳಿದ ಹಣವನ್ನು ಹರಾಜು ದಿನಾಂಕ ದಿಂದ 15 ದಿನಗಳೊಳಗಾಗಿ ತಪ್ಪದೆ ಪಾವತಿ ಮಾಡತಕ್ಕದ್ದು.

ಕ್ರಮ ಸಂ.	ಘಟಕದ ಬಾಕಿದಾರರ ಹೆಸರು ಮತ್ತು ವಿಳಾಸ	ಸಾಲಗಾರರ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ಬಗ್ಗೆ ನಿಗದಿಪಡಿಸಿದ ದಿನಾಂಕ & ಸ್ಥಳ
1	2	3	4
1	**ಶ್ರೀಮತಿ ನಂದಿನಿ ಆಚಾರ್ಯ, ಕೋಂ ಶ್ರೀ ಆರ್.ಈ. ಲೋಕೇಶ್, ಪ್ರವರ್ತಕರು ಮೆ:ಹನುಮಾನ್ ಕಾಂಡಿಮೆಂಟ್ಸ್**, ನಂ.87, 1ನೇ ಮುಖ್ಯ ರಸ್ತೆ, ರಾಜೇಶ್ವರಿನಗರ, ಲಕ್ಷೀಪುರ, ಮಾದನಾಯಕನಹಳ್ಳಿ, ಬೆಂಗಳೂರು–562123.	ಸೈಟ್ ನಂ.224, ಸ.ನಂ.88 & 89, ಲಗ್ಗೆರೆ ಲೇಔಟ್, ನಂದಿನಿ ಲೇಔಟ್, ಬಿಡಿಎ, ಬೆಂಗಳೂರು, ಇಲ್ಲಿರುವ 20x30 ಅಳತೆಯ ನಿವೇಶನ ಮತ್ತು ಕಟ್ಟಡ ಸೇರಿದಂತೆ.	**ದಿನಾಂಕ: 29–08–2023 ರಂದು ಮಧ್ಯಾಹ್ನ 12.00 ಘಂಟೆಗೆ ಆಸ್ತಿ ಇರುವ ಸ್ಥಳದಲ್ಲಿ.**
2	**ಶ್ರೀ ಬಿ ಎಲ್ ಚಂದ್ರಶೇಖರ್ ಮಾಲೀಕರು ಮೆ: ಶ್ರೀ ಕಾಶಿ ಗಾರ್ಮೆಂಟ್ಸ್**, ಸೈಟ್ ನಂ.6, ಹೊಸ ಖಾತಾ ನಂ.4515/3311/1/3305/06, ಕಾಶಿ ರಸ್ತೆ, ಅರಣ್ಯ ಕಛೇರಿ ಮುಂಭಾಗ, ವಿವಿ ಬಡಾವಣೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ಖಾತಾ ನಂ.4515/3311/1/3305/06, ಕೆಂಪುಲಿಂಗ ನಿಲಯ, ಕಾಶಿ ರಸ್ತೆ, ಅರಣ್ಯ ಕಛೇರಿ ಮುಂಭಾಗ, ವಿವಿ ಬಡಾವಣೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಲ್ಲಿರುವ 60X40 ಅಡಿಯುಳ್ಳ ನಿವೇಶನ ಹಾಗೂ ಪ್ರಸಕ್ತ ಕಟ್ಟಡಗಳನ್ನು ಒಳಗೊಂಡಿದೆ. ಈ ಆಸ್ತಿಯು ಶ್ರೀ ಬಿ ಎಲ್ ಚಂದ್ರಶೇಖರ್ ರವರ ಹೆಸರಿನಲ್ಲಿರುತ್ತದೆ.	**ದಿನಾಂಕ: 30–08–2023 ರಂದು ಮಧ್ಯಾಹ್ನ 12.00 ಘಂಟೆಗೆ ಆಸ್ತಿ ಇರುವ ಸ್ಥಳದಲ್ಲಿ.**
3	**ಶ್ರೀಮತಿ ಮಂಜುಳ ಕೋಂ ಶ್ರೀ ಬಿ ಎಲ್ ಚಂದ್ರಶೇಖರ್ ಮಾಲೀಕರು ಮೆ: ಶಶಿ ಲ್ಯಾಮಿನೇಷನ್**, ಸೈಟ್ ನಂ.6, ಹೊಸ ಖಾತಾ ನಂ.4515/3311/1/3305/06, ಕಾಶಿ ರಸ್ತೆ, ಅರಣ್ಯ ಕಛೇರಿ ಮುಂಭಾಗ, ವಿವಿ ಬಡಾವಣೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ಖಾತಾ ನಂ.4515/3311/1/3305/06, ಕೆಂಪುಲಿಂಗ ನಿಲಯ, ಕಾಶಿ ರಸ್ತೆ, ಅರಣ್ಯ ಕಛೇರಿ ಮುಂಭಾಗ, ವಿವಿ ಬಡಾವಣೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಲ್ಲಿರುವ 60X40 ಅಡಿಯುಳ್ಳ ನಿವೇಶನ ಹಾಗೂ ಪ್ರಸಕ್ತ ಕಟ್ಟಡಗಳನ್ನು ಒಳಗೊಂಡಿದೆ. ಈ ಆಸ್ತಿಯು ಶ್ರೀ ಬಿ ಎಲ್ ಚಂದ್ರಶೇಖರ್ ರವರ ಹೆಸರಿನಲ್ಲಿರುತ್ತದೆ.	**ದಿನಾಂಕ: 30–08–2023 ರಂದು ಮಧ್ಯಾಹ್ನ 12.00 ಘಂಟೆಗೆ ಆಸ್ತಿ ಇರುವ ಸ್ಥಳದಲ್ಲಿ.**
4	**ಶ್ರೀ ಬಿ ಎಲ್ ಚಂದ್ರಶೇಖರ್ ಮಾಲೀಕರು ಮೆ: ಶ್ರೀ ಕಾಶಿ ಗಾರ್ಮೆಂಟ್ಸ್**, ಸೈಟ್ ನಂ.6, ಹೊಸ ಖಾತಾ ನಂ.4515/3311/1/3305/06, ಕಾಶಿ ರಸ್ತೆ, ಅರಣ್ಯ ಕಛೇರಿ ಮುಂಭಾಗ, ವಿವಿ ಬಡಾವಣೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ,	1) ವೈಯಕ್ತಿಕ ಆಸ್ತಿಯ ಸರ್ವೆ ನಂ.50/1, ಖಾತಾ ನಂ.11, ಬೇವೂರು ಗ್ರಾಮ, ಮಳ್ಳೂರು ಹೋಬಳಿ, ಚನ್ನಪಟ್ಟಣ ತಾಲೂಕು, ರಾಮನಗರ ಜಿಲ್ಲೆಯಲ್ಲಿರುವ 0.35.12 ಗುಂಟೆ ಮತ್ತು ಸರ್ವೆ ನಂ.50/1, ಖಾತಾ ನಂ.58, ವಿಸ್ತೀರ್ಣಾ 07.04 ಗುಂಟೆ. ಈ ಆಸ್ತಿಯು ಶ್ರೀ ಬಿ ಎಲ್ ಚಂದ್ರಶೇಖರ್ ರವರ ಹೆಸರಿನಲ್ಲಿರುತ್ತದೆ. 2) ವೈಯಕ್ತಿಕ ಆಸ್ತಿಯ ಸರ್ವೆ ನಂ.50/2, ಖಾತಾ ನಂ.96 ಮತ್ತು 58, ಬೇವೂರು ಗ್ರಾಮ, ಮಳ್ಳೂರು ಹೋಬಳಿ, ಚನ್ನಪಟ್ಟಣ ತಾಲೂಕು, ರಾಮನಗರ ಜಿಲ್ಲೆ ಯಲ್ಲಿರುವ 0.34 ಗುಂಟೆ ಮತ್ತು 0.23 ಗುಂಟೆ. ಈ ಆಸ್ತಿಯು ಶ್ರೀ ಬಿ ಎಲ್ ಚಂದ್ರಶೇಖರ್ ಬಿನ್ ಲೇಟ್ ಡಿ ಎಲ್ ಲಿಂಗಯ್ಯ ರವರ ಹೆಸರಿನಲ್ಲಿರುತ್ತದೆ.	**ದಿನಾಂಕ: 01–09–2023 ರಂದು ಮಧ್ಯಾಹ್ನ 12.00 ಘಂಟೆಗೆ ಆಸ್ತಿ ಇರುವ ಸ್ಥಳದಲ್ಲಿ.**
5	**ಶ್ರೀಮತಿ ಮಂಜುಳ ಕೋಂ ಶ್ರೀ ಬಿ ಎಲ್ ಚಂದ್ರಶೇಖರ್ ಮಾಲೀಕರು ಮೆ: ಶಶಿ ಲ್ಯಾಮಿನೇಷನ್**, ಸೈಟ್ ನಂ.6, ಹೊಸ ಖಾತಾ ನಂ.4515/3311/1/3305/06, ಕಾಶಿ ರಸ್ತೆ, ಅರಣ್ಯ ಕಛೇರಿ ಮುಂಭಾಗ, ವಿವಿ ಬಡಾವಣೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ವೈಯಕ್ತಿಕ ಆಸ್ತಿಯ ಸರ್ವೆ ನಂ.50/2, ಖಾತಾ ನಂ.74, ಬೇವೂರು ಗ್ರಾಮ, ಮಳ್ಳೂರು ಹೋಬಳಿ, ಚನ್ನಪಟ್ಟಣ ತಾಲೂಕು, ರಾಮನಗರ ಜಿಲ್ಲೆಯಲ್ಲಿರುವ ಆಸ್ತಿ 0.23 ಗುಂಟೆ. ಈ ಆಸ್ತಿಯು ಶ್ರೀಮತಿ ಮಂಜುಳ ಕೋಂ ಶ್ರೀ ಬಿ ಎಲ್ ಚಂದ್ರಶೇಖರ್ ಬಿನ್ ಲೇಟ್ ಡಿ ಎಲ್ ಲಿಂಗಯ್ಯ ರವರ ಹೆಸರಿನಲ್ಲಿರುತ್ತದೆ.	**ದಿನಾಂಕ: 01–09–2023 ರಂದು ಮಧ್ಯಾಹ್ನ 12.00 ಘಂಟೆಗೆ ಆಸ್ತಿ ಇರುವ ಸ್ಥಳದಲ್ಲಿ.**

ಹರಾಜು ಷರತ್ತುಗಳು: (1) ಹರಾಜಿನಲ್ಲಿ ಭಾಗವಹಿಸುವವರು ಭಾರತದ ಪ್ರಜೆಯಾಗಿರತಕ್ಕದ್ದು, ಹರಾಜಿಗೆ ಮುನ್ನ ಬಿಡ್ಡುದಾರಿಕೆ ಫಾರಂ ಪಡೆದು ಪೂರ್ಣ ರೂಪದಲ್ಲಿ ತುಂಬಿ ಠೇವಣಿ ಮೊತ್ತ ಪ್ರತಿ ಹರಾಜಿಗೆ ತಲಾ **ರೂ.10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳಂತೆ** ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ಗ್ರಾಮಾಂತರ ಶಾಖೆ, ಇವರ ಹೆಸರಿಗೆ ಠೇವಣಿ ನೀಡಿ ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ಬಿಡ್ಡುದಾರರು ಖುದ್ದು ಹಾಜರಿರುವುದು, ಬಿಡ್ಡುದಾರರ ಪರವಾಗಿ ಇತರೆಯವರು ಹಾಜರಿಯಾಗುವಂತಿಲ್ಲ. (2) ಬಿಡ್ಡುದಾರರು ಅವರ ಮೂಲ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್‌ಗಳನ್ನು ಹರಾಜು ಸಂದರ್ಭದಲ್ಲಿ ತೋರಿಸಬೇಕು ಹಾಗೂ ಜೆರಾಕ್ಸ್ ಪ್ರತಿಯನ್ನು ಸಲ್ಲಿಸತಕ್ಕದ್ದು. ಬಿಡ್ಡುದಾರರು ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳನ್ನು ಸಲ್ಲಿಸತಕ್ಕದ್ದು. (3) ಬಹಿರಂಗ ಹರಾಜು ಮುಖೇನ ಮಾರಾಟಕ್ಕಿರುವ ಆಸ್ತಿಯನ್ನು **"ಎಲ್ಲಿ ಹೇಗಿದೆಯೋ ಹಾಗಿರುವ ಸ್ಥಿತಿ"**ಯಲ್ಲಿ ಮಾರಾಟ ಮಾಡಲಾಗುವುದು. (4) ಮೇಲ್ಕಂಡ ಸ್ಥಿರಾಸ್ತಿಯನ್ನು ಸಕ್ಷಮ ಪ್ರಾಧಿಕಾರದಲ್ಲಿ ಬಾಕಿ ಇರುವ ಎಲ್ಲಾ ತೆರಿಗೆಗಳನ್ನು ಪಾವತಿಸಿ ಸೂಕ್ತ ದಾಖಲಾತಿಗಳನ್ನು ಸಲ್ಲಿಸಿ ಖಾತೆ ಮಾಡಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಬಿಡ್‌ದಾರದ್ದಾಗಿರುತ್ತದೆ. (5) ಹರಾಜಿನಲ್ಲಿ ವಿಜೇತರಾದ (ಅಂತಿಮ ಬಿಡ್ಡುದಾರರು) ಆಖೈರು ಬಿಡ್ಡು ಮೊಬಲಗಿನ 25% ರಷ್ಟನ್ನು ಸ್ಥಳದಲ್ಲೇ ಪಾವತಿಸಿ, ಉಳಿಕೆ ಮೊಬಲಗನ್ನು ಹರಾಜು ನಡೆಸಿದ ದಿನಾಂಕದಿಂದ **15 ದಿವಸಗಳೊಳಗಾಗಿ** ತಪ್ಪದೇ ಪಾವತಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಪಾವತಿಸಿರುವ ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (6) ಹರಾಜಿನ ದಿನಾಂಕದಿಂದ **90 ದಿವಸಗಳೊಳಗಾಗಿ** ಆಕ್ಷೇಪಣೆ/ತಂಟೆ/ತಕರಾರು/ ಭಿನ್ನಾಭಿಪ್ರಾಯ/ನ್ಯಾಯಾಲಯದ ಪ್ರಕರಣಗಳು ಉಂಟಾದಲ್ಲಿ ಸದರಿ ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುವರು. (7) ಸ್ಥಿರಾಸ್ತಿಯ ಭೂಕಂದಾಯ, ನೀರು, ವಿದ್ಯುತ್, ವಾಣಿಜ್ಯ ತೆರಿಗೆ, ಯಾವುದೇ ಬಾಕಿ ಅಥವಾ ಯಾವುದೇ ಇಲಾಖೆಯ ಬಾಕಿಯನ್ನು ಖರೀದಿದಾರರೇ ಭರಿಸಲು ಬಾಧ್ಯಸ್ಥರು. (8) ಕರ್ನಾಟಕ ಭೂಕಂದಾಯ ಕಾಯ್ದೆಯ ಅನ್ವಯ ಸದರಿ ಹರಾಜು ಸಂಬಂಧಪಟ್ಟ ಉಪವಿಭಾಗಾಧಿಕಾರಿಯವರಿಂದ ಸ್ಥಿರೀಕರಣದ ಆದೇಶಕ್ಕೆ ಒಳಪಟ್ಟಿದೆ. ನಂತರ ಸ್ಥಿರಾಸ್ತಿಯನ್ನು ಆಖೈರು ಬಿಡ್ಡುದಾರರಿಗೆ ನೋಂದಣಿ ಮಾಡಿಸಲು ಸೇಲ್ಸ್ ಸರ್ಟಿಫಿಕೇಟನ್ನು ಕೊಡಲಾಗುವುದು. ಇದಕ್ಕೆ ತಗಲುವ ನೋಂದಣಿ, ಸ್ಟ್ಯಾಂಪ್ ಶುಲ್ಕ ಪ್ರಕ್ರಿಯೆ ಹಾಗೂ ಇತರೆ ಶುಲ್ಕಗಳನ್ನು ಆಖೈರು ಬಿಡ್ಡುದಾರರೇ ಭರಿಸತಕ್ಕದ್ದು. ಸಕ್ಷಮ ಪ್ರಾಧಿಕಾರ ಯಾವುದಾದರೂ ದಾಖಲಾತಿಗಳನ್ನು ಅಪೇಕ್ಷಿಸಿದಲ್ಲಿ ಬಿಡ್ಡುದಾರನು ಒದಗಿಸಲು ಬದ್ಧನಾಗಿರಬೇಕು. (9) ಹರಾಜಿನ ಬಗ್ಗೆ ಹೆಚ್ಚಿನ ವಿವರಗಳು, ಮಾಹಿತಿ ಮತ್ತು ಷರತ್ತುಗಳನ್ನು **ಈ ಕೆಳಗೆ ಸಹಿ ಮಾಡಿರುವ ವಿಶೇಷ ತಹಸೀಲ್ದಾರ್ ಅಥವಾ ಶಾಖಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ಗ್ರಾಮಾಂತರ ಶಾಖೆ** ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ವಿಶೇಷ ತಹಶೀಲ್ದಾರರು
(ಸರ್ಕಾರಿ ಬಾಕಿ ವಸೂಲಾತಿ), ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ಗ್ರಾಮಾಂತರ ಕಛೇರಿ,
ರಾಜಾಜಿನಗರ, ಬೆಂಗಳೂರು–560086.

ಸ್ಥಾಪನೆ : 2009–10 ದೂರವಾಣಿ ಸಂಖ್ಯೆ : 080–23469678

ಮಾಧವನಗರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

ಕೇಂದ್ರ ಕಛೇರಿ: ನಂ.14, 3ನೇ ಅಡ್ಡರಸ್ತೆ, ನೆಹರುನಗರ, ಶೇಷಾದ್ರಿಪುರಂ, ಬೆಂಗಳೂರು-560020,

14ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಸಂಘದ 2022–23ನೇ ಸಾಲಿನ 14ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ತಾ॥ 27–08–2023 ನೇ ಭಾನುವಾರ ಬೆಳಿಗ್ಗೆ 10–30 ಗಂಟೆಗೆ "ಬಿ.ವಿ.ಎಸ್. ಸಂಘ" (ಬ್ರಾಹ್ಮಣ ವಿದ್ಯಾರ್ಥಿ ಸಹಾಯಕ ಸಂಘ) ಶೇಷಾದ್ರಿಪುರಂ ಕಾಲೇಜು ಹಿಂಭಾಗದ ರಸ್ತೆ, ನಂ.35, ಎನ್.ಎಸ್.ಐಯ್ಯಂಗಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560 020, ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ. ಕೆ. ಹನುಮಂತಯ್ಯ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ. ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ.

ಸ್ಥಳ : ಬೆಂಗಳೂರು
ದಿನಾಂಕ: 25–08–2023

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ,
(ಗಜೇಂದ್ರ, ಬಿ.) ಕಾರ್ಯದರ್ಶಿ

ಅತಿಥಿ ಉಪನ್ಯಾಸಕರ ನೇಮಕ: ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023-24ನೇ ಸಾಲಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಕಾಲೇಜು ಶಿಕ್ಷಣ ಇಲಾಖೆ ಅನುಮತಿ ನೀಡಿದ್ದು, ಅರ್ಜಿ ಸಲ್ಲಿಕೆಗೆ ಸೆ.2ರವರೆಗೆ ಅವಕಾಶ ನೀಡಲಾಗಿದೆ.

ಸಂಸ್ಕೃತ ಮತ್ತು ಚಿತ್ರಕಲಾ ಕಾಲೇಜುಗಳೂ ಸೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಕಾಯಂ ಅಧ್ಯಾಪಕರಿಗೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಯುವ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಸೂಚಿಸಲಾಗಿದೆ.

ಅರ್ಹರು ಆ.25ರಿಂದಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಸೆ.4ರಂದು ಮೆರಿಟ್ ಪಟ್ಟಿ ಪ್ರಕಟಿಸಲಾಗುವುದು. ಸೆ.11ರಿಂದ 15ರವರೆಗೆ ಕಾಲೇಜುಗಳ ಆಯ್ಕೆಗೆ ಕೌನ್ಸೆಲಿಂಗ್ ನಡೆಸಲಾಗುವುದು. 16ರಂದು ಆಯ್ಕೆಯಾದವರ ಅಂತಿಮಪಟ್ಟಿ ಪ್ರಕಟಿಸಲಾಗುವುದು ಎಂದು ಇಲಾಖೆ ಹೇಳಿದೆ.

ಯಾವುದೇ ಕಾಲೇಜುಗಳಲ್ಲಿ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳು ಖಾಲಿ ಇದ್ದರೆ ಅತಿಥಿ ಉಪನ್ಯಾಸಕರ ನಿಯಮದಂತೆ ನೇಮಕಾತಿಗೆ ಅನುಮತಿ ನೀಡಲಾಗಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಸದಸ್ಯರಿಗೆ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ರಂತೆ ಅನ್ವಯವಾಗುವ ನಿಬಂಧನೆಗಳ ಅನುಗುಣವಾಗಿ ಜೊತೆಗೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗಿದೆ.) ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 08, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 2/2022 ದಿನಾಂಕ ಮೇ 5, 2022 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022 ದಿನಾಂಕ ಡಿಸೆಂಬರ್ 28, 2022 ಮತ್ತು ಇತರೆ ಅನ್ವಯವಾಗುವ ಕಾನೂನಿನಂತೆ ವೀಡಿಯೋ ಕಾನ್ಫರೆನ್ಸ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ("ಕಂಪನಿ")ಯ 20ನೇ ವಾರ್ಷಿಕ ಸಾಮಾನ್ಯ ಸಭೆಯು (ಎಜಿಎಂ) ನಡೆಯಲಿದೆ.

ಮೇಲಿನ ಸುತ್ತೋಲೆಗಳನ್ವಯವಾಗಿ ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳೊಂದಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ಎಜಿಎಂ ನೋಟೀಸ್ ಮತ್ತು ಆರ್ಥಿಕ ವರ್ಷ 2022–23ರ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮೂಲಕವಾಗಿ ರವಾನಿಸಲಾಗುವುದು. ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳ ಮೂಲಕ ಸಂಬಂಧಿತ ಡಿಪಾಸಿಟರೀಸ್‌ಗಳೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಕಂಪನಿಯ ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("ಆರ್‌ಟಿಎ") ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ರವರಿಗೆ **einward.ris@kfintech.com**ನಲ್ಲಿ ಮಾಹಿತಿಗಳನ್ನು ಕಳುಹಿಸಲು ವಿನಂತಿಸಲಾಗಿದೆ. ಎಜಿಎಂ ನೋಟೀಸ್ ಮತ್ತು ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟ್ **www.gokaldasexports.com**ನಲ್ಲಿ, ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ, ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್‌ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಲ್ಲಿ ಕ್ರಮವಾಗಿ **www.bseindia.com** ಮತ್ತು **www.nseindia.com** ಲಭ್ಯವಾಗುವಂತೆ ಮಾಡಲಾಗುವುದು.

ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಎಜಿಎಂ ನೋಟೀಸ್‌ನಲ್ಲಿ ನೀಡಿರುವ ವ್ಯವಹಾರಗಳಿಗೆ ರಿಮೋಟ್ ಇ–ವೋಟಿಂಗ್ ಮೂಲಕ ಅಥವಾ ಎಜಿಎಂ ಸಂದರ್ಭದಲ್ಲಿ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮತಚಲಾಯಿಸುವ ಅವಕಾಶವನ್ನು ಕಲ್ಪಿಸಲಾಗುವುದು. ಡಿಮೆಟೀರಿಯಲೈಸ್ಡ್ ಹಾಗೂ ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ರಿಮೋಟ್ ಮತದಾನದ ವಿಧಾನವನ್ನು ಎಜಿಎಂನ ನೋಟೀಸ್‌ನಲ್ಲಿ ಒದಗಿಸಲಾಗುವುದು.

ಮೇ 25, 2023ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪ್ರತಿ ಈಕ್ವಿಟಿ ಷೇರಿಗೆ ರೂ. 1 (ರೂಪಾಯಿ ಒಂದು)ನ್ನು ಅಂತಿಮ ಲಾಭಾಂಶವನ್ನಾಗಿ ಶಿಫಾರಸು ಮಾಡಲಾಗಿರುವುದನ್ನು ಸದಸ್ಯರು ಗಮನಿಸತಕ್ಕದ್ದು. ತರುವಾಯ ಎಜಿಎಂನಲ್ಲಿ ಅಂತಿಮ ಲಾಭಾಂಶವನ್ನು ಅನುಮೋದಿಸಿದಲ್ಲಿ, ರೆಕಾರ್ಡ್ ದಿನಾಂಕದಂದು ಷೇರುಗಳನ್ನು ಹೊಂದಿರುವ ಎಲ್ಲಾ ಸದಸ್ಯರಿಗೆ ಪಾವತಿಸಲಾಗುವುದು. ಪಾವತಿಯ ದಿನಾಂಕದಂದು ಲಾಭಾಂಶವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಗೆ ಸ್ವೀಕರಿಸಲು, ಬ್ಯಾಂಕ್ ಖಾತೆಯ ವಿವರಗಳನ್ನು ಅಪ್‌ಡೇಟ್ ಮಾಡದ ಸದಸ್ಯರು ತಮ್ಮ ಕೆವೈಸಿಯನ್ನು ಡೆಪಾಸಿಟರೀಸ್‌ರೊಂದಿಗೆ (ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದಲ್ಲಿ) ಮತ್ತು ಕಂಪನಿಯ ಆರ್‌ಟಿಎರೊಂದಿಗೆ (ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದಲ್ಲಿ) ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ.

ಲಾಭಾಂಶವನ್ನು ಸರಿಯಾದ ಸಮಯಕ್ಕೆ ಪಡೆಯಲು ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ವಿಳಾಸ ಮತ್ತು ಬ್ಯಾಂಕ್ ಖಾತೆಯ ವಿವರಗಳಲ್ಲಿನ ಬದಲಾವಣೆಗಳನ್ನು ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳ)ಗೆ ತಿಳಿಸಲು ವಿನಂತಿಸಿದೆ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಂ (ಇಸಿಎಸ್) ವಿಧಾನವನ್ನು ಆಯ್ಕೆ ಮಾಡಿಕೊಳ್ಳಲು ವಿನಂತಿಸಲಾಗಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 24, 2023

ಶಾಸಕ ಸಿ.ಕೆ. ರಾಮಮೂರ್ತಿಗೆ ಸಮನ್ಸ್: ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ವಿಧಾನಸಭೆ ಕ್ಷೇತ್ರದ ಸಾರ್ವತ್ರಿಕ ಚುನಾವಣೆಯ 827 ಅಂಚೆ ಮತಗಳನ್ನು (ಪೋಸ್ಟಲ್ ಬ್ಯಾಲೆಟ್) ಮರು ಎಣಿಕೆ ಮಾಡುವಂತೆ ಕೋರಲಾಗಿರುವ ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಸಿ.ಕೆ. ರಾಮಮೂರ್ತಿ ಅವರಿಗೆ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಅಂಚೆ ಮತಗಳ ಮರು ಎಣಿಕೆಗೆ ನಿರ್ದೇಶನ ನೀಡಬೇಕು' ಎಂದು ಕೋರಿ ಕಾಂಗ್ರೆಸ್‌ನ ಪರಾಜಿತ ಅಭ್ಯರ್ಥಿ ಸೌಮ್ಯಾ ರೆಡ್ಡಿ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ಪೀಠ ಗುರುವಾರ ವಿಚಾರಣೆ ನಡೆಸಿತು.

ಸಿ.ಕೆ.ರಾಮಮೂರ್ತಿ ಅವರಿಗೆ ಸ್ಥಳೀಯ ತಹಶೀಲ್ದಾರ್ ಅಥವಾ ವಿಧಾನಸಭೆ ಸಚಿವಾಲಯದಿಂದ ಮತ್ತೊಮ್ಮೆ ಸಮನ್ಸ್ ಜಾರಿಗೊಳಿಸುವಂತೆ ನಿರ್ದೇಶಿಸಿ, ವಿಚಾರಣೆಯನ್ನು ಸೆಪ್ಟೆಂಬರ್ 7ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಜಯನಗರ ವಿಧಾನಸಭಾ ಕ್ಷೇತ್ರಕ್ಕೆ 2023ರ ಮೇ 10ಕ್ಕೆ ಚುನಾವಣೆ ಮತ್ತು ಮೇ 13ರಂದು ಮತ ಎಣಿಕೆ ನಡೆದಿತ್ತು. ಈ ಕ್ಷೇತ್ರದಲ್ಲಿ ಒಟ್ಟು 827 ಅಂಚೆ ಮತಗಳು ಚಲಾವಣೆಯಾಗಿದ್ದವು. ಈ ಪೈಕಿ 198 ಮತಗಳನ್ನು ತಿರಸ್ಕೃತಗೊಳಿಸಿ 629 ಮತಗಳನ್ನು ಮಾತ್ರ ಪರಿಗಣಿಸಲಾಗಿತ್ತು. ಅವುಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ 164 ಮತ್ತು ಬಿಜೆಪಿಗೆ ಅಭ್ಯರ್ಥಿಗೆ 415 ಮತಗಳು ಬಂದಿದ್ದವು. ಮತ ಎಣಿಕೆಯ ಕೊನೆಯ 16ನೇ ಸುತ್ತಿನ ಬಳಿಕ ಬಿಜೆಪಿ ಅಭ್ಯರ್ಥಿ 57,297 ಮತಗಳು ಹಾಗೂ ಕಾಂಗ್ರೆಸ್ ಅಭ್ಯರ್ಥಿ 57,591 ಮತಗಳನ್ನು ಪಡೆದಿದ್ದರು' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಕಾಂಗ್ರೆಸ್ ಪಕ್ಷದ ಅಭ್ಯರ್ಥಿ 294 ಮತಗಳಿಂದ ಮುನ್ನಡೆ ಸಾಧಿಸಿದ್ದರು. ಆದರೆ, ಚುನಾವಣಾ ವೀಕ್ಷಕರು ತಿರಸ್ಕೃತ ಅಂಚೆ ಮತಗಳ ಮರು ಪರಿಶೀಲನೆಗೆ ಸೂಚಿಸಿದ್ದರು. ಅದರಂತೆ ಹಲವು ಸುತ್ತುಗಳಲ್ಲಿ ತಿರಸ್ಕೃತ ಅಂಚೆ ಮತಗಳ ಮರುಪರಿಶೀಲನೆ ನಡೆದಿತ್ತು. ಇದರಿಂದಾಗಿ ಫಲಿತಾಂಶದಲ್ಲಿ ಏರಿಳಿತ ಉಂಟಾಯಿತು. ಅಂತಿಮವಾಗಿ ಬಿಜೆಪಿ ಅಭ್ಯರ್ಥಿಯನ್ನು ಚುನಾಯಿತ ಎಂದು ಘೋಷಿಸಲಾಯಿತು' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಕೋರಿಕೆ: 'ಅಂಚೆ ಮತಗಳ ಎಣಿಕೆಯ ಪ್ರತಿ ಸುತ್ತಿನ ವಿಡಿಯೊ ಚಿತ್ರೀಕರಣದ ದಾಖಲೆಗಳನ್ನು ಪರಿಶೀಲಿಸಬೇಕು. ಎಲ್ಲಾ 827 ಅಂಚೆ ಮತಗಳ ಮರು ಎಣಿಕೆಗೆ ಆದೇಶಿಸಬೇಕು. ಅಸಿಂಧು ಮತಗಳನ್ನು ಪಡೆದು ಚುನಾಯಿತಗೊಂಡಿರುವ ಬಿಜೆಪಿ ಅಭ್ಯರ್ಥಿಯ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಮತ್ತು ಕಾಂಗ್ರೆಸ್ ಅಭ್ಯರ್ಥಿಯ ಆಯ್ಕೆಯನ್ನು ಘೋಷಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಹತ್ತಿ ಇಳಿಯಲು ಕಾಂಗ್ರೆಸ್ ಪಕ್ಷ ಬಸ್ ಅಲ್ಲ: ಡಿ.ಕೆ. ಶಿವಕುಮಾರ್

‘ಕೈ’ ಹಿಡಿದ ಆಯನೂರು, ನಾಗರಾಜ್ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ತ್ಯಜಿಸಿ ಜೆಡಿಎಸ್ ಸೇರಿದ್ದ ಮಾಜಿ ಸಂಸದ ಆಯನೂರು ಮಂಜುನಾಥ್ ಅವರು ಕಾಂಗ್ರೆಸ್ ಸೇರಿದ್ದಾರೆ. ಜೊತೆಗೆ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಶಿಕಾರಿಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಸಿಗದ ಕಾರಣಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ನಾಗರಾಜ್ ಗೌಡ ಕೂಡಾ ‘ಕೈ’ ಹಿಡಿದಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಇಬ್ಬರೂ ಗುರುವಾರ ಕಾಂಗ್ರೆಸ್ ಸೇರಿದರು.

ಶಿವಕುಮಾರ್ ಮಾತನಾಡಿ, ‘ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೇವೆ ಎಂದರೆ ಪ್ರತಿ ನಿಲ್ದಾಣದಲ್ಲೂ ಬಸ್ ಇಳಿದು ಹತ್ತುವಂತೆ ಮಾಡುವುದಲ್ಲ. ಒಮ್ಮೆ ಹತ್ತಿದರೆ ಕಡೆಯ ತನಕವೂ ಇರುವಂತಹ ದೃಢ ನಿರ್ಧಾರ ಮಾಡಬೇಕು’ ಎಂದು ಹೇಳಿದರು.

‘ನಮ್ಮ ಪಕ್ಷ ಸೇರುವವರಿಗೆ ಯಾವುದೇ ಸ್ಥಾನಮಾನ ನೀಡುತ್ತೇವೆ ಎನ್ನುವ ಭರವಸೆ ನೀಡಿಲ್ಲ. ಅವರ ಶಕ್ತಿ, ಸಂಘಟನಾ ಸಾಮರ್ಥ್ಯ ನೋಡಿ ಪರಿಗಣಿಸಲಾಗುವುದು. ಹಿಂದೆ ಕಾಂಗ್ರೆಸ್ ಸೇರಿದ್ದ ಆಯನೂರು ಮಂಜುನಾಥ್ ಮತ್ತೆ ಬಿಜೆಪಿಗೆ ಹೋಗಿದ್ದರು. ಆದರೆ, ಕಾಂಗ್ರೆಸ್ ಬಗೆಗಿನ ಒಲವು ಅವರನ್ನು ಮತ್ತೆ ಕರೆತಂದಿದೆ. ಎಲ್ಲ ನದಿಗಳು ಸಮುದ್ರ ಸೇರಿದಂತೆ ಎಲ್ಲರೂ ಕಾಂಗ್ರೆಸ್ ಸೇರಲೇ ಬೇಕು. ನಮ್ಮ ಪಕ್ಷ ಸಮುದ್ರ ಇದ್ದಂತೆ’ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಆಯನೂರು ಮಂಜುನಾಥ ಮತ್ತು ನಾಗರಾಜ್ ಗೌಡ ಅವರಿಗೆ ಪಕ್ಷದ ಧ್ವಜ ನೀಡಿ ಕಾಂಗ್ರೆಸ್‌ಗೆ ಬರಮಾಡಿಕೊಂಡರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಬಿ.ಎನ್. ಚಂದ್ರಪ್ಪ, ಸಲೀಂ ಅಹ್ಮದ್ ಮತ್ತು ಸಚಿವ ಮಧು ಬಂಗಾರಪ್ಪ ಇದ್ದರು.

‘ಲೋಕಸಭೆಗೆ ಸ್ಪರ್ಧಿಸುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನಗೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಆಸಕ್ತಿ ಇಲ್ಲ’ ಎಂದು ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಅವರು ಹೇಳಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನನ್ನ ಮಗ ರಾಜಕೀಯಕ್ಕೆ ಬರುವುದಿಲ್ಲ, ರಾಜಕಾರಣಿಯೂ ಆಗುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ನಾನು ಬಿಜೆಪಿ ಬಿಡುತ್ತೇನೆ ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ನನಗೆ ಬಿಜೆಪಿ ಬಿಡುವ ಮನಸ್ಸಿಲ್ಲ. ವಿಧಾನಸಭೆ ಚುನಾವಣೆಯ ವೇಳೆಯಲ್ಲೂ ಇದೇ ರೀತಿ ಸುಳ್ಳು ಸುದ್ದಿ ಹಬ್ಬಿಸಿದ್ದರು. ಇತ್ತೀಚೆಗೆ ಪಕ್ಷದಿಂದ ಅಮಾನತುಗೊಂಡ ವ್ಯಕ್ತಿ ಇದರ ಹಿಂದೆ ಇದ್ದರು. ಇನ್ನೂ ಕೆಲವರು ಇದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದೇನೆ’ ಎಂದು ಹೇಳಿದರು.

‘ದೆಹಲಿಗೆ ಬರುವಂತೆ ವರಿಷ್ಠರಿಂದ ಕರೆ ಬಂದಿಲ್ಲ. ಬಂದರೆ ಹೋಗಲು ಸಿದ್ಧನಿದ್ದೇನೆ’ ಎಂದೂ ಸೋಮಶೇಖರ್ ಅವರು ಹೇಳಿದರು.

ಅಶೋಕ ಜತೆ ಸಭೆ: ಈ ಮಧ್ಯೆ ಎಸ್.ಟಿ.ಸೋಮಶೇಖರ್ ಅವರು ಶಾಸಕ ಆರ್.ಅಶೋಕ ಅವರನ್ನು ಭೇಟಿ ಮಾಡಿ ಸುಮಾರು ಒಂದು ಗಂಟೆ ಕಾಲ ಮಾತುಕತೆ ನಡೆಸಿದರು.

ಬಳಿಕ ಮಾತನಾಡಿದ ಅಶೋಕ ಅವರು, ‘ಸೋಮಶೇಖರ್ ಜತೆ ಸುದೀರ್ಘ ಮಾತುಕತೆ ನಡೆಸಿದ್ದೇನೆ. ಪಕ್ಷ ಬಿಡುವುದಿಲ್ಲ ಎಂದು ಅವರು ಹೇಳಿದ್ದಾರೆ. ಅವರ ಕ್ಷೇತ್ರದಲ್ಲಿನ ಕೆಲವು ಸಮಸ್ಯೆಗಳ ಬಗ್ಗೆ ಹೇಳಿ, 5–6 ಹೆಸರುಗಳನ್ನು ತಿಳಿಸಿದ್ದಾರೆ. ಅದನ್ನು ನಾನು ಪಕ್ಷದ ಅಧ್ಯಕ್ಷರ ಗಮನಕ್ಕೆ ತರುತ್ತೇನೆ. ಅವರು ನಿರ್ಧಾರ ತೆಗೆದುಕೊಳ್ಳುತ್ತಾರೆ’ ಎಂದು ಹೇಳಿದರು.

ಆಂಧ್ರಪ್ರದೇಶದ ಅಮರಾವತಿಯ ‘ವಿಐಟಿ–ಎಪಿ’ ವಿಶ್ವವಿದ್ಯಾಲಯವು ಹಮ್ಮಿಕೊಂಡ ಕ್ಯಾಂಪಸ್ ಸಂದರ್ಶನದಲ್ಲಿ ಅತಿ ಹೆಚ್ಚು ವೇತನದ ಪ್ಯಾಕೇಜ್ ಪಡೆದ ವಿದ್ಯಾರ್ಥಿಗಳೊಂದಿಗೆ ವಿಶ್ವವಿದ್ಯಾಲಯದ ಕುಲಾಧಿಪತಿ ಜಿ. ವಿಶ್ವನಾಥನ್, ಕುಲಪತಿ ಎಸ್.ವಿ. ಕೋಟಾ ರೆಡ್ಡಿ, ವೃತ್ತಿ ಮಾರ್ಗದರ್ಶನ ಕೇಂದ್ರದ ಸ್ಯಾಮ್ಯುಯೆಲ್ ರಾಜ್‌ಕುಮಾರ್ ಹಾಗೂ ಪ್ರಾಧ್ಯಾಪಕರು ಇದ್ದಾರೆ. ಕಂಪನಿಗಳು 1,560 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ನೀಡಿದವು.

एनटीपीसी NTPC

ಎನ್‌ಟಿಪಿಸಿ ಲಿಮಿಟೆಡ್

(ಭಾರತ ಸರ್ಕಾರದ ಉದ್ಯಮ)

ಕೂಡಗಿ ಸೂಪರ್ ಥರ್ಮಲ್ ಪವರ್ ಸ್ಟೇಷನ್

(ಮಾನವ ಸಂಪನ್ಮೂಲ ವಿಭಾಗ)

ಜಾಹೀರಾತು ಸಂ. : ಕೂಡಗಿ/1046/01/2023

ಎಸ್‌ಟಿ ಡಿಪ್ಲೋಮಾ ಎಂಜಿನಿಯರ್‌ಗಳಿಗೆ ವಿಶೇಷ ನೇಮಕಾತಿ ಅಭಿಯಾನ

ಎನ್‌ಟಿಪಿಸಿ ಲಿ. ಭಾರತದ ಅತಿ ದೊಡ್ಡ ಇಂಧನ ಸಂಸ್ಥೆಯಾಗಿದ್ದು, 73,024 ಮೆವ್ಯಾ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿದೆ ಮತ್ತು ಇಂಧನ ಉತ್ಪಾದನೆ ವಹಿವಾಟಿನ ಇಡೀ ಮೌಲ್ಯ ಸರಣಿಯಲ್ಲಿ ಅಸ್ತಿತ್ವ ಹೊಂದಿದೆ. ಎನ್‌ಟಿಪಿಸಿ 2032 ರ ವೇಳೆಗೆ ಒಟ್ಟು ಸ್ಥಾಪಿತ ಸಾಮರ್ಥ್ಯ 130 ಗಿವ್ಯಾ ಸಾಧನೆ ಮಾಡುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ.

ಕರ್ನಾಟಕ ರಾಜ್ಯ ಕೂಡಗಿ ಸೂಪರ್ ಥರ್ಮಲ್ ಪವರ್ ಸ್ಟೇಷನ್ ಗಾಗಿ ಇಂಜಿನಿಯರಿಂಗ್ ಡಿಪ್ಲೋಮಾ ವ್ಯಾಸಂಗ ಮಾಡಿರುವ ಪ.ಪಂ. ಅಭ್ಯರ್ಥಿಗಳಿಗೆ ವಿಶೇಷ ನೇಮಕಾತಿ ಅಭಿಯಾನವನ್ನು ಎನ್‌ಟಿಪಿಸಿ ಆರಂಭಿಸಿದ್ದು, ಇದರ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಖಾಲಿ ಹುದ್ದೆಯ ವಿವರಗಳು:

ಹುದ್ದೆ (ಶಿಸ್ತು)	ಪಪಂ	ಒಟ್ಟು
ಡಿಪ್ಲೋಮಾ ಟ್ರೇನೀ (ಇಲೆಕ್ಟ್ರಿಕಲ್)	1	1
ಡಿಪ್ಲೋಮಾ ಟ್ರೇನೀ (ಸಿ&ಐ)	1	1

ವಿದ್ಯಾರ್ಹತೆ:

ಹುದ್ದೆ (ಶಿಸ್ತು)	ವಿದ್ಯಾರ್ಹತೆ
ಡಿಪ್ಲೋಮಾ ಟ್ರೇನೀ (ಇಲೆಕ್ಟ್ರಿಕಲ್)	ಉತ್ತೀರ್ಣ ಅಂಕಿಗಳೊಂದಿಗೆ ಇಲೆಕ್ಟ್ರಿಕಲ್/ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಪೂರ್ಣಾವಧಿ ಸಾಮಾನ್ಯ ಡಿಪ್ಲೋಮಾ
ಡಿಪ್ಲೋಮಾ ಟ್ರೇನೀ (ಸಿ&ಐ)	ಉತ್ತೀರ್ಣ ಅಂಕಿಗಳೊಂದಿಗೆ ಇನ್ಸ್ಟ್ರುಮೆಂಟೇಶನ್/ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಪೂರ್ಣಾವಧಿ ಸಾಮಾನ್ಯ ಡಿಪ್ಲೋಮಾ

ತರಬೇತಿ, ಸಂಭಾವನೆ ಮತ್ತು ನಿಯೋಜನೆ:

ಆಯ್ದ ಅಭ್ಯರ್ಥಿಗಳು ಯಾವುದೇ ಎನ್‌ಟಿಪಿಸಿ ಸೈಟ್‌ಗಳು/ಸ್ಟೇಷನ್‌ಗಳಲ್ಲಿ 02 ವರ್ಷಗಳ ವರೆಗೆ ತರಬೇತಿಯನ್ನು ಪಡೆಯುತ್ತಾರೆ ಮತ್ತು ಮಾಸಿಕ ರೂ.24,000/– ಕ್ರೋಢೀಕೃತ ಸ್ಟೈಪಂಡ್ ನೀಡಲಾಗುತ್ತದೆ. ತರಬೇತಿಯನ್ನು ಯಶಸ್ವಿಯಾಗಿ ಪೂರ್ತಿ ಗೊಳಿಸಿದ ನಂತರ ಈ ಅಭ್ಯರ್ಥಿಗಳನ್ನು ಕಂಪನಿಯ ಮೂಲ ವೇತನ ಶ್ರೇಣಿ ರೂ. 24,000/–3%– (ಡಬ್ಲ್ಯು7 ಗ್ರೇಡ್) ನಲ್ಲಿ ಸೇರಿಸಿಕೊಳ್ಳಲಾಗುತ್ತದೆ.

ವಯಸ್ಸಿನ ಮಿತಿ:

ಅರ್ಜಿಯ ಕೊನೆಯ ದಿನಾಂಕದಂದು ಗರಿಷ್ಠ ವಯಸ್ಸಿನ ಮಿತಿ 30 ವರ್ಷಗಳು (05 ವರ್ಷಗಳ ವಿನಾಯಿತಿಯನ್ನೂ ಸೇರಿಸಿ).

ಅರ್ಹತೆ ಮಾನದಂಡ ಮತ್ತು ವಿನಾಯಿತಿಗಳು:

ಅರ್ಹತೆ ಮಾನದಂಡ, ಆಯ್ಕೆ ಪ್ರಕ್ರಿಯೆ, ಆರೋಗ್ಯ ಮಾನದಂಡಗಳು, ಪರೀಕ್ಷೆ ಕೇಂದ್ರಗಳು, ಮೀಸಲಾತಿ ಮತ್ತು ಪಿಡಬ್ಲ್ಯೂಬಿಡಿ/ಎಕ್ಸ್‌ಎಸ್‌ಎಂ/ಭೂಮಿ ಕಳೆದುಕೊಂಡವರಿಗೆ ವಿನಾಯಿತಿಗಳ ಬಗ್ಗೆ ವಿವರಗಳಿಗೆ ಮತ್ತು ಇತರ ಸಾಮಾನ್ಯ ಮಾಹಿತಿ ಮತ್ತು ಸೂಚನೆಗಳಿಗಾಗಿ, ದಯವಿಟ್ಟು ನಮ್ಮ ವೆಬ್‌ಸೈಟ್ **careers.ntpc.co.in** ನಲ್ಲಿನ ವಿವರವಾದ ಜಾಹೀರಾತನ್ನು ನೋಡಿ.

ಅರ್ಜಿ ಸಲ್ಲಿಸುವುದು ಹೇಗೆ:

1. ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಆನ್‌ಲೈನ್ ಪೋರ್ಟಲ್ – **careers.ntpc.co.in** ಮೂಲಕ ಮಾತ್ರ ಸಲ್ಲಿಸಬೇಕು. ಯಾವುದೇ ಕೈಯಿಂದ ಅರ್ಜಿಯನ್ನು ಸಲ್ಲಿಸುವ/ಕಾಗದದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.
2. ಈ ಹುದ್ದೆಗೆ ಅರ್ಜಿ ಶುಲ್ಕವಿಲ್ಲ.

ಗಮನಿಸಿ: ಇತ್ತೀಚಿನ ಸ್ವಯಂ ಫೋಟೋಗ್ರಾಫ್ ಮತ್ತು ಸಹಿಯನ್ನು ಈ ಹುದ್ದೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕು.

ಅರ್ಜಿ ಸಲ್ಲಿಸಲು ನಿಮ್ಮ ಮಾನ್ಯ ಇ–ಮೇಲ್ ಐಡಿಯ ಜೊತೆಗೆ **careers.ntpc.co.in** ಗೆ ಭೇಟಿ ನೀಡಿ. ಅರ್ಜಿ ಪೋರ್ಟಲ್ 25.08.2023 ರಂದು ಬೆಳಗ್ಗೆ 10:00 ಗಂಟೆಯಿಂದ 10.09.2023 ರಂದು ರಾತ್ರಿ 11.59 ಗಂಟೆ ವರೆಗೆ ಕಾರ್ಯನಿರ್ವಹಿಸುತ್ತದೆ.

ವಿದ್ಯುತ್ ಕ್ಷೇತ್ರವನ್ನು ಮುನ್ನಡೆಸುತ್ತಿದೆ

SAD DEMISE

Khoday L. Ramachandra

(Born 13 December 1930)

Chairman

Khoday Group of Companies, India

With deep sorrow we announce the sad demise of our Leader.

Family, Board and Staff of Khoday Group

KHODAYS

The House of Khodays

9980999042, 9844046352, khodaygroup@gmail.com



TANISHQ PRESENTS RIVAĀH WEDDING JEWELLERY

ಜಾಣ ಆಯ್ಕೆ ಮಾಡಿ

TANISHQ ಎಕ್ಸ್‌ಚೇಂಜ್

ಪ್ರತಿ ಚಿನ್ನಾಭರಣ ಖರೀದಿಯೊಂದಿಗೆ **ಚಿನ್ನದ ನಾಣ್ಯ ಉಚಿತ***

ಈ ಆಫರ್ 24 ರಿಂದ 27 ಆಗಸ್ಟ್ ವರೆಗೆ ಮಾನ್ಯ

20% ವರೆಗೆ ಕಡಿತ* ವಜ್ರಾಭರಣದ ಮೌಲ್ಯದ ಮೇಲೆ

100*% ವಿನಿಮಯ ಮೌಲ್ಯ ಪಡೆಯಿರಿ 22 ಕ್ಯಾರಟ್‌ಗಿಂತ ಹೆಚ್ಚಿನ ಚಿನ್ನವನ್ನು ಯಾವುದೇ ಜ್ಯುವೆಲ್ಲರ್‌ರಿಂದ ಖರೀದಿಸಿದರೂ ಇದು ಅನ್ವಯವಾಗುತ್ತದೆ

To locate your nearest store and know more on 6366920017. Buy online at tanishq.co.in **or Download our App** ***Conditions apply.**

Showrooms at **Bangalore:** Dickenson Road, Koramangala, Kamanahalli, E-City, Marathahalli, HSR Layout, Phoenix Mall, Nexus Shantiniketan Mall, Bannerghata, Jaynagar, Banashankari, Vijayanagar, Kanakapura Road, Basaveshwaranagar, New BEL Road, **New Stores at** Whitefield: Tel: 080-22633335; KR Puram: Subhash Nagar, Batarahalli. Tel: 9611730802; RR Nagar - BEML Layout, Jawaharlal Nehru Road. Tel: 080-47574666, **Relocated to new premises at** Malleswaram - Sampige Road. Tel: 9164326100 & Yelahanka - Opp. to The Galleria Mall. Tel: 080-43364336; **Mysore:** No.2927, Bangalore - Nilgiri Road, Near Suburban Bus Stand. Tel: 821 428 0074; **Tumkur:** ADR Complex, Ground Floor, General Kariyappa Road, K R Extension. Tel: 816 4041666

‘ಬೇಡಿಕೆ ಈಡೇರಿಸದಿದ್ದರೆ ಬೆಂಗಳೂರು ಬಂದ್’

ಬೆಂಗಳೂರು: ಶಕ್ತಿ ಯೋಜನೆಯಿಂದ ಖಾಸಗಿ ಸಾರಿಗೆ ಸಂಸ್ಥೆಗಳಿಗೆ ಉಂಟಾದ ನಷ್ಟ ಭರಿಸಲು ಕ್ರಮ ಕೈಗೊಳ್ಳುವುದು, ರಸ್ತೆ ತೆರಿಗೆ ಕಡಿಮೆ ಮಾಡುವುದು ಸೇರಿ ವಿವಿಧ ಬೇಡಿಕೆಗಳನ್ನು ಆ.30ರ ಒಳಗೆ ಈಡೇರಿಸದಿದ್ದರೆ ಬೆಂಗಳೂರು ಬಂದ್ ಮಾಡಿ ಪ್ರತಿಭಟಿಸಲು ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ನಿರ್ಧರಿಸಿದೆ.

ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಡಿಯಲ್ಲಿರುವ ಬಸ್, ಕಾರು, ಆಟೊ, ಟ್ಯಾಕ್ಸಿ ಸಂಬಂಧಿಸಿದ 34 ಸಂಘಟನೆಗಳು ಇವೆ. ಒಕ್ಕೂಟದ ಸಭೆಯಲ್ಲಿ ಭಾಗವಹಿಸಿದ್ದ 32 ಸಂಘಟನೆಗಳು ಈ ನಿರ್ಧಾರಕ್ಕೆ ಬಂದಿವೆ. ಸಮಸ್ಯೆಗಳನ್ನು ಬಗೆಹರಿಸುವುದಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದ್ದರು. ಆ.30ರ ಒಳಗೆ ಸಾರಿಗೆ ಇಲಾಖೆ ಕ್ರಮ ಕೈಗೊಳ್ಳದೇ ಹೋದರೆ ಆ.31ರಂದು ಮತ್ತೆ ಸಭೆ ಸೇರಿ ಪ್ರತಿಭಟನೆಗೆ ದಿನಾಂಕ ನಿಗದಿ ಮಾಡಲಾಗುವುದು ಎಂದು ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್. ನಟರಾಜ್ ಶರ್ಮಾ ತಿಳಿಸಿದ್ದಾರೆ.

Freedom Rice Bran Oil
Presents
ಭೂಮಿಕಾ ಕ್ಲಬ್
ಮಹಿಳೆಯರಿಗೆಂದೇ ಸ್ಥಾಪಿಸಿದ ವಿಶೇಷವಾದ ವೇದಿಕೆ
DH DECCAN HERALD | ಪ್ರಜಾವಾಣಿ
ಸ್ವಾತಂತ್ರ್ಯೋತ್ಸವವನ್ನು ಉತ್ಸಾಹದಿಂದ ಆಚರಿಸಿ
ವಿಶೇಷವಾದ ಆಫ್ ಲೈನ್ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ ಜೊತೆಯಾಗಿ, ನಿಮ್ಮೊಳಗಿನ ದೇಶಾಭಿಮಾನವನ್ನು ಹೆಮ್ಮೆಯಿಂದ ಪ್ರದರ್ಶಿಸಿ.
ಡಯಟ್ ಮತ್ತು ಪೌಷ್ಟಿಕ ಆಹಾರ ಕುರಿತ ಚರ್ಚೆ, ಏಕಪಾತ್ರಾಭಿನಯ, ಸಂಗೀತ ಕಾರ್ಯಕ್ರಮ ಸೇರಿದಂತೆ ವಿಶೇಷವಾಗಿ ನಿಮಗಾಗಿಯೇ ಆಯೋಜಿಸಲಾಗಿರುವ ಮನರಂಜನಾ ಚಟುವಟಿಕೆಗಳಲ್ಲಿ ಭಾಗವಹಿಸಿ ಆನಂದಿಸಿರಿ.
ಉದ್ಘಾಟನೆ - ಅರ್ಚನಾ ಜೋಯಿಸ್
27 ಆಗಸ್ಟ್ 2023 ಮಧ್ಯಾಹ್ನ 2.30 ರಿಂದ
ಕೆ ಇ ಎ ಪ್ರಭಾತ್ ರಂಗಮಂದಿರ ಸಿ ಎ ಸೈಟ್ ನಂ 1, 8 ನೇ ಮುಖ್ಯ ರಸ್ತೆ, ಬಸವೇಶ್ವರ ನಗರ, ಬೆಂಗಳೂರು
ಕಾರ್ಯಕ್ರಮದ ಮುಖ್ಯಾಂಶಗಳು
ಏಕಪಾತ್ರಾಭಿನಯ ಅಕ್ಷತಾ ಪಾಂಡವಪುರ ಅವರಿಂದ
ಡಯಟ್ ಮತ್ತು ಪೌಷ್ಟಿಕ ಆಹಾರ ಕುರಿತ ಚರ್ಚೆ ಅಪರ್ಣಾ ನಾಗೇಂದ್ರ ಅವರಿಂದ
ಮಾರ್ಗದರ್ಶಕರು, ಐ ಎಸ್ ಪಿ ಎ ಎನ್, ಹಿರಿಯ ಆಹಾರ ತಜ್ಞರು (ಎಚ್. ಒ. ಡಿ) ಸಾಗರ ಆಸ್ಪತ್ರೆ.
ಸಂಗೀತ ಕಾರ್ಯಕ್ರಮ ಭಾಗ್ಯಶ್ರೀ ಗೌಡ ಅವರಿಂದ
ಆಟಗಳು | ಹೈ - ಟೀ | ನೆಟ್‌ವರ್ಕಿಂಗ್
*T&C Apply
ಸಹಪ್ರಾಯೋಜಕರು Sleepwell
ಉಚಿತ ಪ್ರವೇಶ, ಈಗಲೇ ನೋಂದಾಯಿಸಿಕೊಳ್ಳಿ!
bit.ly/bhumikaclubaugust
ನೋಂದಾಯಿತರಿಗೆ ಮಾತ್ರ ಪ್ರವೇಶ

ಯಶವಂತಪುರ ಎಪಿಎಂಸಿ: ಶುದ್ಧ ಕುಡಿಯುವ ನೀರಿಗೆ ಕೊರತೆ, ರೈತರ ವಾಸ್ತವ್ಯಕ್ಕೆ ಸಮಸ್ಯೆ

ಸ್ಥಳಾಂತರದ ಬಿಕ್ಕಟ್ಟು: ಸೌಲಭ್ಯದ ಕಗ್ಗಂಟು

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದಲ್ಲೇ ಅತಿ ಹೆಚ್ಚು ವಹಿವಾಟು ನಡೆಯುವ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ (ಎಪಿಎಂಸಿ) ನಾಲ್ಕು ಕೃಷಿ ಉತ್ಪನ್ನಗಳ ಮಾರಾಟ ಮಳಿಗೆಗಳನ್ನು ಸ್ಥಳಾಂತರಿಸುವ ವಿಚಾರ ಅಡಕತ್ತರಿಯಲ್ಲಿ ಸಿಲುಕಿದ್ದು, ವಿಶಾಲ ಮಾರುಕಟ್ಟೆ ಪ್ರದೇಶ ಸೊರಗುವಂತಾಗಿದೆ.

ನಗರದ ಹೊರವಲಯದ ದಾಸನಪುರಕ್ಕೆ ಈರುಳ್ಳಿ, ಶುಂಠಿ, ಬೆಳ್ಳುಳ್ಳಿ, ಆಲೂಗಡ್ಡೆಯ ಮಾರಾಟದ ಎಲ್ಲ ಮಳಿಗೆಗಳನ್ನು ಸ್ಥಳಾಂತರಿಸಲು ಸರ್ಕಾರ ಮುಂದಾಗಿದೆ. ಇದಕ್ಕೆ ಬೆಂಗಳೂರು ಆಲೂಗಡ್ಡೆ ಮತ್ತು ಈರುಳ್ಳಿ ವರ್ತಕರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ.

ಈ ಹಗ್ಗಜಗ್ಗಾಟದಲ್ಲಿ ಹಳೆಯದಾದ ಎಪಿಎಂಸಿಗೆ ಸೌಲಭ್ಯಗಳು ಮರೀಚಿಕೆಯಾಗಿವೆ. ಇದರಿಂದ ಕಾರ್ಮಿಕರು, ವ್ಯಾಪಾರಸ್ಥರು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಿಂದ ಆವಕ ತರುವ ರೈತರು ಬಸವಳಿದಿದ್ದಾರೆ.

ಆವರಣದ ಒಳಹೊಕ್ಕರೆ ರಾಜ್ಯ, ಹೊರ ರಾಜ್ಯದಿಂದ ಬರುವ ರಾಶಿ ರಾಶಿ ಕೃಷಿ ಉತ್ಪನ್ನಗಳು ಗಮನ ಸೆಳೆಯುತ್ತವೆ. ಬೃಹತ್ ಲಾರಿಗಳು ಉತ್ಪನ್ನ ಹೊತ್ತು ತರುವುದು ಕಣ್ಣಿಗೆ ಬೀಳುತ್ತದೆ. ಅದೇ ಪ್ರಮಾಣದಲ್ಲಿ ‘ಸಮಸ್ಯೆಗಳ ರಾಶಿ’ಯೂ ಗೋಚರಿಸುತ್ತದೆ.

1975ರಿಂದ ಯಶವಂತಪುರ ಎಪಿಎಂಸಿಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪರವಾನಗಿ ಪಡೆದ ವರ್ತಕರು ವಹಿವಾಟು ನಡೆಸುತ್ತಿದ್ದಾರೆ. ರಾಜ್ಯವಲ್ಲದೇ ಮಹಾರಾಷ್ಟ್ರದಿಂದಲೂ ಈರುಳ್ಳಿ ಈ ಮಾರುಕಟ್ಟೆಗೆ ಪೂರೈಕೆಯಾಗುತ್ತಿದೆ. ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಅಸ್ಸಾಂ, ಮಧ್ಯಪ್ರದೇಶ, ಉತ್ತರ ಪ್ರದೇಶಕ್ಕೆ ಈರುಳ್ಳಿ ರವಾನೆಯಾಗುವುದು ಇದೇ ಮಾರುಕಟ್ಟೆಯಿಂದ.

ತೆಂಗಿನಕಾಯಿ, ದಿನಸಿ, ಹಣ್ಣು.. ಹೀಗೆ ಪ್ರತ್ಯೇಕ ಪ್ರಾಂಗಣದ ವ್ಯವಸ್ಥೆಯಿದೆ. ಅಗತ್ಯವಿರುವ ಎಲ್ಲ ಪದಾರ್ಥಗಳೂ ಒಂದೇ ಸೂರಿನಡಿ ಲಭ್ಯವಾಗುತ್ತಿದೆ. ಆದರೆ, ಸಮಸ್ಯೆಗಳ ನಡುವೆಯೇ ವಹಿವಾಟು ನಡೆಸುವ ಸ್ಥಿತಿಯಿದೆ.

ಕುಸಿದ ವಹಿವಾಟು: ಕೋವಿಡ್–19 ಮುಕ್ತಾಯಗೊಂಡಿದ್ದರೂ ಎಪಿಎಂಸಿಯಲ್ಲಿ ವಹಿವಾಟು ಮಾತ್ರ ಚೇತರಿಕೆ ಕಂಡಿಲ್ಲ. ಕೋವಿಡ್ ನಂತರವೂ ಶೇ 40ರಷ್ಟು ವ್ಯಾಪಾರ ಕುಸಿದಿದೆ. ಕೋವಿಡ್ ಪೂರ್ವದಲ್ಲಿ ಕೃಷಿ ಉತ್ಪನ್ನಗಳು ಇದೇ ಎಪಿಎಂಸಿಯಲ್ಲಿ ಸಣ್ಣಪುಟ್ಟ ಮಾರುಕಟ್ಟೆಗಳಿಗೆ ಪೂರೈಕೆ ಆಗುತ್ತಿದ್ದವು. ಆದರೆ, ಈಗ ರೈತರೇ ಬೇರೆ ಬೇರೆ ಮಾರುಕಟ್ಟೆಗೆ ಕೊಂಡೊಯ್ಯುತ್ತಿದ್ದಾರೆ. ಇದರಿಂದ ಕೃಷಿ ಉತ್ಪನ್ನಗಳ ಪೂರೈಕೆಯ ಪ್ರಮಾಣವು ತಗ್ಗಿದೆ ಎಂದು ವರ್ತಕರು ಹೇಳುತ್ತಾರೆ.

ಯಶವಂತಪುರ ಎಂಪಿಎಂಸಿ ಆವರಣದ ರೈತ ಭವನದ ಸ್ಥಿತಿ

ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

ಪ್ರಾಂಗಣದಲ್ಲಿ ಶ್ರಮಿಕ ವರ್ಗವೇ ನಿತ್ಯ ದುಡಿಯುತ್ತಿದೆ. ಅವರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ದೂಳು, ಕಸದ ರಾಶಿಯ ನಡುವೆ ವ್ಯಾಪಾರಸ್ಥರು ಹಾಗೂ ಕಾರ್ಮಿಕರು ಬದುಕು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಕಳ್ಳರ ಹಾವಳಿ: 106 ಎಕರೆ ವಿಸ್ತೀರ್ಣದಲ್ಲಿರುವ ಪ್ರಾಂಗಣಕ್ಕೆ 12ಕ್ಕೂ ಹೆಚ್ಚು ಪ್ರವೇಶದ್ವಾರಗಳಿವೆ. ಕೆಲವು ಗೇಟ್‌ಗಳಲ್ಲಿ ಮಾತ್ರ ಕಾವಲುಗಾರರನ್ನು ನೇಮಿಸಲಾಗಿದೆ. ಉಳಿದೆಡೆ ಕಳ್ಳರು ಸರಾಗವಾಗಿ ಪ್ರಾಂಗಣಕ್ಕೆ ಬಂದು ಕೃಷಿ ಉತ್ಪನ್ನ ಕಳವು ಮಾಡಿದ ಉದಾಹರಣೆಗಳಿವೆ. ಅಲ್ಲಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ವ್ಯಾಪಾರಿಗಳಿಗೂ ನಷ್ಟವಾಗುತ್ತಿದೆ.

ಈರುಳ್ಳಿ ತ್ಯಾಜ್ಯವನ್ನು ಎಲ್ಲೆಂದರಲ್ಲಿ ರಾಶಿ ಹಾಕಲಾಗಿದೆ. ಅದು ಕೊಳೆತರೂ ವಿಲೇವಾರಿ ಮಾಡುತ್ತಿಲ್ಲ. ಇದು ಕಾಯಿಲೆಗಳಿಗೆ ದಾರಿ ಮಾಡಿಕೊಡುತ್ತಿದೆ. ಈರುಳ್ಳಿ ಸಿಪ್ಪೆಯ ರಾಶಿಗೆ ಕಿಡಿಗೇಡಿಗಳು ಬೆಂಕಿ ಹಾಕುತ್ತಾರೆ. ಇದರಿಂದ ಅನಾಹುತ ಸಂಭವಿಸುವ ಸಾಧ್ಯತೆಯಿದೆ ಎಂಬ ಆತಂಕವೂ ಇದೆ.

ಗಾಂಜಾ ವ್ಯಸನಿಗಳ ಕಾಟ: ಹಿಂದೆ ರೌಡಿಗಳ ಕಾಟ ವಿಪರೀತವಾಗಿತ್ತು. ರೌಡಿಗಳ ವಿರುದ್ಧ ಪೊಲೀಸರು ಕಾರ್ಯಾಚರಣೆ ನಡೆಸಿದ್ದ ಮೇಲೆ ಅವರ ಕಾಟ ತಪ್ಪಿದೆ. ಈಗ ರಾತ್ರಿ ವೇಳೆ ಗಾಂಜಾ ವ್ಯಸನಿಗಳ ಹಾವಳಿ ಹೆಚ್ಚಾಗಿದ್ದು, ಇವರ ಆಟಾಟೋಪಕ್ಕೆ ಕಡಿವಾಣ ಬೀಳಬೇಕಿದೆ ಎಂದು ವ್ಯಾಪಾರಸ್ಥರು ಒತ್ತಾಯಿಸುತ್ತಾರೆ.

ಮಾರುಕಟ್ಟೆಗೆ ಆವಕ ತರುವ ರೈತರಿಗೆ ರಾತ್ರಿ ವಾಸ್ತವ್ಯಕ್ಕೆ ‘ರೈತ ಭವನ’ ನಿರ್ಮಿಸಲಾಗಿದ್ದರೂ ನಿರ್ವಹಣೆ ಇಲ್ಲ . ಕೆಲ ಕೊಠಡಿಗಳ ಕಿಟಕಿಯ ಗಾಜುಗಳು ಒಡೆದಿವೆ. ಭವನದ ಸುತ್ತಲೂ ಹತ್ತಾರು ವರ್ಷದಿಂದ 15ಕ್ಕೂ ಹೆಚ್ಚು ಹಳೆಯ ವಾಹನ ನಿಲುಗಡೆ ಮಾಡಲಾಗಿದೆ. ಹೆದ್ದಾರಿ ಬದಿಯಲ್ಲೇ ಇರುವ ಭವನ ಕೊಂಪೆಯಂತೆ ಕಾಣಿಸುತ್ತಿದೆ.

ಮಾರುಕಟ್ಟೆ ಸಮಸ್ಯೆಯ ಸುತ್ತ...

ದರ ಹೆಚ್ಚಿಸುವಂತೆ ಮನವಿ



ಕಳೆದ 20 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನಿತ್ಯ ಲಾರಿಯಿಂದ ಚೀಲಗಳನ್ನು ಇಳಿಸುವುದು ಹಾಗೂ ತುಂಬುವುದು ಮಾಡುತ್ತೇನೆ. ಪ್ರತಿ ಚೀಲಕ್ಕೆ ₹ 6 ನೀಡಲಾಗುತ್ತಿದೆ. ಅದನ್ನು ₹ 10ಕ್ಕೆ ಹೆಚ್ಚಿಸಬೇಕೆಂದು ಮನವಿ ಮಾಡಿದ್ದೇವೆ.

ಮರಿಯಪ್ಪನ್, ಕೂಲಿ ಕಾರ್ಮಿಕ

ಜೀವನ ದುಬಾರಿ



ರಾಜಧಾನಿಯಲ್ಲಿ ಜೀವನ ನಿರ್ವಹಣೆ ಕಷ್ಟ. ದುಡಿಮೆ ಸಾಲುತ್ತಿಲ್ಲ. ಕಾರ್ಮಿಕರಿಗೆ ಸರ್ಕಾರವು ವಿಶೇಷ ಯೋಜನೆ ರೂಪಿಸಬೇಕು.

ಸುರೇಂದ್ರ, ಕಾರ್ಮಿಕ

ದೂಳಿನಿಂದ ಕಾಯಿಲೆ

15 ವರ್ಷಗಳಿಂದ ಎಪಿಎಂಸಿ ಆವರಣದ ಮಳಿಗೆ ಎದುರು ರೈತರು ತಂದ ಆಲೂಗಡ್ಡೆ, ಶುಂಠಿ, ಈರುಳ್ಳಿ, ಬೆಳ್ಳುಳ್ಳಿ ರಾಶಿ ಮಾಡುವ ಕೆಲಸ ಮಾಡುತ್ತೇನೆ. ಈ ಕೆಲಸಕ್ಕೆ ರೈತರು ಹಾಗೂ ವರ್ತಕರು ಒಂದಷ್ಟು ಈರುಳ್ಳಿ ನೀಡುತ್ತಾರೆ. ಅದನ್ನೇ ಮಾರಾಟ ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದೇನೆ. ದೂಳು ಸಮಸ್ಯೆಯಿದೆ. ಕಸ ವಿಲೇವಾರಿ ಆಗುತ್ತಿಲ್ಲ.

ವೀರಮ್ಮ, ಕಾರ್ಮಿಕ ಮಹಿಳೆ

ರಸ್ತೆಯ ಮೇಲೆ ತ್ಯಾಜ್ಯದ ನೀರು

ಎಪಿಎಂಸಿ ಆವರಣದಲ್ಲಿ ಚರಂಡಿ ವ್ಯವಸ್ಥೆ ಸರಿಯಿಲ್ಲ. ಮಳೆಗಾಲದಲ್ಲಿ ತೀವ್ರ ಸಮಸ್ಯೆ ಎದುರಾಗುತ್ತಿದೆ. ಇದರಿಂದ ಶೌಚಾಲಯದ ನೀರು ರಸ್ತೆ ಮೇಲೆಯೇ ಹರಿಯುತ್ತಿದೆ. ರೈತರು, ಕಾರ್ಮಿಕರು ಹಾಗೂ ವರ್ತಕರು ಮೂಗು ಮುಚ್ಚಿಕೊಂಡು ಓಡಾಟ ನಡೆಸುವ ಪರಿಸ್ಥಿತಿಯಿದೆ.

ಮುದ್ದಮ್ಮ, ನಂದಿನಿ ಲೇಔಟ್ ನಿವಾಸಿ

ಬಳಕೆಗೆ ಲಭ್ಯವಾಗದ ಪಾರ್ಕಿಂಗ್ ಕಟ್ಟಡ

ಪುಟ್ಟಸ್ವಾಮಿ

ಬಹುಮಹಡಿ (8 ಅಂತಸ್ತು) ಪಾರ್ಕಿಂಗ್ ಕಟ್ಟಡ ನಿರ್ಮಿಸಿದ್ದರೂ ಅದು ಬಳಕೆಗೆ ಲಭ್ಯವಾಗಿಲ್ಲ. ಪಾರ್ಕಿಂಗ್ ಕಟ್ಟಡದ ಬದಲಿಗೆ ಮಾರುಕಟ್ಟೆಗೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದ್ದೆವು. ಮನವಿ ಲೆಕ್ಕಿಸದೇ ಅಂದಾಜು ₹ 104 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಅದೂ ಉಪಯೋಗಕ್ಕೆ ಬರುತ್ತಿಲ್ಲ. ಉದ್ಘಾಟನೆಯನ್ನೂ ಮಾಡಿಲ್ಲ. ಬೀಗ ಹಾಕಲಾಗಿದೆ. ಎಲ್ಲ ಉತ್ಪನ್ನಗಳ ವಹಿವಾಟು ದಾಸನಪುರಕ್ಕೆ ಸ್ಥಳಾಂತರಿಸಿದರೆ ಮಾತ್ರ ಅಲ್ಲಿಗೆ ತೆರಳಲು ಸಿದ್ಧ ಎಂದು ಭಾಸ್ಕರ್ ಟ್ರೇಡರ್ಸ್‌ನ ತೆಂಗಿನಕಾಯಿ ವ್ಯಾಪಾರಿ ಪುಟ್ಟಸ್ವಾಮಿ ಅವರು ಹೇಳುತ್ತಾರೆ.

‘ಯಶವಂತಪುರದಲ್ಲೇ ಅವಕಾಶ ಕಲ್ಪಿಸಿ’

ಸಿ.ಉದಯಶಂಕರ್

ಯಶವಂತಪುರ ಎಪಿಎಂಸಿ ನಗರದ ಹೃದಯಭಾಗದಲ್ಲಿದೆ. ರೈಲು ನಿಲ್ದಾಣ, ಮೆಟ್ರೊ ರೈಲು ಸಂಪರ್ಕ, ರಾಷ್ಟ್ರೀಯ ಹೆದ್ದಾರಿ ಸೇರಿ ಸಾಕಷ್ಟು ಸೌಕರ್ಯಗಳಿವಿದೆ. ಇದರಿಂದ ವಹಿವಾಟು ಸುಗಮವಾಗಿ ನಡೆಯುತ್ತಿದೆ. 90ಕ್ಕೂ ಹೆಚ್ಚು ಕೃಷಿ ಉತ್ಪನ್ನಗಳು ವಹಿವಾಟು ನಡೆಯುತ್ತಿದ್ದು , ರಾಜ್ಯದ ಎಲ್ಲ ರೈತರಿಗೆ ಅನುಕೂಲ ವಾಗುತ್ತಿದೆ. ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ, ಶುಂಠಿ ಪದಾರ್ಥಗಳ ವಹಿವಾಟನ್ನು ದಾಸನಪುರಕ್ಕೆ ಸ್ಥಳಾಂತರಿಸಲು ಮುಂದಾಗಿರುವುದು ಸರಿಯಲ್ಲ. \ಯಶವಂತಪುರದಲ್ಲಿ ಮಳಿಗೆ ಇಲ್ಲದವರಿಗೆ ದಾಸನಪುರದಲ್ಲಿ ಮಳಿಗೆ ಕಲ್ಪಿಸಲಿ. ಯಶವಂತಪುರದಲ್ಲಿ ಮಳಿಗೆ ಪಡೆದವರು ಹಾಗೂ ಬಾಡಿಗೆದಾರರಿಗೆ ಇಲ್ಲೇ ವ್ಯಾಪಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಸಂಘದ ಒತ್ತಾಯ ಎಂದು ಸಂಘದ ಅಧ್ಯಕ್ಷ ಸಿ.ಉದಯಶಂಕರ್ ಅವರು ಹೇಳಿದರು.

ವಾಹನ ದಟ್ಟಣೆ ಕಾರಣ ನೀಡಿ, ಸ್ಥಳಾಂತರ ಮಾಡಲಾಗುತ್ತಿದೆ. ಆದರೆ, ಕೋವಿಡ್ ಬಳಿಕ ದಟ್ಟಣೆ ಸಮಸ್ಯೆಯೇ ಆಗುತ್ತಿಲ್ಲ. ಹೊರ ರಾಜ್ಯದಿಂದ ಬಂದ ಲಾರಿಗಳು ಸುಗಮವಾಗಿ ತೆರಳುತ್ತಿವೆ. ಸರ್ಕಾರವು ಬೇಕಿದ್ದರೆ ಹೊಸದಾಗಿ ನಾಲ್ಕು ಮಾರುಕಟ್ಟೆ ನಿರ್ಮಿಸಲಿ. ಮೂಲ ವ್ಯಾಪಾರಿಗಳನ್ನು ಇಲ್ಲೇ ಬಿಡಲಿ ಎಂದೂ ಮನವಿ ಮಾಡಿದರು.

ಈರುಳ್ಳಿ ಮಾರಾಟ ಪ್ರಾಂಗಣದಲ್ಲಿ ಲಾರಿಗಳ ಸಾಲು
– ಪ್ರಜಾವಾಣಿ ಚಿತ್ರಗಳು/ಕಿಶೋರ್ ಕುಮಾರ್ ಬೋಳಾರ್

ಶಾಲಾ ಶಿಕ್ಷಣ ಸಚಿವ ಎಸ್‌. ಮಧು ಬಂಗಾರಪ್ಪ ಭರವಸೆ

‘ಶೀಘ್ರದಲ್ಲೇ ಪುಸ್ತಕ ಪಟ್ಟಿ ಪ್ರಕಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ 2020ನೇ ಸಾಲಿನ ಪುಸ್ತಕಗಳ ಆಯ್ಕೆ ಪಟ್ಟಿಯನ್ನು ಶೀಘ್ರದಲ್ಲಿಯೇ ಬಿಡುಗಡೆ ಮಾಡಿ, 2021–22ನೇ ಸಾಲಿನ ಪ್ರಕಟಣೆಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಎಸ್. ಮಧು ಬಂಗಾರಪ್ಪ ಭರವಸೆ ನೀಡಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಕರ್ನಾಟಕ ಪ್ರಕಾಶಕರ ಸಂಘದ ಪದಾಧಿಕಾರಿಗಳು ಸಚಿವರನ್ನು ಗುರುವಾರ ಭೇಟಿ ಮಾಡಿ, ಪುಸ್ತಕ ಖರೀದಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಮನವಿ ಮಾಡಿಕೊಂಡರು.

‘ಅಧಿಕಾರಿಗಳ ವೇತನ ಹೊರತುಪಡಿಸಿದರೆ ಗ್ರಂಥಾಲಯ ಇಲಾಖೆಯ ಎಲ್ಲ ಕಾರ್ಯಚಟುವಟಿಕೆಗಳು ಗ್ರಂಥಾಲಯ ಕರದಿಂದಲೇ ನಡೆಯುತ್ತಿವೆ. ಈಗಾಗಲೇ ಬಿಬಿಎಂಪಿ ಗ್ರಂಥಾಲಯ ಇಲಾಖೆಗೆ ಹಣ ಬಿಡುಗಡೆ ಮಾಡಿದೆ. ಆಯ್ಕೆಯಾದ ಪುಸ್ತಕಗಳ ಪಟ್ಟಿ ಬಿಡುಗಡೆಗೊಳಿಸಿ, ಬಜೆಟ್ ಅನುಮೋದನೆ ಮಾಡಿದರೆ ಗ್ರಂಥಾಲಯದ ಕ್ರಿಯಾಶೀಲ ಕಾರ್ಯಕ್ರಮಗಳಿಗೆ ಅನುಕೂಲ ಆಗುತ್ತದೆ’ ಎಂದು ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಅಭಿನವ ರವಿಕುಮಾರ್, ‘ಬಜೆಟ್ ಅನುಮೋದನೆಯಾಗದೆ ಗ್ರಂಥಾಲಯ ಇಲಾಖೆ ಪುಸ್ತಕ ಖರೀದಿಸಲಾಗುತ್ತಿಲ್ಲ. ಇದರಿಂದ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಲು ತೊಡಕಾಗಿದೆ. ಗ್ರಂಥಾಲಯ ಅಧಿನಿಯಮದಂತೆ ಪ್ರತಿವರ್ಷ ಫೆಬ್ರವರಿ ತಿಂಗಳಿನೊಳಗೆ ಬಜೆಟ್ ಅನುಮೋದನೆಯಾಗಬೇಕು. ಆದರೆ, ಅರ್ಧ ವರ್ಷ ಕಳೆದರೂ ಬಜೆಟ್ ಅನುಮೋದನೆಯಾಗದೆ ಯಾವ ಚಟುವಟಿಕೆಯೂ ನಡೆಯುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸರ್ಕಾರದ ಪ್ರಧಾನ ಕಾರ್ಯದರ್ಶಿ ನಿತೀಶ್ ಕುಮಾರ್ ಸಿಂಗ್ ಅವರಿಗೆ ಕೂಡಲೇ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಇದೇ ಸಂದರ್ಭದಲ್ಲಿ ನವಕರ್ನಾಟಕ ಪ್ರಕಾಶನದ ರಮೇಶ ಉಡುಪ ಅವರು, ‘ಪುಸ್ತಕ ಆಯ್ಕೆಗೆ ಹೊಸ ಸಮಿತಿ ರಚಿಸಬೇಕು’ ಎಂದು ಮನವಿ ಮಾಡಿಕೊಂಡರು.

ಪ್ರಕಾಶಕ ಸೃಷ್ಟಿ ನಾಗೇಶ್, ‘ಗ್ರಂಥಾಲಯ ಅಭಿವೃದ್ಧಿ ಪ್ರಾಧಿಕಾರವನ್ನು 30 ವರ್ಷಗಳಿಂದ ಪುನರ್ ರಚಿಸಿಲ್ಲ. ಇದಕ್ಕೆ ಹೊಸ ಸದಸ್ಯರನ್ನು ನೇಮಿಸಬೇಕು’ ಎಂದರು.

‘ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಕೂಡಲೇ ಇಲಾಖೆಯ ಅಧಿಕಾರಿಗಳ ಜತೆ ಮಾತನಾಡಿ ಕ್ರಮಕೈಗೊಳ್ಳಲಾಗುವುದು’ ಎಂದು ಮಧು ಬಂಗಾರಪ್ಪ ಹೇಳಿದರು.

ಇಲಾಖೆಯ ಆಯುಕ್ತೆ ಬಿ.ಬಿ. ಕಾವೇರಿ ಇದ್ದರು.



ರಮೇಶ ಉಡುಪ, ಬರಗೂರು ರಾಮಚಂದ್ರಪ್ಪ, ಪ್ರಕಾಶ್ ಕಂಬತ್ತಳ್ಳಿ, ಸೃಷ್ಟಿ ನಾಗೇಶ್ ಹಾಗೂ ಅಭಿನವ ರವಿಕುಮಾರ್ ಅವರು ಸಚಿವ ಎಸ್‌. ಮಧು ಬಂಗಾರಪ್ಪ ಅವರನ್ನು ಭೇಟಿ ಮಾಡಿದರು.

ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕಿಶನ್ ರಾವ್ ಕರಾಡ್

‘ಪಿ.ಎಂ. ಸ್ವನಿಧಿ: ರಾಜ್ಯದಲ್ಲಿ ₹423 ಕೋಟಿ ಸಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೀದಿ ಬದಿ ವ್ಯಾಪಾರಿಗಳನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸುವ ಉದ್ದೇಶದಿಂದ ಪ್ರಾರಂಭಿಸಲಾದ ‘ಪಿ.ಎಂ. ಸ್ವನಿಧಿ’ ಯೋಜನೆಗೆ ಕರ್ನಾಟಕದಲ್ಲಿಯೂ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಇಲ್ಲಿನ 3.10 ಲಕ್ಷ ಮಂದಿಗೆ ₹ 423 ಕೋಟಿ ಸಾಲವನ್ನು ಬ್ಯಾಂಕ್‌ಗಳು ನೀಡಿವೆ’ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕಿಶನ್ ರಾವ್ ಕರಾಡ್ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ ಮೂರು ಹಂತಗಳಲ್ಲಿ ಸಾಲ ಸಿಗಲಿದೆ. ಮೊದಲಿಗೆ ₹ 10 ಸಾವಿರ ನೀಡಲಾಗುತ್ತದೆ. ಸಮಯಕ್ಕೆ ಸರಿಯಾಗಿ ಮರುಪಾವತಿಸಿದಲ್ಲಿ ಬಡ್ಡಿದರದಲ್ಲಿ ಶೇ 7 ರಷ್ಟು ಸಬ್ಸಿಡಿ ನೀಡಲಾಗುತ್ತದೆ. ಎರಡನೇ ಹಂತದಲ್ಲಿ ₹ 20 ಸಾವಿರ ಹಾಗೂ ಮೂರನೇ ಹಂತದಲ್ಲಿ ₹ 50 ಸಾವಿರ ಸಾಲವನ್ನು ನೀಡಲಾಗುತ್ತದೆ’ ಎಂದು ಹೇಳಿದರು.

‘ಕೋವಿಡ್ ಸಂಕಷ್ಟದ ಅವಧಿಯಲ್ಲಿ ಈ ಯೋಜನೆ ಪ್ರಾರಂಭಿಸಲಾಗಿದ್ದು, ಈ ಯೋಜನೆಯಡಿ ದೇಶದಾದ್ಯಂತ ಸಾಲ ಪಡೆಯಲು ಸಲ್ಲಿಕೆಯಾಗಿದ್ದ 74.98 ಲಕ್ಷ ಅರ್ಜಿಗಳನ್ನು ಸ್ವೀಕರಿಸಿದ್ದು, ಈ ಪೈಕಿ 57.12 ಲಕ್ಷ ಅರ್ಜಿದಾರರಿಗೆ ಒಟ್ಟು ₹ 7,460.31 ಕೋಟಿ ಸಾಲ ನೀಡಲಾಗಿದೆ. ಕೆಲವರು ಮೂರು ಹಂತಗಳಲ್ಲಿಯೂ ಸಾಲ ಪಡೆದಿದ್ದಾರೆ. ಈ ವರ್ಷಾಂತ್ಯಕ್ಕೆ 50 ಲಕ್ಷ ಫಲಾನುಭವಿಗಳನ್ನು ತಲುಪುವ ಗುರಿ ಹೊಂದಿದ್ದು, ಈಗಾಗಲೇ 42 ಲಕ್ಷ ಬೀದಿ ಬದಿ ವ್ಯಾಪಾರಿಗಳು ಯೋಜನೆಯಡಿ ಸಾಲ ಪಡೆದಿದ್ದಾರೆ’ ಎಂದರು.

‘ಕರ್ನಾಟಕವು ಈ ಯೋಜನೆಯಡಿ ಶೇ 68 ರಷ್ಟು ಗುರಿ ಸಾಧಿಸಿದೆ. ಸಾಲ ಪಡೆದವರಿಗೆ ಪ್ರಮಾಣ ಪತ್ರವನ್ನೂ ನೀಡಲಾಗುತ್ತದೆ. ಬೆಂಗಳೂರಿನಂತಹ ಮಹಾನಗರದಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಪೊಲೀಸರು ಹಾಗೂ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ವ್ಯಾಪಾರಕ್ಕೆ ಅವಕಾಶ ನಿರಾಕರಿಸುವ ಸಾಧ್ಯತೆ ಇರುತ್ತದೆ. ಈ ಪ್ರಮಾಣ ಪತ್ರ ಹೊಂದಿದ್ದವರು ಅಧಿಕೃತ ಬೀದಿ ಬದಿ ವ್ಯಾಪಾರಿಗಳಾಗುತ್ತಾರೆ. ಅವರಿಗೆ ಅಡ್ಡಿಪಡಿಸುವಂತಿಲ್ಲ’ ಎಂದು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Lost

PUBLIC NOTICE
The General Public is hereby notified that Dr. M. Lakshmaiah S/o. Mr. Munivenkatappa, aged about 82 years, residing at No. 125, Sri Venkateshwara Vaibhava Complex Parvathapura, 9th ward, Devanahalli Village, Devanahalli Taluk, Bangalore Rural is the owner of the Schedule below ("Schedule Properties"). It is represented that the Original Sale deed dated 29.01.1953 (Registered on 06.02.1953) executed by Mr. Rangappa in favour of Mr.G.N. Subramaniah Rao, registered as Document No. 2340/1952-1953, in Book I, Volume 624, pages 70-72, in the office of Sub- Register, Devanahalli, Original Sale Deed dated 04.11.1954 (registered on 22.01.1955) executed by Mr. Dodda Muniyappa in favour of Mr.G.N.Subramanya Iyer registered as Document No. 1961/1954-1955, in Book I, Volume 655, pages 139-140, in the office of Sub-Register, Devanahalli and original Sale deed dated 18.06.1977 executed by Mr. G.N.Subramanya Iyer and others in favour of Dr.M.Lakshmaiah, registered as Document No. 590/1977-1978, in Book I, Volume 1208, page 189-193, in the office of Sub-Register, Devanahalli are Lost / misplaced and not traceable. In this regards, E-complaint bearing lost report No.0581017/2023 has been lodged on 30.05.2023 at Police Unit: Bengaluru. The finder of the documents is requested to surrender the same to the undersigned within 07 (seven) days from the issuance of this public notice, failing which, it shall be deemed that the originals are irretrievably lost and certified copies of the same shall be obtained from the office of Sub-Registrar of Assurances in lieu of lost originals for the purpose of records.
SCHEDULE PROPERTIES
All that piece and parcel of the land bearing Survey Nos. 45, measuring 01 (One) Acre 21 (Twenty One) Guntas and 46, measuring 24 (Twenty Four) Guntas, situated at Devanahalli Village, Kasaba Hobli, Devanahalli which is bounded on its: East by: Mr.Jinkarora Munivenkatappa's and Mr.Appajappa's property; West by : Canal (nerukaluve); North by : Doddaballapura Road; South by : Mr.Munivenkatappa urf Mothappa's Property
Sd./-Vishal Bhat, Anoma Legal, Advocates First Floor, A1Tower,Golden Enclave Commercial Block, Kaveri Nagar, Murugeshpalya, Bengaluru - 560017 Dated:25-08-2023

Change of Name

CHANGE OF NAME
I, SOUMYA VIDYANATH, R/at. 109, Veerapillai Street, Sivan Chetty Gardens Post, Bangalore-560042 have changed my name to SOUMYA N V vide affidavit dated 24/08/2023 before Notary L. Gopalakrishna, Bangalore. Henceforth I shall be called SOUMYA N V only

I KARAN BAFNA R/a, #22, 23, Flat No.201, 2nd floor, Arihant Apartment, Subramanya Swamy Temple Street, Bangalore- 560004 Have Changed my Minor Daughter's Name From EVA K. SANGHVI To EVA BAFNA Vide Affidavit Dated 23/08/2023 before Notary L. Shankaranarayana Bangalore

CHANGE OF NAME
I, SHAMEEN BANU, R/at. 14/37, Fathima Manzil 3rd Cross, Meen Masjid Road, Old Guruappanapalya, Bengaluru - 560029, have changed my name to SHAMEEM BANU vide affidavit dated 24/08/2023 before Notary K.Venkateshan, Bangalore. Henceforth I shall be called SHAMEEM BANU only

I, PRAKASH KUMAR, R/o. #8/16, Doddakannelli, AET-Junction, Sarjapur Main Road, Carmelaram Post, Bengaluru-35, have changed my name to PRAKASH NARAYAN affidavit dated 24/1/2023 Notary L.Gopalakrishna, Bengaluru. Henceforth I shall be called PRAKASH NARAYAN only.

I, SATEESHA. G.K. Residing at #10, 16th cross, Ullal Main Road Muneshwaranagar Bangalore-56 have changed my son name from BHAVISHY RAJ. S to BHAVISH RAJ. S. vide affidavit dated 22/8/2023 before Notary Kenchegowda.B.M Bangalore

I, ROHIT, S/o. JAGDISH KUMAR PUNAMIYA, R/o #45, WAT Street, Basavanagudi, Bengaluru-04 have changed my name as ROHIT J. PUNAMIYA, Also i state the above mentioned both names are mine only vide affidavit dated 24/08/2023 before Notary Meenakshi. K, Bengaluru

I DEVARAJU NARASIMHAIAH R/a, #97, New #11, 1st Main, 4th Cross, Ittamadu Layout, Banashankari 3rd Stage, Bengaluru-560085 Have Changed my Name to DEVARAJ NARASIMHAIAH Vide Affidavit Dated 24/08/2023 before Notary K.C.Shashikala Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PUBLIC NOTICE

PUBLIC NOTICE
The applicant, Mr. Rajiv Kumar Jaiswal, is going to surrender its SEBI registration No. INA 200014371 and BASL membership Certificate no. ID 1959 as an Investment Adviser and that if anyone has any grievances, they can lodge the grievances at scores.gov.in.

REAL ESTATE BUYING

General

General

WE DO KIADB, KSSIDC,BDA, BBMP, BMICAPA,BMRDA, BIAPPA,Conversion, Change of Land Use, Podi Durasti,NOC, Khata, Documentation Services. Verna Developers, MG Road. 9916310226/ 9620253180

REAL ESTATE SELLING

Sites

Vishweshwariah Layout

BDA 30X40 South Facing 1st Block Rate 9500 Srike 100Ft Road Parllel 40Ft Road 1st Block Rate 10500 2nd Block Rate 8000 3ft Margin Land West Facing SMV Layout 6th Block Rate 8500 Contact: Shivu 9844603127

Frazer Town

SALE 2,100 Sq.Ft 4,100 Sq.Ft Prime Commercial Properties On Wheelers Road, Frazer Town Call: 9980525450

Flat

Rajajinagar

DNR HIGHLINE @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted&,Agriculture Lands Call:7204995189

Business For Sale

RUNNING RESTAURANT for sale in Mysore at a Prime location. Interested buyers may contact 9036866770

JOB OPPORTUNITIES

Teachers/ Professors

JANASEVA VIDYA KENDRA
Channenahalli, 20th KM Magadi Main Road, Bangalore-562130
WANTED TEACHERS
M.Sc, or B.Sc,B.Ed (PCM)
Computer Teacher, Diploma/ BE/BCS/Bsc Computer
(English & Kannada Medium Both)
Email: 123jsvkhighschool@gmail.com
Walk-in Interview
28.08.2023
Monday 10.00 AM
Contact: 7022428464/ 9480609078
Hon. Secretary

Multiple Vacancy

WANTED EXPERIENCED Female TALLY OPERATOR/ ACCOUNTANT/ OFFICE ASSISTANT for Office in Vasantnagar, Bangalore. Contact- 7411252299

DH DECCAN HERALD | ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now!
For more details contact:
+91 9901641752 | +91 9900428036 | +91 9886213331 |+91 9845114560| +91 9731810277 | 080- 45557163/164

ಸಹಕಾರ ಇಲಾಖೆ ನೋಂದಣಿ ಪ್ರಕ್ರಿಯೆಯಲ್ಲಿ ಅನುಮೋದಿಸಿರುವ ಬೈಲಾ ಉಲ್ಲಂಘನೆ

ಕಾಸ್ಮೊಪಾಲಿಟನ್ ಕ್ಲಬ್: ನೋಂದಣಿಗೂ ಕುತ್ತು

• ಆರ್. ಮಂಜುನಾಥ್

ಜಯನಗರದಲ್ಲಿರುವ ಕಾಸ್ಮೊಪಾಲಿಟನ್ ಕ್ಲಬ್

ಬೆಂಗಳೂರು: ಬಿಡಿಎಯೊಂದಿಗಿನ ಸಿ.ಎ ನಿವೇಶನ ಗುತ್ತಿಗೆ ಕರಾರು ಉಲ್ಲಂಘಿಸಿ ತನಿಖೆ ಎದುರಿಸುತ್ತಿರುವ ಜಯನಗರದ ಕಾಸ್ಮೊಪಾಲಿಟನ್ ಕ್ಲಬ್, ಬೈಲಾ ಉಲ್ಲಂಘನೆಯಿಂದ ಅದರ ನೋಂದಣಿಯೇ ರದ್ದಾಗುವ ಸಂಭವವಿದೆ.

'ಸಾಮಾಜಿಕ ಕಾರ್ಯ ಮಾಡುತ್ತೇವೆ' ಎಂದು ಬಿಡಿಎ, ಸಹಕಾರ ಇಲಾಖೆ ಹಾಗೂ ಅಬಕಾರಿ ಇಲಾಖೆಗೆ ಮುಚ್ಚಳಿಕೆ ಬರೆದುಕೊಟ್ಟಿರುವ ಕಾಸ್ಮೊಪಾಲಿಟನ್ ಕ್ಲಬ್, ಅದರ ಬೈಲಾದಲ್ಲೂ ಅದನ್ನೇ ಹೇಳಿದೆ. ಆದರೆ, ಈವರೆಗೆ ಒಂದು ಸಣ್ಣ ಸಮಾಜಮುಖಿ ಕೆಲಸ ಆಗಿಲ್ಲ. ಬದಲಿಗೆ, ಕ್ಲಬ್‌ಗಾಗಿ ಸಾಮಾಜಿಕ ಕಾರ್ಯ ಮಾಡುತ್ತಿರುವ 'ಟ್ರಸ್ಟ್ ಮುಚ್ಚಿಬಿಡಿ' ಎಂದು ಸಾಮಾನ್ಯ ಸಭೆಯಲ್ಲಿ ಹೇಳಿರುವ ವಿಷಯಗಳು ಸಹಕಾರ ಸಂಘಗಳ ಉಪನಿಬಂಧಕರಿಗೆ ತಲುಪಿದೆ.

ಸಂಘದ ಬೈಲಾದಲ್ಲಿ (2.6) ಅಗತ್ಯವಿರುವವರಿಗೆ ನೆರವಾಗುವ ಉದ್ದೇಶ ನಮೂದಿಸಲಾಗಿದೆ. ಆದರೆ, ಈವರೆಗೆ ಕ್ಲಬ್‌ನಿಂದ ಇಂತಹ ಒಂದು ಕೆಲಸವೂ ನಡೆದಿಲ್ಲ. ಕ್ಲಬ್‌ನ ಸಾಮಾನ್ಯ ಸಭೆ ಅನುಮೋದಿಸಿದ್ದ 'ಕಾಸ್ಮೊಪಾಲಿಟನ್ ಕ್ಲಬ್ ಕಾರ್ಪಸ್ ಫಂಡ್ ಟ್ರಸ್ಟ್' ತನ್ನದೇ ದಾನಿಗಳಿಂದ ಹಣ ಸಂಗ್ರಹಿಸಿ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿತ್ತು. 'ಸಾವಿರ ಜನಕ್ಕೆ ಉಚಿತವಾಗಿ ನೀಡುತ್ತಿದ್ದ ಊಟದ ವ್ಯವಸ್ಥೆ ಮುಂದುವರಿಸಬಾರದು. ಜೊತೆಗೆ ಟ್ರಸ್ಟ್ ರದ್ದು ಮಾಡಬೇಕು. ಸಾಮಾಜಿಕ ಜವಾಬ್ದಾರಿಗೆ ಹಣ ನೀಡಬೇಕಿಲ್ಲ. ಅದನ್ನು ಕ್ಲಬ್ ಸದಸ್ಯರು, ಲೈಸೆನ್ಸ್ ನವೀಕರಣಕ್ಕೆ ಉಪಯೋಗಿಸಬೇಕು' ಎಂದು ಇತ್ತೀಚಿನ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿದ್ದು, ಅದನ್ನು ನಿರ್ಣಯ ಮಾಡಲಾಗಿದೆ. ಇದನ್ನು ಸಹಕಾರ ಇಲಾಖೆ ಗಂಭೀರವಾಗಿ ಪರಿಶೀಲಿಸುತ್ತಿದ್ದು, ನೋಂದಣಿ ರದ್ದುಪಡಿಸುವ ಪ್ರಕ್ರಿಯೆ ಆರಂಭಿಸಲು ನಿರ್ಧರಿಸಿದೆ ಎಂದು ಅಧಿಕಾರಿಗಳು ತಿಳಿಸಿದರು.

ಜುಲೈ 30ರಂದು ನಡೆದ ಕಾಸ್ಮೊಪಾಲಿಟನ್ ಕ್ಲಬ್‌ನ ಸಾಮಾನ್ಯ ಸಭೆಯ ಪೂರ್ಣ ಮಾಹಿತಿ ಮಲ್ಲೇಶ್ವರದಲ್ಲಿರುವ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಆಗಸ್ಟ್ 19ರಂದು ತಲುಪಿದೆ. ಸಹಕಾರ ಸಂಘಗಳ ಕಾಯ್ದೆ, ಬೈಲಾದಲ್ಲಿರುವ ಉದ್ದೇಶ ಸೇರಿದಂತೆ ಹಲವು ರೀತಿಯ ನಿಯಮಗಳನ್ನು ಉಲ್ಲಂಘಿಸಿ ಕೈಗೊಳ್ಳಲು ಸದಸ್ಯರು ಒತ್ತಾಯಿಸಿರುವ ಅಂಶಗಳನ್ನು ಇಲಾಖೆ ಸೂಕ್ಷ್ಮವಾಗಿ ಪರಿಶೀಲಿಸುತ್ತಿದೆ.

ಕಾಸ್ಮೊಪಾಲಿಟನ್ ಕ್ಲಬ್‌ನ ಸಾಮಾನ್ಯ ಸಭೆಯಲ್ಲಿನ ಮಾತುಕತೆಯ (ಮಿನಿಟ್ಸ್) ಪ್ರತಿ 'ಪ್ರಜಾವಾಣಿ' ಗೆ ಲಭ್ಯವಾಗಿದೆ.

ಸಾಮಾನ್ಯ ಸಭೆಯಲ್ಲಿ ಕೇಳಿಬಂದ ಮಾತುಗಳು

- ಪಾರ್ಕಿಂಗ್ ಜಾಗದಲ್ಲಿ ಊಟ ಹಾಕುತ್ತೀರಿ, ಕಾರ್ ನಿಲ್ಲಿಸಲು ಹೋದರೆ ಅಡುಗೆ ವಾಸನೆ, ತರಕಾರಿ–ಈರುಳ್ಳಿ ವಾಸನೆ ಬರುತ್ತದೆ. ಇದನ್ನು ನೋಡಿಕೊಂಡು ನಾವು ಹೋಗಬೇಕಾ?
- ಊಟ ಸಿಗದವರಿಗೆ ಊಟ ಹಾಕುವುದು ಬೇಕಾಗಿಲ್ಲ. ಕ್ಲಬ್ ಲೈಸೆನ್ಸ್ ನವೀಕರಣಕ್ಕೆ ದುಡ್ಡಿನ ವ್ಯವಸ್ಥೆ ಮಾಡಿಕೊಳ್ಳಿ.
- ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಬೇಕಂತೆ ಆ ರೀತಿ ಆಗಿದೆ. ಮಿಡ್–ಡೇ ಮೀಲ್ ಬೇಕಿಲ್ಲ.
- ನಿಮಗೆ ಅಷ್ಟೊಂದು ನೋಬಲ್ ಕಾಸ್ ಇದ್ದರೆ ಇಸ್ಕಾನ್ ಅಕ್ಷಯ ಪಾತ್ರೆ ಅವರಿಗೆ ಕೊಡಿ. ಅವರು ನೀವು ಹೇಳಿದ ಕಡೆ ಊಟ ಹಾಕುತ್ತಾರೆ. ಇಲ್ಲಿ ಬೇಡ.
- ಇದು ಸಾಮಾಜಿಕ ಕ್ಲಬ್ ಅಲ್ಲ, ಮನೋರಂಜನಾ ಕ್ಲಬ್. ಬೈಲಾ, ಸಂವಿಧಾನ ಸುಪ್ರೀಂ ಅಲ್ಲ. ಆಕ್ಟ್ ಸುಪ್ರೀಂ. ಇಲ್ಲಿರುವ ಎಲ್ಲ ಸೌಲಭ್ಯಗಳು ಸದಸ್ಯರಿಗೆ ಮಾತ್ರ.
- ಸಿಎಸ್‌ಆರ್ ನಿಧಿಯಲ್ಲಿ ಶೇ 50 ಹಣ ಟ್ರಸ್ಟ್‌ಗೆ ಕೊಡಬೇಕು. ಒಂದು ನಯಾಪೈಸೆಯೂ ಬಂದಿಲ್ಲ. ಮಧ್ಯಾಹ್ನದ ಊಟದಂತಹ ಪವಿತ್ರ ಕೆಲಸಕ್ಕೆ ಏಕೀ ಗೊಂದಲ?
- ಸಾಮಾಜಿಕ ಕೆಲಸಗಳ ಬದಲು, ಕ್ಲಬ್‌ಗೆ ಶಟಲ್ ರಾಕೆಟ್ಸ್, ಟೆನ್ನಿಸ್ ಬಾಲ್, ಮದ್ಯ ಮತ್ತು ಇತರೆ ವಸ್ತುಗಳನ್ನು ಪ್ರಾಯೋಜಕರಿಂದ ಪಡೆದುಕೊಳ್ಳಬಹುದು.

ಮದ್ಯದ ಲೈಸೆನ್ಸ್ ರದ್ದು!

ಸಹಕಾರ ಸಂಘಗಳ ನೋಂದಣಿಯಲ್ಲಿ ನಮೂದಾಗಿರುವ ಸಾಮಾಜಿಕ ಅಂಶಗಳಿಂದಲೇ ಅಬಕಾರಿ ಇಲಾಖೆಯಿಂದ ರಿಯಾಯಿತಿ ದರದಲ್ಲಿ ಕಾಸ್ಮೊಪಾಲಿಟನ್ ಕ್ಲಬ್‌ಗೆ 'ಸಿಎಲ್–4' ಲೈಸೆನ್ಸ್ ನೀಡಲಾಗಿದೆ. ವರ್ಷಕ್ಕೆ ₹7.47 ಲಕ್ಷ ಶುಲ್ಕದೊಂದಿಗೆ ಈ ಲೈಸೆನ್ಸ್ ನೀಡಲಾಗಿದೆ. ಸಹಕಾರ ಸಂಘಗಳ ನೋಂದಣಿ ರದ್ದಾದರೆ ಈ ಮದ್ಯದ ಲೈಸೆನ್ಸ್ ಕೂಡ ರದ್ದಾಗುತ್ತದೆ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ತಿಳಿಸಿದರು.

'ಕೋಟಿ ಪುಣ್ಯ ಬರುತ್ತೆ'

'ನಿತ್ಯ ಈ ಪ್ರದೇಶದಲ್ಲೇ ಕಸ ಗುಡಿಸಿ, ಎಲ್ಲವನ್ನೂ ಸ್ವಚ್ಛ ಮಾಡುತ್ತೇವೆ. ಮಧ್ಯಾಹ್ನ ಒಳ್ಳೆಯ ಊಟ ಹಾಕುತ್ತಿದ್ದರು. ತುಂಬಾ ಸಂತೋಷವಾಗಿತ್ತು. ಆದರೆ, ನಿಲ್ಲಿಸಿದ್ದಾರೆ. ಊಟ ಕೊಟ್ಟರೆ ಅವರಿಗೆ ಕೋಟಿ ಪುಣ್ಯ ಬರುತ್ತದೆ' ಎಂದು ಕಾಸ್ಮೊಪಾಲಿಟನ್ ಕ್ಲಬ್ ಸುತ್ತಮುತ್ತ ಕಾರ್ಯನಿರ್ವಹಿಸುವ ಪೌರಕಾರ್ಮಿಕರು ಹೇಳಿದರು.

ತಮಿಳುನಾಡಿಗೆ ತಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಹರಿಸುತ್ತಿದ್ದ ನೀರಿನ ಪ್ರಮಾಣವನ್ನು ಕಾವೇರಿ ನೀರಾವರಿ ನಿಗಮ ಗುರುವಾರ ತಗ್ಗಿಸಿದೆ. ರಾತ್ರಿ 8 ಗಂಟೆಯ ವೇಳೆಗೆ ನದಿಗೆ ಹರಿಸಲಾಗುತ್ತಿದ್ದ ನೀರು 3,130 ಕ್ಯುಸೆಕ್‌ಗೆ ಇಳಿದಿದೆ.

ಹೆಚ್ಚುವರಿ ನೀರು ಕೋರಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ ನಂತರ ಜಲಾಶಯದಿಂದ ನದಿಗೆ ಸರಾಸರಿ 12 ಸಾವಿರ ಕ್ಯುಸೆಕ್ ನೀರು ಹರಿಸಲಾಗುತ್ತಿತ್ತು. ನೀರು ನಿರ್ವಹಣಾ ಪ್ರಾಧಿಕಾರ, ಸುಪ್ರೀಂ ಕೋರ್ಟ್ ಸೂಚನೆ ಇಲ್ಲದಿದ್ದರೂ ತಮಿಳುನಾಡು ಪಾಲಿನ ನೀರು ಹರಿಸಲಾಗುತ್ತಿತ್ತು.

ಆದರೆ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ರೈತರ ಹೋರಾಟ, ಸರ್ವ ಪಕ್ಷಗಳ ಸಭೆಯ ನಂತರ ತಮಿಳುನಾಡಿಗೆ ಹರಿಯುತ್ತಿದ್ದ ನೀರು ತಗ್ಗಿದೆ. ಆ.23ರಂದು ನದಿಗೆ ಹರಿಯುತ್ತಿದ್ದ ನೀರು 11580 ಕ್ಯುಸೆಕ್ ಇತ್ತು, ಇದು ಆ.24ರಂದು 3,130ಕ್ಕೆ ಇಳಿದಿದೆ. ಈ ಕುರಿತು ಪ್ರತಿಕ್ರಿಯೆ ನೀಡಲು ನಿಗಮದ ಅಧಿಕಾರಿಗಳು ಸಂಪರ್ಕಕ್ಕೆ ಸಿಗಲಿಲ್ಲ.

ಗುರುವಾರ ಜಲಾಶಯದ ನೀರಿನ ಮಟ್ಟ 102.90 ಅಡಿ, ಒಳಹರಿವು 4516 ಕ್ಯುಸೆಕ್, ನಾಲೆ, ನದಿ ಸೇರಿದಂತೆ 5746 ಕ್ಯುಸೆಕ್ ಹೊರಹರಿವು ಇತ್ತು.

ಸಾನ್ವಿಗೆ 'ಕರ್ನಾಟಕ ಆಸ್ಕರಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಸಾನ್ವಿ

ಬೆಂಗಳೂರು: ವನ್ಯಜೀವಿ ಯುವ ಛಾಯಾಗ್ರಾಹಕಿ ಸಾನ್ವಿ ವಿದ್ಯಾಶಂಕರ್‌ಗೆ ಕರ್ನಾಟಕ ಆಸ್ಕರಿ ಪ್ರಶಸ್ತಿ 2023 ಲಭಿಸಿದೆ. ಕರ್ನಾಟಕದಲ್ಲಿ ಛಾಯಾಚಿತ್ರ ಪ್ರತಿಭೆ ಪ್ರೋತ್ಸಾಹಿಸಲು ಶಾರುಖ್ ಆಸ್ಕರಿ ಹಮೀದ್ ಅವರ ನೆನಪಿಗಾಗಿ ನೀಡುವ ಪ್ರಶಸ್ತಿಯನ್ನು ಇತ್ತೀಚೆಗೆ ನಗರದ ಚಿತ್ರಕಲಾ ಪರಿಷತ್‌ನಲ್ಲಿ ನಡೆದ ಯೂತ್ ಫೋಟೋಗ್ರಾಫಿಕ್ ಸೊಸೈಟಿ ಸಮಾರಂಭದಲ್ಲಿ ಸಾನ್ವಿ ಅವರಿಗೆ ನೀಡಿ ಗೌರವಿಸಲಾಯಿತು.

35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಛಾಯಾಗ್ರಾಹಕರಿಗೆ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಈ ಸಲ 17 ವರ್ಷ ವಯಸ್ಸಿನ ಸಾನ್ವಿ ಅವರಿಗೆ ಲಭಿಸಿದೆ. ಛಾಯಾಗ್ರಾಹಕರಾದ ಬಿ.ಕೆ. ಅಗರವಾಲ್, ಮುಖೇಶ್ ಶ್ರೀವಾಸ್ತವ ಮತ್ತು ಡಾ.ಪಂಕಜ್ ಶರ್ಮಾ ಆಸ್ಕರಿ ಅವಾರ್ಡ್ಸ್ 2023 ರ ತೀರ್ಪುಗಾರರಾಗಿದ್ದರು. ಈಗಾಗಲೇ ಮಸಾಯ್ ಮಾರಾ, ಕೀನ್ಯಾಕ್ಕೆ ಭೇಟಿ ನೀಡಿ ವನ್ಯಜೀವಿ ಛಾಯಾಗ್ರಹಣ ನಡೆಸಿರುವ ಪಿಯುಸಿ ವಿದ್ಯಾರ್ಥಿನಿ ಸಾನ್ವಿ ಅವರಿಗೆ ಹಲವಾರು ಪ್ರಶಸ್ತಿ, ಗೌರವಗಳು ಸಂದಿವೆ.

ಅಭಿನಂದನೆ

ನಗರದಲ್ಲಿ ಬುಧವಾರ ಅಕ್ಷಯ ಪಾತ್ರ ಫೌಂಡೇಷನ್ ಆಯೋಜಿಸಿದ್ದ 'ಪೋಷಣೆಯೊಂದಿಗೆ ಬದಲಾವಣೆ' ಕಾರ್ಯಕ್ರಮದಲ್ಲಿ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಅಭಿನಂದನೆ ಸಲ್ಲಿಸಿದರು. ನಟ ಪ್ರಕಾಶ್ ಬೆಳವಾಡಿ, ಫೌಂಡೇಷನ್ ಉಪಾಧ್ಯಕ್ಷ ಚಂಚಲಪತಿ ದಾಸ, ಸಿಇಒ ಶ್ರೀಧರ್ ವೆಂಕಟ್ ಇದ್ದರು –ಪ್ರಜಾವಾಣಿ ಚಿತ್ರ

ಬಹಳಷ್ಟು ಜಿಲ್ಲೆಗಳಲ್ಲಿ ಮಾರಾಟವಾಗದ ಶೆಡ್‌ಗಳು: ಶರಣಬಸಪ್ಪ ದರ್ಶನಾಪುರ

'ಬೇಡಿಕೆ ಇದ್ದರಷ್ಟೇ ಕೈಗಾರಿಕಾ ಶೆಡ್ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಮುಂದೆ ಬೇಡಿಕೆಗಳಿಗೆ ಅನುಗುಣವಾಗಿಯೇ ಸಣ್ಣ ಕೈಗಾರಿಕೆಗಳಿಗೆ ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸಿಕೊಡಲಾಗುವುದು ಎಂದು ಸಣ್ಣ ಕೈಗಾರಿಕೆಗಳ ಸಚಿವ ಶರಣಬಸಪ್ಪ ದರ್ಶನಾಪುರ ಅವರು ತಿಳಿಸಿದರು.

ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ ಬಿಟ್ಟರೆ ಉಳಿದ ಕಡೆಗಳಲ್ಲಿ ಕೈಗಾರಿಕಾ ಶೆಡ್‌ಗಳಿಗೆ ಬೇಡಿಕೆಯೇ ಇಲ್ಲ. ಹಲವು ಜಿಲ್ಲೆಗಳಲ್ಲಿ ಶೆಡ್‌ಗಳು ಖಾಲಿ ಉಳಿದಿವೆ. ಅಲ್ಲದೆ, ಶೆಡ್‌ಗಳನ್ನು ಅನ್ಯ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂದು ಅವರು ಗುರುವಾರ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರಿಗೆ ವಿವರಿಸಿದರು.

ಬಹಳಷ್ಟು ಜಿಲ್ಲೆಗಳಲ್ಲಿ ಶೆಡ್‌ಗಳನ್ನು ಬಾಡಿಗೆ ನೀಡಿ, ಅನ್ಯ ಉದ್ದೇಶಗಳ ಬಳಕೆಗೆ ಮಾಡಲಾಗುತ್ತಿದೆ. ಬಳ್ಳಾರಿ ಮತ್ತು ಚಿತ್ರದುರ್ಗಗಳಲ್ಲಿ ಈ ಹಿಂದೆ ನಿರ್ಮಿಸಿದ ಶೆಡ್‌ಗಳನ್ನು ಯಾರೂ ಖರೀದಿಸುವವರೇ ಇಲ್ಲ. ಖಾಲಿ ಬಿದ್ದಿದ್ದು, ವ್ಯರ್ಥವಾಗುತ್ತಿವೆ. ಸಾಕಷ್ಟು ಕಡೆಗಳಲ್ಲಿ ಶೆಡ್‌ಗಳ ನಿರ್ಮಾಣಕ್ಕೆಂದು ಸ್ವಾದೀನಪಡಿಸಿಕೊಂಡ ಭೂಮಿಯ ಒತ್ತುವರಿಯಾಗಿದೆ. ಈ ಹಿನ್ನೆಲೆಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಭೂಮಿ(ಲ್ಯಾಂಡ್) ಆಡಿಟ್ ಮಾಡಿಸಲಾಗುವುದು ಎಂದು ಹೇಳಿದರು.

ಶೆಡ್‌ಗಳ ನಿರ್ಮಾಣಕ್ಕೆ ರೂಪಿಸಿದ ನಿವೇಶನಗಳಲ್ಲಿ ಶೇ 54 ರಷ್ಟು ಮಾತ್ರ ಮಾರಾಟವಾಗಿದೆ. ಈ ರೀತಿ ಖರೀದಿಯಾದ ನಿವೇಶನಗಳಲ್ಲೂ ಶೇ 77 ರಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ಬಿಟ್ಟು ಉಳಿದ ಕಡೆಗಳಿಗೆ ಕೈಗಾರಿಕೆಗಳನ್ನು ಸೆಳೆಯಲು ವಿಶೇಷ ಪ್ರಯತ್ನ ನಡೆಸಬೇಕಾಗಿದೆ ಎಂದೂ ದರ್ಶನಾಪುರ ತಿಳಿಸಿದರು.

ಸಣ್ಣ ಕೈಗಾರಿಕಾ ವಲಯಕ್ಕೆ ಸರ್ಕಾರದಿಂದ ಪಾವತಿ ಆಗಬೇಕಾಗಿರುವ ಸಹಾಯಧನದ ಮೊತ್ತ ₹600 ಕೋಟಿಗಳಾಗಿದ್ದು, ಈ ಸಾಲಿನಲ್ಲಿ ₹100 ಕೋಟಿ ನೀಡಲು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಬಾಕಿ 2016 ರಿಂದ ಉಳಿದುಕೊಂಡು ಬಂದಿದೆ ಎಂದರು.

ಮೈಸೂರಿನಲ್ಲಿ ಯುನಿಟಿ ಮಾಲ್?

ಕೇಂದ್ರ ಸರ್ಕಾರದ ಧನ ಸಹಾಯದಿಂದ ನಿರ್ಮಾಣಗೊಳ್ಳಲಿರುವ ಯುನಿಟಿ ಮಾಲ್‌ಗೆ ಮೈಸೂರಿನಲ್ಲಿ ಎರಡು ಜಾಗಗಳನ್ನು ಗುರುತಿಸಲಾಗಿದೆ ಎಂದು ದರ್ಶನಾಪುರ ತಿಳಿಸಿದರು.

ಕೇಂದ್ರ ಸರ್ಕಾರ ಇದಕ್ಕಾಗಿ ₹193 ಕೋಟಿ ನೀಡಲಿದೆ. ಪ್ರವಾಸಿಗರು ಹೆಚ್ಚು ಬರುವ ನಗರದಲ್ಲಿ ಇದನ್ನು ನಿರ್ಮಿಸಬೇಕು. ಬೆಂಗಳೂರು ನಗರ ಪ್ರದೇಶದಲ್ಲಿ 8 ಎಕರೆ ಜಮೀನು ಲಭ್ಯವಿಲ್ಲದ ಕಾರಣ ಮೈಸೂರಿನಲ್ಲಿ ಸ್ಥಾಪಿಸುವ ಬಗ್ಗೆ ಚಿಂತನೆ ಇದೆ ಎಂದರು.

'ಯುನಿಟಿ ಮಾಲ್‌ನಲ್ಲಿ ಎಲ್ಲ ರಾಜ್ಯಗಳಿಗೂ ಒಂದೊಂದು ಮಳಿಗೆ ನೀಡಬೇಕು. ಅಲ್ಲಿ ಆ ರಾಜ್ಯಗಳ ಸಣ್ಣ ಉದ್ದಿಮೆಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಇರುತ್ತದೆ. ಹಲವು ರಾಜ್ಯಗಳಲ್ಲಿ ಯುನಿಟಿ ಮಾಲ್‌ಗಳ ಸ್ಥಾಪನೆ ಆಗಿದೆ. ನಮ್ಮಲ್ಲಿ 5–6 ತಿಂಗಳಲ್ಲಿ ಆರಂಭಿಸಲಾಗುವುದು' ಎಂದು ಅವರು ಹೇಳಿದರು.

ವಿಶ್ವೇಶ್ವರ ಭಟ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಶಿರಸಿ: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಮೋಟಮ್ಮ, ಮಮತಾ ಬ್ಯಾನರ್ಜಿ ಸೇರಿ ಮಹಿಳಾ ಸಚಿವರು ಹಾಗೂ ಕೆಲ ಲೇಖಕಿಯರ ಬಗ್ಗೆ ಅವಹೇಳನಕಾರಿಯಾಗಿ ಪತ್ರಕರ್ತ ವಿಶ್ವೇಶ್ವರ ಭಟ್ ಬರೆದಿದ್ದಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿ ಶಿರಸಿ ನಗರ ಪೊಲೀಸ್ ಠಾಣೆಯಲ್ಲಿ ಬುಧವಾರ ದೂರು ದಾಖಲಾಗಿದೆ.

ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಕಾನೂನು ವಿಭಾಗದ ಉಪಾಧ್ಯಕ್ಷ, ವಕೀಲ ಮಂಜುನಾಥ ನಾಯಕ ದೂರು ನೀಡಿದ್ದಾರೆ. 'ವಿಶ್ವೇಶ್ವರ ಭಟ್ ಅವರು ಆಗಸ್ಟ್ 20ರಂದು ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ ಮಹಿಳೆಯರ ಬಿಗಿ ಉಡುಪಿನ ಬಗ್ಗೆ ಬರೆದಿದ್ದ ಬರಹದಲ್ಲಿ ಅನವಶ್ಯಕವಾಗಿ ಇವರನ್ನೆಲ್ಲ ಉಲ್ಲೇಖಿಸಿ ಅವಮಾನಿಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪಿಎಸ್ಐ ರಾಜಕುಮಾರ ಉಕ್ಕಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚಕ್ರವರ್ತಿ ಸೂಲಿಬೆಲೆ ವಿರುದ್ಧ ದೂರು ದಾಖಲು: ಶಿವಮೊಗ್ಗ: 'ಚಂದ್ರಯಾನದ ಯಶಸ್ಸಿನ ಕುರಿತು ಫೇಸ್‌ಬುಕ್‌ನಲ್ಲಿ ನಾನು ಪೋಸ್ಟ್ ಮಾಡಿದ್ದ ಸಂದೇಶಕ್ಕೆ ಸಂಬಂಧಿಸಿ, ಭಾಷಣಕಾರ ಚಕ್ರವರ್ತಿ ಸೂಲಿಬೆಲೆ ಅವರು ನನ್ನ ತೇಜೋವಧೆ ಮಾಡಿ, ಅವಹೇಳನಕಾರಿ ಸಂದೇಶ ಹಾಕಿದ್ದಾರೆ' ಎಂದು ಆರೋಪಿಸಿ ಶಿವಮೊಗ್ಗದ ಸೌಗಂಧಿಕಾ ರಘುನಾಥ್ ಅವರು ಇಲ್ಲಿನ ವಿನೋಬ ನಗರ ಠಾಣೆಯಲ್ಲಿ ಗುರುವಾರ ದೂರು ದಾಖಲಿಸಿದ್ದಾರೆ.

ಚಕ್ರವರ್ತಿ ಸೂಲಿಬೆಲೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಸೌಗಂಧಿಕಾ ಕೋರಿದ್ದಾರೆ. ಸೌಗಂಧಿಕಾ ರಘುನಾಥ್ ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಉಪಾಧ್ಯಕ್ಷೆ.

ಮಸೂದೆಗೆ ಹಿಂದಿ ಹೆಸರು: ಆಕ್ಷೇಪ

ನವದೆಹಲಿ (ಪಿಟಿಐ): ಬ್ರಿಟಿಷರ ಆಳ್ವಿಕೆ ವೇಳೆ ದೇಶದಲ್ಲಿ ಜಾರಿಗೆ ತಂದಿದ್ದ ಅಪರಾಧ ಕಾನೂನುಗಳಿಗೆ ಬದಲಾಗಿ ಹೊಸ ಕಾನೂನುಗಳನ್ನು ಜಾರಿಗೆ ತರುವ ಸಂಬಂಧ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿರುವ ಮೂರು ಮಸೂದೆಗಳ ಬಗ್ಗೆ ಸಂಸದೀಯ ಸ್ಥಾಯಿ ಸಮಿತಿಯಿಂದ ಗುರುವಾರ ಪರಾಮರ್ಶೆ ಆರಂಭವಾಗಿದೆ.

ಇಂಡಿಯನ್ ಪೀನಲ್ ಕೋಡ್ (ಭಾರತೀಯ ದಂಡ ಸಂಹಿತೆ) ಬದಲಿಗೆ ಭಾರತೀಯ ನ್ಯಾಯ ಸಂಹಿತೆ ಮಸೂದೆ, ಕ್ರಿಮಿನಲ್ ಪ್ರೊಸೀಜರ್ ಆ್ಯಕ್ಟ್ (ಅಪರಾಧ ಪ್ರಕ್ರಿಯಾ ಸಂಹಿತೆ) ಬದಲಿಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮಸೂದೆ ಹಾಗೂ ಇಂಡಿಯನ್ ಎವಿಡೆನ್ಸ್ ಆ್ಯಕ್ಟ್ (ಭಾರತೀಯ ಸಾಕ್ಷ್ಯ ಕಾಯ್ದೆ) ಬದಲಿಗೆ ಭಾರತೀಯ ಸಾಕ್ಷ್ಯ ಮಸೂದೆಯನ್ನು ಕೇಂದ್ರ ಗೃಹ ಸಚಿವಾಲಯವು ಮಂಡಿಸಿದೆ.

ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಡಿಸಿದ್ದ ಈ ಮಸೂದೆಗಳನ್ನು ಸ್ಥಾಯಿ ಸಮಿತಿಗೆ ಒಪ್ಪಿಸಲಾಗಿತ್ತು. ಇವುಗಳಲ್ಲಿನ ಪ್ರಮುಖ ಅಂಶಗಳು ಮತ್ತು ಬದಲಾವಣೆ ಬಗ್ಗೆ ಗೃಹ ಸಚಿವಾಲಯದ ಕಾರ್ಯದರ್ಶಿ ಅಜಯ್ ಭಲ್ಲಾ ಸಮಿತಿಯ ಮುಂದೆ ವಿವರಿಸಿದರು.

ಸಭೆಯಲ್ಲಿ ಹಾಜರಿದ್ದ ಡಿಎಂಕೆ ಸಂಸದ ದಯಾನಿಧಿ ಮಾರನ್ ಅವರು, ಮಸೂದೆಗಳಿಗೆ ಹಿಂದಿ ಹೆಸರಿಟ್ಟಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಪ್ರಕರಣದ ವಿಚಾರಣೆಗಳು ನಡೆಯುತ್ತಿರುತ್ತವೆ. ಹಾಗಾಗಿ, ಸಮಿತಿಯು ಪ್ರತಿಯೊಂದು ರಾಜ್ಯದ ವಕೀಲರ ಸಂಘದ ಸದಸ್ಯರ ಜೊತೆ ಸಮಾಲೋಚಿಸಬೇಕು. ಕಾನೂನಾಸಕ್ತರು, ತಜ್ಞರು, ಸಂಸ್ಥೆಗಳೊಟ್ಟಿಗೆ ಚರ್ಚಿಸಬೇಕೆಂದು ಮಾರನ್ ಸಲಹೆ ನೀಡಿದರು. ಇದಕ್ಕೆ ಟಿಎಂಸಿ ಸದಸ್ಯ ಡೆರೆಕ್ ಒಬ್ರಿಯಾನ್ ಕೂಡ ಧ್ವನಿಗೂಡಿಸಿದರು ಎಂದು ತಿಳಿಸಿವೆ.

ಶುಕ್ರವಾರ ಮತ್ತು ಶನಿವಾರವೂ ಪರಾಮರ್ಶನಾ ಸಭೆ ಮುಂದುವರಿಯಲಿದೆ. ಮುಂದಿನ ತಿಂಗಳು ಕೂಡ ಎರಡು ದಿನಗಳ ಕಾಲ ಸದಸ್ಯರಿಗೆ ಗೃಹ ಸಚಿವಾಲಯವು ವಿವರಣೆ ನೀಡಲಿದೆ ಎಂದು ತಿಳಿಸಿವೆ.

ಗೃಹ ಸಚಿವಾಲಯದ ವಿಷಯಗಳಿಗೆ ಕುರಿತಂತೆ ರಚಿಸಿರುವ ಈ ಸ್ಥಾಯಿ ಸಮಿತಿಗೆ ಬಿಜೆಪಿ ಸದಸ್ಯ ಬ್ರಿಜ್ ಲಾಲ್ ಅಧ್ಯಕ್ಷರಾಗಿದ್ದಾರೆ. ಮೂರು ತಿಂಗಳೊಳಗೆ ಈ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಲಿದೆ. ಚಳಿಗಾಲದ ಅಧಿವೇಶನದಲ್ಲಿ ಈ ಮಸೂದೆಗಳನ್ನು ಮತ್ತೆ ಮಂಡಿಸಿ ಅನುಮೋದನೆ ಪಡೆಯಲು ಕೇಂದ್ರ ನಿರ್ಧರಿಸಿದೆ.

ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಗುರುವಾರ ನಡೆದ ಪಂಡಿತ ಬಸವರಾಜ ರಾಜಗುರು ಅವರ 103ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಂಬೈಯ ಸಂಗೀತ ಕಲಾವಿದೆ ಅಶ್ವಿನಿ ಭಿಡೆ ದೇಶಪಾಂಡೆ (ಮಧ್ಯೆ ಕುಳಿತವರು) ಅವರಿಗೆ 'ಪಂಡಿತ ಬಸವರಾಜ ರಾಜಗುರು' ರಾಷ್ಟ್ರೀಯ ಪ್ರಶಸ್ತಿ, ಧಾರವಾಡದ ತಬಲಾ ವಾದಕ ಉದಯ ಕುಲಕರ್ಣಿ (ಎಡತುದಿ ಕುಳಿತವರು) ಮತ್ತು ಹಾಗೂ ಬೆಂಗಳೂರಿನ ಗಾಯಕ ಇಮಾನ ದಾಸ್ (ಬಲತುದಿ ಕುಳಿತವರು) ಅವರಿಗೆ 'ಯುವ ಪ್ರಶಸ್ತಿ' ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ

ಎನ್‌ಇಪಿಗೆ ನೃಪತುಂಗ ವಿವಿ ಬಲ

ಬೆಂಗಳೂರು: ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ಎಸ್. ಬಳ್ಳಿ ಅವರು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಬೆಂಬಲಿಸಿ, ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದಾರೆ.

ಕಸ್ತೂರಿರಂಗನ್ ನೇತೃತ್ವದಲ್ಲಿ ರಚಿಸಲಾದ ಎನ್‌ಇಪಿ ರಾಜಕೀಯ ಹಿತಾಸಕ್ತಿಯಿಂದ ಹೊರತಾಗಿದೆ. ಕರ್ನಾಟಕದಲ್ಲಿ ಜಾರಿಗೊಳಿಸಲಾದ ಹೊಸ ನೀತಿ ತ್ರಿಭಾಷಾ ಸೂತ್ರ ಒಳಗೊಂಡಿದೆ. ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯ ಜತೆಗೆ ಇತರೆ ಭಾಷೆಗಳ ಆಯ್ಕೆಯ ಸ್ವಾತಂತ್ರ್ಯ ನೀಡಲಾಗಿದೆ. ದೇಶದ ಇತರೆ ರಾಜ್ಯಗಳು ಎನ್‌ಇಪಿ ಅನುಸರಿಸುವಾಗ ರಾಜ್ಯದಲ್ಲಿ ರದ್ದು ಮಾಡಿದರೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಪ್ರತಿಕೂಲವಾಗುತ್ತದೆ. ಕರ್ನಾಟಕದ ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಇತರ ರಾಜ್ಯಗಳಿಗೆ ವಲಸೆ ಹೋಗುವ ಸಾಧ್ಯತೆ ಇದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಉಪನ್ಯಾಸಕರಿಗೆ ಲಾಂಗ್ ತೋರಿಸಿ ಬೆದರಿಕೆ!

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಬಿ.ಜಿ. ನಗರ ಬಿಜಿಎಸ್ ಡಿಪ್ಲೊಮಾ ಕಾಲೇಜಿನಲ್ಲಿ 17 ವರ್ಷದ ವಿದ್ಯಾರ್ಥಿ ಉಪನ್ಯಾಸಕರಿಗೆ ಲಾಂಗ್ ತೋರಿಸಿ, ಬೆದರಿಕೆ ಹಾಕಿರುವ ಬಗ್ಗೆ ಬೆಳ್ಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತರಗತಿಗೆ ನಿಯಮಿತವಾಗಿ ಹಾಜರಾಗುತ್ತಿಲ್ಲವೆಂದು ಪೋಷಕರಿಗೆ ಮಾಹಿತಿ ನೀಡಿದ್ದಕ್ಕೆ ಕೋಪಗೊಂಡು ಆತ ಈ ರೀತಿ ವರ್ತಿಸಿದ್ದಾನೆ. ಕುಣಿಗಲ್ ತಾಲ್ಲೂಕಿನ ಎಡೆಯೂರು ಹೋಬಳಿಯ ಗ್ರಾಮ ವೊಂದರಿಂದ ಕಾಲೇಜಿಗೆ ಬರುತ್ತಿದ್ದ ಆತ ಉಪನ್ಯಾಸಕ ಚಂದನ್ ಅವರಿಗೆ ಲಾಂಗ್ ತೋರಿಸಿದ್ದಾನೆ.

'ತಪ್ಪಿನ ಅರಿವಾಗಿ ಆತ ಪೋಷಕರು ಹಾಗೂ ಉಪನ್ಯಾಸಕರ ಸಮ್ಮುಖದಲ್ಲಿ ಕ್ಷಮೆ ಯಾಚಿಸಿದ್ದಾನೆ' ಎಂದು ತಿಳಿದು ಬಂದಿದೆ.

63 ಅಡಿ ಎತ್ತರದ ರಾಮಾಂಜನೇಯ ಪ್ರತಿಮೆಗೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರ ಶ್ರೀರಾಮ ಮಂದಿರ ದೇವಸ್ಥಾನ ಅವರಣದಲ್ಲಿ 63 ಅಡಿ ಎತ್ತರದ ಶ್ರೀ ರಾಮಾಂಜನೇಯ ಬೃಹತ್ ಪ್ರತಿಮೆಗೆ ಬುಧವಾರ ಶಂಕುಸ್ಥಾಪನೆ ನೆರವೇರಿಸಲಾಯಿತು.

ರಾಜ್ಯದಲ್ಲೇ ಅತಿ ಎತ್ತರದ ರಾಮಾಂಜನೇಯ ಪ್ರತಿಮೆ ಇದು ಎನ್ನಲಾಗಿದೆ. ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಶಂಕುಸ್ಥಾಪನೆ ನೇರವೇರಿಸಿದರು. ಶ್ರೀರಾಮ ಸೇವಾ ಮಂಡಳಿ ಅಧ್ಯಕ್ಷ ಕೆ.ಎಸ್. ಶ್ರೀಧರ್ ಇದ್ದರು. ರಾಜಾಜಿನಗರದ ಶ್ರೀ ರಾಮ ಸೇವಾ ಮಂಡಳಿ ವತಿಯಿಂದ ಪ್ರತಿಮೆ ನಿರ್ಮಿಸಲಾಗುತ್ತಿದೆ. ಆಂಜನೇಯ ಕುಳಿತು ಶ್ರೀರಾಮನಿಗೆ ನಮಸ್ಕಾರ ಮಾಡುವ ಭಂಗಿಯ ಪ್ರತಿಮೆ ಇದಾಗಿದೆ. 30 ಟನ್ ಕಬ್ಬಿಣ ಬಳಸಲು ಉದ್ದೇಶಿಸಲಾಗಿದ್ದು, 6 ತಿಂಗಳಲ್ಲಿ ಪ್ರತಿಮೆ ನಿರ್ಮಾಣವಾಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾ ಸ್ವಾಮೀಜಿ ಮಾತನಾಡಿ, 'ಭಗವಾನ್ ರಾಮಚಂದ್ರ ಭಾರತದ ಅಸ್ಮಿತೆ. ಲಕ್ಷಾಂತರ ವರ್ಷಗಳಿಂದ ಎಲ್ಲರ ಹೃದಯದಲ್ಲಿ ರಾಮನ ಆದರ್ಶವಿದೆ' ಎಂದರು.

ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, 'ತತ್ವ, ನೀತಿಯಿಂದ ಮನುಷ್ಯ ಬದುಕಬೇಕು ಎಂದರೆ ಶ್ರೀ ರಾಮನ ಆದರ್ಶಗುಣಗಳು ಅಳವಡಿಸಿಕೊಳ್ಳಬೇಕು' ಎಂದು ಹೇಳಿದರು.

63 ಅಡಿ ಎತ್ತರದ ಶ್ರೀರಾಮಾಂಜನೇಯ ಪ್ರತಿಮೆ ನಿರ್ಮಾಣಕ್ಕೆ ರಾಜಾಜಿನಗರ ಶ್ರೀರಾಮಮಂದಿರ ದೇವಸ್ಥಾನ ಅವರಣದಲ್ಲಿ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಶಂಕುಸ್ಥಾಪನೆ ನೇರವೇರಿಸಿದರು. ಶ್ರೀರಾಮ ಸೇವಾ ಮಂಡಳಿ ಅಧ್ಯಕ್ಷ ಕೆ.ಎಸ್. ಶ್ರೀಧರ್ ಇದ್ದರು.

ಮಾಗನೂರು ಬಸಪ್ಪ ಪ್ರಶಸ್ತಿಗೆ ಬಿ.ಟಿ.ಲಲಿತಾ ನಾಯಕ್ ಆಯ್ಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಇಲ್ಲಿನ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದಿಂದ ನೀಡಲಾಗುವ 2022ನೇ ಸಾಲಿನ ರಾಜ್ಯಮಟ್ಟದ 'ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ' ಪ್ರಶಸ್ತಿಗೆ ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಆಯ್ಕೆಯಾಗಿದ್ದಾರೆ.

'ವಚನ ಸಾಹಿತ್ಯ ಹಾಗೂ ಸಂಶೋಧನೆ, ಸಮಾಜ ಸೇವೆ, ಶಿಕ್ಷಣ ಕ್ಷೇತ್ರದ ಸಾಧಕರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಪ್ರಶಸ್ತಿಯು ₹ 50,000 ನಗದು ಹಾಗೂ ಫಲಕ ಒಳಗೊಂಡಿದೆ. ಲಲಿತಾ ನಾಯ್ಕ ಅವರ ಸಮಾಜಸೇವೆ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ಆಗಸ್ಟ್ 26ರಂದು ನಡೆಯುವ ಕಾರ್ಯಕ್ರಮದಲ್ಲಿ ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಪ್ರಶಸ್ತಿ ಪ್ರದಾನ ಮಾಡುವರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಕವಿ ಸಿದ್ಧಲಿಂಗಯ್ಯ ಸ್ಮರಣೆ': ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಚ್.ಸಿ. ಮಹದೇವಪ್ಪ, ಅತಿಥಿಗಳು: ಸತೀಶ್ ಜಾರಕಿಹೊಳಿ, ರವೀಂದ್ರ ಭಟ್ಟ, ಕೆ. ಮರುಳಸಿದ್ಧಪ್ಪ, ಉಪಸ್ಥಿತಿ: ಮಾವಳ್ಳಿ ಶಂಕರ್, ಡಿ.ಜಿ. ಸಾಗರ್, ಜಾಫೆಟ್, ನಿರಂಜನಾರಾಧ್ಯ ಪಿ.ವಿ., ಇಂದಿರಾ ಕೃಷ್ಣಪ್ಪ, ಡಿ. ಶಿವಶಂಕರ್, ಮಾನಸ ಸಿದ್ಧಲಿಂಗಯ್ಯ, ಆಯೋಜನೆ: ಕರ್ನಾಟಕ ಆದಿಜಾಂಬವರ ಸಾಂಸ್ಕೃತಿಕ ಸಮಿತಿ, ಸ್ಥಳ: ಗಾಂಧಿಭವನ, ಶಿವಾನಂದ ಸರ್ಕಲ್, ಬೆಳಿಗ್ಗೆ 10.30

ದಶಕದ ಸಂಭ್ರಮ 'ನಾಟಕ, ರಂಗಗೀತೆ, ಸಂವಾದ, ಪ್ರಶಸ್ತಿ ಪ್ರದಾನ': ಉದ್ಘಾಟನೆ: ಗುಂಡಣ್ಣ ಸಿ.ಕೆ., ಅತಿಥಿಗಳು: ವಿಶ್ವನಾಥ್ ಪಿ. ಹಿರೇಮಠ, ಜೋಗಿ, ಅಜಯ್ ಪ್ರಕಾಶ್ ಬಿ.ವಿ., 10 ರಂಗ ತಂಡಗಳಿಂದ ರಂಗಗೀತೆಗಳು: ಸಂಯೋಜನೆ: ಅಕ್ಷಯ್ ಭೋಂಸ್ಲೆ, 'ಗಾಯಗಳು' ನಾಟಕ ಪ್ರದರ್ಶನ: ಪ್ರಸ್ತುತಿ: ನಿರ್ದಿಗಂತ, ನಿರ್ದೇಶನ: ಶ್ರೀಪಾದ ಭಟ್, ಆಯೋಜನೆ: ಪ್ರವತ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 5.30ರಿಂದ

ವಚನ ಶ್ರಾವಣ–2023: ವಚನ ಗಾಯನ: ಸವಿತಾ ಶಿವಶಂಕರ್, ವಚನ ಚಿಂತನ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಚಂದ್ರಮೌಳಿ ಲಿಂಗಾಯತ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ನೀಲಮ್ಮ ಮತ್ತು ವೀರಣ್ಣ ಅವ ಮನೆಯ ಅಂಗಳ, ಹೊಸಹಳ್ಳಿ, ವಿಜಯನಗರ, ಸಂಜೆ 6

'ನೂತನ ಪ್ರಸಂಗ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಪೇಜಾವರ ಮಠ ವಿದ್ಯಾಪೀಠ, ಯಲಹಂಕ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮಾರ್ಕ್ ಮೆಡೋಸ್ ಕೋರ್ಟ್‌ಗೆ ಶರಣು

ಅಟ್ಲಾಂಟಾ (ಎಪಿ/ಪಿಟಿಐ): 2020ರ ಅಧ್ಯಕ್ಷೀಯ ಚುನಾವಣಾ ಫಲಿತಾಂಶವನ್ನು ಬುಡಮೇಲು ಮಾಡಲು ಯತ್ನಿಸಿದ್ದರು ಎಂಬ ಆರೋಪ ಪ್ರಕರಣದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವಧಿಯಲ್ಲಿ ಶ್ವೇತಭವನದ ಮುಖ್ಯ ಆಡಳಿತಾಧಿಕಾರಿಯಾಗಿದ್ದ ಮಾರ್ಕ್ ಮೆಡೋಸ್ ಅಟ್ಲಾಂಟಾದಲ್ಲಿ ಕೋರ್ಟ್‌ಗೆ ಗುರುವಾರ ಶರಣಾದರು ಎಂದು ವರದಿಗಳು ಹೇಳಿವೆ.

ಇದೇ ಪ್ರಕರಣದಲ್ಲಿ ಡೊನಾಲ್ಡ್ ಟ್ರಂಪ್ ಕೂಡ ಜಾರ್ಜಿಯಾದ ಕಾರಾಗೃಹ ಅಧಿಕಾರಿಗಳ ಮುಂದೆ ಶರಣಾಗುವ ಸಾಧ್ಯತೆಯಿದೆ ಎಂದು ವರದಿಗಳು ಹೇಳಿವೆ.

ಕಾನೂನು ತೊಡಕುಗಳ ನಡುವೆಯೂ 2024ರ ಅಧ್ಯಕ್ಷೀಯ ಚುನಾವಣೆಗಾಗಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದಾರೆ. ಟ್ರಂಪ್ ಶರಣಾದರೆ, ಅಮೆರಿಕ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಮಾಜಿ ಅಧ್ಯಕ್ಷರೊಬ್ಬರ ಬಂಧನವಾದಂತಾಗಲಿದೆ.

ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಮನವಿ ಪತ್ರ ಸಲ್ಲಿಕೆ

ಮಲ್ಲಿಕಾರ್ಜುನ್ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಬಂಧಿಸಬೇಕು' ಎಂದು ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ಗುರುವಾರ ಅವರ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ಮಲ್ಲಿಕಾರ್ಜುನ್ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಅವರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಬೇಕು. ಪರಿಶಿಷ್ಟ ಜಾತಿ, ಪಂಗಡಗಳ ದೌರ್ಜನ್ಯ ಕಾಯ್ದೆ ಹಾಗೂ ಸಿಆರ್‌ಪಿಸಿ ನಿಯಮಗಳನ್ನು ಉಲ್ಲಂಘಿಸಿದ ವಿಧಾನಸೌಧ ಪೊಲೀಸ್ ಠಾಣೆಯ ಎಸಿಪಿ ಮತ್ತು ಡಿಸಿಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಆಗ್ರಹಿಸಿದರು.

ನಟ ಉಪೇಂದ್ರ ಮತ್ತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟ ಸದಸ್ಯರು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸಚಿವರು, ಶಾಸಕರು ಮತ್ತು ಅಧಿಕಾರಿಗಳು ಪದ ಬಳಕೆ ಮಾಡುವ ವೇಳೆ ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ಎಚ್ಚರ ವಹಿಸುವಂತೆ ಸರ್ಕಾರ ಸುತ್ತೋಲೆ ಹೊರಡಿಸಬೇಕು. ಜಾತಿ ವ್ಯವಸ್ಥೆ ಹಿನ್ನೆಲೆ ಇರುವ ಗಾದೆ ಮಾತುಗಳು, ನಾಣ್ನುಡಿಗಳಲ್ಲಿರುವ ಜಾತಿ ಆಧಾರಿತ ಪೂರ್ವಗ್ರಹಪೀಡಿತ ಪದಗಳನ್ನು ಸಾರ್ವಜನಿಕವಾಗಿ ಬಳಸದಂತೆ ನಿಷೇಧಿಸಬೇಕು ಎಂದು ಸಮತಾ ಸೈನಿಕ ದಳದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಒತ್ತಾಯಿಸಿದರು.

'ನಟ ಉಪೇಂದ್ರ ಮತ್ತು ಸಚಿವರು ಜಾತಿ ವ್ಯವಸ್ಥೆಯನ್ನು ಪೋಷಿಸುವ ಮೇಲು–ಕೀಳು ಎಂಬ ಮನಸ್ಥಿತಿ ಹೊಂದಿದ್ದಾರೆ. ಇದರಿಂದ, ದಲಿತ ಸಮಾಜಕ್ಕೆ ನೋವಾಗಿದೆ. ಜತೆಗೆ ಸಂವಿಧಾನದ ಆಶಯಗಳಿಗೆ ಧಕ್ಕೆ ತಂದಿದ್ದಾರೆ. ಸಮಾಜದಲ್ಲಿ ಈ ರೀತಿಯ ಹೇಳಿಕೆಗಳು ಮತ್ತೆ ಮರುಕಳಿಸಬಾರದು ಎಂಬ ಉದ್ದೇಶದಿಂದ ಕೂಡಲೇ ಅವರಿಬ್ಬರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.

ಸ್ಥಳಕ್ಕೆ ಭೇಟಿ ನೀಡಿದ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ರಾಕೇಶ್ ಕುಮಾರ್ ಅವರಿಗೆ ಪ್ರತಿಭಟನಾಕಾರರು ಮನವಿ ಪತ್ರ ಸಲ್ಲಿಸಿದರು.

ಚಿತ್ರದುರ್ಗದ ಛಲವಾದಿ ಗುರುಪೀಠದ ಬಸವ ನಾಗಿದೇವ ಸ್ವಾಮೀಜಿ, ಚಿ.ನಾ. ರಾಮು, ಯಶೋಧಾ ಪಿ., ಇದ್ದರು.

ದುರ್ಗದಾಸ, ನಾಗರಾಜ

ಲಂಚ: ಇಬ್ಬರು ನೌಕರರು ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಧಾರವಾಡ: ಬಿಲ್ ಮಾಡಿಕೊಡಲು ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಪದವಿಪೂರ್ವ ಶಿಕ್ಷಣ ಇಲಾಖೆ (ಡಿಡಿಪಿಯು) ಉಪನಿರ್ದೇಶಕರ ಕಚೇರಿಯ ಸೆಕ್ಷನ್ ಆಫೀಸರ್ ದುರ್ಗದಾಸ ಮತ್ತು ಹಿರಿಯ ಸಹಾಯಕ ನಾಗರಾಜ ಎಂಬವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ನಿವೃತ್ತ ಪ್ರಭಾರ ಪ್ರಾಚಾರ್ಯ ಸುಭಾಸ ಕೃಷ್ಣಪ್ಪ ಚೌರಡ್ಡಿ ಅವರ ನಿವೃತ್ತಿ ಉಪದಾನ ಬಿಲ್ ಮಾಡಿಕೊಡಲು ₹15 ಸಾವಿರ ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದಾರೆ.

69 ಟಿಎಂಸಿ ಅಡಿ ಹೆಚ್ಚುವರಿ ಬಳಕೆ: ಸುಪ್ರೀಂ ಕೋರ್ಟ್‌ಗೆ ಕರ್ನಾಟಕ ಸರ್ಕಾರದಿಂದ ಪ್ರಮಾಣಪತ್ರ

ತಮಿಳುನಾಡಿನಿಂದ ನೀರು ದುರ್ಬಳಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ಜಲವಿವಾದ ನ್ಯಾಯಮಂಡಳಿಯ ಅಂತಿಮ ಆದೇಶದ ಷರತ್ತು 10 ಅನ್ನು ಉಲ್ಲಂಘಿಸಿ ತಮಿಳುನಾಡು ಸರ್ಕಾರವು 69.77 ಟಿಎಂಸಿ ಅಡಿ ನೀರನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ತಮಿಳುನಾಡಿಗೆ ಪ್ರತಿನಿತ್ಯ 24 ಸಾವಿರ ಕ್ಯುಸೆಕ್ ಕಾವೇರಿ ನೀರನ್ನು ಬಿಡಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಈ ಪ್ರಕರಣದ ವಿಚಾರಣೆಗೆ ತ್ರಿಸದಸ್ಯ ಪೀಠ ರಚಿಸಲಾಗಿದೆ. ಪ್ರಕರಣದ ವಿಚಾರಣೆ ಶುಕ್ರವಾರ ನಡೆಯಲಿದೆ. ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಸುಪ್ರೀಂ ಕೋರ್ಟ್‌ಗೆ ಬುಧವಾರ ಪ್ರಮಾಣಪತ್ರ ಸಲ್ಲಿಸಿದ್ದು, ತಮಿಳುನಾಡಿನ ಅರ್ಜಿಯನ್ನು ವಜಾ ಮಾಡುವಂತೆ ಮನವಿ ಮಾಡಿದ್ದಾರೆ. ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ತುರ್ತು ಸನ್ನಿವೇಶವೂ ನಿರ್ಮಾಣವಾಗಿರಲಿಲ್ಲ ಎಂದೂ ಗಮನ ಸೆಳೆದಿದ್ದಾರೆ.

ಮಳೆಯ ಪ್ರಮಾಣದಲ್ಲಿ ಶೇ 25ರಷ್ಟು ಇಳಿಕೆಯಾಗಿದ್ದರೂ ಈ ವರ್ಷದ ನೀರಿನ ಪರಿಸ್ಥಿತಿ ಸಹಜವಾಗಿದೆ ಎಂಬ ಊಹೆಯ ಮೇಲೆ ತಮಿಳುನಾಡಿನ ವಾದ ಆಧರಿಸಿದೆ ಎಂದು ಕರ್ನಾಟಕ ಹೇಳಿದೆ. ಈ ವರ್ಷ ಸಂಕಷ್ಟದ ವರ್ಷವಾಗಿರುವುದರಿಂದ ಕಾವೇರಿ ನೀರು ಹರಿಸುವಂತೆ ತಮಿಳುನಾಡು ಸರ್ಕಾರ ಒತ್ತಡ ಹೇರುವುದು ಸರಿಯಲ್ಲ ಎಂದೂ ತಿಳಿಸಿದೆ.

ಈ ಜಲ ವರ್ಷದಲ್ಲಿ ನೈರುತ್ಯ ಮುಂಗಾರು ಇಲ್ಲಿಯವರೆಗೆ ಬಹುತೇಕ ವಿಫಲವಾಗಿದ್ದು, ಇದರಿಂದಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಸಂಕಷ್ಟದ ಸ್ಥಿತಿ ಉಂಟಾಗಿದೆ. ಹಾಗಾಗಿ, ಸಾಮಾನ್ಯ ವರ್ಷಕ್ಕೆ ನಿಗದಿಪಡಿಸಿದ ಮಾನದಂಡದ ಪ್ರಕಾರ ನೀರು ಹರಿಸುವುದು ಕಷ್ಟಸಾಧ್ಯ ಎಂದು ಅಸಹಾಯಕತೆ ವ್ಯಕ್ತಪಡಿಸಿದೆ.

ಸೆಪ್ಟೆಂಬರ್ ತಿಂಗಳಲ್ಲಿ 36.76 ಟಿಎಂಸಿ ಅಡಿ ನೀರು ಬಿಡಬೇಕು ಎಂಬ ಬೇಡಿಕೆಗೆ ಕಾನೂನಿನ ಆಧಾರ ಇಲ್ಲ. ಏಕೆಂದರೆ, ಈ ಪ್ರಮಾಣವನ್ನು ಸಾಮಾನ್ಯ ನೀರಿನ ವರ್ಷದಲ್ಲಿ ನಿಗದಿಪಡಿಸಲಾಗಿದೆ. ಇದು ಸಂಕಷ್ಟದ ವರ್ಷ. ಹಾಗಾಗಿ, ಈ ವರ್ಷಕ್ಕೆ ಇದು ಅನ್ವಯವಾಗುವುದಿಲ್ಲ ಎಂದೂ ಹೇಳಿದೆ.

ಪ್ರಮಾಣಪತ್ರದಲ್ಲಿ ಏನಿದೆ: ಈ ನೀರಿನ ವರ್ಷದ ಆರಂಭದಲ್ಲಿ ತಮಿಳುನಾಡು 69.77 ಟಿಎಂಸಿ ಅಡಿ (ಜೂನ್ 1ಕ್ಕೆ) ಸಂಗ್ರಹ ಹೊಂದಿತ್ತು. ಕರ್ನಾಟಕವು ಆಗಸ್ಟ್ 22ರ ವರೆಗೆ 26.7 ಟಿಎಂಸಿ ಅಡಿ ನೀರನ್ನು ತಮಿಳುನಾಡಿಗೆ ಹರಿಸಿದೆ. ಆ ಪ್ರಕಾರ, ತಮಿಳುನಾಡಿನ ಜಲಾಶಯಗಳಲ್ಲಿ 96.5 ಟಿಎಂಸಿ ಅಡಿ ನೀರು ಇರಬೇಕಿತ್ತು. ಆದರೆ, ತಮಿಳುನಾಡಿನ ಜಲಾಶಯಗಳಲ್ಲಿ ಪ್ರಸ್ತುತ 21.6 ಟಿಎಂಸಿ ಅಡಿ ಮಾತ್ರ ನೀರಿದೆ. ಕುರುವೈ ಭತ್ತದ ಬೆಳೆಗೆ ಬೇಕಿರುವುದು 32.27 ಟಿಎಂಸಿ ಅಡಿ ನೀರು. ಇದಕ್ಕಾಗಿ ಇಲ್ಲಿಯ ವರೆಗೆ 22.44 ಟಿಎಂಸಿ ಅಡಿ ನೀರು ಬಳಸಬೇಕಿತ್ತು. ಉಳಿದ 9.83 ಟಿಎಂಸಿ ಅಡಿ ನೀರನ್ನು ಸೆಪ್ಟೆಂಬರ್‌ನಲ್ಲಿ ಬಳಸಬೇಕಿತ್ತು. ಆದರೆ, ಬೆಳೆ ಬೆಳೆಯಲು ಹೆಚ್ಚುವರಿಯಾಗಿ 69.77 ಟಿಎಂಸಿ ಅಡಿ ನೀರನ್ನು ಬಳಸಿದೆ. ತಮಿಳುನಾಡಿನಲ್ಲಿ 1.85 ಲಕ್ಷ ಎಕರೆಯಲ್ಲಿ ಕುರುವೈ ಬೆಳೆಗೆ ಒಟ್ಟು 32.27 ಟಿಎಂಸಿ ಅಡಿ ನೀರು ಅಗತ್ಯ ಎಂದು ಕಾವೇರಿ ಜಲವಿವಾದ ನ್ಯಾಯಮಂಡಳಿಯು ಹಂಚಿಕೆ ಮಾಡಿತ್ತು. ಆದರೆ, ತಮಿಳುನಾಡು ಸರ್ಕಾರ ಕುರುವೈ ಬೆಳೆಗೆ ಹಂಚಿಕೆ ಮಾಡಿದ್ದಕ್ಕಿಂತ 2 ಪಟ್ಟು ಹೆಚ್ಚು ನೀರು ಬಳಕೆ ಮಾಡಿದೆ ಎಂದು ಕರ್ನಾಟಕ ದೂರಿದೆ.

2023–24ನೇ ವರ್ಷದಲ್ಲಿ ನಾಲ್ಕು ಜಲಾಶಯಗಳಿಂದ ರಾಜ್ಯಕ್ಕೆ 200 ಟಿಎಂಸಿ ಅಡಿ ನೀರು ಅಗತ್ಯ ಇದೆ. ರಾಜ್ಯ ಸರ್ಕಾರವು ಈ ತನಕ 7.2 ಟಿಎಂಸಿ ಅಡಿ ನೀರನ್ನಷ್ಟೇ ಬಳಸಿಕೊಂಡಿದೆ. ರಾಜ್ಯದ ಕೃಷಿ ಭೂಮಿಗಳಿಗೆ ನೀರು ಹರಿಸಬೇಕಿದೆ. ಬೆಂಗಳೂರು ಮಹಾನಗರ ಹಾಗೂ ಹಲವು ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸಬೇಕಿದೆ. ಮುಂಗಾರು ಕೊರತೆಯಿಂದಾಗಿ ಜಲಾಶಯಗಳು ತುಂಬಿಲ್ಲ. ಹೀಗಾಗಿ, ರಾಜ್ಯದ ಸ್ಥಿತಿ ಸಂಕಷ್ಟದಿಂದ ಕೂಡಿದೆ ಎಂದೂ ರಾಜ್ಯ ಹೇಳಿಕೊಂಡಿದೆ.

ದುರ್ಬಲ ಮುಂಗಾರಿನ ಕಾರಣ ಕರ್ನಾಟಕದಲ್ಲಿ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳಿಗೆ ನೀರಿನ ಒಳಹರಿವು ಶೇ 42.54ರಷ್ಟು ತಗ್ಗಿದೆ. 2012–13 ಹಾಗೂ 2016–17ರ ಸಂಕಷ್ಟದ ನೀರಿನ ವರ್ಷಗಳಲ್ಲಿ, ಮೆಟ್ಟೂರು ಜಲಾಶಯದಿಂದ ನೀರನ್ನು ಬಿಡುಗಡೆ ಮಾಡುವ ಪ್ರಮಾಣಿತ ಅಭ್ಯಾಸವು 1 ಟಿಎಂಸಿ ಅಡಿ ಆಗಿತ್ತು. 2023–24 ಸಹ ಸಂಕಷ್ಟದ ವರ್ಷ. ಪ್ರಸ್ತುತ ಮೆಟ್ಟೂರು ಜಲಾಶಯದಲ್ಲಿ 21.65 ಟಿಎಂಸಿ ಅಡಿ ನೀರಿದೆ. ಕರ್ನಾಟಕ ಪ್ರತಿನಿತ್ಯ 10 ಸಾವಿರ ಕ್ಯುಸೆಕ್ ನೀರು ಬಿಡುತ್ತಿದೆ. ಜತೆಗೆ, ತಮಿಳುನಾಡಿನಲ್ಲಿ ಸಾಕಷ್ಟು ನೀರಿದೆ. ಹಾಗಾಗಿ, ತುರ್ತು ಸನ್ನಿವೇಶ ನಿರ್ಮಾಣವಾಗಿಲ್ಲ ಎಂದೂ ಕರ್ನಾಟಕ ಸರ್ಕಾರ ಸ್ಪಷ್ಟಪಡಿಸಿದೆ.

ತಮಿಳುನಾಡಿಗೆ ಆಗಸ್ಟ್ 12ರಿಂದ ಪ್ರತಿನಿತ್ಯ 10 ಸಾವಿರ ಕ್ಯುಸೆಕ್ ನೀರನ್ನು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನಿರ್ದೇಶನ ನೀಡಿತ್ತು. ಜಲಾಶಯಗಳಿಂದ ಹರಿಸಿದ ನೀರು ಬಿಳಿಗುಂಡ್ಲು ಮಾಪನ ಕೇಂದ್ರಕ್ಕೆ ತಲುಪಲು 2–3 ದಿನಗಳು ಬೇಕಾಗುತ್ತವೆ. ಮಾಪನ ಕೇಂದ್ರದ ಲೆಕ್ಕಾಚಾರದ ಪ್ರಕಾರ, ಆಗಸ್ಟ್ 15ರಿಂದ 22ರ ಅವಧಿಯಲ್ಲಿ 1.01 ಲಕ್ಷ ಕ್ಯುಸೆಕ್ ನೀರು ಬಿಡಲಾಗಿದೆ. ತಮಿಳುನಾಡಿಗೆ ನೀರು ಬಿಡುವಂತೆ ಪ್ರಾಧಿಕಾರವು ಈ ವರ್ಷ ಈ ಹಿಂದೆಯೂ ನಿರ್ದೇಶನಗಳನ್ನು ನೀಡಿತ್ತು. ಆ ನಿರ್ದೇಶನಗಳನ್ನು ಕರ್ನಾಟಕ ಪಾಲನೆ ಮಾಡಿದೆ ಎಂದೂ ಅರ್ಜಿಯಲ್ಲಿ ತಿಳಿಸಿದೆ.

ಮುಖ್ಯಾಂಶಗಳು

- ಕಾವೇರಿ ಜಲವಿವಾದ: ಇಂದು ವಿಚಾರಣೆ
- ಊಹೆಯ ಆಧಾರದಲ್ಲಿ ತಮಿಳುನಾಡು ಸರ್ಕಾರ ಅರ್ಜಿ: ಕರ್ನಾಟಕ ಆರೋಪ
- ಕುರುವೈ ಬೆಳೆಗೆ ದುಪ್ಪಟ್ಟು ನೀರು ಹರಿಸಿದ ತಮಿಳುನಾಡು
- ಕಾವೇರಿ ಪ್ರಾಧಿಕಾರದ ಆದೇಶಗಳ ಪಾಲನೆ: ಕರ್ನಾಟಕ ಸಮರ್ಥನೆ

‘ಮೇಕೆದಾಟು ವಿರೋಧದಿಂದ ಬಿಕ್ಕಟ್ಟು’

ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ ಯೋಜನೆಗೆ ಅನಗತ್ಯವಾಗಿ ವಿರೋಧ ವ್ಯಕ್ತಪಡಿಸಿದ್ದರಿಂದ ತಮಿಳುನಾಡು ಪ್ರಸ್ತುತ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ಕರ್ನಾಟಕದ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಯೋಜನೆ ವಿರೋಧಿಸಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ವಿಚಾರಣೆಯ ಹಂತದಲ್ಲಿದೆ. ಒಂದು ವೇಳೆ ಜಲಾಶಯ ನಿರ್ಮಿಸಿದ್ದರೆ, ತಮಿಳುನಾಡಿನ ಸಂಕಷ್ಟವನ್ನು ತಗ್ಗಿಸಲು ಜೂನ್ ಹಾಗೂ ಜುಲೈ ತಿಂಗಳಲ್ಲಿ 13 ಟಿಎಂಸಿ ಅಡಿಯಷ್ಟು ಹೆಚ್ಚುವರಿ ನೀರನ್ನು ಬಳಸಬಹುದಿತ್ತು ಎಂದು ತಿಳಿಸಲಾಗಿದೆ.

ಸುದ್ದಿ 2 ನಿಮಿಷ

ಸರ್ವೆ ಮ್ಯಾಪ್ ಡಿಜಿಟಲೀಕರಣ: ಸಚಿವ ಕೃಷ್ಣ ಬೈರೇಗೌಡ

ಬೀದರ್: ‘ರಾಜ್ಯದಲ್ಲಿ ಸರ್ವೆ ಮ್ಯಾಪ್ ಡಿಜಿಟಲೀಕರಣಗೊಳಿಸಲು ಗಂಭೀರ ಚಿಂತನೆ ನಡೆದಿದ್ದು, ಆದಷ್ಟು ಶೀಘ್ರ ಆ ನಿಟ್ಟಿನಲ್ಲಿ ಕೆಲಸ ಪ್ರಾರಂಭವಾಗಲಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳ ರೆಕಾರ್ಡ್ ರೂಂಗಳಲ್ಲಿ ಅನೇಕ ವರ್ಷಗಳ ಹಿಂದಿನ ರೆಕಾರ್ಡ್‌ಗಳಿವೆ. ಅವುಗಳನ್ನು ಕೂಡ ಡಿಜಿಟಲೀಕರಣಗೊಳಿಸಲಾಗುವುದು.

ಸೆಪ್ಟೆಂಬರ್ 1ರಿಂದ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ಇ-ಆಫೀಸ್ ಜಾರಿಗೊಳಿಸಲಾಗುವುದು. ಈಗಾಗಲೇ ಈ ಸಂಬಂಧ ಸೂಚನೆ ನೀಡಲಾಗಿದೆ’ ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ತಹಶೀಲ್ದಾರ್‌ಗಳು ವಾರದಲ್ಲಿ ಎರಡು ದಿನ, ಉಪವಿಭಾಗಾಧಿಕಾರಿಗಳು ಮೂರು ದಿನ ಕಡ್ಡಾಯವಾಗಿ ಕೋರ್ಟ್ ನಡೆಸಬೇಕು. ಈ ಸಂಬಂಧ ಶೀಘ್ರದಲ್ಲೇ ಸುತ್ತೋಲೆ ಹೊರಡಿಸಲಾಗುವುದು. ಶಿಷ್ಟಾಚಾರ, ಆ ಸಭೆ ಈ ಸಭೆಯೆಂದು ಕೋರ್ಟ್ ನಡೆಸದೆ ಇರುವಂತಿಲ್ಲ. ಸಾರ್ವಜನಿಕರ ಪ್ರಕರಣಗಳನ್ನು ಸಕಾಲಕ್ಕೆ ಇತ್ಯರ್ಥಗೊಳಿಸಬೇಕು ಎಂದು ಹೈಕೋರ್ಟ್ ಕೂಡ ಹೇಳಿದೆ. ಹೀಗಾಗಿ ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಲಾಗುವುದು’ ಎಂದು ಹೇಳಿದರು.

ಮಲ ಸುರಿದುಕೊಂಡ ಪ್ರಕರಣ ಪಿಡಿಒ ಅಮಾನತು

ಕನಕಪುರ (ರಾಮನಗರ): ಬಾಕಿ ವೇತನ ನೀಡುವಂತೆ ಒತ್ತಾಯಿಸಿ ಪೌರ ಕಾರ್ಮಿಕರಿಬ್ಬರು ಮೈ ಮೇಲೆ ಮಲ ಸುರಿದುಕೊಂಡು ಪ್ರತಿಭಟನೆ ನಡೆಸಿದ ಎರಡು ದಿನಗಳ ನಂತರ ಕಲ್ಲಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಎ. ಶ್ರೀನಿವಾಸ್ ಅವರನ್ನು ಗುರುವಾರ ಅಮಾನತು ಮಾಡಲಾಗಿದೆ.

ಈ ಘಟನೆ ಕುರಿತು ವರದಿ ನೀಡುವಂತೆ ಜಿಲ್ಲಾ ಪಂಚಾಯಿತಿ ಸಿಇಒ ದಿಗ್ವಿಜಯ್ ಬೋಡ್ಕೆ ಅವರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಿದ್ದರು. ಗುರುವಾರ ವರದಿ ಕೈ ಸೇರಿದ ಬೆನ್ನಲ್ಲೇ ಈ ಆದೇಶ ಹೊರಬಿದ್ದಿದೆ. ಬಾಕಿ ವೇತನ ಪಾವತಿಸದೆ ನಿರ್ಲಕ್ಷ್ಯ ತೋರಿ, ಕಾರ್ಮಿಕರನ್ನು ಸತಾಯಿಸಿದ ಆರೋಪದ ಮೇಲೆ ಪಿಡಿಒ ಶ್ರೀನಿವಾಸ್ ಅವರನ್ನು ಅಮಾನತುಗೊಳಿಸಿರುವುದಾಗಿ ಸಿಇಒ ತಿಳಿಸಿದ್ದಾರೆ.

ಪಂಚಾಯಿತಿಯಲ್ಲಿ ಐದು ವರ್ಷದಿಂದ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಪೌರ ಕಾರ್ಮಿಕರಾದ ಎನ್. ಸುರೇಶ್ ಮತ್ತು ವಿ. ರಂಗಯ್ಯ ಅವರ 14 ತಿಂಗಳ ವೇತನ ಬಾಕಿ ಉಳಿಸಿಕೊಳ್ಳಲಾಗಿತ್ತು.

ವೇತನಕ್ಕಾಗಿ ಪಿಡಿಒಗಳಿಗೆ ಮನವಿ ಮಾಡಿ ಹೈರಾಣಾಗಿದ್ದ ಕಾರ್ಮಿಕರು ಮಂಗಳವಾರ ಗ್ರಾಮ ಪಂಚಾಯಿತಿ ಕಚೇರಿ ಎದುರು ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆ ನಂತರ ಬಾಕಿ ವೇತನ ಪಾವತಿಸಲಾಗಿತ್ತು.

ವಿವಾಹ ಸಂಭ್ರಮ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಅಮ್ಮತ್ತಿಯ ಕೊಡವ ಸಮಾಜದಲ್ಲಿ ನಟಿ ಹರ್ಷಿಕಾ ಪೂಣಚ್ಚ ಹಾಗೂ ನಟ ಭುವನ್ ಪೊನ್ನಣ್ಣ ಗುರುವಾರ ದಾಂಪತ್ಯ ಜೀವನಕ್ಕೆ ಕಾಲಿಟ್ಟರು

ಐದು ವರ್ಷಗಳಿಂದ ಗಡಿ ಉಸ್ತುವಾರಿ ಖಾತೆ ಖಾಲಿ

‘ಗಡಿ ಪ್ರದೇಶ’ಕ್ಕೆ ಸಿಗದ ಆದ್ಯತೆ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಕಳೆದ 5 ವರ್ಷಗಳಿಂದ ಕರ್ನಾಟಕದಲ್ಲಿ ಗಡಿ ಉಸ್ತುವಾರಿ ಸಚಿವರ ನೇಮಕಕ್ಕೆ ಆದ್ಯತೆ ನೀಡಲಾಗಿಲ್ಲ. ಹೀಗಾಗಿ ಮಹಾರಾಷ್ಟ್ರ, ಗೋವಾ, ತಮಿಳುನಾಡಿನ ಗಡಿಗಳಲ್ಲಿ ನೆಲ– ಜಲಕ್ಕೆ ಸಂಬಂಧಿಸಿದಂತೆ ಏಳುವ ವಿವಾದಗಳಿಗೆ ಪ್ರತ್ಯುತ್ತರ ನೀಡುವ ಪ್ರತಿನಿಧಿಯೇ ಇಲ್ಲದಂತಾಗಿದೆ ಎಂಬ ಬೇಸರ ಗಡಿ ಜಿಲ್ಲೆಯ ಜನರಲ್ಲಿದೆ.

1972ರಲ್ಲಿ ಮೊದಲ ಬಾರಿಗೆ ಗಡಿ ಉಸ್ತುವಾರಿ ಖಾತೆಯನ್ನು ರಚಿಸಿ ಕೆ.ಎಚ್.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಲಾಯಿತು. ನಂತರ 2015ರಲ್ಲಿ ಸಿದ್ದರಾಮಯ್ಯ ಸರ್ಕಾರದಲ್ಲಿ ಎಚ್.ಕೆ.ಪಾಟೀಲ ಅವರಿಗೆ ಗಡಿ ಉಸ್ತುವಾರಿ ನೀಡಲಾಯಿತು. 2018ಕ್ಕೆ ಅವಧಿ ಕೊನೆಗೊಂಡ ಬಳಿಕ ಆ ಖಾತೆಗೆ ಯಾರನ್ನೂ ಸಚಿವರನ್ನಾಗಿ ನೇಮಿಸಲಾಗಿಲ್ಲ.

‘ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದು ಮೂರು ತಿಂಗಳಾದರೂ ಗಡಿ ಉಸ್ತುವಾರಿ ಸಚಿವರನ್ನು ನೇಮಿಸಲಾಗಿಲ್ಲ. ಕರ್ನಾಟಕ– ಮಹಾರಾಷ್ಟ್ರ ನಡುವಣ ಗಡಿ ಸಮಸ್ಯೆ, ಕರ್ನಾಟಕ– ಗೋವಾ ನಡುವಣ ಜಲತಂಟೆ ಇದೆ. ಮಹಾರಾಷ್ಟ್ರದಲ್ಲಿ ಕನ್ನಡಿಗರನ್ನು ಮಲತಾಯಿ ಧೋರಣೆಯಿಂದ ಕಾಣಲಾಗುತ್ತಿದೆ. ಜತ್ತ ತಾಲ್ಲೂಕಿನ 50 ಹಳ್ಳಿಗಳನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು ಆಗ್ರಹಿಸಿ ಅಲ್ಲಿನ ಜನರು ಹೋರಾಟಕ್ಕೆ ಸಿದ್ಧತೆ ನಡೆಸಿದ್ದಾರೆ. ಇಂಥ ಸಂದರ್ಭದಲ್ಲೂ ರಾಜ್ಯ ಸರ್ಕಾರ ಗಡಿ ಕನ್ನಡಿಗರ ಹೋರಾಟದ ಧ್ವನಿ ಕುಗ್ಗುವಂತೆ ಮಾಡಿದೆ’ ಎನ್ನುತ್ತಾರೆ ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ.

ಕರ್ನಾಟಕದ ಗಡಿಯೊಳಗಿನ 865 ಗ್ರಾಮಗಳನ್ನು ಸೆಳೆಯಲು ಮಹಾರಾಷ್ಟ್ರ ಸರ್ಕಾರವು ಹಲವು ಮಾರ್ಗಗಳನ್ನು ಅನುಸರಿಸುತ್ತಿದೆ. ಅದಕ್ಕೆ ಪೂರಕವಾಗಿ ಮಹಾರಾಷ್ಟ್ರ ಸರ್ಕಾರವು ಚಂದ್ರಕಾಂತ ಪಾಟೀಲ ಹಾಗೂ ಶಂಭುರಾಜೇ ದೇಸಾಯಿ ಅವರನ್ನು ಗಡಿ ಉಸ್ತುವಾರಿ ಸಚಿವರನ್ನಾಗಿ ನಿಯೋಜಿಸಿದೆ.

ಬೆಳಗಾವಿ, ಬೀದರ್, ಭಾಲ್ಕಿ, ಕಾರವಾರ ಸೇರಿ 865 ಗ್ರಾಮಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬುದು ಮಹಾರಾಷ್ಟ್ರದ ವಾದ. 1956ರ ರಾಜ್ಯ ಪುನರ್ ವಿಂಗಡಣಾ ಕಾಯ್ದೆ ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ಅರ್ಜಿಯು ವಿಚಾರಣೆ ಹಂತದಲ್ಲಿದೆ.

ಇಲ್ಲಿನ ಮಹಾರಾಷ್ಟ್ರ ಏಕೀಕರಣ ಸಮಿತಿ ನಾಯಕರು, ಮಹಾರಾಷ್ಟ್ರದ ಗಡಿ ಸಲಹಾ ಮಂಡಳಿ, ಹಿರಿಯ ವಕೀಲರು, ಹೋರಾಟಗಾರರು ಹಾಗೂ ಗಡಿ ಉಸ್ತುವಾರಿ ಸಚಿವರನ್ನು ಸೇರಿಸಿ ಈಗಾಗಲೇ ಮೂರು ಬಾರಿ ಸಭೆ ಮಾಡಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಬಲವಾಗಿ ವಾದ ಮಂಡಿಸಲು ಸಿದ್ಧತೆ ನಡೆಸಿದ್ದಾರೆ.

ಗಡಿ ಉಸ್ತುವಾರಿ ಗಂಭೀರ ವಿಷಯ. ಗಡಿ ಅಭಿವೃದ್ಧಿ, ವಿವಾದಗಳಲ್ಲಿ ವಿವೇಕಯುತ ನಿಲುವು ತೆಗೆದುಕೊಳ್ಳಬೇಕು. ಮುಖ್ಯಮಂತ್ರಿ ಶೀಘ್ರ ನಿರ್ಧಾರ ತೆಗೆದುಕೊಳ್ಳುವರು

ಎಚ್.ಕೆ.ಪಾಟೀಲ, ಕಾನೂನು ಸಚಿವ

ಗಡಿ ಅಭಿವೃದ್ಧಿ ಪ್ರಾಧಿಕಾರದ ಕಚೇರಿಯನ್ನು ಬೆಂಗಳೂರಿನಿಂದ ಬೆಳಗಾವಿ ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸಬೇಕು. ಗಡಿನಾಡಿನವರನ್ನೇ ಅಧ್ಯಕ್ಷರಾಗಿ ನೇಮಿಸಬೇಕು

ಅಶೋಕ ಚಂದರಗಿ, ಅಧ್ಯಕ್ಷ, ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

ಮಹಾರಾಷ್ಟ್ರದ ಬಲ ಏನು?

ಮಹಾರಾಷ್ಟ್ರ ಮುಖ್ಯಮಂತ್ರಿ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿ ಇದೆ. ಬೆಳಗಾವಿ ಕೇಂದ್ರಿತವಾಗಿ ಮಹಾರಾಷ್ಟ್ರ ಏಕೀಕರಣ ಸಮಿತಿಯೂ ನಿರಂತರ ಚಟುವಟಿಕೆಯಲ್ಲಿ ತೊಡಗಿದೆ.

‘ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ಯೋಜನೆ’ಯನ್ನು ಗಡಿಯ 865 ಗ್ರಾಮಗಳಿಗೂ ವಿಸ್ತರಿಸಲಾಗಿದೆ. ಈ ಗ್ರಾಮಗಳ ಯುವಜನರಿಗೆ ಮಹಾರಾಷ್ಟ್ರದಲ್ಲಿ ಉನ್ನತ ಶಿಕ್ಷಣ, ವಸತಿ ಸೌಕರ್ಯ ಉಚಿತವಾಗಿ ನೀಡುತ್ತಿದೆ. ಗಡಿ ಜನರಿಗೆ ಅಗತ್ಯ ಸೌಲಭ್ಯಗಳನ್ನು ಪೂರೈಸಲಾಗುತ್ತಿದೆ’ ಎಂದು ಮಹಾರಾಷ್ಟ್ರ ಸರ್ಕಾರ ಹೇಳುತ್ತಿದೆ.

ಕರ್ನಾಟಕದ ದೌರ್ಬಲ್ಯ ಏನು?

ಗಡಿ ಸಂರಕ್ಷಣಾ ಆಯೋಗಕ್ಕೆ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದು ಬಿಟ್ಟರೆ ಯಾವುದೇ ದಿಟ್ಟ ಹೆಜ್ಜೆ ಇಟ್ಟಿಲ್ಲ.

ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆಯೂ ಖಾಲಿ ಇದೆ. ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕಾನೂನು ತಜ್ಞರಿಗೆ ಸ್ಪಷ್ಟ ಮಾಹಿತಿ ನೀಡಲು ಉಸ್ತುವಾರಿ ಸಚಿವರ ನೇಮಕಾತಿ ಆಗಿಲ್ಲ. ಗಡಿ ಕನ್ನಡಿಗರ ಬೇಡಿಕೆಗಳು ಈಡೇರಿಲ್ಲ.

ವಾಂತಿ ಭೇದಿಯಿಂದ ಮಹಿಳೆ ಸಾವು?

ಪ್ರಜಾವಾಣಿ ವಾರ್ತೆ

ಹುಣಸಗಿ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಮಾರಲಬಾವಿ ಗ್ರಾಮದಲ್ಲಿ ಎರಡು ದಿನಗಳಿಂದ ವಾಂತಿ–ಭೇದಿ ಕಾಣಿಸಿಕೊಂಡಿದ್ದು, ಕಲುಷಿತ ನೀರು ಕುಡಿದು ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ. ಆದರೆ, ವಾಂತಿ ಭೇದಿಯಿಂದಲೇ ಮಹಿಳೆ ಸಾವನ್ನಪ್ಪಿದ್ದಾರೆಯೇ ಎಂಬುದು ಇನ್ನೂ ದೃಢಪಟ್ಟಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

ಗ್ರಾಮದ ತಿಪ್ಪಮ್ಮ ಮಲ್ಲಪ್ಪ ಕರೇಕಲ್ಲ (40) ಅವರು ವಿಜಯಪುರ ಜಿಲ್ಲೆಯ ತಾಳಿಕೋಟಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗ್ರಾಮದ ಎಂಟು ಜನ ವಾಂತಿ–ಭೇದಿಯಿಂದ ಅಸ್ವಸ್ಥರಾಗಿದ್ದಾರೆ.

‘ಮಹಿಳೆ ಯಾವ ಕಾರಣಕ್ಕಾಗಿ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿಲ್ಲ. ಗ್ರಾಮದಲ್ಲಿ ವಾಂತಿ–ಭೇದಿ ಪ್ರಕರಣಗಳು ಕಾಣಿಸಿಕೊಂಡಿದ್ದು, ತಾತ್ಕಾಲಿಕವಾಗಿ ಆರೋಗ್ಯ ಇಲಾಖೆಯಿಂದ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಲಾಗಿದೆ’ ಎಂದು ಪ್ರಭಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಮುಬಾಶಿರ ಸಾಜೀದ್ ಪ್ರತಿಕ್ರಿಯಿಸಿದ್ದಾರೆ.

ಗ್ರಾಮದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟಿದ್ದು, ಅದನ್ನು ದುರಸ್ತಿ ಮಾಡಿಲ್ಲ. ಗ್ರಾಮದಲ್ಲಿ ತೆರೆದ ಬಾವಿ ಇದ್ದು, ಅದೇ ನೀರನ್ನು ಕುಡಿದು ಹಲವರು ಅಸ್ವಸ್ಥರಾಗಿದ್ದಾರೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಗುರುವಾರ ಸಂಜೆ ವೈದ್ಯರ ತಂಡ ಗ್ರಾಮಕ್ಕೆ ತೆರಳಿ ಅಗತ್ಯ ಕ್ರಮ ಕೈಗೊಂಡಿದೆ.

ಅಪರಾಧ ಪ್ರಕರಣ: ನಿತ್ಯ ವಿಚಾರಣೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೊಲೆ, ದರೋಡೆ ಸೇರಿದಂತೆ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳನ್ನು ಪ್ರತಿನಿತ್ಯ ವಿಚಾರಣೆ ನಡೆಸಬೇಕು’ ಎಂದು ಹೈಕೋರ್ಟ್, ರಾಜ್ಯದ ಎಲ್ಲಾ ವಿಚಾರಣಾ ನ್ಯಾಯಾಲಯಗಳಿಗೆ ನಿರ್ದೇಶಿಸಿದೆ.

‘ವಿಚಾರಣೆ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ನನಗೆ ಜಾಮೀನು ನೀಡಬೇಕು’ ಎಂದು ಕೋರಿ ಆರೋಪಿ ಅನ್ಸು ಸಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತ ಮಹತ್ವದ ಆದೇಶ ನೀಡಿದೆ. ಗುಂಡ್ಲುಪೇಟೆಯ ತ್ರಿವಳಿ ಕೊಲೆ ಪ್ರಕರಣದ ಆರೋಪಿಯಾದ ಅನ್ಸು ಅಲಿಯಾಸ್ ಅನ್ಸಾರ್ ಅಲಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಮೂರನೇ ಬಾರಿಗೆ ವಜಾಗೊಳಿಸಿದೆ.

‘ಇತ್ತೀಚಿನ ದಿನಗಳಲ್ಲಿ ಸೆಷನ್ಸ್ ಕೋರ್ಟ್‌ಗಳಲ್ಲಿ ಅಪರಾಧ ಪ್ರಕರಣಗಳ ವಿಚಾರಣೆ ವಿಳಂಬವಾಗುತ್ತಿದೆ ಎಂಬ ಕಾರಣಕ್ಕೆ ಹಲವು ವಕೀಲರು ಆರೋಪಿಗಳಿಗೆ ಜಾಮೀನು ನೀಡಬೇಕೆಂದು ಮನವಿ ಮಾಡುತ್ತಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ಶಂಭುನಾಥ್ ಸಿಂಗ್ ಮತ್ತಿತರರ ವಿರುದ್ಧದ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯಗಳು ವಕೀಲರು ಮನವಿ ಮಾಡಿದ್ದಾರೆಂಬ ಕಾರಣಕ್ಕೆ ಮತ್ತು ಸೂಕ್ತ ಕಾರಣ ನಮೂದಿಸದೆ ವಿಚಾರಣೆಗಳನ್ನು ಮುಂದೂಡುವಂತಿಲ್ಲ. ಹಾಗೆ ಮಾಡಿದರೆ ತ್ವರಿತ ನ್ಯಾಯದಾನ ಮಾಡಬೇಕೆಂಬ ಸಿಆರ್‌ಪಿಸಿ ಕಲಂ 309ರ ಉಲ್ಲಂಘನೆಯಾಗುತ್ತದೆ’ ಎಂದು ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳ ಹರಿವು (ಕ್ಯುಸೆಕ್‌ಗಳಲ್ಲಿ)	ಹೊರ ಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	102.90	3,516	5,746
ಹಾರಂಗಿ	2,859	2,858.34	1,370	1,612
ಕಬಿನಿ	2284.00	2,275.72	970	3,825
ಹೇಮಾವತಿ	2,922	2,911.22	1,077	5,300
ಲಿಂಗನಮಕ್ಕಿ	1,819	1,790.1	3,130	7,865.5
ಸೂಪಾ (ಮೀ)	564	546.28	3,252	5,368
ಮಾಣಿ	595	580.50	427	690
ತುಂಗಭದ್ರಾ	1,633	1,626.61	1,750	10,208
ಮಲಪ್ರಭಾ	2079.50	2,067.20	894	894
ಘಟಪ್ರಭಾ	2175	2,163.96	908	4,500
ಭದ್ರಾ	186	165.11	2,395	2,881
ಆಲಮಟ್ಟಿ (ಮೀ)	519.60	519.59	00	1,012
ನಾರಾಯಣಪುರ (ಮೀ)	492.25	490.04	00	2,825

* ನೆಲಮಟ್ಟದಿಂದ

ಅಧಿಕಾರಿಗಳಿಂದಲೇ ಪಟ್ಟಿ ಸೋರಿಕೆ!

ಒಂದನೇ ಪುಟದಿಂದ...

‘ಸೋರಿಕೆಯಾದ ಪಟ್ಟಿಗಳನ್ನು ಬಳಸಿಕೊಂಡು ಪಿಡಿಒಗಳನ್ನು ಸಂಪರ್ಕಿಸುತ್ತಿರುವ ದಲ್ಲಾಳಿಗಳು, ‘ವ್ಯವಹಾರ’ ಕುದುರಿಸಲು ಯತ್ನಿಸುತ್ತಿದ್ದಾರೆ. ಇಲಾಖೆಯ ಆಯಕಟ್ಟಿನ ಹುದ್ದೆಗಳಲ್ಲಿರುವ ಕೆಲವು ಅಧಿಕಾರಿಗಳ ಜತೆ ‘ಮಾತುಕತೆ’ಗೆ ವೇದಿಕೆ ಒದಗಿಸುವ ಭರವಸೆ ನೀಡುತ್ತಿದ್ದಾರೆ. ಸಚಿವರ ಕಚೇರಿಯಿಂದ ಮುಖ್ಯಮಂತ್ರಿಯವರಿಗೆ ಪ್ರತಿ ಬಾರಿ ಪ್ರಸ್ತಾವ ರವಾನೆ ಆದಾಗಲೂ ಇದೇ ಬೆಳವಣಿಗೆ ನಡೆಯುತ್ತಿದೆ’ ಎಂದು ಕೆಲವು ಪಿಡಿಒಗಳು ದೂರಿದ್ದಾರೆ.

ಸಾರ್ವತ್ರಿಕ ವರ್ಗಾವಣೆ ಅವಧಿಯಲ್ಲಿ ಪಂಚಾಯತ್ ರಾಜ್ ಆಯುಕ್ತಾಲಯ ದಿಂದ ಸಚಿವರ ಕಚೇರಿಗೆ ಸಲ್ಲಿಸಿದ್ದ ಕರಡು ವರ್ಗಾವಣೆ ಪಟ್ಟಿಗಳೂ ಇಲಾಖೆಯ ಅಧಿಕಾರಿಗಳ ಗುಂಪಿನಲ್ಲೇ ಸೋರಿಕೆಯಾಗಿದ್ದವು. ಈಗ ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದಿರುವುದರಿಂದ ವರ್ಗಾವಣೆಗೂ ಮುನ್ನ ಮುಖ್ಯಮಂತ್ರಿಯವರ ಅನುಮೋದನೆ ಅಗತ್ಯ. ಸಚಿವರು ಸಲ್ಲಿಸಿರುವ ಪಟ್ಟಿಗಳು ಎರಡು ವಾರಗಳಿಂದ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಬಾಕಿ ಇವೆ. ಈಗ ಆ ಪಟ್ಟಿಗಳನ್ನೇ ಇಲಾಖೆಯ ಅಧಿಕಾರಿಗಳು ಸೋರಿಕೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನತ್ತ ದೌಡು: ವರ್ಗಾವಣೆಯ ಪಟ್ಟಿಯಲ್ಲಿ ಹೆಸರಿರುವುದು, ತಮ್ಮ ಸ್ಥಾನಕ್ಕೆ ಬೇರೊಬ್ಬರನ್ನು ವರ್ಗಾವಣೆ ಮಾಡುತ್ತಿರುವ ವಿಷಯ ಗಮನಕ್ಕೆ ಬರುತ್ತಿದ್ದಂತೆ ವಿವಿಧ ಜಿಲ್ಲೆಗಳ ಪಿಡಿಒಗಳು ಬೆಂಗಳೂರಿನತ್ತ ದೌಡಾಯಿಸುತ್ತಿದ್ದಾರೆ. ವರ್ಗಾವಣೆ ಪಟ್ಟಿಯಿಂದ ಹೆಸರು ಕೈಬಿಡುವಂತೆ ಶಾಸಕರು, ಸಚಿವರಿಂದ ಶಿಫಾರಸು ಪತ್ರ ಪಡೆಯಲು ಕಸರತ್ತು ನಡೆಸುತ್ತಿದ್ದಾರೆ.

ನಿಯಮವಿಲ್ಲದಿರುವುದೇ ವರದಾನ: ರಾಜ್ಯದಲ್ಲಿ ಒಟ್ಟು 6,000 ಪಿಡಿಒ ಹುದ್ದೆಗಳಿವೆ. ಸಾರ್ವತ್ರಿಕ ವರ್ಗಾವಣೆಯಲ್ಲಿ ಒಟ್ಟು ಬಲದ ಶೇಕಡ 6ರಷ್ಟು ವರ್ಗಾವಣೆಗೆ ಅನುಮತಿ ಇತ್ತು. ಆಗ, 360 ಪಿಡಿಒಗಳ ವರ್ಗಾವಣೆ ಮಾತ್ರ ಸಾಧ್ಯವಿತ್ತು. ಈವರೆಗೆ 650ಕ್ಕೂ ಹೆಚ್ಚು ಪಿಡಿಒಗಳ ವರ್ಗಾವಣೆ ನಡೆದಿದೆ. ಶಾಸಕರ ಶಿಫಾರಸಿನಂತೆ ಇನ್ನೂ 800ಕ್ಕೂ ಹೆಚ್ಚು ಪಿಡಿಒಗಳ ವರ್ಗಾವಣೆಗೆ ಮುಖ್ಯಮಂತ್ರಿಯವರ ಅನುಮೋದನೆ ಕೋರಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬದಲಾವಣೆ ತರದೇ, ಪಿಡಿಒಗಳ ಅಂತರ ಜಿಲ್ಲಾ ಜ್ಯೇಷ್ಠತಾ ಪಟ್ಟಿ ತಯಾರಿಸದೇ ಅಂತರ ಜಿಲ್ಲಾ ವರ್ಗಾವಣೆ ಮಾಡಲಾಗುತ್ತಿದೆ. ಈ ಪರಿಸ್ಥಿತಿಯನ್ನು ಆಯುಕ್ತಾಲಯದ ಕೆಲವು ಅಧಿಕಾರಿಗಳು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಪಿಡಿಒಗಳ ದೂರು.

ಸಿಎಂ, ಸಚಿವರಿಗೆ ದೂರು

ಪಿಡಿಒಗಳ ವರ್ಗಾವಣೆ ಪಟ್ಟಿಯನ್ನು ಅನುಮೋದನೆಗೂ ಮೊದಲೇ ಸೋರಿಕೆ ಮಾಡುತ್ತಿರುವ ಕೆಲವು ಅಧಿಕಾರಿಗಳು, ಅದನ್ನು ಬಳಸಿಕೊಂಡು ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ವಕೀಲರಾದ ಎಚ್. ಪುರುಷೋತ್ತಮ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ದೂರು ನೀಡಿದ್ದಾರೆ.

‘ಸೋರಿಕೆ ಮಾಡಿದವರ ವಿರುದ್ಧ ಕ್ರಮ’

‘ವರ್ಗಾವಣೆಗಾಗಿ ಮುಖ್ಯಮಂತ್ರಿಯವರ ಅನುಮೋದನೆ ಕೋರಿ ಸಲ್ಲಿಸುವ ಪಟ್ಟಿಯನ್ನು ಅಧಿಕಾರಿಗಳು ಸೋರಿಕೆ ಮಾಡುತ್ತಿರುವುದು ಗಂಭೀರ ವಿಷಯ. ಈ ಕೃತ್ಯದಲ್ಲಿ ಶಾಮೀಲಾದವರನ್ನು ಪತ್ತೆಹಚ್ಚಿ, ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ತನಿಖೆಗೆ ನ್ಯಾ. ಕುನ್ಹಾ ಆಯೋಗ?

ಒಂದನೇ ಪುಟದಿಂದ...

ಈ ಮೊದಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾವೇದ್ ರಹೀಂ ಅವರ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸುವ ಬಗ್ಗೆ ಚರ್ಚೆ ನಡೆದಿತ್ತು. ರಹೀಂ ಅವರ ಹೆಸರು ಅಂತಿಮಗೊಳಿಸಿದ್ದ ಮುಖ್ಯಮಂತ್ರಿ, ಅವರನ್ನು ನೇಮಕ ಮಾಡುವ ಕುರಿತ ಕಡತ ಮಂಡಿಸುವಂತೆ ಆರೋಗ್ಯ ಇಲಾಖೆಗೆ ಸೂಚಿಸಿದ್ದರು. ಆದರೆ, ಆಯೋಗದ ನೇತೃತ್ವ ವಹಿಸಲು ರಹೀಂ ನಿರಾಕರಿಸಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಕೋವಿಡ್ ಭ್ರಷ್ಟಾಚಾರ ಕುರಿತ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಬೇಕು ಎಂದು ಆಗ್ರಹಿಸಿದ್ದರು. ಅದನ್ನು ಬಿಜೆಪಿ ಸರ್ಕಾರ ತಳ್ಳಿ ಹಾಕಿತ್ತು.

ಕೋವಿಡ್ ಹಗರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲು ಒಲವು ಹೊಂದಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಈ ವಿಷಯವನ್ನು ಮುಖ್ಯಮಂತ್ರಿಯ ಗಮನಕ್ಕೂ ತಂದಿದ್ದರು. ಭ್ರಷ್ಟಾಚಾರ ನಡೆದಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಪಿಎಸಿ ಸಲ್ಲಿಸಿದ ವರದಿಯಲ್ಲಿ ಈ ಬಗ್ಗೆ ಮಾಹಿತಿಗಳಿವೆ. ಹೀಗಾಗಿ, ತನಿಖೆ ನಡೆಸುವುದು ಸೂಕ್ತ ಎಂದು ಪ್ರತಿಪಾದಿಸಿದ್ದರು.

‘ಕೋವಿಡ್ ಅವಧಿಯಲ್ಲಿ ₹ 2,000 ಕೋಟಿಗೂ ಹೆಚ್ಚು ಮೊತ್ತದ ಭ್ರಷ್ಟಾಚಾರ ನಡೆದಿರುವ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು’ ಎಂದು ವಿಧಾನಸಭೆಯಲ್ಲಿ ಶಾಸಕ ಪ್ರದೀಪ್ ಈಶ್ವರ್ ಆಗ್ರಹಿಸಿದ್ದರು.

ಪಿಎಸಿ ವರದಿಯಲ್ಲಿ ಏನಿದೆ?: ಕೋವಿಡ್ ನಿಯಂತ್ರಣದ ಹೆಸರಿನಲ್ಲಿ ಆರೋಗ್ಯ ಇಲಾಖೆಯಲ್ಲಿ ನಡೆದಿದ್ದ ಭ್ರಷ್ಟಾಚಾರದ ಕುರಿತು ಪ್ರತಿಷ್ಠಿತ ಸ್ವಾಯತ್ತ ತನಿಖಾ ಸಂಸ್ಥೆಯಿಂದ ತನಿಖೆ ನಡೆಸುವಂತೆ ಪಿಎಸಿ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಹಲವು ಪ್ರಕರಣಗಳಲ್ಲಿ ದುಬಾರಿ ದರ ತೆತ್ತು ಔಷಧಿ, ವೈದ್ಯಕೀಯ ಸಾಧನಗಳನ್ನು ಖರೀದಿಸಲಾಗಿದೆ. ಕೋವಿಡ್ ಸೋಂಕಿತರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆ, ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸಾ ಶುಲ್ಕ ಪಾವತಿ ಸೇರಿದಂತೆ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಆರೋಗ್ಯ ಇಲಾಖೆಯು ಸಮಿತಿಯೊಂದಿಗೆ ಹಂಚಿಕೊಂಡಿಲ್ಲ ಎಂದು ವರದಿಯಲ್ಲಿ ದೂರಿದೆ. ಪಿಎಸಿಯ ಹಿಂದಿನ ಅಧ್ಯಕ್ಷರಾಗಿದ್ದ ಎಚ್.ಕೆ. ಪಾಟೀಲ ನೇತೃತ್ವದಲ್ಲಿ ಸಲ್ಲಿಸಿದ್ದ ವರದಿಗೆ ಹಿಂದಿನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅನುಮೋದನೆ ನೀಡಿರಲಿಲ್ಲ. 2020–21ನೇ ಸಾಲಿನಲ್ಲಿ ಪಿಎಸಿ ಅಧ್ಯಕ್ಷರಾಗಿದ್ದ, ಈಗಿನ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ವರದಿಯನ್ನು ಸಭಾಧ್ಯಕ್ಷರಿಗೆ ಸಲ್ಲಿಸಿದ್ದರು. ಇತ್ತೀಚೆಗೆ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ವರದಿ ಮಂಡನೆಯಾಗಿತ್ತು.

ಸಂಖ್ಯಾಶಾಸ್ತ್ರಜ್ಞ ಸಿ.ಆರ್. ರಾವ್ ನಿಧನ

ಪ್ರಜಾವಾಣಿ ವಾರ್ತೆ



ಸಿ.ಆರ್. ರಾವ್

ಬೆಂಗಳೂರು: ಖ್ಯಾತ ಸಂಖ್ಯಾಶಾಸ್ತ್ರಜ್ಞ ಕಲ್ಯಾಂಪುಡಿ ರಾಧಾಕೃಷ್ಣ ರಾವ್ (ಸಿ.ಆರ್. ರಾವ್) (103) ಅವರು ಅಮೆರಿಕದಲ್ಲಿ ಬುಧವಾರ ನಿಧನರಾದರು.

ವಿಜಯನಗರ ಜಿಲ್ಲೆಯ ಹೂವಿನ ಹಡಗಲಿಯಲ್ಲಿ 1920ರಲ್ಲಿ ಜನಿಸಿದ್ದ ಸಿ.ಆರ್. ರಾವ್, ಬಾಲ್ಯದಲ್ಲಿಯೇ ಗಣಿತ ವಿಷಯದಲ್ಲಿ ಚುರುಕಾಗಿದ್ದರು. ಪೊಲೀಸ್ ಇನ್‌ಸ್ಪೆಕ್ಟರ್ ಸಿ.ಡಿ. ನಾಯ್ಡು ಹಾಗೂ ಎ. ಲಕ್ಷ್ಮಿಕಾಂತಮ್ಮ ದಂಪತಿ ಮಗನಾಗಿದ್ದ ರಾವ್, ವಿಶಾಖಪಟ್ಟಣದ ಆಂಧ್ರ ವಿಶ್ವವಿದ್ಯಾಲಯದಲ್ಲಿ ಬಿಎ (ಆನರ್ಸ್) ಪದವಿ ಪಡೆದಿದ್ದರು.

ಕೋಲ್ಕತ್ತದ ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಗೆ 1940ರಲ್ಲಿ ಸೇರಿದ್ದ ರಾವ್ ಅವರು, ಪ್ರತಿಷ್ಠಿತ ಸಂಸ್ಥೆಯಾಗಿ ಪರಿವರ್ತಿಸಿ 1978ರಲ್ಲಿ ನಿವೃತ್ತರಾಗಿದ್ದರು. ನಿವೃತ್ತಿ ಬಳಿಕ ಅಮೆರಿಕಕ್ಕೆ ತೆರಳಿ, ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯ ಸೇರಿದಂತೆ ಹಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

ಕಳೆದ ತಿಂಗಳು ಅವರಿಗೆ ಸಂಖ್ಯಾಶಾಸ್ತ್ರಕ್ಕಾಗಿ ಅಂತರರಾಷ್ಟ್ರೀಯ ಪ್ರಶಸ್ತಿ ಲಭಿಸಿತ್ತು. ಈ ಪ್ರಶಸ್ತಿಯು ನೊಬೆಲ್ ಪ್ರಶಸ್ತಿಗೆ ಸಮಾನ ಎಂದು ಹೇಳಲಾಗಿದೆ. ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್ ಅವರು ರಾವ್ ಅವರಿಗೆ 'ನ್ಯಾಷನಲ್ ಮೆಡಲ್ ಆಫ್ ಸೈನ್ಸ್' ಪ್ರಶಸ್ತಿ ಪ್ರದಾನ ಮಾಡಿದ್ದರು. ರಾವ್ ಅವರಿಗೆ 1968ರಲ್ಲಿ ಪದ್ಮಭೂಷಣ ಹಾಗೂ 2001ರಲ್ಲಿ ಪದ್ಮವಿಭೂಷಣ ಪುರಸ್ಕಾರ ಲಭಿಸಿತ್ತು. ಅಂತರರಾಷ್ಟ್ರೀಯ ಸಂಖ್ಯಾಶಾಸ್ತ್ರ ಸಂಸ್ಥೆ ಮತ್ತು ಸಂಖ್ಯಾಗಣಿತ ಸಂಸ್ಥೆಯ ಅಧ್ಯಕ್ಷರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು.

ಗ್ರಾಮಸ್ಥರ ಸಾಮೂಹಿಕ ನಿರ್ಧಾರ: ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ

‘ಧರ್ಮಸ್ಥಳದ ರಕ್ಷಣೆಗೆ ಯಾವ ತ್ಯಾಗಕ್ಕೂ ಸಿದ್ಧ’

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ‘ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಅವರ ಹಿಂಬಾಲಕರು ಆಗಸ್ಟ್ 25ರಿಂದ ಧರ್ಮಸ್ಥಳಕ್ಕೆ ಗುಂಪಾಗಿ ಬಂದು ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ಉಂಟುಮಾಡುವ ಸಂಚು ರೂಪಿಸುತ್ತಿರುವುದಾಗಿ ತಿಳಿದು ಬಂದಿದೆ. ಧರ್ಮಸ್ಥಳದ ಪಾವಿತ್ರ್ಯ ರಕ್ಷಣೆಗೆ ನಾವು ಯಾವುದೇ ತ್ಯಾಗಕ್ಕೂ ಸಿದ್ಧ, ಪ್ರಾಣತ್ಯಾಗಕ್ಕೂ ಹಿಂದೇಟು ಹಾಕುವುದಿಲ್ಲ’ ಎಂದು ಧರ್ಮಸ್ಥಳದ ಗ್ರಾಮಸ್ಥರು ಹೇಳಿದರು.

ಶ್ರೀನಿವಾಸ ರಾವ್ ಧರ್ಮಸ್ಥಳ, ಸಂದೀಪ್ ರೈ, ಛಾಯಾ, ಶಾಂಭವಿ ರೈ, ವಕೀಲ ಕೇಶವ ಬೆಳಾಲು, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ದಿವಾಕರ ರಾವ್, ವಾಹನ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ವಿಠಲ ಶೆಟ್ಟಿ ಅವರು ಧರ್ಮಸ್ಥಳದ ಮಹೋತ್ಸವ ಸಭಾಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

‘ಸೌಜನ್ಯಾ ಕೊಲೆ ಪ್ರಕರಣದ ಆರೋಪಿಯನ್ನು ಪತ್ತೆಮಾಡಿ ಕಠಿಣ ಶಿಕ್ಷೆ ವಿಧಿಸಿ ನ್ಯಾಯ ಒದಗಿಸಬೇಕು ಎಂಬುದು ಎಲ್ಲರ ಆಗ್ರಹವಾಗಿದೆ. ಆದರೆ, ಈ ನೆಪದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಜೂನ್ 17ರಿಂದ ಸಾರ್ವಜನಿಕ ಸಭೆ, ಪತ್ರಿಕಾಗೋಷ್ಠಿ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಸಮಾಜದ ಏಕತೆ ಮತ್ತು ಸಮಗ್ರತೆಗೆ ಭಂಗ ಉಂಟು ಮಾಡುತ್ತಿದ್ದಾರೆ. ಧರ್ಮಸ್ಥಳದ ಬಗ್ಗೆ ಅವಹೇಳನಕಾರಿಯಾಗಿ, ವದಂತಿ ಪಸರಿಸುತ್ತಿರುವುದು ಖಂಡನೀಯ’ ಎಂದರು.

‘ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ, ನ್ಯಾಯಾಲಯ, ಸರ್ಕಾರ, ಸಂವಿಧಾನ, ಪೊಲೀಸ್ ಇಲಾಖೆ, ಸಿಬಿಐ ಬಗ್ಗೆ ಸದಾ ಅವಹೇಳನ ಮಾಡುತ್ತಾ ಸಾಮಾಜಿಕ ಶಾಂತಿ-ಸಾಮರಸ್ಯಕ್ಕೆ ಭಂಗ ತರುವ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಅನುಯಾಯಿಗಳ ಮೇಲೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಗ್ರಾಮಸ್ಥರು ಧರ್ಮಸ್ಥಳ ಗ್ರಾಮ ಪಂಚಾಯಿತಿ, ಪೊಲೀಸ್ ಠಾಣೆ ಮೂಲಕ ಜಿಲ್ಲಾಧಿಕಾರಿ, ಎಸ್‌ಪಿ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.



ಧರ್ಮಸ್ಥಳ ಗ್ರಾಮಸ್ಥರು ಧರ್ಮಸ್ಥಳ ಗ್ರಾಮ ಪಂಚಾಯಿತಿ ಅಧಿಕಾರಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು

ಪೈಲ್ಸ್, ಫಿಶರ್, ಫಿಸ್ಟುಲಾ, ಪೆರಿನಲ್ ಆಪ್ಸಿಸ್, ಇನ್‌ಫ್ಲಮೇಟರಿ ಬೌಲ್ ಡಿಸೀಸ್, ಕೊಲೊನ್ ಕ್ಯಾನ್ಸರ್

ಎಲ್ಲ ಕಾಯಿಲೆಗಳಿಗೂ ಮಲಬದ್ಧತೆ ಮೂಲ ಕಾರಣ

ಬದಲಾದ ಜೀವನಶೈಲಿ ಹಾಗೂ ಆಹಾರ ಕ್ರಮದಿಂದಾಗಿ ಬರುವ ಹಲವು ಆರೋಗ್ಯ ಸಮಸ್ಯೆಗಳಲ್ಲಿ ಮೂಲವ್ಯಾಧಿಯೂ ಒಂದು. ಆರಂಭದಲ್ಲೇ ಚಿಕಿತ್ಸೆ ಪಡೆದರೆ ತೊಂದರೆ ಇಲ್ಲ. ಒಂದೊಮ್ಮೆ ಉದಾಸೀನ ಮಾಡಿದರೆ ಕ್ಯಾನ್ಸರ್‌ಗೆ ತುತ್ತಾಗುವ ಅಪಾಯವಿದೆ. ಹಾಗಾಗಿ ಸಂಕೋಚ ಬದಿಗೊತ್ತಿ ಸೂಕ್ತ ಚಿಕಿತ್ಸೆ ಪಡೆಯಬೇಕು ಎನ್ನುತ್ತಾರೆ ಸ್ಮೈಲ್ ಆಸ್ಪತ್ರೆಯ ಸಿಇಒ ಹಾಗೂ ಕೊಲೊರೆಕ್ಟಲ್ ಸರ್ಜನ್ ಡಾ. ಸಿ.ಎಂ. ಪರಮೇಶ್ವರ. ಮೂಲವ್ಯಾಧಿಯಲ್ಲಿ ಹಲವು ವಿಧ. ಪೈಲ್ಸ್, ಫಿಶರ್ ಹಾಗೂ ಫಿಸ್ಟುಲಾ ಎಂದು. ಶೇ.90 ಮಂದಿಗೆ ಜೀವನಶೈಲಿಯಿಂದ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆದಲ್ಲಿ ಜೀವನಕ್ರಮ ಹಾಗೂ ಆಹಾರ ಪದ್ಧತಿಯಿಂದಲೇ ಗುಣ ಹೊಂದಬಹುದು. ಉಳಿದ ಶೇ.10 ಮಂದಿಗೆ ಕರುಳಿನ ಉರಿಯೂತ (ಇನ್‌ಫ್ಲಮೇಟರಿ ಬೌವಲ್ ಡಿಸಾರ್ಡರ್ - ಐಬಿಡಿ) ಕಂಡು ಬರುತ್ತದೆ. ಇವರಿಗೆ ಶಸ್ತ್ರಚಿಕಿತ್ಸೆ ಅನಿವಾರ್ಯವಾಗಿದ್ದು, ಗುಣ ಹೊಂದುವ ಸಾಧ್ಯತೆ ಕಡಿಮೆ ಇರುತ್ತದೆ. ಹಾಗಾಗಿ ಆರಂಭಿಕ ಹಂತದಲ್ಲಿ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕು ಎಂದು ಹೇಳಿದ್ದಾರೆ. ಯಾರಿಗೂ ಹೇಳಿಕೊಳ್ಳಲು ಸಾಧ್ಯವಾಗದೆ ನಿತ್ಯವೂ ನೋವು ಅನುಭವಿಸುವಂತೆ ಮಾಡುವ ಮೂಲವ್ಯಾಧಿಗೆ ಪ್ರಮುಖ ಕಾರಣ ಮಲಬದ್ಧತೆ. ಸರಿಯಾದ ಕ್ರಮದಲ್ಲಿ ಮಲವಿಸರ್ಜನೆ ಆಗದಿರುವುದು, ಬಲವಂತವಾಗಿ ಮಲವಿಸರ್ಜನೆ ಮಾಡುವುದು ಮೂಲವ್ಯಾಧಿಯ ಲಕ್ಷಣಗಳು. ಇದನ್ನು ನಿರ್ಲಕ್ಷ್ಯ ಮಾಡದೆ, ಕೂಡಲೇ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಪಡೆಯುವುದು ಸೂಕ್ತ. ಇಲ್ಲವೆ, ಅದು ಪೈಲ್ಸ್, ಫಿಶರ್ ಹಾಗೂ ಫಿಸ್ಟುಲಾದಂತಹ ಗಂಭೀರ ಸಮಸ್ಯೆಗಳಿಗೆ ದೂಡುತ್ತದೆ. ಕೆಲವರಲ್ಲಿ ದೊಡ್ಡ ಕರುಳು ಕ್ಯಾನ್ಸರ್‌ಗೂ ಕಾರಣವಾಗುತ್ತದೆ. ಹಾಗಾಗಿ ಮಲವಿಸರ್ಜನೆಯಲ್ಲಿ ಸಮಸ್ಯೆಯಾದರೆ ಅದನ್ನು ನಿರ್ಲಕ್ಷ್ಯ ಮಾಡಬೇಡಿ ಎಂದು ಸಲಹೆ ನೀಡಿದ್ದಾರೆ.

ಶೇ.36 ಮಂದಿಗೆ ಮೂಲವ್ಯಾಧಿ: ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.36 ಮಂದಿ ಮೂಲವ್ಯಾಧಿ ಸಮಸ್ಯೆ ಹೊಂದಿದ್ದಾರೆ. ಅರಿವಿನ ಕೊರತೆ ಹಾಗೂ ಇದಕ್ಕೆ ಸಕಾಲದಲ್ಲಿ ಚಿಕಿತ್ಸೆ ಪಡೆಯಲಾಗದೆ ಬಹಳಷ್ಟು ಮಂದಿ ದೊಡ್ಡ ಕರುಳಿನ ಕ್ಯಾನ್ಸರ್ (ಕೊಲೊನ್ ಕ್ಯಾನ್ಸರ್)ಗೆ ಒಳಗಾಗುತ್ತಿದ್ದಾರೆ. ಐಬಿಡಿ ರೋಗಿಗಳಿಗೆ ಚಿಕಿತ್ಸೆ ದುಬಾರಿಯಾಗಿದ್ದು, ಜೀವನ ಪರ್ಯಂತ ಪ್ರತಿವಾರ ಚುಚ್ಚುಮದ್ದು(ಇಂಜೆಕ್ಷನ್) ತೆಗೆದುಕೊಳ್ಳಬೇಕು. ಪ್ರತಿ ಇಂಜೆಕ್ಷನ್‌ಗೆ 40 ಸಾವಿರ ರೂ. ಆಗಲಿದೆ. ಎಲ್ಲರಿಂದಲೂ ಈ ವೆಚ್ಚ ಭರಿಸಲು ಸಾಧ್ಯವಿಲ್ಲ. ಹಾಗಾಗಿ ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದಲ್ಲಿ ಮೂಲವ್ಯಾಧಿಯನ್ನು ಸೇರಿಸಬೇಕು ಎನ್ನುತ್ತಾರೆ ಡಾ. ಸಿ.ಎಂ. ಪರಮೇಶ್ವರ.

ನಕಲಿ ವೈದ್ಯರಿಂದ ತಪ್ಪು ಚಿಕಿತ್ಸೆ: ದೇಶದಲ್ಲಿ 15 ಲಕ್ಷ ನಕಲಿ ವೈದ್ಯರಿದ್ದಾರೆ ಎಂದು ಯೂರೋಪಿಯನ್ ಜರ್ನಲ್ ವರದಿ ಮಾಡಿದೆ. ಇವರಲ್ಲಿ ಬಹಳಷ್ಟು ಮಂದಿ ಮೂಲವ್ಯಾಧಿಗೆ ಚಿಕಿತ್ಸೆ ನೀಡುವುದಾಗಿ ಜನರನ್ನು ದಾರಿತಪ್ಪಿಸುತ್ತಿದ್ದಾರೆ. ನಕಲಿ ವೈದ್ಯರು ದಾರ ಹಾಕುವುದು, ಆ್ಯಸಿಡ್ ಸುರಿಯುವುದೂ ಸೇರಿ ಅವೈಜ್ಞಾನಿಕವಾದ ಕ್ರಮಗಳನ್ನು ಕೈಗೊಳ್ಳುತ್ತಾರೆ. ಇದರಿಂದ ರೋಗ ನಿವಾರಣೆಯಾಗುವ ಬದಲು ಉಲ್ಬಣವಾಗುತ್ತದೆ. ಆದರೆ, ಮೂಲವ್ಯಾಧಿ ಎಂದರೆ ಮೊದಲೇ ನಾಚಿಕೆ ಪಡುವ ಜನರು ಇಂತಹ ನಕಲಿ ವೈದ್ಯರಿಂದ ಚಿಕಿತ್ಸೆ ಪಡೆದು ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಇವರು ನೀಡುವ ತಪ್ಪು ಚಿಕಿತ್ಸೆಯಿಂದಾಗಿ ರೋಗಿಗಳು ಕರುಳು ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಬಹಳಷ್ಟು ಮಂದಿ ಪ್ರಾಣವನ್ನೇ ಕಳೆದುಕೊಳ್ಳುತ್ತಿ ದ್ದಾರೆ. ಸರ್ಕಾರ ಈ ಬಗ್ಗೆ ಗಮನ ಹರಿಸಿ ನಕಲಿ ವೈದ್ಯರಿಗೆ ತಡೆ ಹಾಕಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಸ್ಮೈಲ್ಸ್ ಆಸ್ಪತ್ರೆ ಪರಿಚಯ

ಸ್ಮೈಲ್ಸ್ ಗ್ಯಾಸ್ಟ್ರೋಎಂಟರಾಲಜಿ ಆಸ್ಪತ್ರೆ. ಇದು ಭಾರತದಲ್ಲಿನ ಮೊದಲ ಸಂಯೋಜಿತ ಕೊಲೊ-ರೆಕ್ಟಲ್ ಆಸ್ಪತ್ರೆಗಳಲ್ಲಿ ಒಂದಾಗಿದ್ದು, ಸಮಾಜವನ್ನು ಜೀವನಶೈಲಿ ರೋಗಗಳಿಂದ ಮುಕ್ತಗೊಳಿಸಲು ಸಮರ್ಪಿತವಾಗಿದೆ. ಕೊಲೊರೆಕ್ಟಲ್ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿ ಕ್ರಾಂತಿ ಮಾಡಿರುವ ಬೆಂಗಳೂರಿನ ಅತ್ಯುತ್ತಮ ಆಸ್ಪತ್ರೆಯಾಗಿದೆ. ಸ್ಮೈಲ್ಸ್ ಗ್ಯಾಸ್ಟ್ರೋಎಂಟರಾಲಜಿ ಆಸ್ಪತ್ರೆಯು ಸಮಾನ ಮನಸ್ಕ ಮತ್ತು ಉದ್ಯಮಶೀಲ ಶಸ್ತ್ರಚಿಕಿತ್ಸಕರನ್ನು ಹೊಂದಿದ್ದು, ಕೊಲೊಪ್ರೊಕ್ಟಾಲಜಿಯಲ್ಲಿ ವಿಶ್ವದರ್ಜೆಯ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಸ್ಥಾಪಿಸುವ ಮೂಲಕ ಕೊಲೊರೆಕ್ಟಲ್ ಸಮಸ್ಯೆಗಳೊಂದಿಗೆ ಲಕ್ಷಾಂತರ ಜನರ ನೋವುಗಳನ್ನು ಕೊನೆಗಾಣಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ವಕೀಲನಿಗಿತ್ತು ಎಂಡೋಕ್ರೈನ್ ಟ್ಯೂಮರ್ ಸಮಸ್ಯೆ

ಸುಮಾರು 32 ವರ್ಷದ ಯುವಕ ವೃತ್ತಿಯಲ್ಲಿ ವಕೀಲ. ಒಮ್ಮೆ ಫಿಶರ್ ಸಮಸ್ಯೆ ಇದೆ ಎಂದುಕೊಂಡು ಚಿಕಿತ್ಸೆಗೆ ಸ್ಮೈಲ್ ಆಸ್ಪತ್ರೆಗೆ ಭೇಟಿ ನೀಡುತ್ತಾನೆ. ಯುವಕನ ಸಮಸ್ಯೆ ಆಲಿಸಿದ ಡಾ. ಪರಮೇಶ್ವರ ಸಮಗ್ರವಾಗಿ ಆರೋಗ್ಯ ತಪಾಸಣೆ ನಡೆಸುತ್ತಾರೆ. ಈ ವೇಳೆ ಆರೋಗ್ಯ ಪರಿಸ್ಥಿತಿ ಕುರಿತು ಅನುಮಾನಗೊಂಡ ಅವರು, ಕೊಲೊನೊಸ್ಕೋಪಿ ಮಾಡಿಸಲು ಸೂಚಿಸುತ್ತಾರೆ. ಆಗ ಕ್ರಾನ್ಸ್ ಡಿಸೀಸ್ ಇರುವುದು ತಿಳಿಯುತ್ತದೆ. ನಂತರ ಸಿಟಿ ಎಂಟ್ರೋಗ್ರಾಂಗೆ ಸೂಚಿಸುತ್ತಾರೆ. ಆಗ ಲಿಂಫ್ ನೋಟ್ಸ್ ಎನ್‌ಲಾರ್ಜ್ ಆಗಿರುವುದು ತಿಳಿಯುತ್ತದೆ. ನಂತರ ಪೆಟ್ ಸ್ಕ್ಯಾನ್ ಮಾಡಿದಾಗ ನ್ಯೂರೋ ಎಂಡೋಕ್ರೈನ್ (Pancreas tumor) ಟ್ಯೂಮರ್ ಇರುವುದು ಪತ್ತೆಯಾಗುತ್ತದೆ. ಒಂದು ಫಿಶರ್ ಇಷ್ಟೆಲ್ಲಾ ಸಮಸ್ಯೆಗೆ ಕಾರಣವಾಗಿರುತ್ತದೆ. ಹಾಗಾಗಿ ಫಿಶರ್ ಅನ್ನು ನಿರ್ಲಕ್ಷ್ಯ ಮಾಡಬಾರದು ಎನ್ನುತ್ತಾರೆ ಡಾ. ಪರಮೇಶ್ವರ.

ಸರ್ಕಾರದ ನಿರ್ಲಕ್ಷ್ಯ

ಇತ್ತೀಚಿನ ವರ್ಷಗಳಲ್ಲಿ ಜನರನ್ನು ತೀವ್ರವಾಗಿ ಬಾಧಿಸಿದ ಕೋವಿಡ್ ಸೇರಿ ಡೆಂಘೆ, ಚಿಕೂನ್ ಗುನ್ಯಾ, ಟಿಬಿ, ಮಲೇರಿಯಾ ಒಳಗೊಂಡಂತೆ ಹಲವಾರು ಸಾಂಕ್ರಾಮಿಕ ಹಾಗೂ ಅಸಾಂಕ್ರಾಮಿಕ ರೋಗಗಳ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ನಡೆಸುತ್ತದೆ. ಆದರೆ ಅರಿವಿನ ಕೊರತೆಯಿಂದ ಜೀವನ ಪರ್ಯಂತ ನರಳುವ ಹಾಗೂ ತಪ್ಪು ಚಿಕಿತ್ಸೆಯಿಂದಾಗಿ ಪ್ರಾಣವನ್ನೇ ಕಳೆದುಕೊಳ್ಳುತ್ತಿರುವ ಮೂಲವ್ಯಾಧಿ ಕುರಿತು ಅರಿವು ಮೂಡಿಸುವ ಯಾವುದೇ ಕಾರ್ಯಕ್ರಮ ಹಮ್ಮಿಕೊಂಡಿಲ್ಲ. ಆ ಮೂಲಕ ಮೂಲವ್ಯಾಧಿ ಸಮಸ್ಯೆಯನ್ನು ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಇನ್ನಾದರೂ ಈ ಬಗ್ಗೆ ಎಚ್ಚರವಹಿಸಿ ಮೂಲವ್ಯಾಧಿ ಸಮಸ್ಯೆಯನ್ನು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಸೇರಿಸಬೇಕು. ಆ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕು. ಹಾಗಾದಲ್ಲಿ ಮುಂದಿನ ಐದು ವರ್ಷಗಳಲ್ಲಿ ಶೇ.50 ಮೂಲವ್ಯಾಧಿಗೆ ಸಂಬಂಧಿಸಿದ ಕಾಯಿಲೆಯನ್ನು ನಿಯಂತ್ರಣಕ್ಕೆ ತರಬಹುದು ಎಂಬುದು ಡಾ. ಸಿ.ಎಂ. ಪರಮೇಶ್ವರ ಅವರ ಮನವಿ.



ಡಾ.ಸಿ.ಎಂ. ಪರಮೇಶ್ವರ

ಸಿಇಒ ಮತ್ತು ಸಂಸ್ಥಾಪಕರು, ಸ್ಮೈಲ್ಸ್ ಆಸ್ಪತ್ರೆ

ಇವರು ಕೊಲೊಪ್ರೊಕ್ಟಾಲಜಿ ವಲಯಗಳಲ್ಲಿ ಅತ್ಯುತ್ತಮ ಕೊಲೊರೆಕ್ಟಲ್ ತಜ್ಞರು ಮತ್ತು ಶಸ್ತ್ರಚಿಕಿತ್ಸಕರಾಗಿದ್ದಾರೆ. ಕುಟುಂಬದಲ್ಲಿ ವೈದ್ಯರನ್ನು ಹೊಂದಬೇಕೆಂಬ ಅವರ ಕುಟುಂಬದ ಬಯಕೆಯೇ ಅವರಿಗೆ ಜೀರ್ಣಕಾರಿ ಅಸ್ವಸ್ಥತೆಗಳಿಗೆ ಅತ್ಯುತ್ತಮ ವೈದ್ಯರಾಗಲು ಅವಕಾಶವನ್ನು ನೀಡಿತು. ಈ ನಿಟ್ಟಿನಲ್ಲಿ 23 ವರ್ಷಗಳಿಗೂ ಹೆಚ್ಚು ಅನುಭವ ಹೊಂದಿರುವ ಅವರು, 30 ರಾಜ್ಯಗಳ ಹಾಗೂ 30 ದೇಶಗಳಿಂದ ಈವರೆಗೂ 3.15 ಲಕ್ಷಕ್ಕೂ ಹೆಚ್ಚು ಹೊರ ರೋಗಿಗಳ ತಪಾಸಣೆ ಮಾಡಿದ್ದು, 30 ಸಾವಿರಕ್ಕೂ ಅಧಿಕ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಕ್ಲಿಷ್ಟಕರವಾದ ಫಿಸ್ಟುಲಾ (ರಿಕರೆಂಟ್ ಫಿಸ್ಟುಲಾ)ಗೆ ಶಸ್ತ್ರಚಿಕಿತ್ಸೆ ನಡೆಸುವ ವಿಶ್ವದಲ್ಲೇ ಅತ್ಯಂತ ಪರಿಣತಿ ಹೊಂದಿರುವ ತಜ್ಞ ಡಾ. ಸಿ.ಎಂ. ಪರಮೇಶ್ವರ.

Google Reviews ★★★★★

1 Very good hospital for piles and fistula. Dr Paramesh is a very good and experienced Dr. For me, he is God. Smiles, hospital nurses, Doctors, staff, everyone is good. Shazia and Soumya counseling department are good patient counselors. Please everyone visit this hospital for piles and Fistula
- Biplab -

2 Dr Parmeshwar is a super expert. I went to him for fissure surgery. Being a top colon rectal surgeon, he specialises in this field and not only treated me for fissure but also piles. I benefited from the fact he went deeper and examined my colon rectal region for potential future issues too. This is something that a general surgeon might not do. Strongly recommend him.
- Parag Pande -

3 No word's doctor's are God's to earth and Mankind on the earth,thanks to smiles of hospital staff and doctors and special thanks to Dr Parmeshwar.....
- S Mohan -

ಯಾರಲ್ಲಿ ಮೂಲವ್ಯಾಧಿ ಹೆಚ್ಚು?

ಐಟಿ ಉದ್ಯಮಿಗಳು, ವಾಹನ ಚಾಲಕರು, ಟೈಲರ್‌ಗಳು, ಗಾರ್ಮೆಂಟ್ಸ್ ನೌಕರರು ಸೇರಿ ದೀರ್ಘಕಾಲ ಒಂದೇ ಸ್ಥಳದಲ್ಲಿ ಕುಳಿತು ಕೆಲಸ ಮಾಡುವವರಲ್ಲಿ ಮೂಲವ್ಯಾಧಿ ಹೆಚ್ಚು ಕಾಣಿಸಿಕೊಳ್ಳುತ್ತದೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಮತ್ತು ಮಕ್ಕಳಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದೆ.

ನಾಲ್ಕು ಹಂತದಲ್ಲಿ ಮೂಲವ್ಯಾಧಿ

ಮೂಲವ್ಯಾಧಿ ರೋಗವನ್ನು ನಾಲ್ಕು ವಿಧದಲ್ಲಿ ಗುರುತಿಸಲಾಗುತ್ತದೆ. ಹಂತ- 1ರಲ್ಲಿ ಸಣ್ಣ ಪ್ರಮಾಣದಲ್ಲಿ ಉರಿಯೂತವನ್ನುಂಟು ಮಾಡುವ ಗಂಟುಗಳು ಗುದನಾಳದ ಭಿತ್ತಿಯೊಳಗೆ ಇರುತ್ತವೆ. ಹಂತ- 2ರಲ್ಲಿ ಮಲವಿಸರ್ಜನೆಯ ವೇಳೆ ಗಂಟುಗಳು ಅಥವಾ ಮೊಳೆಗಳು ಹೊರಗೆ ಬರುತ್ತವೆ ಮತ್ತು ಕೆಲ ಸಮಯದಲ್ಲಿ ತನ್ನಿಂತಾನೇ ಒಳಗೆ ಸೇರಿಕೊಳ್ಳುತ್ತವೆ. ಹಂತ -3ರಲ್ಲಿ ಮೊಳೆಗಳು ಗುದದ್ವಾರದಿಂದ ಹೊರಗೆ ಜೋಲುತ್ತಿರುತ್ತವೆ ಮತ್ತು ಅವುಗಳನ್ನು ಸುಲಭವಾಗಿ ಒಳಗೆ ತಳ್ಳಬಹುದು. ಹಂತ- 4ರಲ್ಲಿ ಗಂಟುಗಳು ಗುದದ್ವಾರದ ಹೊರಗೆ ಇರುತ್ತವೆ ಮತ್ತು ಅವುಗಳನ್ನು ಒಳಗೆ ಸೇರಿಸಲು ಸಾಧ್ಯವಾಗುವುದಿಲ್ಲ ಎಂದು ವಿವರಿಸುತ್ತಾರೆ ಡಾ. ಸಿ.ಎಂ. ಪರಮೇಶ್ವರ.

ರೆಕ್ಟಲ್ ಕ್ಯಾನ್ಸರ್

ಕಿರಿಯ ವಯಸ್ಸಿನ ಲ್ಯಾಬ್ ಟೆಕ್ನೀಶಿಯನ್, ಆತನ ಪತ್ನಿ ನರ್ಸ್. ಆ ಲ್ಯಾಬ್ ಟೆಕ್ನೀಶಿಯನ್‌ಗೆ ಒಮ್ಮೆ ಪೈಲ್ಸ್ ಬರುತ್ತದೆ. ಆಗ ನಕಲಿ ವೈದ್ಯರಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಅಲ್ಲಿ ಅವರು ಚೆನ್ನಾಗಿ ಕೆರೆದು ಕಳಿಸಿರುತ್ತಾರೆ. ಇದರಿಂದ ಆತನಿಗೆ ತೀವ್ರವಾದ ರಕ್ತಸ್ರಾವ ಆಗುತ್ತಿರುತ್ತದೆ. ಚಿಕಿತ್ಸೆಗಾಗಿ ಸ್ಮೈಲ್ ಆಸ್ಪತ್ರೆಗೆ ಹೋದಾಗ ಡಾ. ಪರಮೇಶ್ವರ ತಪಾಸಣೆ ನಡೆಸಿ ಬಯಾಪ್ಸಿ ಮಾಡಿದಾಗ ರೆಕ್ಟಲ್ ಕ್ಯಾನ್ಸರ್ (Rectal cancer) ಆಗಿರುತ್ತದೆ. ಸರಿಯಾಗಿ ತಪಾಸಣೆ ಮಾಡದೆ ರೆಕ್ಟಲ್ ಕ್ಯಾನ್ಸರ್ ಅನ್ನು ಪತ್ತೆ ಹಚ್ಚದೆ ಚಿಕಿತ್ಸೆ ನೀಡಿದ್ದರಿಂದ ಅದು ಗಂಭೀರ ಸ್ವರೂಪ ಪಡೆದುಕೊಂಡಿರುತ್ತದೆ. ಪೆಟ್ ಸ್ಕ್ಯಾನ್ ಮಾಡಿದಾಗ ಲಿಂಫ್ ನೋಟ್ಸ್‌ಗೂ ಅದು ಹರಡಿರುವುದು ಪತ್ತೆಯಾಗುತ್ತದೆ. ಹಾಗಾಗಿ ವೈದ್ಯರ ಬಳಿ ಹೋಗುವಾಗ ಅವರು ಅನುಭವ ಹೊಂದಿದ್ದಾರೆಯೇ ಎಂಬುದನ್ನು ತಿಳಿದುಕೊಂಡು ಹೋಗಿ ಎನ್ನುತ್ತಾರೆ ಡಾ. ಪರಮೇಶ್ವರ.

ಕೊಲೊನ್ ಕ್ಯಾನ್ಸರ್‌ಗೆ ಕಾರಣ

ಕೊಲೊರೆಕ್ಟಲ್ ಕ್ಯಾನ್ಸರ್ ಕರುಳಿನಲ್ಲಿ ಅಥವಾ ಗುದನಾಳದಲ್ಲಿ ಕಾಣಿಸಿಕೊಳ್ಳುವುದು. ಅದು ಯಾವ ಜಾಗದಲ್ಲಿ ಕಾಣಿಸಿಕೊಳ್ಳುವುದು? ಎನ್ನುವುದರ ಆಧಾರದ ಮೇಲೆ ಕೊಲೊನ್ ಅಥವಾ ಗುದನಾಳದ ಕ್ಯಾನ್ಸರ್ ಎಂದು ಕರೆಯಲಾಗುವುದು. ದೊಡ್ಡ ಕರುಳು ಜೀರ್ಣಾಂಗ ವ್ಯೂಹದ ಒಂದು ಭಾಗವಾಗಿದೆ. ಗುದನಾಳವು ದೊಡ್ಡ ಕರುಳಿನ ತುದಿಯನ್ನು ಒಳಗೊಂಡಿರುತ್ತದೆ. ಕೊಲೊನ್ ಮತ್ತು ಗುದನಾಳದ ಕ್ಯಾನ್ಸರ್ ಅನ್ನು ಒಟ್ಟಿಗೆ ಕೊಲೊನ್ ಎಂದು ಕರೆಯಲಾಗುವುದು. ಶೇ. 78 ಜನರಿಗೆ ಇದು ಸಾಯುವ ಹಂತಕ್ಕೆ ಬಂದಾಗ ಕಾಣಿಸಿಕೊಳ್ಳುತ್ತದೆ. ಫಿಸ್ತುಲಾ ಇದ್ದರೆ ಕ್ಯಾನ್ಸರ್ ಬರುತ್ತದೆ ಎಂದೇನಿಲ್ಲ. ಇದಕ್ಕೆ 20 ವರ್ಷಕ್ಕಿಂತ ಹೆಚ್ಚು ಕಾಲ ಚಿಕಿತ್ಸೆ ಪಡೆದುಕೊಳ್ಳದಿದ್ದರೆ, ಸಂಶೋಧನೆ ಪ್ರಕಾರ ಶೇ.2 ಮಂದಿಗೆ ಕ್ಯಾನ್ಸರ್ ತಗಲುವ ಸಾಧ್ಯತೆಗಳಿವೆ.

ಮಹಿಳೆಯರಲ್ಲಿ ಮೂಲವ್ಯಾಧಿಗೆ ಕಾರಣ

ಮಹಿಳೆಯರು ಹೆಚ್ಚು ಮಕ್ಕಳನ್ನು ಹೆತ್ತಾಗ, ಸಹಜ ಹೆರಿಗೆ ಆದಾಗ, ಮಗು ದೊಡ್ಡದಿದ್ದಾಗ ಹೆರಿಗೆ ಸಂದರ್ಭದಲ್ಲಿ ಬಲವಂತದಿಂದ ಒತ್ತಡ ಹಾಕಿ ಹೆರಿಗೆ ಮಾಡಿಸಿದಾಗ ಮೂಲವ್ಯಾಧಿ ಕಾಣಿಸಿಕೊಳ್ಳುತ್ತದೆ. ಕಾರಣ ಪೆಲ್‌ವಿಸ್‌ನಲ್ಲಿ ರೆಕ್ಟಮ್, ಯೂಟ್ರಸ್, ಮೂತ್ರಕೋಶ ಇರುತ್ತದೆ. ಯೂಟ್ರಸ್ ಕೆಳಗೆ ಒತ್ತಡ ಹಾಕಿದಾಗ ಹಿಂದೆ ರೆಕ್ಟಮ್ ಜಾರುತ್ತದೆ. ಜತೆಗೆ ಮೂತ್ರಕೋಶವೂ ಜಾರಿಕೊಂಡು ಬರುತ್ತದೆ. ಇದನ್ನು ಸ್ಟಿಸ್ಟೋಸಿಲ್(cystocele) ಎನ್ನುತ್ತಾರೆ. ಇದರಿಂದ ಮಹಿಳೆಯರು ಶೌಚಕ್ಕೆ ಹೋಗುವ ಮೊದಲೇ ಮೂತ್ರ ಸ್ರವಿಕೆ ಆಗುತ್ತದೆ. ಸೀನಿದಾಗ, ಕೆಮ್ಮಿದಾಗ, ಮೂತ್ರ ಸ್ರವಿಕೆ ಆಗುತ್ತದೆ. ಹೆಚ್ಚು ಮಹಿಳೆಯರು ರೆಕ್ಟಮ್ ಕೆಳಗೆ ಬಂದಾಗ ಮಲ ಹೋಗುವಾಗ ತುಂಬ ಒತ್ತಡ ಹಾಕುತ್ತಾರೆ. ಆಗದಿದ್ದಾಗ ಮಲವನ್ನು ಬೆರಳಿನಿಂದ ತೆಗೆಯುತ್ತಾರೆ. ಕೆಲವರು ಗುದದ್ವಾರವನ್ನು ಒತ್ತುತ್ತಾರೆ. ವೈದ್ಯರಲ್ಲಿ ಹೋದಾಗ ಕೆಲವರು ಮಲಬದ್ಧತೆ ಎಂದು ತಪ್ಪಾಗಿ ತಿಳಿದು ಪೌಡರ್, ಔಷಧಗಳನ್ನು ನೀಡುತ್ತಾರೆ. ಆದರೆ ಅದು ಮಲಬದ್ಧತೆ ಆಗಿರುವುದಿಲ್ಲ ಬದಲಿಗೆ ಒಡಿಎಸ್ (obstructed defecation syndrome) ಆಗಿರುತ್ತದೆ. ಯಾವುದೇ ಮಹಿಳೆ ಮಲಬದ್ಧತೆ ಎಂದು ಬಂದರೆ ಬಹಳ ವಿಶೇಷ ಗಮನ ನೀಡಿ ಚಿಕಿತ್ಸೆ ಕೊಡಬೇಕಾಗುತ್ತದೆ. ಅನೇಕ ಮಹಿಳೆಯರು 20 ವರ್ಷಗಳಿಗೂ ಹೆಚ್ಚು ಕಾಲ ಈ ಸಮಸ್ಯೆಯಿಂದ ಬಳಲುತ್ತಿರುತ್ತಾರೆ. ಈ ಬಗ್ಗೆ ವೈದ್ಯರು ಎಚ್ಚರಿಕೆಯಿಂದ ಚಿಕಿತ್ಸೆ ನೀಡಬೇಕಾಗುತ್ತದೆ.

ಡಾ. ಪವಿತ್ರ ಎ

ರೋಗ ಲಕ್ಷಣಗಳು

ಸಾಮಾನ್ಯವಾಗಿ ಈ ರೋಗದ ಲಕ್ಷಣಗಳು ಗಂಭೀರವಾಗಿರುವುದಿಲ್ಲ ಮತ್ತು ಕೆಲವು ದಿನಗಳ ಬಳಿಕ ತನ್ನಿಂತಾನೇ ಶಮನಗೊಳ್ಳುತ್ತವೆ. ಮಲವಿಸರ್ಜನೆಯಾದರೂ ಇನ್ನೂ ಮಲ ತುಂಬಿರುವಂತೆ ರೋಗಿಗಳಿಗೆ ಅನುಭವವಾಗಬಹುದು. ಗುದದ್ವಾರದ ಸುತ್ತಲಿನ ಜಾಗದಲ್ಲಿ ತುರಿಕೆಯಿದ್ದು, ಅದು ಕೆಂಪಾಗಬಹುದು, ಮಲವಿಸರ್ಜನೆಯ ಸಂದರ್ಭದಲ್ಲಿ ನೋವು, ಗುದದ್ವಾರದ ಸುತ್ತ ಗಟ್ಟಿಯಾದ, ನೋವನ್ನುಂಟು ಮಾಡುವ ಗಂಟು, ಮಲದಲ್ಲಿ ರಕ್ತ ಹೋಗುವಿಕೆ ಈ ಲಕ್ಷಣಗಳು ರೋಗಿಯಲ್ಲಿ ಕಂಡು ಬರಬಹುದು.

ಚಿಕಿತ್ಸಾ ವಿಧಾನ

ಮೂಲವ್ಯಾಧಿಯನ್ನು ನಾಲ್ಕು ಹಂತಗಳಲ್ಲಿ ಗುರುತಿಸಲಾಗುವುದು. ಮೊದಲ ಎರಡು ಹಂತಗಳಲ್ಲೇ ಚಿಕಿತ್ಸೆ ಪಡೆದರೆ ಔಷಧದ ಜತೆಗೆ ಜೀವನ ಶೈಲಿ ಮತ್ತು ಆಹಾರ ಪದ್ಧತಿಯಿಂದಲೇ ಗುಣಹೊಂದಬಹುದು. 3 – 4 ಹಂತದಲ್ಲಿ ಚಿಕಿತ್ಸೆಗೆ ಬಂದಲ್ಲಿ ಶಸ್ತ್ರಚಿಕಿತ್ಸೆ (ಲೇಸರ್ ಟ್ರೀಟ್‌ಮೆಂಟ್) ಮಾಡಲೇಬೇಕು. ಆಧುನಿಕ ಚಿಕಿತ್ಸಾ ವಿಧಾನದಲ್ಲಿ ನೋವು ರಹಿತವಾಗಿ ಶಸ್ತ್ರಚಿಕಿತ್ಸೆ ಮಾಡಬಹುದಾಗಿದ್ದು, ಬೆಳಗ್ಗೆ ಚಿಕಿತ್ಸೆ ಪಡೆದು ಸಂಜೆ ಮನೆಗೆ ತೆರಳಬಹುದಾಗಿದೆ. ಆದರೆ ಆರಂಭದಲ್ಲೇ ಚಿಕಿತ್ಸೆ ಪಡೆಯುವುದರಿಂದ ಸಮಸ್ಯೆಯನ್ನು ಕಡಿಮೆ ಮಾಡಿಕೊಳ್ಳಬಹುದು.

ಇರಿಟೆಬಲ್ ಬೌವೆಲ್ ಸಿಂಡ್ರೋಮ್

ಒಬ್ಬ ಮನುಷ್ಯ ಒಂದು ದಿನದಲ್ಲಿ ಸಾಮಾನ್ಯವಾಗಿ ಮೂರುಸಲ ಮಲ ಹೋಗಬೇಕು. ಇದು ಸಹಜ ಪ್ರಕ್ರಿಯೆ. ಅದಕ್ಕಿಂತ ಹೆಚ್ಚಿನ ಬಾರಿ ಮಲ ಹೋಗುವುದನ್ನು ಇರಿಟೆಬಲ್ ಬೌವೆಲ್ ಸಿಂಡ್ರೋಮ್ ಎಂದು ಕರೆಯುತ್ತೇವೆ. ಈ ಸಮಸ್ಯೆ ಇರುವವರಿಗೆ ಊಟ ಮಾಡಿದ ನಂತರ ಹೊಟ್ಟೆ ಉಬ್ಬರಿಸಿದಂತೆ ಆಗುತ್ತದೆ. ಇದನ್ನು ಇರಿಟೆಬಲ್ ಬೌವೆಲ್ ಸಿಂಡ್ರೋಮ್ ಬ್ಲೋಟಿಂಟ್ ಪ್ರಿಡಾಮಿನೆಂಟ್ ಎಂದು ಕರೆಯಲಾಗುತ್ತದೆ.

ಈ ಸಮಸ್ಯೆ ಹೆಚ್ಚು, ಕಾರಣ ಬ್ರೈನ್ (ಮಿದುಳು) ಗಟ್ (ಕರುಳು) ಆಕ್ಸಿಸ್. ಈ ಬ್ರೈನ್‌ಗಟ್ ಆಕ್ಸಿಸನ್ನು ಮೊದಲ ಮಿದುಳು ಎಂದು ಕರೆಯುತ್ತೇವೆ. ಇದಕ್ಕೆ ಸಂಬಂಧಿಸಿದ್ದು ಇರಿಟೆಬಲ್ ಬೌವಲ್ ಸಿಂಡ್ರೋಮ್.

ಇತರ ಲಕ್ಷಣಗಳು

ಮಲ ಹೋಗುವಾಗ ಕುರಿ ಪಿಚಿಕೆ ರೀತಿಯಲ್ಲಿ ಹಾಗೂ ಗಟ್ಟಿಯಾಗಿ ಮಲ ಹೋಗುವುದು, ಅದರ ಜತೆಗೆ ಹೊಟ್ಟೆ ಉಬ್ಬರ, ಮಲಬದ್ಧತೆ ಮತ್ತು ಅತಿಸಾರ ಇರುತ್ತದೆ. ಕೆಲವರಲ್ಲಿ ಕೇವಲ ಹೊಟ್ಟೆ ಉಬ್ಬರ ಕಾಣಿಸಿಕೊಳ್ಳುತ್ತದೆ. ಇನ್ನೂ ಕೆಲವರಿಗೆ ಆಗಾಗ್ಗೆ ಹೊಟ್ಟೆ ನೋವು ಕಾಣಿಸಿಕೊಳ್ಳುತ್ತದೆ. ಇವರಿಗೆ ಕೊಲೊನೊಸ್ಕೋಪಿ ಅಥವಾ ಎಂಡೋಸ್ಕೋಪಿ ಮಾಡಿದಾಗ ಎಲ್ಲವೂ ಸಹಜವಾಗಿರುತ್ತದೆ. ಯಾರು ಸದಾ ಕೋಪದಿಂದ ಇರುತ್ತಾರೋ ಅಥವಾ ಒತ್ತಡದಲ್ಲಿರುತ್ತಾರೋ ಅಂತಹವರಲ್ಲಿ

ಕ್ರಯೋ ಸರ್ಜರಿ

ಪೈಲ್ಸ್‌ಗೆ ಕ್ರಯೋ ಸರ್ಜರಿ ಎಂದು ಚಿಕಿತ್ಸೆ ಮಾಡಲಾಗುತ್ತಿದ್ದು, ಇದು ಬಹಳ ಅಪಾಯಕಾರಿ. ಗ್ಯಾಸ್ಟ್ರೋ ಇಂಟರ್‌ಸ್ಟೈನಲ್ ಸರ್ಜರಿಯ ಪಿತಾಮಹ ರಂಗಾ ಭಾಷ್ಯಂ. ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾಗಿರುವ ಇವರು, ಭಾರತದಲ್ಲಿ ಗ್ಯಾಸ್ಟ್ರೋ ಇಂಟರ್‌ಸ್ಟೈನಲ್ ಶಸ್ತ್ರಚಿಕಿತ್ಸೆಯನ್ನು ಹುಟ್ಟುಹಾಕಿದವರು. ಇವರು ಹೇಳುವಂತೆ ಕ್ರಯೋ ಸರ್ಜರಿ ಎನ್ನುವುದು ಒಂದು ಕ್ರೈಂ. ಇದನ್ನು ಮಾಡಿದಲ್ಲಿ ರೋಗಿ ಜೀವನ ಪರ್ಯಂತ ಅಳಬೇಕಾಗುತ್ತದೆ. ಪೈಲ್ಸ್ ಇರುವವರು ಯಾವುದೇ ಕಾರಣಕ್ಕೂ ಈ ಚಿಕಿತ್ಸೆ ಮಾಡಿಸಿಕೊಳ್ಳಬಾರದು. ಆದರೆ ರಾಜ್ಯದಲ್ಲಿ ಈ ಹೆಚ್ಚಿನ ಸಂಖ್ಯೆಯಲ್ಲಿ ಪೈಲ್ಸ್ ಸಮಸ್ಯೆ ಹೊಂದಿರುವವರು ಈ ಕ್ರಯೋ ಸರ್ಜರಿಯ ಮೊರೆ ಹೋಗುತ್ತಿದ್ದಾರೆ. ಆದರೆ ಇದು ಅತ್ಯಂತ ಅಪಾಯಕಾರಿ ವಿಧಾನವಾಗಿದ್ದು, ಇದರಿಂದ ದೂರವಿರಬೇಕು.

ಅಲ್ಸರೇಟಿಕ ಕೊಲೆಟಿಸ್ (ulceratic colitis)

ವೈದ್ಯಕೀಯ ವಿದ್ಯಾರ್ಥಿ 21 ವರ್ಷ ವಯಸ್ಸು, ಮೆರಿಟ್ ಸ್ಟೂಡೆಂಟ್. ಫಿಸ್ಟುಲಾ (ಪರಿಯೇನಲ್ ಆಪ್ಸಿಸ್) ದಿಂದ ಆಸ್ಪತ್ರೆಗೆ ಬರುತ್ತಾನೆ. ಕೊಲೊನೊಸ್ಕೋಪಿ ಮಾಡಬೇಕು ಎಂದು ಹೇಳಿದಾಗ ಒಪ್ಪುವುದಿಲ್ಲ. ಎಷ್ಟು ಹೇಳಿದರೂ ಕೇಳದೆ ವಾಪಸ್ ಹೋಗುತ್ತಾನೆ. ಎರಡು ತಿಂಗಳ ನಂತರ ವಾಟ್ಸ್ ಆಪ್‌ನಲ್ಲಿ ಫೋಟೋ ಕಳಿಸುತ್ತಾನೆ. ಮತ್ತೊಂದು ಫಿಸ್ಟುಲಾ ಆಗಿದೆ ಎಂದು. ಆಸ್ಪತ್ರೆಗೆ ಬಾ ಎಂದು ಹೇಳುತ್ತೇನೆ. ನನಗೆ ಪರೀಕ್ಷೆ ಇದೆ ಮುಗಿಸಿಕೊಂಡು ಬರುತ್ತೇನೆ ಎಂದು ಹೇಳುತ್ತಾನೆ. ಪರೀಕ್ಷೆ ಮುಗಿದ ಬಳಿಕ ಬರುತ್ತಾನೆ. ಆಗ ಕೊಲೊನೊಸ್ಕೋಪಿ ಮಾಡಿ ನೋಡಿದಾಗ ಅಲ್ಸರೇಟಿಕ್ ಕೊಲೆಟಿಸ್ ಆಗಿರುತ್ತದೆ. ಒಂದು ಸಣ್ಣ ಫಿಸ್ಟುಲಾ ನಿರ್ಲಕ್ಷ್ಯ ಮಾಡಿದ್ದರಿಂದ ಅಲ್ಸರೇಟಿಕ್ ಕೊಲೆಟಿಸ್ ಆಗಿ ಪರಿಣಮಿಸಿತ್ತು. ಹಾಗಾಗಿ ಪೈಲ್ಸ್, ಫಿಶರ್, ಫಿಸ್ಟುಲಾ ಇವುಗಳನ್ನು ನಿರ್ಲಕ್ಷ್ಯ ಮಾಡಬೇಡಿ ಎಂದು ಡಾ. ಪರಮೇಶ್ವರ ಎಚ್ಚರಿಕೆ ನೀಡಿದ್ದಾರೆ.

ವೈದ್ಯರ ಕೊರತೆ

ದೇಶದಲ್ಲಿ ಪೈಲ್ಸ್, ಫಿಶರ್ ಹಾಗೂ ಫಿಸ್ಟುಲಾ ಸಮಸ್ಯೆಗಳನ್ನು ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಲು ವೈದ್ಯರ ತೀವ್ರ ಕೊರತೆ ಇದೆ. ಅದರಲ್ಲೂ ಫಿಸ್ಟುಲಾಗೆ ಸರಿಯಾದ ಚಿಕಿತ್ಸೆ ನೀಡಲು ದೇಶದಲ್ಲಿ ಕೇವಲ ಮೂವರು ತಜ್ಞರು ಮಾತ್ರ ಪರಿಣತಿ ಹೊಂದಿದ್ದಾರೆ. ಉಳಿದಂತೆ ಸಾವಿರಾರು ರೋಗಿಗಳು ನಕಲಿ ವೈದ್ಯರ ಕೈಗೆ ಸಿಲುಕಿ ಸಮಸ್ಯೆ ತಂದುಕೊಂಡರೆ, ಕೆಲವರು ಜೀವವನ್ನೇ ಕಳೆದುಕೊಂಡಿದ್ದಾರೆ. ಹಾಗಾಗಿ ಯಾವುದೇ ರೋಗಿ ಮೂಲವ್ಯಾಧಿ ಸಮಸ್ಯೆಗೆ ಶಸ್ತ್ರಚಿಕಿತ್ಸೆಯ ಅಗತ್ಯತೆ ಎದುರಾದಾಗ ಎರಡನೇ ವೈದ್ಯರ ಸಲಹೆ (ಸೆಕೆಂಡ್ ಒಪೀನಿಯನ್) ಪಡೆಯುವುದು ಸೂಕ್ತ ಎನ್ನುತ್ತಾರೆ ಡಾ. ಪರಮೇಶ್ವರ.

ಗರ್ಭಿಣಿಯರನ್ನೂ ಕಾಡುವ ವ್ಯಾಧಿ

ಮಹಿಳೆಯರಲ್ಲಿ ಅದರಲ್ಲೂ ಗರ್ಭಿಣಿಯರಲ್ಲಿ ಮೂಲವ್ಯಾಧಿ ಹೆಚ್ಚು ಕಾಣಿಸಿಕೊಳ್ಳುತ್ತದೆ. ಇದರಿಂದ 9 ತಿಂಗಳ ಕಾಲ ತೀವ್ರ ನೋವಿನಿಂದ ನರಳಬೇಕಾಗುತ್ತದೆ. ಹಾಗಾಗಿ ಮೂಲವ್ಯಾಧಿ ಲಕ್ಷಣ ಕಂಡು ಬಂದ ಕೂಡಲೇ ವೈದ್ಯರಲ್ಲಿ ಚಿಕಿತ್ಸೆ ಪಡೆಯುವುದು ಸೂಕ್ತ. ಗರ್ಭಿಣಿಯರಿಗೆ ಔಷಧದಿಂದ ಗುಣಪಡಿಸಲು ಸಾಧ್ಯವಿಲ್ಲ. ಹಾಗಾಗಿ ಲೇಸರ್ ಚಿಕಿತ್ಸೆ ನೀಡಲಾಗುತ್ತದೆ. ಇದಲ್ಲದೆ ಸಹಜ ಹೆರಿಗೆ ವೇಳೆ ಗರ್ಭಕೋಶದ ಮೇಲೆ ತೀವ್ರ ಒತ್ತಡ ಬೀಳುವುದರಿಂದ ಗರ್ಭಕೋಶ ಹಾಗೂ ಮೂತ್ರಕೋಶ ಜಗುತ್ತದೆ. ಇದರಿಂದ ಮಲವಸರ್ಜನೆಗೆ ತೊಂದರೆಯಾಗುತ್ತದೆ. ಆದರೆ ಬಹಳಷ್ಟು ಮಹಿಳೆಯರು ಇದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಬದಲಿಗೆ ಬಲವಂತವಾಗಿ ಮಲವಿಸರ್ಜನೆ ಮಾಡುತ್ತಾರೆ. ನಿಧಾನವಾಗಿ ಇದು ಮೂಲವ್ಯಾಧಿ ಸಮಸ್ಯೆಗೆ ಕಾರಣವಾಗುತ್ತದೆ. ಆಗಲೂ ಚಿಕಿತ್ಸೆ ಪಡೆಯಲು ಸಂಕೋಚ ಪಟ್ಟು ನಿರ್ಲಕ್ಷ್ಯ ಮಾಡಿ ಕರುಳಿನ ಕ್ಯಾನ್ಸರ್ ಹಂತಕ್ಕೆ ತಲುಪಿದಾಗ ಚಿಕಿತ್ಸೆಗೆ ಬಂದವರೂ ಇದ್ದಾರೆ. ಇದಲ್ಲದೆ ಕೆಮ್ಮಿದಾಗ, ಸೀನಿದಾಗ ಹಾಗೂ ಪದೇಪದೆ ಮೂತ್ರ ಹೋಗುವುದು ಸಹ ಮೂಲವ್ಯಾಧಿಯ ಲಕ್ಷಣವೇ ಆಗಿದೆ. ಈ ಬಗ್ಗೆ ಮಹಿಳೆಯರು ಎಚ್ಚರವಹಿಸುವ ಅಗತ್ಯವಿದೆ.

ಬಯಲು ಶೌಚದ ದುಷ್ಪರಿಣಾಮ

ಉತ್ತರ ಕರ್ನಾಟಕ ಭಾಗದಲ್ಲಿ ಬಯಲು ಶೌಚ ಸಮಸ್ಯೆಯಿಂದ ಮಹಿಳೆಯರಲ್ಲಿ ಹೆಚ್ಚಾಗಿ ಮೂಲವ್ಯಾಧಿ ಕಂಡು ಬರುತ್ತಿದೆ. 'ಮಹಿಳೆಯರು ಜನ ಸಂಚಾರ ಕಡಿಮೆ ಇರುವ ಕಡೆ ಮುಂಜಾನೆ ಅಥವಾ ಸೂರ್ಯಾಸ್ತದ ನಂತರ ಬಯಲು ವಿಸರ್ಜನೆಗೆ ತೆರಳುತ್ತಾರೆ. ಈ ಅವಧಿಯ ನಡುವೆ ಮನೆಯಲ್ಲಿರುವಾಗ ಮಲ ವಿಸರ್ಜನೆ ಮಾಡುವ ಒತ್ತಡ ಬಂದರೂ ಹಿಂಜರಿಕೆಯಿಂದ ಹೊರಗೆ ಹೋಗುವುದಿಲ್ಲ. ಇದರಿಂದಾಗಿ ವಿಸರ್ಜನೆಯ ವ್ಯವಸ್ಥೆಯಲ್ಲಿ ಏರುಪೇರು ಉಂಟಾಗಿ ಮೂಲವ್ಯಾಧಿಗೆ ದಾರಿ ಮಾಡಿಕೊಡುತ್ತದೆ' ಎಂದು ತಿಳಿಸುತ್ತಾರೆ ಡಾ.ಸಿ.ಎಂ. ಪರಮೇಶ್ವರ.

ವ್ಯತ್ಯಾಸಗಳು

ಮೂಲವ್ಯಾಧಿ: ಗುದದ್ವಾರದ ಬಳಿ ರಕ್ತನಾಳಗಳು ಊದಿಕೊಳ್ಳುವುದು.
ಫಿಶರ್: ಮಲ ಗಟ್ಟಿಯಾಗಿ ಹೊರಬರುವಾಗ ರಕ್ತಸ್ರಾವ, ಗುದದ್ವಾರದಲ್ಲಿ ಬಿರುಕು.
ಫಿಸ್ಟುಲಾ: ರಕ್ತನಾಳಗಳಲ್ಲಿ ಕೀವು ತುಂಬಿಕೊಂಡು ಸೋರುವುದು.

ಆಹಾರ ಕ್ರಮ

ಯಥೇಚ್ಛ ಹಣ್ಣು, ತರಕಾರಿ, ಸೊಪ್ಪು ಸೇವನೆ, ಉತ್ತಮ ನಿದ್ರೆ, ವ್ಯಾಯಾಮಗಳಿಂದಾಗಿ ಉತ್ತಮ ಆರೋಗ್ಯ ಹೊಂದುವುದರ ಜತೆಗೆ ಮೂಲವ್ಯಾಧಿಯನ್ನು ದೂರವಿಡಬಹುದಾಗಿದೆ. ಆದರೆ ಕೆಲವರಲ್ಲಿ ಹಂದಿ ಮಾಂಸ ಸೇವನೆಯಿಂದ ಮೂಲವ್ಯಾಧಿ ನಿವಾರಣೆ ಆಗುತ್ತದೆ ಎಂಬ ತಪ್ಪು ಅಭಿಪ್ರಾಯ ಇದೆ. ಮೂಲವ್ಯಾಧಿಯಿಂದ ದೂರ ಇರಲು ಮಾಂಸಾಹಾರ ಸೇವನೆಯಲ್ಲಿ ಮಿತಿ ಇರಲಿ. ಹೆಚ್ಚು ಮಸಾಲ ಪದಾರ್ಥ, ಖಾರದ ಪದಾರ್ಥ ಸೇವಿಸಬಾರದು. ಜಂಕ್‌ಫುಡ್‌ನಿಂದ ದೂರವಿದ್ದರೆ ಇನ್ನೂ ಒಳ್ಳೆಯದು. ಹೊರಗಿನ ಆಹಾರಕ್ಕಿಂತ ಮನೆಯಲ್ಲಿ ತಯಾರಿಸಿದ ತಾಜಾ ಹಾಗೂ ಶುದ್ಧ ಆಹಾರ ಸೇವನೆ ರೂಢಿಸಿಕೊಳ್ಳಬೇಕು. ನಿಯಮಿತ ಆಹಾರದ ಜೊತೆಗೆ ನೀರು, ಎಳನೀರು, ಮಜ್ಜಿಗೆಯಂತಹ ಪಾನೀಯ ಹೆಚ್ಚು ಸೇವಿಸಬೇಕು ಎಂದು ಸ್ಮೈಲ್ ಆಸ್ಪತ್ರೆಯ ಸಿಇಒ ಹಾಗೂ ಕೊಲೊರೆಕ್ಟಲ್ ಸರ್ಜನ್ ಡಾ. ಸಿ.ಎಂ. ಪರಮೇಶ್ವರ ಸಲಹೆ ನೀಡಿದ್ದಾರೆ.

ಫೆಲ್ವಿಕ್ ಫ್ಲೋರ್ ಡಿಸಾರ್ಡರ್

ಮಹಿಳಾ ಸರ್ಕಾರಿ ಅಧಿಕಾರಿ 48 ವರ್ಷ ವಯಸ್ಸು. ಅವರು ಕಳೆದ 24 ವರ್ಷಗಳಿಂದ ಮಲಬದ್ಧತೆ ಸಮಸ್ಯೆ ಹೊಂದಿದ್ದರು. ಈ ಅವಧಿಯಲ್ಲಿ 16 ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದಿದ್ದರು. ಆದರೂ ಅವರು ಗುಣ ಹೊಂದಿರಲಿಲ್ಲ. ಒಮ್ಮೆ ನನ್ನ ಬಳಿ ಚಿಕಿತ್ಸೆಗೆ ಬಂದರು. ಬಂದವರೇ ಮೊದಲು ಅತ್ತು ಬಿಡುತ್ತೇನೆ. ಆ ನಂತರ ಸಮಸ್ಯೆ ಹೇಳುತ್ತೇನೆ ಎಂದು ಹೇಳಿ ಚೆನ್ನಾಗಿ ಅತ್ತುಬಿಟ್ಟರು. ಆಮೇಲೇ ತಾವು ಎದುರಿಸುತ್ತಿರುವ ಸಮಸ್ಯೆಬಗ್ಗೆ ಹೇಳಿದರು. ಅವರಿಗೆ ಮಲಬದ್ಧತೆ ಸಮಸ್ಯೆ ಇತ್ತು. ಇದರಿಂದ ಮಲವಿಸರ್ಜನೆ ಮಾಡಲು ಕಷ್ಟವಾಗುತ್ತಿತ್ತು. ಹಾಗಾಗಿ ಬೆರಳು ಹಾಕಿ ಹೊರ ತೆಗೆಯುತ್ತಿದ್ದರು. ಇದರಿಂದ ಅವರು ಕೆಮ್ಮುವಾಗ, ಶೌಚಕ್ಕೆ ಹೋಗುವಾಗ ಮೂತ್ರ ಸ್ರವಿಕೆ ಸಮಸ್ಯೆಯನ್ನೂ ಹೊಂದಿದ್ದರು. ಇದನ್ನು ಯಾರೊಬ್ಬ ವೈದ್ಯನೂ ಪತ್ತೆ ಹೆಚ್ಚಿರಲಿಲ್ಲ. ಅವರಿಗೆ (Pelvic floor disorders) ತೊಂದರೆ ಇತ್ತು. ಚಿಕಿತ್ಸೆ ನೀಡಿದ ಮರು ದಿನವೇ ಅವರ ಸಮಸ್ಯೆ ಪರಿಹಾರವಾಯಿತು ಎಂದು ಡಾ. ಪರಮೇಶ್ವರ ವಿವರಿಸಿದರು.

ನಿರ್ಲಕ್ಷ್ಯ ಮಾಡಬೇಡಿ

ಪೈಲ್ಸ್, ಫಿಶರ್, ಫಿಸ್ಟುಲಾ ಸಾಮಾನ್ಯ ಕಾಯಿಲೆ ಹೀಟ್ ಮತ್ತು ಕೋಲ್ಡ್ ನಿಂದ ಆಗುತ್ತದೆ ಎಂದು ಬಹಳಷ್ಟು ಮಂದಿ ನಿರ್ಲಕ್ಷ್ಯ ಮಾಡುತ್ತಾರೆ. ಆದರೆ ಗುದದ್ವಾರವನ್ನು ಜಠರಗರು ವ್ಯೂಹ (Gastrointestinal system) ವನ್ನು ಕಿಟಕಿ ರೀತಿಯಲ್ಲಿ ನೋಡಬೇಕು. ಗುದದ್ವಾರದಲ್ಲಿ ಪೈಲ್ಸ್, ಫಿಶರ್, ಫಿಸ್ಟುಲಾ ಯಾವುದಾದರೂ ಆಗಬಹುದು, ಅದನ್ನು ನಿರ್ಲಕ್ಷಿಸಬಾರದು. ಹಾಗೆ ಮಾಡಿದಲ್ಲಿ (Inflammatroy bowel disease) ಅಥವಾ ಕೊಲೊನ್ ಕ್ಯಾನ್ಸರ್‌ನ ಲಕ್ಷಣವಾಗಿರಬಹುದು ಅಥವಾ ಬೇರೆಬೇರೆ ಕಾಯಿಲೆಯ ಲಕ್ಷಣವಾಗಿರಬಹುದು. ಹಾಗಾಗಿ ನಿರ್ಲಕ್ಷ್ಯ ಮಾಡಬಾರದು.

ಮಕ್ಕಳಲ್ಲಿ ಸಮಸ್ಯೆ

ಇತ್ತೀಚಿನ ದಿನಗಳಲ್ಲಿ ಮಕ್ಕಳೂ ಒತ್ತಡದಿಂದ ಜೀವನ ನಡೆಸುವಂತಾಗಿದೆ. ಬೆಳಗ್ಗೆ ಆಗುತ್ತಲೇ ಶಾಲೆಗೆ ಹೋಗುವ ಧಾವಂತ, ಮನೆಗೆ ಬಂದರೆ ಹೋಂ ವರ್ಕ್ ಎಂದು ಕೂರುವ ಮಕ್ಕಳಿಗೆ ದೈಹಿಕ ಚಟುವಟಿಕೆಗಳು ಇಲ್ಲದೆ ಜೀರ್ಣಕ್ರಿಯೆಯಲ್ಲಿ ಸಮಸ್ಯೆ ಆಗುತ್ತಿದೆ. 10 ಗಂಟೆಗೂ ಹೆಚ್ಚು ಕಾಲ ನಿದ್ರಿಸಬೇಕಾದ ಮಕ್ಕಳು ಬೆಳಗ್ಗೆ ಏಳುತ್ತಲೇ ಪಾಲಕರ ಆತುರಕ್ಕೆ ಮಣಿದು ಸರಿಯಾಗಿ ಮಲವಿಸರ್ಜನೆ ಮಾಡುವುದಿಲ್ಲ. ಶಾಲೆಯಲ್ಲಿ ಹೋಗಬೇಕು ಅನ್ನಿಸಿದರೂ ಅಲ್ಲಿ ಶಿಕ್ಷಕರ ಭಯದಿಂದ ಹಾಗೇ ತಡೆಹಿಡಿದು ಕೂರುತ್ತಾರೆ. ಸರಿಯಾಗಿ ನೀರು ಕುಡಿಯುವುದಿಲ್ಲ. ಇದರಿಂದ ಮಲಗಟ್ಟಿಯಾಗಿ ಗುದದ್ವಾರದಲ್ಲಿ ಗಾಯವಾಗಿ, ರಕ್ತಸ್ರಾವವಾಗಿ ಅದು ಪೈಲ್ಸ್, ಫಿಶರ್ ಹಾಗೂ ಫಿಸ್ಟುಲಾ ಸಮಸ್ಯೆಗೆ ಕಾರಣವಾಗುತ್ತಿದೆ. ಇಂತಹ ಸಮಸ್ಯೆಯಿಂದ ಚಿಕಿತ್ಸೆಗೆ ಬರುವ ಮಕ್ಕಳ ಸಂಖ್ಯೆ ದಿನೇದಿನೆ ಹೆಚ್ಚುತ್ತಿದೆ ಎನ್ನುತ್ತಾರೆ ಡಾ. ಪರಮೇಶ್ವರ.

ಮಕ್ಕಳಿಗೆ ಬೇಕಿದೆ ಟಾಯ್ಲೆಟ್ ಟ್ರೈನಿಂಗ್:

ಮಕ್ಕಳಲ್ಲಿ ಶೌಚಗೃಹ ಬಳಕೆ ಬಗ್ಗೆ ತರಬೇತಿ ನೀಡಬೇಕು. ಅರೆಬರೆಯಲ್ಲಿ ಶೌಚ ಮಾಡುವುದನ್ನು ತಡೆಯಬೇಕು. ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಶೌಚ ಮಾಡಿಸುವುದನ್ನು ರೂಢಿಸಿಕೊಳ್ಳುವುದಕ್ಕೆ ಆದ್ಯತೆ ನೀಡಬೇಕು. ಶಾಲೆಯಲ್ಲಿ ಶೌಚ ಮಾಡುವುದಕ್ಕೆ ಸಂಕೋಚ ಮಾಡದೆ, ಶಿಕ್ಷಕರ ಬಳಿ ಕೇಳಿ ಹೋಗುವುದಕ್ಕೆ ಸಲಹೆ ನೀಡಬೇಕು.

Call: 080990 08800 | www.gastroenterology.smileshospitals.com

Scan for our YouTube Channel

> ಇನ್ನೊಬ್ಬನ ಏಳಿಗೆಯನ್ನು ತಡೆಯೋಕೆ, ತುಳಿಯೋಕೆ ಯೋಚನೆ ಮಾಡುವ ಬದಲು ಆದಷ್ಟು ತಬ್ಬಿಕೊಂಡು, ಕೈಹಿಡಿದುಕೊಂಡು ಹೋದರೆ ಬಹಳಷ್ಟು ಸಾಧನೆ ಮಾಡಬಹುದು.
> –ಧನಂಜಯ, ನಟ
> (ಕ್ಷೇತ್ರಪತಿ ಟ್ರೈಲರ್ ರಿಲೀಸ್ ಕಾರ್ಯಕ್ರಮದಲ್ಲಿ)

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಚಂದನವನ ಈಗ ‘ಬೆಂಬಲ’ವನ

ಅಭಿಲಾಷ್ ಪಿ.ಎಸ್.

‘ರಾಜ್ ಬಿ.ಶೆಟ್ಟಿ ಒಂದು ಸಿನಿಮಾ ಕಥೆ ಬರೆದಿದ್ದಾರೆ, ನಟನೆ ಮಾಡಿದ್ದಾರೆ ಎಂದರೆ ನನಗೆ ಯಾವತ್ತೂ ಕುತೂಹಲ ಇರುತ್ತದೆ. ‘ಕ್ಷೇತ್ರಪತಿ’ ಸಿನಿಮಾ ನೋಡಿದೆ. ಎಂತಹ ಪ್ರತಿಭಾನ್ವಿತ ನಟ ನವೀನ್ ಶಂಕರ್. ಧನಂಜಯ ನಟನೆಯ ‘ಉತ್ತರಕಾಂಡ’ ಸಿನಿಮಾ ಬಿಡುಗಡೆಗೆ ಕಾಯಲು ಸಾವಿರ ಕಾರಣಗಳಿವೆ...’

ಹೀಗೆ ತಮ್ಮ ಮುಂದಿನ ಸಿನಿಮಾ ‘ಸಪ್ತ ಸಾಗರದಾಚೆ ಎಲ್ಲೋ’ ರಿಲೀಸ್ ಹೊಸ್ತಿಲಲ್ಲೂ ಇತರೆ ಸಿನಿಮಾಗಳ ಬೆಂಬಲಕ್ಕೆ ನಿಂತು ಮಾತನಾಡಿದ್ದು ನಟ ರಕ್ಷಿತ್ ಶೆಟ್ಟಿ.

* * *

‘ಟೋಬಿ’ ರಿಲೀಸ್ ಆದ ಒಂದು ವಾರದಲ್ಲೇ ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾ ಬಿಡುಗಡೆಯಾಗಲಿದೆ. ಎಲ್ಲರೂ ಕಾಂಪಿಟೀಷನ್ ಎನ್ನುವಾಗ ರಕ್ಷಿತ್ ನನ್ನ ಜೊತೆ ಕೂತು ‘ಟೋಬಿ’ ಚೆನ್ನಾಗಿದೆ ನೋಡಿ ಎನ್ನುತ್ತಾರೆ. ರಕ್ಷಿತ್ ಶೆಟ್ಟಿಯ ಅಸಂಖ್ಯ ದೊಡ್ಡ ಅಭಿಮಾನಿಗಳಲ್ಲಿ ನಾನೂ ಒಬ್ಬ. ರಕ್ಷಿತ್ ಯಾವಾಗ ‘ಉಳಿದವರು ಕಂಡಂತೆ’ ಸಿನಿಮಾ ಮಾಡಿದರೋ, ಅದರಿಂದಾಗಿ ರಾಜ್ ಬಿ.ಶೆಟ್ಟಿ ಮಂಗಳೂರು ಕನ್ನಡದ ಸಿನಿಮಾ ಮಾಡಿದ. ಸ್ಫೂರ್ತಿ ಪಡೆದವರ ಜೊತೆ ಯಾವ ಸ್ಪರ್ಧೆ?...’

‘ರಕ್ಷಿತ್–ರಾಜ್ ನಡುವೆ ಸ್ಪರ್ಧೆ’ ಎಂಬ ಮಾತು ಕೇಳಿಬಂದಾಗ ರಾಜ್ ಬಿ.ಶೆಟ್ಟಿ ಕೊಟ್ಟ ಉತ್ತರವಿದು.

ಹೀಗೊಂದು ‘ಬೆಂಬಲ’ವನವೀಗ ಚಂದನವನದಲ್ಲಿ ಚಿಗುರೊಡೆದಿದೆ. ಒಬ್ಬ ಹೀರೊ ತನ್ನ ಸಿನಿಮಾವನ್ನಷ್ಟೇ ಅಲ್ಲದೆ ಮತ್ತೊಂದು ಸಿನಿಮಾಗೆ, ಅದರ ಕಲಾವಿದರಿಗೆ ಬೆಂಬಲವಾಗಿ ನಿಲ್ಲುವ ಒಂದು ಆರೋಗ್ಯಕರ ಬೆಳವಣಿಗೆ ಕನ್ನಡ ಚಿತ್ರರಂಗದಲ್ಲಿ ಪ್ರಾರಂಭ ವಾಗಿದೆ. ಇದು ಇಂದಿನ ಅಗತ್ಯವೂ ಆಗಿದೆ. ಹೀಗಂದ ಮಾತ್ರಕ್ಕೆ ಈ ಬೆಳವಣಿಗೆ ಹೊಸದೇನಲ್ಲ. ನಟರಾದ ಶಿವರಾಜ್‌ಕುಮಾರ್, ಸುದೀಪ್, ನಿರ್ದೇಶಕ ಯೋಗರಾಜ್ ಭಟ್ ಹೀಗೆ ಹಲವರು ಸಾಮಾಜಿಕ ಮಾಧ್ಯಮಗಳ ಮೂಲಕ ಇತರರ ಸಿನಿಮಾಗಳಿಗೆ ಬೆಂಬಲ ನೀಡುತ್ತಲೇ ಬಂದಿದ್ದಾರೆ. ಆದರೆ, ಸದ್ಯ ಈ ಉತ್ತೇಜನಕಾರಿ ವಾತಾವರಣ ವೇದಿಕೆಗಳ ಮೂಲಕ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳುತ್ತಿದೆ. 2023ರ ಮೊದಲಾರ್ಧದಲ್ಲಿ ಪ್ರೇಕ್ಷಕರ ಕೊರತೆಯಿಂದ ಕನ್ನಡ ಚಿತ್ರಮಂದಿರಗಳು ಇನ್ನೇನು ಉಸಿರಾಟ ನಿಲ್ಲಿಸಲಿವೆ ಎನ್ನುವ ಕ್ಷಣದಲ್ಲಿ ‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಸಿನಿಮಾ ಚಿತ್ರಮಂದಿರಗಳ ಕಳೆ ಹೆಚ್ಚಿಸಿತು. ಸಿನಿಮಾ ಗೆಲುವಿನ ಹಿಂದೆ ಸ್ಟಾರ್ ನಟರ ಪಾತ್ರ ಪ್ರಮುಖವಾಗಿತ್ತು ಎನ್ನುವುದು ನಿರ್ದೇಶಕ ನಿತಿನ್ ಕೃಷ್ಣಮೂರ್ತಿ ಅನಿಸಿಕೆ.

‘ನಮ್ಮ ಮೊದಲ ಹೆಜ್ಜೆಯಲ್ಲೇ ಬೆನ್ನುತಟ್ಟಿ ಪ್ರೋತ್ಸಾಹಿಸಿದವರು ಪುನೀತ್ ರಾಜ್‌ಕುಮಾರ್. ಶೀರ್ಷಿಕೆ ಅನಾವರಣವನ್ನು ವಿಭಿನ್ನವಾಗಿ ಮಾಡಿದ್ದೆವು. ಶೀರ್ಷಿಕೆ ಅನಾವರಣ ಮಾಡಿ ಬೈಯಬೇಕು ಎಂದು ನಾವು ಕೇಳಿಕೊಂಡಾಗ, ಅಯ್ಯೋ ನಾನು ಬೈಯಲ್ಲ ಎಂದಿದ್ದರು. ನಾವು ಮೊದಲ ಬಾರಿ ಶೂಟ್ ಮಾಡಿದ್ದಾಗ ಹೆಚ್ಚಿನ ಜೋಕ್‌ಗಳು ಲ್ಯಾಂಡ್ ಆಗಿರಲಿಲ್ಲ. ಹೀಗಾಗಿ ಅವರು ಮರುದಿನ ಮತ್ತೊಮ್ಮೆ ಶೂಟ್ ಮಾಡೋಣ ಎಂದರು. ಅಲ್ಲಿಂದ ಹಿಡಿದು ಸುದೀಪ್ ಸರ್, ರಕ್ಷಿತ್ ಸರ್, ರಿಷಬ್ ಸರ್, ರಮ್ಯಾ ಅವರು ಹೀಗೆ ಬಹುತೇಕ ಖ್ಯಾತ ನಟರು ನಮಗೆ ಬೆಂಬಲವಾಗಿ ನಿಂತರು. ಒಂದು ಹೊಸ ತಂಡಕ್ಕೆ ಇಷ್ಟೆಲ್ಲ ಬೆಂಬಲ ನೀಡುವ ಯಾವ ಅವಶ್ಯಕತೆಯೂ ಅವರಿಗೆ ಇರಲಿಲ್ಲ. ಆದರೆ ಅವರೆಲ್ಲರೂ ಬೆನ್ನುತಟ್ಟಿದರು. ಒಂದು ವಾರದಲ್ಲಿ ಐದು ಕನ್ನಡ ಸಿನಿಮಾ ಬಂದರೂ ಎಲ್ಲರಿಗೂ ಸಮಾನವಾದ ಸ್ಪೇಸ್ ಇದೆ. ಮಾರುಕಟ್ಟೆ ಅಷ್ಟೇ ದೊಡ್ಡದಿದೆ. ಇವುಗಳನ್ನು ಸ್ಪರ್ಧೆ ಎಂದುಕೊಳ್ಳಲೇಬಾರದು’ ಎನ್ನುತ್ತಾರೆ ನಿತಿನ್.

> ### ಶೀರ್ಷಿಕೆಯಲ್ಲೇ ಸುನಿ ಚಮಕ್
> ಪ್ರತಿ ವಾರ ರಿಲೀಸ್ ಆಗುವ ಸಿನಿಮಾಗಳ ಶೀರ್ಷಿಕೆಗಳನ್ನು ಒಟ್ಟುಗೂಡಿಸಿ ಹಾರೈಸುವುದು ನಿರ್ದೇಶಕ ಸಿಂಪಲ್ ಸುನಿ ಟ್ರೇಡ್ ಮಾರ್ಕ್. ‘ನಾನು ಸಹಾಯಕ ನಿರ್ದೇಶಕನಾಗಿದ್ದಾಗಲೇ ಫೇಸ್‌ಬುಕ್‌ನಲ್ಲಿ ಈ ರೀತಿ ಬರೆದುಕೊಳ್ಳುತ್ತಿದ್ದೆ. ಆದರೆ ನನಗೆ ಫಾಲೋವರ್ಸ್ ಹೆಚ್ಚು ಇರಲಿಲ್ಲ. ಈಗ ಟ್ವಿಟರ್‌ನಲ್ಲಿ (ಎಕ್ಸ್) ಹಾಕುತ್ತಿದ್ದೇನೆ. ಎಲ್ಲವನ್ನೂ ಶೇರ್ ಮಾಡಿದರೆ, ಅಥವಾ ಅನಿಸಿಕೆ ಹಂಚಿಕೊಂಡರೆ ಬೆಲೆ ಇರುವುದಿಲ್ಲ. ಆದರೆ ಕೆಲವು ಪ್ರಯೋಗಗಳಿಗೆ, ಹೊಸಬರ ಪ್ರಯತ್ನಗಳಿಗೆ ಮನಸ್ಸು ತುಂಬಿ ಬೆಂಬಲ ನೀಡಬೇಕು. ಕೋವಿಡೋತ್ತರ ಕಾಲದಲ್ಲಿ ಇಡೀ ಇಂಡಸ್ಟ್ರಿ ಗೆಲ್ಲಬೇಕು ಎನ್ನುವ ಅನಿಸಿಕೆ ಎಲ್ಲರಲ್ಲಿದೆ’ ಎನ್ನುವುದು ಸುನಿ ಮಾತು.

‘ಡೆವಿಲ್’ ಗೆಲುವಿನ ಹಿಂದೆ ‘ಡಾಲಿ’: ‘ನಮ್ಮ ಇಡೀ ಚಿತ್ರತಂಡ ಒಂದು ಹೂದೋಟದಂತಿತ್ತು. ಆಗಷ್ಟೇ ಚಿಗುರಿದ ಹೂವಿನ ಸಸಿಗಳು. ಬೇರೆ ಬೇರೆ ಜಾತಿಯದ್ದು, ಬಣ್ಣದ್ದು. ಎಲ್ಲದಕ್ಕೂ ನೀರು ಹಾಕಿ ಮೊಗ್ಗು ಹೂವಾಗಿ ಅರಳುವಂತೆ ಮಾಡಿದ್ದು ನಮ್ಮ ಡಾಲಿ’ ಎನ್ನುತ್ತಾರೆ ‘ಡೇರ್ ಡೆವಿಲ್ ಮುಸ್ತಾಫಾ’ ಚಿತ್ರದ ನಿರ್ದೇಶಕ ಶಶಾಂಕ್ ಸೋಗಲ್. ‘ಸಿನಿಮಾಗೆ ಬ್ರ್ಯಾಂಡ್ ವ್ಯಾಲ್ಯೂ ತಂದವರು ಧನಂಜಯ. ಸ್ಟಾರ್‌ಗಳಿಲ್ಲದ ಸಿನಿಮಾಗೆ ಬೇಡಿಕೆಯೇ ಇಲ್ಲದ ಸಂದರ್ಭದಲ್ಲಿ ಎಲ್ಲ ವೇದಿಕೆಗಳಿಗೂ ಸಿನಿಮಾ ತಲುಪುವಂತೆ ಮಾಡಿದವರು ಧನಂಜಯ’ ಎನ್ನುವುದನ್ನು ನೆನಪಿಸಿಕೊಳ್ಳುತ್ತಾರೆ ಶಶಾಂಕ್.

‘ಸಂಸಾರ ಸಮೇತ ಕರೆಯೋಲೆ’

ಈ ಬೆಳವಣಿಗೆ ಕುರಿತು ನಟ ರಿಷಬ್ ಶೆಟ್ಟಿ ಹೀಗನ್ನುತ್ತಾರೆ. ‘ಪ್ರತಿಯೊಂದು ಸಿನಿಮಾವೂ ಜನರನ್ನು ತಲುಪಬೇಕು. ಹೀಗಾಗಿ ಸಣ್ಣ ಉತ್ತೇಜನವೂ ಬಹಳ ಮುಖ್ಯವಾಗುತ್ತದೆ. ಸುದೀಪ್ ಅವರಂತಹ ಮೇರುನಟ ‘ಕಾಂತಾರ’ ಸಿನಿಮಾ ನೋಡಿ ತಮ್ಮ ಅಭಿಪ್ರಾಯವನ್ನು ಒಂದು ಸುದೀರ್ಘ ಪತ್ರದ ಮುಖೇನ ವ್ಯಕ್ತಪಡಿಸಿದ್ದರು. ಅದೇ ರೀತಿ ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾ ಟ್ರೈಲರ್ ನೋಡಿ ಸುದೀಪ್ ಅವರು ಟ್ವೀಟ್ ಮಾಡಿ ಅನಿಸಿಕೆ ಹಂಚಿಕೊಳ್ಳುತ್ತಾರೆ. ‘ಹಾಸ್ಟೆಲ್ ಹುಡುಗರು..’ ಸಿನಿಮಾಗೆ ಧ್ರುವ ಸರ್ಜಾ ಅವರು ಸಾಥ್ ನೀಡಿದರು. ನಾನು, ರಾಜ್ ಹಾಗೂ ರಕ್ಷಿತ್ ಪರಸ್ಪರ ಸಿನಿಮಾಗಳಿಗೆ ಬೆಂಬಲವಾಗಿ ನಿಲ್ಲುತ್ತೇವೆ. ಹಿರಿಯ ನಟರು ಸೇರಿದಂತೆ ಪ್ರಸ್ತುತ ಇರುವ ಸ್ಟಾರ್ ನಟರು ಹಾಗೂ ಈಗ ಇಂಡಸ್ಟ್ರಿಗೆ ಹೆಜ್ಜೆ ಇಡುತ್ತಿರುವ ಪ್ರತಿಭಾನ್ವಿತ ನಟರು ಒಬ್ಬರಿಗೊಬ್ಬರು ಬೆಂಬಲವಾಗಿ ನಿಂತು ಸಿನಿಮಾವನ್ನು ಹೆಚ್ಚು ಜನರಿಗೆ ತಲುಪಿಸಬಹುದು. ‘ರಾಮ ರಾಮ ರೇ’ ಸಿನಿಮಾ ಕೂಡ ಇದೇ ರೀತಿಯ ಬೆಂಬಲದಿಂದ ಹಿಟ್ ಆಯಿತು. ‘ಕ್ಷೇತ್ರಪತಿ’ಗೂ ಈ ರೀತಿ ಬೆಂಬಲ ಸಿಕ್ಕಿದೆ. ಇಡೀ ಇಂಡಸ್ಟ್ರಿ ಒಟ್ಟಾಗಿ ಹೋದಾಗ ಜನರಿಗೂ ಖುಷಿಯಾಗುತ್ತದೆ. ಒಬ್ಬರಿಗೊಬ್ಬರು ಬೆಂಬಲವಾಗಿ ನಿಲ್ಲುವುದು, ಜನರಿಗೆ ಒಂದು ಸಿನಿಮಾದ ಕರೆಯೋಲೆಯನ್ನು ಸಂಸಾರ ಸಮೇತ ಹೋಗಿ ನೀಡಿದಂತೆ’ ಎನ್ನುತ್ತಾರೆ ರಿಷಬ್.

ಇಂತಹ ಬೆಂಬಲ ಕೇವಲ ಪ್ರಚಾರಕ್ಕಷ್ಟೇ ಸೀಮಿತವಾಗಿಲ್ಲ; ಧನಂಜಯ ಅವರು ಹಲವು ಸಿನಿಮಾಗಳ ಹಾಡಿಗೆ ಸಾಹಿತ್ಯ ಬರೆದೂ ಬೆನ್ನುತಟ್ಟಿದ್ದಾರೆ. ಹಲವು ಸಿನಿಮಾಗಳ ಟೀಸರ್‌ಗೆ ಧ್ವನಿಯಾಗುವ ಮೂಲಕ ಸುದೀಪ್ ಅವರ ಜೊತೆ ಹೆಜ್ಜೆ ಹಾಕಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ ಮೂಲಕ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹೊಸ ಪ್ರತಿಭೆಗಳಿಗೆ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಅವರಿಗೆ ಬೆಂಬಲವಾಗಿ ಕೆಲ ನಿರ್ದೇಶಕರು ಜೊತೆಯಾಗಿದ್ದಾರೆ. ಹೀಗೆ ಇನ್ನಷ್ಟು ಕಲಾವಿದರು ತಮ್ಮ ವ್ಯಾಪ್ತಿಯೊಳಗೆ ಇತರರ ಸಿನಿಮಾಗಳನ್ನು ಬೆಂಬಲಿಸುವ ಕೆಲಸವನ್ನು ಸದ್ದಿಲ್ಲದೇ ಮಾಡುತ್ತಿದ್ದಾರೆ. ನಟರ ನಡುವೆ ಈ ಬೆಂಬಲ ಮುಂದುವರಿದರೆ ಸಿನಿಮಾಗಳೂ ಗೆಲ್ಲಲಿವೆ, ಚಿತ್ರಮಂದಿರಗಳೂ ಉಸಿರಾಡಲಿವೆ.

ಸಂಯುಕ್ತ ಹೊರನಾಡು

‘ಬಯಲುಸೀಮೆ’ಯಲ್ಲಿ ‘ಟೋಬಿ’ ಪಯಣ

ರಾಜ್ ಬಿ.ಶೆಟ್ಟಿ ನಟನೆಯ ಸಿನಿಮಾ ‘ಟೋಬಿ’ ಹಾಗೂ ಉತ್ತರ ಕರ್ನಾಟಕ ಸೊಗಡಿನ ಮತ್ತೊಂದು ಸಿನಿಮಾ ‘ಬಯಲುಸೀಮೆ’ ಇಂದು ಬಿಡುಗಡೆಯಾಗುತ್ತಿವೆ.

ಟೋಬಿ: ರಾಜ್ ಬಿ.ಶೆಟ್ಟಿ, ಚೈತ್ರ ಜೆ.ಆಚಾರ್ ಹಾಗೂ ಸಂಯುಕ್ತ ಹೊರನಾಡು ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ವರ್ಷದ ಬಹುನಿರೀಕ್ಷಿತ ಸಿನಿಮಾ ಇದು. ‘ಗರುಡ ಗಮನ ವೃಷಭ ವಾಹನ’ ಸಿನಿಮಾದ ಯಶಸ್ಸಿನ ಬಳಿಕ ರಾಜ್ ನಟಿಸಿರುವ ಈ ಸಿನಿಮಾ ರಾಜ್ಯದ 175 ಏಕಪರದೆ ಚಿತ್ರಮಂದಿರಗಳಲ್ಲಿ ಹಾಗೂ 60 ಮಲ್ಟಿಪ್ಲೆಕ್ಸ್‌ಗಳಲ್ಲಿ ಬಿಡುಗಡೆಯಾಗುತ್ತಿದೆ. ದಾವಣಗೆರೆ, ಶಿವಮೊಗ್ಗ, ಬೆಳಗಾವಿ ಹೀಗೆ ಹಲವು ಜಿಲ್ಲೆಗಳಲ್ಲಿ ರಾಜ್ ಬಿರುಸಿನ ಪ್ರಚಾರ ನಡೆಸಿದ್ದರು. ‘ಕೆಣಕಿದರೆ ಕುರಿಯೂ ಮಾರಿಯಾಗಬಲ್ಲದು!’ ಎನ್ನುವ ಟ್ಯಾಗ್‌ಲೈನ್ ಇರುವ ‘ಟೋಬಿ’ಗೆ ಬಾಸಿಲ್ ಆ್ಯಕ್ಷನ್ ಕಟ್ ಹೇಳಿದ್ದಾರೆ.



ರಾಜ್ ಬಿ. ಶೆಟ್ಟಿ

ಚೈತ್ರ ಜೆ.ಆಚಾರ್

ಸಿನಿಮಾದ ಮೂಲ ಕಥೆಯನ್ನು ಟಿ.ಕೆ.ದಯಾನಂದ್ ಬರೆದಿದ್ದಾರೆ. ರಾಜ್ ಬಿ.ಶೆಟ್ಟಿ ಇದನ್ನು ವಿಸ್ತರಿಸಿದ್ದು, ನಟಿಸುವುದರ ಜೊತೆಗೆ ನಿರ್ದೇಶನದತ್ತಲೂ ಗಮನ ಹರಿಸಿದ್ದಾರೆ. ಈ ಹಿಂದೆ ‘ಲೈಟರ್ ಬುದ್ಧ ಫಿಲ್ಮ್ಸ್’ನಡಿ ನಿರ್ಮಾಣವಾದ ರಾಜ್ ಬಿ.ಶೆಟ್ಟಿ ನಟನೆಯ ‘ಗರುಡ ಗಮನ ವೃಷಭ ವಾಹನ’ ಸಿನಿಮಾವನ್ನು ನಿರ್ಮಾಣ ಮಾಡಿದ್ದ ರವಿ ರೈ ಕಳಸ ಅವರೇ ‘ಟೋಬಿ’ ನಿರ್ಮಾಣ ಮಾಡಿದ್ದಾರೆ. ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ರಾಜ್ಯದಾದ್ಯಂತ ವಿತರಣೆ ಮಾಡಲಿದೆ. ಚಿತ್ರಕ್ಕೆ ಮಿದುನ್ ಮುಕುಂದನ್ ಸಂಗೀತ ನಿರ್ದೇಶನವಿದ್ದು, ಪ್ರವೀಣ್ ಶ್ರೀಯನ್ ಛಾಯಾಚಿತ್ರಗ್ರಹಣವಿದೆ. ‘ಗರುಡ ಗಮನ..’ ಸಿನಿಮಾದ ತಾಂತ್ರಿಕ ವಿಭಾಗದಲ್ಲಿ ಇದೇ ತಂಡ ಕಾರ್ಯನಿರ್ವಹಿಸಿತ್ತು.

ಬಯಲುಸೀಮೆ: ಉತ್ತರ ಕರ್ನಾಟಕದ ಸೊಗಡು ಹೊಂದಿರುವ ‘ಕ್ಷೇತ್ರಪತಿ’ ಪ್ರೇಕ್ಷಕರನ್ನು ಸೆಳೆಯುತ್ತಿರುವ ಸಂದರ್ಭದಲ್ಲೇ ಇದೇ ಮಾದರಿಯ ಮತ್ತೊಂದು ಸಿನಿಮಾ ಬಿಡುಗಡೆಯಾಗಿದೆ. ವರುಣ್ ಕಟ್ಟಿಮನಿ ನಿರ್ದೇಶನದ ಈ ಸಿನಿಮಾ, ರಾಜಕೀಯ ಮೇಲಾಟದ ಸುತ್ತ ಸಾಗುತ್ತದೆ. ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ವರುಣ್ ಈ ಚಿತ್ರದಲ್ಲಿ ನಾಯಕ ನಟನಾಗಿ ನಟಿಸಿದ್ದಾರೆ. ಸಂಯುಕ್ತ ಹೊರನಾಡು ನಾಯಕಿಯಾಗಿದ್ದು, ರವಿಶಂಕರ್, ಟಿ.ಎಸ್ ನಾಗಾಭರಣ, ಯಶ್ ಶೆಟ್ಟಿ, ಭವಾನಿ ಪ್ರಕಾಶ್, ಅರ್ಚನಾ ಕೊಟ್ಟಿಗೆ, ಲಕ್ಷ್ಮೀ ನಾಡಗೌಡರ್, ಸಂತೋಷ್ ಉಪ್ಪಿನ್, ನಾಗರಾಜ ಭಟ್, ಮಹೇಶ್ ದೊಡ್ಡಕಲ್ಲವರ್, ಪ್ರದೀಪ್ ರಾಜ್ ಸೇರಿದಂತೆ ಬಹುದೊಡ್ಡ ತಾರಾಗಣ ಚಿತ್ರದಲ್ಲಿದೆ. ಗಾಯಿತ್ರಿ ದೇವಿ ಕ್ರಿಯೇಷನ್ಸ್ ಮತ್ತು ಪಿಆರ್‌ಎಸ್ ಕ್ರಿಯೇಷನ್ಸ್ ಬ್ಯಾನರ್‌ನಡಿ ಲಕ್ಷ್ಮಣ್ ಸಾ ಶಿಂಗ್ರಿ, ಶ್ರೀಧರ್ ಬಿದರಳ್ಳಿ, ರಶ್ಮೀ ವರುಣ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ವಿಜಯ ರಾಘವೇಂದ್ರ

‘ಕದ್ದ ಚಿತ್ರ’ ಮುಂದಕ್ಕೆ: ನಟ ವಿಜಯ ರಾಘವೇಂದ್ರ ಅವರ ಪತ್ನಿ ಸ್ಪಂದನ ಅವರ ನಿಧನದ ಕಾರಣ, ವಿಜಯ ರಾಘವೇಂದ್ರ ನಟನೆಯ ‘ಕದ್ದ ಚಿತ್ರ’ ಸಿನಿಮಾದ ಬಿಡುಗಡೆಯನ್ನು ಚಿತ್ರತಂಡ ಮುಂದೂಡಿದೆ. ನಿಗದಿಯಂತೆ ಆ.25ಕ್ಕೆ ಚಿತ್ರ ಬಿಡುಗಡೆಯಾಗಬೇಕಿತ್ತು. ಆದರೆ ಸಿನಿಮಾ ಸೆಪ್ಟೆಂಬರ್‌ನಲ್ಲಿ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ. ಸುಹಾಸ್ ಕೃಷ್ಣ ನಿರ್ದೇಶನದ ಈ ಚಿತ್ರವು, ಕೃತಿ ಚೌರ್ಯದ ಕಥಾಹಂದರವನ್ನು ಹೊಂದಿದೆ.

ನರ್ತಕಿ 3D 4K DOLBY DIGITAL 7.1 bookmyshow | ಪಾರಿಜಾತ | ವೀರೇಶ್ ಸಿನಿಮಾಸ್ | ಸವಿತ | CAUVERY 4K DIGITAL 3D CINEMA | Swagath SHANKARNAG M.G.ROAD

PVR: ORION | FORUM | VAISHNAVI | REGALIA | MARKETCITY | AURA | VEGACITY | SPIRIT | UPTOWN | GT | VR | REX | BHARTIYA | GLOBAL | FALCONCITY
INOX: SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
Cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE CINEMAS: JALAHALLI
MIRAJ: SUNKADAKATTE
KIN CINEMAS: SEEGEHALLI
INNOVATIVE MULTIPLEX: MARATHHALLI
MUKTA A2 CINEMAS: UTHARAHALLI
CINEPHILE: HSR LAYOUT

ರಾಜಾಜಿನಗರ ನವರಂಗ್, ಆವಲಹಳ್ಳಿ ವೆಂಕಟೇಶ್ವರ, ಜೆ.ಪಿ.ನಗರ ಸಿದ್ದೇಶ್ವರ, ತಾವರೆಕೆರೆ ಬಾಲಾಜಿ, ಪೀಣ್ಯ ಭಾರತಿ, ಕಮಲಾನಗರ ವೀರಭದ್ರೇಶ್ವರ, ಗೌಡನಪಾಳ್ಯ ಶ್ರೀನಿವಾಸ, ಸಂಜಯನಗರ ವೈಭವ್, ಕೋಣನಕುಂಟೆ ಮಾನಸ, ಹೊಂಗಸಂದ್ರ ಬೃಂದ, ಅಗರ ತಿರುಮಲ, ಚಿಕ್ಕಲಸಂದ್ರ ಬಾಲಾಜಿ, ಮಾರತ್ ಹಳ್ಳಿ ವಿನಾಯಕ, ಸುಂಕದಕಟ್ಟೆ ಮೋಹನ್, ರಾಜಗೋಪಾಲನಗರ ಮಾರುತಿ, ಕದಿರೇನಹಳ್ಳಿ ಮಹದೇಶ್ವರ, ವಿದ್ಯಾಪೀಠಸರ್ಕಲ್ ಚಂದ್ರೋದಯ

ಗರುಡಾಚಾರ್‌ಪಾಳ್ಯ ವಿಜಯಲಕ್ಷ್ಮಿ, ಸುಲ್ತಾನ್ ಪಾಳ್ಯ ಪುಷ್ಪಾಂಜಲಿ, ಸರ್ಜಾಪುರ ರವಿ, ದೊಮ್ಮಸಂದ್ರ ಬಾಲಾಜಿ, ಗೊಟ್ಟಿಗೆರೆ ಲಕ್ಷ್ಮಿ, ಕೊಡಿಗೇಹಳ್ಳಿ ರಾಜ್‌ಮುರಳಿ, ಗೊಲ್ಲರಹಟ್ಟಿ ವೆಂಕಟೇಶ್ವರ, ಉಲ್ಲಾಳ ವಜ್ರೇಶ್ವರಿ, ನಾಗವಾರ ಪೃಥ್ವಿ, ಯಶವಂತಪುರ ಉಲ್ಲಾಸ್, ಮಲ್ಲತ್ತಹಳ್ಳಿ ವಿ.ಆರ್.ಸಿನಿಮ, ಯಲಹಂಕ ಪ್ರಕಾಶ್, ಸಿಂಗಾಪುರ ವೈನಿಧಿ, ಕಾಡುಗುಡಿ ಶ್ರೀನಿವಾಸ, ಜಿಗಣಿ ನಂದೀಶ್ವರ, ಅತ್ತಿಬೆಲೆ ಗೌರಿಶಂಕರ, ತುಮಕೂರು ಮಾರುತಿ, INOX LIVE the MOVIE, ತಿಪಟೂರು ಲಕ್ಷ್ಮಿ, ರಾಮನಗರ ಶ್ರೀರಾಮ, ಕನಕಪುರ ಅರ್ಕಾವತಿ, ಚನ್ನಪಟ್ಟಣ ಬಾಲಾಜಿ, ಕೋಲಾರ ನಾರಾಯಣಿ, ಚಿಕ್ಕಬಳ್ಳಾಪುರ ಬಾಲಾಜಿ, ನೆಲಮಂಗಲ ರೂಪ, ಶಿರಾ ಭಾಗ್ಯಲಕ್ಷ್ಮಿ, ದೊಡ್ಡಬಳ್ಳಾಪುರ ಸೌಂದರ್ಯಮಹಲ್, ಮಧುಗಿರಿ ಶಾಂತಲಾ, ಚಿಂತಾಮಣಿ ಎಸ್.ಎಲ್.ಎನ್

ಹಾರೋಹಳ್ಳಿ ವಿನಾಯಕ, ಆನೇಕಲ್ ಎಸ್.ಎಲ್.ಎನ್, ಗೌರಿಬಿದನೂರು ಅಭಿಲಾಷ, ಬಂಗಾರುಪೇಟೆ ಬಾಲಚಂದ್ರ, ವಿಜಯಪುರ ಗೌರಿಶಂಕರ, ಕುಣಿಗಲ್ ಪದ್ಮ, ಮಾಗಡಿ ಬಾಲಾಜಿ, ಬಿಡದಿ ದೀಪಕ್, ಮೈಸೂರು ಸಂಗಮ್, PVR, INOX LIVE the MOVIE, DRC CINEMAS, VISION CINEMAS, ಮಂಡ್ಯ ಗುರುಶ್ರೀ, ಹಾಸನ ಸಹ್ಯಾದ್ರಿ, ಚನ್ನರಾಯಪಟ್ಟಣ ಗಾಯತ್ರಿ, ಹೊಳೆನರಸೀಪುರ ಚೆನ್ನಾಂಬಿಕಾ, ಬನ್ನೂರು ರತ್ನಮಹಲ್, ಚಾಮರಾಜನಗರ ಭ್ರಮರಾಂಬ, ಕೊಳ್ಳೇಗಾಲ ಶ್ರೀನಿವಾಸ, ಗುಂಡ್ಲುಪೇಟೆ ಸೂರ್ಯ, ಮಳವಳ್ಳಿ ಮಹಾಲಕ್ಷ್ಮಿ, ಕೆ.ಆರ್.ಪೇಟೆ ಬಸವೇಶ್ವರ, ಕೆ.ಆರ್.ನಗರ ಗೌರಿಶಂಕರ, ಟಿ.ನರಸೀಪುರ ಮುರುಗನ್, ನಂಜನಗೂಡು ಭಾರ್ಗವಿ, ಮದ್ದೂರು ಮಹಾವೀರ, ಕೆ.ಎಂ.ದೊಡ್ಡಿ ಸುಮ, ಯಳಂದೂರು ಮಹದೇಶ್ವರ, ಚಿಟಕೆರೆ ಲಕ್ಷ್ಮಿ

ಪಿರಿಯಾಪಟ್ಟಣ ಮಹದೇಶ್ವರ, ಸಾಲಿಗ್ರಾಮ ಪದ್ಮಾಂಬ, ನಾಗಮಂಗಲ ವೆಂಕಟೇಶ್ವರ, ಬೆಳ್ತೂರು ಕ್ರಾಸ್ ಮಾರುತಿ, ಅರಸೀಕೆರೆ ರತ್ನ, ಸಕಲೇಶಪುರ ಮಾರುತಿ, ಸಾತನೂರು ವೆಂಕಟೇಶ್ವರ, ದಾವಣಗೆರೆ ತ್ರಿನೇತ್ರ, MOVIE TIME CINEMAS, ಚಿತ್ರದುರ್ಗ ವೆಂಕಟೇಶ್ವರ, ಬಳ್ಳಾರಿ ರಾಘವೇಂದ್ರ, MOVIE TIME CINEMAS, ಹೊಸಪೇಟೆ ಲಕ್ಷ್ಮಿ, ಹರಿಹರ ಶ್ರೀಕಾಂತ, ಹಿರಿಯೂರು ನಂಜುಂಡೇಶ್ವರ, ಚಳ್ಳಕೆರೆ ರಾಮಕೃಷ್ಣ, ಹಗರಿಬೊಮ್ಮನಹಳ್ಳಿ ಕೊಟ್ಟೂರೇಶ್ವರ, ಹೊಸದುರ್ಗ ಜ್ಯೋತಿ, ಜಗಳೂರು ನಟರಾಜ, ಹುಬ್ಬಳ್ಳಿ ಅಪ್ಸರಾ, PVR, Cinépolis, ಧಾರವಾಡ ಸಂಗಮ್, ಬೆಳಗಾವಿ ಚಿತ್ರಾ, INOX KAPEEL, ಗದಗ್ ಮಹಾಲಕ್ಷ್ಮಿ, ಬಿಜಾಪುರ ಲಕ್ಷ್ಮಿ, ರಾಣೆಬೆನ್ನೂರು ಶಕ್ತಿ, ಹಾವೇರಿ ಮಾಫಾವಿ, ಬಾಗಲಕೋಟೆ ಶಕ್ತಿ, ಶಿರಸಿ ನಟರಾಜ

ಹೊನ್ನಾವರ ಪದ್ಮಾಂಜಲಿ, ರಬಕವಿ ಶ್ರೀನಿವಾಸ, ಇಳಕಲ್ ಶ್ರೀನಿವಾಸ, ಮುಧೋಳ ಸುಭಾಷಿಣಿ, ಗೋಕಾಕ್ ಲಕ್ಷ್ಮಿ, ಲಕ್ಷ್ಮೇಶ್ವರ ಕೃಷ್ಣ, ಸಿಂಧಗಿ ವಿನಾಯಕ, ಬಾದಾಮಿ ಮಹಾಕೂಟೇಶ್ವರ, ಜಮಖಂಡಿ ಸುವರ್ಣ, ಮಾಲಿಂಗಪುರ ಅಪ್ಪಗಿ, ಹಾರೋಗೆರೆ ಚಂದ್ರಮ, ರಾಮದುರ್ಗ ಶ್ರೀನಿವಾಸ, ಬೈಲಹೊಂಗಲ ಸಂಗಮ್, ಶಿಗ್ಗಾಂವ ರಾಜಶ್ರೀ, ಹಳಿಯಾಳ ಬಸವರಾಜ, ಅಥಣಿ ಮುರುಗೇಂದ್ರ, ತಾಳಿಕೋಟೆ ಅಮೀರ್, ಕಾರವಾರ ಅರ್ಜುನ್, ಅಂಕೋಲ ಮಯೂರ, ದಾಂಡೇಲಿ ಶ್ರೀಹರಿ, ಅಂಕೋಲಾ ಸಮರ್ಥ, ಗುಲ್ಬರ್ಗ INOX LIVE the MOVIE, MIRAJ, SHETTY'S MULTIPLEX, ರಾಯಚೂರು MIRAJ, ಬೀದರ್ ಸಪ್ನ, ಗಂಗಾವತಿ MOHIUDDIN TALKIES, ಶಹಪುರ ಜಯಶ್ರೀ, ಸಿಂಧನೂರು ಮಂಜುನಾಥ, ಕೊಪ್ಪಳ ಶಾರದ, ಮಾನ್ವಿ ಮಲ್ಲಿಕಾರ್ಜುನ, ಕರಟಗಿ ಪದ್ಮಾವತಿ

ದೇವದುರ್ಗ ಆನಂದ್, ಕಂಪಿಲಿ ಚಂದ್ರಕಲಾ, ಲಿಂಗಸೂರು ಎಂಪೈರ್, ಶಿವಮೊಗ್ಗ ಮಲ್ಲಿಕಾರ್ಜುನ, Bharath Cinemas, ಚಿಕ್ಕಮಗಳೂರು ಶ್ರೀಲೇಖ, ಭದ್ರಾವತಿ ವೆಂಕಟೇಶ್ವರ, ಶಿಕಾರಿಪುರ ಮಾಲತೇಶ್, ಆನವೇರಿ ಶ್ರೀದೇವಿ, ಕಡೂರು ಅನ್ನಪೂರ್ಣ, ಸಾಗರ ಶ್ರೀ, ಚನ್ನಗಿರಿ ಲಕ್ಷ್ಮಿ, ತರೀಕೆರೆ ವಿನಾಯಕ, ಹೊನ್ನಾಳಿ ಶಾಂತ, ನ್ಯಾಮತಿ ಶ್ರೀಶೈಲ, ಕೊಪ್ಪ ಜೆ.ಎಂ.ಜೆ, ಶಿರಾಳಕೊಪ್ಪ ಮಾರುತಿ, ಆನವಟ್ಟಿ ರೇಣುಕಾ, ಮಂಗಳೂರು SP CINEMAS, PVR, Cinépolis, Bharath Cinemas, ಉಡುಪಿ ಕಲ್ಪನಾ, ಮಣಿಪಾಲ INOX LIVE the MOVIE, Bharath Cinemas, ಕಾರ್ಕಳ ಪ್ಲಾನೆಟ್ ರಾಧಿಕಾ, ಬೈಂದೂರು ಶಂಕರ್, ಕುಂದಾಪುರ ವಿನಾಯಕ, Bharath Cinemas, ಸುರತ್ಕಲ್ ನಟರಾಜ, Cine GALAXY, ಸುಳ್ಯ ಸಂತೋಷ್, ಬೆಳ್ತಂಗಡಿ ಭಾರತ್, ಪಡುಬಿದ್ರೆ Bharath Cinemas, ಪುತ್ತೂರು Bharath Cinemas

ವರಗಳ ಕೊಡುವ ಲಕ್ಷ್ಮೀದೇವಿ

• ನವೀನ ಗಂಗೋತ್ರಿ

ಭಾರತೀಯ ದೇವತಾ ಪರಿಕಲ್ಪನೆಯಲ್ಲಿ ಮೂರ್ತಿಲಕ್ಷಣಗಳು ಅಥವಾ ಪ್ರತಿಮಾಶಾಸ್ತ್ರಕ್ಕೆ ಮಹತ್ವವನ್ನು ಕೊಡಲಾಗಿದೆ. ಅಂದರೆ ಆಯಾಯ ದೇವತಾಮೂರ್ತಿಗಳು ನಿರ್ದಿಷ್ಟ ಪ್ರಕಾರದಲ್ಲಿ ನಿರ್ಮಿತವಾಗಬೇಕಿರುತ್ತವೆ. ದೇವತೆ ಯಾವುದೇ ಇದ್ದರೂ ಅದರ ಮೂಲ ಪರಿಕಲ್ಪನೆಯಿರುವುದು ದುಷ್ಟನಿಗ್ರಹ ಮತ್ತು ಶಿಷ್ಟರಕ್ಷಣೆ. ಈ ಪರಿಕಲ್ಪನೆಯ ಮೂರ್ತ ಅಭಿವ್ಯಕ್ತಿಯೋ ಎಂಬಂತೆ ದೇವತೆಯರು ಪಾಶಾಂಕುಶಾದಿ ಆಯುಧಗಳನ್ನು ಧರಿಸಿರುವುದು ಮತ್ತು ಅಭಯ ಹಾಗೂ ವರದ ಮುದ್ರೆಗಳನ್ನು ಕೈಯಲ್ಲಿ ರೂಪಿಸಿರುವುದನ್ನು ಕಾಣಬಹುದಾಗಿದೆ.

ಬಹುತೇಕ ಎಲ್ಲ ದೇವತೆಗಳೂ ಶಿಷ್ಟರಕ್ಷಣೆಯ ಸಂಕೇತವಾಗಿ ಅಭಯ ಮತ್ತು ವರದ ಮುದ್ರೆಗಳನ್ನು ಧರಿಸಿರುತ್ತಾರೆ.

ಇಂದು ವರಮಹಾಲಕ್ಷ್ಮಿ ಹಬ್ಬ

ಹೀಗಿರುವಾಗ ವರ ಮತ್ತು ಅಭಯಗಳಿಗಾಗಿಯೇ ಪ್ರಸಿದ್ಧವಾದ ವೈದಿಕ-ಪುರಾಣೋಕ್ತ ದೇವತೆ ಲಕ್ಷ್ಮೀ ದೇವಿ. ಸ್ತುತಿಪ್ರಿಯಳಾದ ಈ ದೇವತೆಯ ಕುರಿತಾದ ಬಹುತೇಕ ಎಲ್ಲ ಸ್ತುತಿಗಳಲ್ಲಿ ಆಯುಧಗಳು ಮತ್ತು ನಿಗ್ರಹಣ ಪರಿಕರಗಳಿಗಿಂತ ಹೆಚ್ಚಾಗಿ ಈಕೆಯ ವರದಗುಣವನ್ನೇ ಹೆಚ್ಚು ವರ್ಣಿಸಲಾಗುತ್ತದೆ. ಲಕ್ಷ್ಮೀನಾರಾಯಣಹೃದಯ ಪಾರಾಯಣದಲ್ಲಿಯಾದರೂ ಈಕೆಯನ್ನು 'ಕೌಶೇಯ ಪೀತವಸನಾಮರವಿಂದನೇತ್ರಾಂ, ಪದ್ಮದ್ವಯಾಭಯವರೋದ್ಯತಪದ್ಮಹಸ್ತಾಂ' ಎಂದು ಸ್ತುತಿಸಲಾಗಿದೆ. ಇಲ್ಲಿಯೂ ಈಕೆಯ ಅಭಯ ಮತ್ತು ವರದ ಸ್ವಭಾವಕ್ಕೇ ಮಹತ್ವ. ಲಕ್ಷ್ಮೀದೇವಿಯ ಕುರಿತಾದ ಬಹುತೇಕ ಎಲ್ಲ ಧ್ಯಾನಶ್ಲೋಕಗಳಲ್ಲಿ ಆಯುಧಗಳನ್ನು ಸ್ತುತಿಸದೆ ಅಭಯವನ್ನು ಹಾಗೂ ವರವನ್ನು ಕೊಡಮಾಡುವ ಸಮೃದ್ಧಿಯ ಗುಣಗಳನ್ನು ಹೆಚ್ಚಾಗಿ ಸ್ತುತಿಸಿದ್ದನ್ನು ಕಾಣಬಹುದು. ಅಂದರೆ ಲಕ್ಷ್ಮೀದೇವಿಯ ರೂಪು, ಅವಳ ತೋರುಗೆ, ಸ್ವಭಾವ ಎಲ್ಲವೂ ಮನುಷ್ಯನು ಸದಾ ಬಯಸುವ ಸಮೃದ್ಧಿಗೆ ಸಂಬಂಧಿಸಿದವೇ ಆಗಿರುತ್ತವೆ.

ಈ ಹಿನ್ನೆಲೆಯಲ್ಲಿ ವರಮಹಾಲಕ್ಷ್ಮೀ ಹಬ್ಬವನ್ನು ಸಂಪತ್ತು ಮತ್ತು ಇಚ್ಛಾಪೂರ್ತಿಯ ಕುರಿತಾದ ಹಬ್ಬವನ್ನಾಗಿ ನೋಡಬಹುದು. ಲಕ್ಷ್ಮೀದೇವಿ ಸಮೃದ್ಧಿ ಮತ್ತು ಇಚ್ಛಾಪೂರ್ತಿಯ ದೇವತೆಯಾಗಿಯೇ ವೇದದಲ್ಲೂ ಪುರಾಣದಲ್ಲೂ ಖ್ಯಾತಳಾದವಳು. ಅವಳ ಅನುಗ್ರಹಕ್ಕಾಗಿ ಶ್ರಾವಣಮಾಸದ ಶುಕ್ರವಾರದಂದು ಭಾರತೀಯ ಶ್ರದ್ಧಾಳುಗಳು ಆಚರಿಸುವ ಹಬ್ಬವೇ ವರಮಹಾಲಕ್ಷ್ಮೀ ಹಬ್ಬ. ಇದನ್ನೊಂದು ವ್ರತದಂತೆ ಮಾಸವಿಡೀ ಆಚರಿಸುವ ಕ್ರಮವೂ ಇದೆ, ಅಥವಾ ಶ್ರಾವಣಮಾಸದ ಶುಕ್ಲಪಕ್ಷದ ಶುಕ್ರವಾರದಂದು ಮಾತ್ರವೇ ಆಚರಿಸುವ ಕ್ರಮವೂ ಉಂಟು.

ಸಮೃದ್ಧಿಯ ಕುರಿತಾದ ಭಾರತೀಯ ಕಲ್ಪನೆ ಧನಕನಕಾದಿಗಳಿಗೆ ಮಾತ್ರವೇ ಸೀಮಿತವಾಗಿಲ್ಲ. ಸಮೃದ್ಧಿಯೊಂದು ವಿಸ್ತಾರವಾದ ಸೌಖ್ಯದ ಪರಿಕಲ್ಪನೆಯಾಗಿದ್ದು ಮಾನವನ ಭೌತಿಕ ಬದುಕಿನ ಸರ್ವತೋಮುಖ ನೆಮ್ಮದಿಯನ್ನು ಒಳಗೊಳ್ಳುತ್ತದೆ. ಈ ಸೌಖ್ಯವೆಂಬುದು ಧನಕನಕಗಳಿಂದಲೇ ಒದಗಿಬಿಡುತ್ತದೆಯೆಂಬುದು ಸತ್ಯವಲ್ಲ. ಹಾಗಾಗಿ ಸಮೃದ್ಧಿಗಾಗಿ ಲಕ್ಷ್ಮೀ ದೇವಿಯನ್ನು ಸ್ತುತಿಸುವ ಎಲ್ಲ ವ್ರತಕಥೆಗಳು ಮತ್ತು ಸ್ತೋತ್ರಗಳು ಬರಿ ಧನಕನಕಗಳನ್ನು ಮಾತ್ರ ಕೇಳದೆ ಒಳ್ಳೆಯ ಮಾತು, ಸಚ್ಚಿಂತನೆ, ಇನ್ನೊಬ್ಬರ ಕುರಿತಾದ ಸದ್ಭಾವನೆ, ಕೃಷಿಯ ಸಮೃದ್ಧಿ, ಹೈನು ಉತ್ಪನ್ನಗಳ ಸಮೃದ್ಧಿ, ಆರೋಗ್ಯ ಮತ್ತು ಕಣ್ಣುಗಳ ಕಾಂತಿಯನ್ನು, ಸೌಂದರ್ಯವನ್ನು ಕೊಡು ಎಂದು ಪ್ರಾರ್ಥಿಸುತ್ತವೆ. ನೆಮ್ಮದಿಯ ಬದುಕಿನ ಸೂತ್ರಗಳ ಮೂಲಾಧಾರ ಏನೆಲ್ಲ ಇವೆಯೆಂದು ನಮಗೆ ಅರಿವಾಗುವುದಕ್ಕಾಗಿಯಾದರೂ ಲಕ್ಷ್ಮೀದೇವಿಯ ಕುರಿತಾದ ವ್ರತಕಥೆ ಮತ್ತು ಸ್ತೋತ್ರಗಳನ್ನು ಓದಿಕೊಳ್ಳಬೇಕು. ವರಮಹಾಲಕ್ಷ್ಮೀ ಹಬ್ಬ ಈ ಓದು ಮತ್ತು ಮನನಕ್ಕೆ ಹೇಳಿ ಮಾಡಿಸಿದಂಥ ಕಾಲಪರ್ವ.

ಪುರಾಣಗಳ ಕಾಲದಿಂದ ನಮ್ಮ ಇವತ್ತಿನ ಕಾಲದವರೆಗೂ ಮಾನವ ಮನಸ್ಸಿಗೆ ನೆಮ್ಮದಿಯನ್ನು ಮತ್ತು ಬದುಕಿಗೆ ಸಮೃದ್ಧಿಯನ್ನು ಕೊಡುವ ಮೂಲಭೂತ ಸಂಗತಿಗಳಲ್ಲಿ ಬದಲಾವಣೆ ಆಗಿಲ್ಲ. ವರ್ತಮಾನ ಜಗತ್ತಿನ ಸೌಖ್ಯವಾದರೂ ಕೃಷಿ, ಹೈನು ಮತ್ತು ಆಹಾರ ಸಮೃದ್ಧಿಯನ್ನು ಹೊರತಾಗಿ ಇಲ್ಲವಷ್ಟೆ. ಒಂದು ಸಮುದಾಯವಾಗಿ ಬದುಕುವಾಗ ಈ ನೆಮ್ಮದಿಯ ಸಾಧನಗಳು ಎಲ್ಲರಿಗೂ ಒದಗಿದಾಗ ಮಾತ್ರವೇ ಎಲ್ಲರ ನೆಮ್ಮದಿ ಖಚಿತವಾಗಿ ಉಳಿಯುತ್ತದೆ. ಕೆಲವರು ದರಿದ್ರರಾಗಿ ಮತ್ತು ಉಳಿದವರು ಸಮೃದ್ಧರಾಗಿ ಇದ್ದರೆ ಎಲ್ಲರ ನೆಮ್ಮದಿಗೂ ಸಂಚಕಾರ ಬರುವುದು ನಿಶ್ಚಿತ. ಈ ಎಚ್ಚರದೊಂದಿಗೇ ಸಂಪತ್ತಿನ ಕುರಿತಾದ ನಮ್ಮ ಪ್ರಾರ್ಥನೆಗಳು ರೂಪುಗೊಂಡಿವೆ. ಮತ್ತಿವು ಸರ್ವದಾ ಮಾನವಮಾತ್ರ ಕೇಂದ್ರಿತವೂ ಅಲ್ಲ; ಸಕಲ ಜೀವಲೋಕವನ್ನು ಒಳಗೊಳ್ಳುವಂಥವು. ಲಕ್ಷ್ಮೀದೇವಿ ನಮ್ಮ ಸಮಾಜ, ಸಮುದಾಯ ಮತ್ತು ರಾಷ್ಟ್ರಗಳಲ್ಲಿ ಈ ಸರ್ವತೋಮುಖ ಸೌಖ್ಯವನ್ನು ತಂದು ತುಂಬಲೆಂದು ಪ್ರಾರ್ಥಿಸೋಣ. ❖

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 NOTICE FOR PRIVATE SALE OF GOLD 24/08/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-09-2023 as shown below:

Br. Belthangadi: Suvarna Arcade, Belthangadi, Dakshina Kannada, Karnataka- 574 214, Ph no. 08256-232404 :-
19016400058751,19016400078270,19016400069816,19016400072190,19016400019282,19016400056771,19016400071028,19016400064023,19016400070236,19016400073024,19016400070947,19016400068123,19016400059098,19016400078247,19016400078106,19016400062183,19016400059106,19016400077876,19016400070889,19016400075805,19016400058785,19016400065491,19016400077298,19016400077066,19016400070392,19016400077620,19016400074600,19016400069634,19016400076308,19016400044934,19016400076662,19016400078163,19016400071465,19016400063454,19016400069238,19016400018680,19016400071317,19016400049362,19016400077280,19016400019274,19016400077272,19016400071994,19016400064940,19016400060369,19016400078205,19016400068388,19016400072281,19016400078379,19016400060674,19016400076670,19016400062423,19016400061797,19016400078486,19016400078177,19016400053984,19016400061250,19016400078502,19016400076290,19016400040957,19016400077595,19016400075623,19016400072679.

Br. Bhatkal: Misbah Chambers, Ranginkatta, NH 17, Bhatkal, Uttar Kannada, Karnataka- 581 320 :- 19866400063957,19866400081769.

Br. Chikmagalur: P B No 157, Bm Buildings, Thogarihenkal Circle, K M Road, Chikmagalur- 577 101, Ph no. 08262-233024 :-
13566400172222,13566400197781,13566400191958,13566400148032,13566400193663,13566400178567,13566400189705,13566400139064,13566400193046,13566400179334,13566400188459,13566400189879,13566400185109,13566400193053,13566400194028,13566400173089,13566400189861,13566400177031,13566400193087,13566400142084,13566400196882,13566400176104,13566400177221,13566400186255,13566400176819,13566400196874,13566400176710,13566400192485,13566400178179,13566400194168,13566400189002,13566400135211,13566400177627,13566400121757,13566400160946,13566400189069,13566400191685,13566400192790,13566400193608,13566400174087,13566400137290,13566400185976,13566400179060,13566400174228,13566400184979,13566400192915,13566400193764.

Br. Channarayapatna: Ground Floor, Madhu Complex, Mysore Road, Channarayapatna, Hassan- 573116 Ph No. 08176-252438 :-
19876400105088,19876400109064,19876400112050,19876400113199,19876400113272,19876400113330,19876400114023,19876400114445,19876400114650,19876400114684,19876400114809,19876400114858,19876400114882,19876400114916,19876400114924,19876400114940,19876400115038,19876400115194,19876400115343,19876400117299,19876400117745,19876400117968,19876400118735,19876400120210,19876600001236.

Br. Gonikoppal: Sudharma Building,Near Masjid, Ponnampet Road Jn, Main Road, Gonikoppal, Kodagu- 571 213 :-
19616400100535,19616400084580,19616400080455,19616400098010,19616400120192,19616400105849,19616400100246,19616400086718,19616400096881,19616400098523,19616400063337,19616400062339,19616400062586,19616400061992,19616400088094,19616400089027,19616400069219,19616400069342,19616400096816,19616400052702,19616400089043,19616400098333,19616400101608,19616400099687,19616400088847,19616400088839,19616400100659,19616400098739,19616400091122.

Br. Hebri: Spatika Plaza, Kuchoor Road, Hebri, Karkala Taluk, Udupi- 576 112, Ph No. 08253-250045 :-
18966400017903,18966400018091,18966400019339,18966400019875,18966400017341,18966400017770,18966400017796,18966400017804.

Br. Hassan: Ground Floor, St. Antony's Church Complex, NR Circle, HN Pura Road, Hassan, Karnataka- 573 201 :-
13546400230253,13546400236557,13546400225618,13546400252554,13546400237472,13546400162621,13546400236375,13546400237019,13546400253958,13546400229164,13546400233398,13546400237225,13546400235311,13546400227531,13546400229933,13546400151871,13546400224306,13546400255953,13546400253263,13546400254782,13546400211675,13546400234255,13546400235427,13546400231814,13546400266653,13546400232234,13546400236193,13546400233885,13546400233877,13546400234602,13546400231582,13546400230808,13546400227382,13546400160302,13546400231699,13546400236276,13546400181704,13546400223548,13546400228141,13546400237225,13546400263684,13546400203235,13546400263692,13546400241623,13546400183767,13546400238033,13546400242332,13546400204449,13546400245038,13546400241540.

Br. Kadur: Dr Vishwanath Building, Maravanji Circle, BH Road, Kadur, Chikmagalur- 577 548 Ph no. 08267-221244 :-
18936400035403,18936400040411,18936400035528,18936400039603,18936400035569,18936400039603,18936400035692,18936400035940.

Br. Kadaba: Ground Floor, Anugraha Complex, Main Road, Kadaba, Dakshina Kannada District- 574 221 :-
20126400019526,20126400032420,20126400032412.

Br. Kundapura: Shivram Complex, Municipal Main Road, Kundapura, Udupi- 576201 Ph No. 08254 233144 :- 20146400091598.

Br. Kushalnagar: HRS Mansion, BM Road, Kushal Nagar, Kodagu District- 571 234, Ph No. 08276 274084 :-
19316400034442,19316400068788,19316400059159,19316400071170,19316400057112,19316400075957,19316400076302,19316400041769,19316400070586,19316400058581,19316400038526,19316100160760.

Br. Karkala: Opp Bundimatt Bus Stand, Karkala, Udupi District- 574104 :- 19636400027132,19636400031555,19636400031985.

Br. Kinnigoli : C4 and C5, Pintos Golden Castle, Talipady Road, Next to BSNL office, Kinnigoli, Dakshin Kannad Dist - 574 150 Ph : 0824-2295690 :-
20076400029100,20076400030355,20076400029092.

Br. Moodabidri: Next to Hotel Pancharatna Buidling, Moodabidri, Dakshin Kannada Dist.- 574 227 :-
19626400048790,19626400049384,19626400057106,19626400058930,19626400060498,19626400051232,19626400055829,19626400031820,19626400057353,19626400058971,19626400061256,19626400054814,19626400058963,19626400057064,19626400057080.

Br. Mangalore: P B No. 775, Near PVS Circle, Manasa Towers, M G Road, Kodialbail, Mangalore, Dakshin Kannad- 575 003, Ph No. 08242497883 :-
11756400029231,11756400029249,11756400018937,11756400032904,11756400032839,11756400034900,11756400035006,11756400035394,11756400028720,11756400029827,11756400034850,11756400025254.

Br. Mangalore/Kankanady: The Vintage, Kankanady, Dakshina Kannad, Mangalore- 575 002, Ph No. 08242430152 :-
17706400024157,17706400024165,17706400025709,17706400023985,17706400023662,17706400025329,17706400025337,17706400026517,17706400023639,17706400021633,17706400023605,17706400018423.

Br. Puttur: Meenar Complex, Main Road, Puttur, Dakshin Kannad- 574 201, Ph No. 08251-233544 :-
18946400066407,18946400066886,18946400067728,18946400073783,18946400073890,18946400074047,18946400074435,18946400074518,18946400074757,18946400075606,18946400078311,18946400078402,18946400078535,18946400078840,18946400079137,18946400079178,18946400080093.

Br. Shimoga: Haranahalli Manjappa Complex,, Park Extension Road, Durgigudi, Shimoga District- 577 201, Ph No. 08182-271998 :-
15906400046232,15906400052131,15906400068194,15906400069184,15906400059656,15906400069192,15906400068202,15906400047339,15906400068186,15906400069275,15906400068285,15906800009194,15906400064912,15906400062288,15906400052099,15906400069465,15906400068541,15906400062460,15906400072295,15906400062833,15906400047487.

Br. Sullia: Ganesh Complex, Main Road, Sullia, Dakshina Kannada- 574 239, Ph no. 08257 230818 :-
19006400028854,19006400029316,19006400031031,19006400025827.

Br. Thokottu: R E B Complex, Opp.Thokottu Bus stand, NH17, Permannur Po, Thokkottu Jn, Dakshin Kannada-575017, Ph 08242462013:- 20136400060438.

Br. Udupi: Mahalasa Towers, Court Road, Udupi, Karnataka- 576 101, Ph no. 08202521562 :-
15746400051380,15746400042926,15746400047602,15746400050564,15746400048980,15746400052917,15746400047834,15746400043841,15746400051950,15746400049459,15746400049269,15746400053428,15746400052164,15746400050853,15746400042413,15746400052438,15746400052172,15746400046075,15746400052859,15746400052487,15746400052156,15746400049905,15746400050846,15746400051075,15746400052081,15746400051943,15746400052776,15746400054178,15746400052255,15746400052586,15746400052867,15746400054228,15746400054194,15746400048915,15746400048923.

Bangalore 24-08-2023 Vice President & Zonal Head

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು
ದೂರವಾಣಿ: 0821–2424070 ಇಮೇಲ್:dudc_mys@yahoo.co.in

ಸಂಖ್ಯೆ:ಮುನಿಸಿ(4)/ಗೃ.ಲ.ಯೋ.ಉ/ಊ.ಟೆಂ/ಸಿ.ಆರ್–01/2023–24 ದಿನಾಂಕ: 19.08.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ, ಗೃಹ ಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುವ ಗಣ್ಯರು ಹಾಗೂ ಸಾರ್ವಜನಿಕರಿಗೆ ಊಟದ ವ್ಯವಸ್ಥೆಯನ್ನು ಕಲ್ಪಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸರಬರಾಜುದಾರರು/ಏಜೆನ್ಸಿದಾರರು **www.kppp.karnataka.gov.in** ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ. (ರೂ.ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ.	ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1)	ಗೃಹ ಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುವ ಗಣ್ಯರು ಹಾಗೂ ಸಾರ್ವಜನಿಕರಿಗೆ ಊಟದ ವ್ಯವಸ್ಥೆಯನ್ನು ಕಲ್ಪಿಸುವುದು. DMA/2022-23/SE0643	228.00	3.42	28–08–2023 ಮಧ್ಯಾಹ್ನ 3.00 ಘಂಟೆಯೊಳಗೆ	29–08–2023 ಮಧ್ಯಾಹ್ನ 3.15 ಘಂಟೆಗೆ

ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಕೆಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು

DIPR/MYS/KAVITA/238/2022-23

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ–ಪೂರ್ವ)
21ನೇ ಮಹಡಿ, ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡ,
(ಪಿಯುಬಿ) ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560 001.
ಸಂಖ್ಯೆ: ಕಾಪಾಅ(ಯೋ–ಪೂ)ಟೆಂಡರ್/09/2022–23 ದಿನಾಂಕ: 01.08.2023

ಸೇರ್ಪಡೆ–1 (ADDENDUM-1)

ಟೆಂಡರ್ ಪ್ರಕಟಣೆ ಮತ್ತು ಪ್ರಸ್ತಾವನೆ ಕೋರಿಕೆಯಂತೆ	ಓದಿಕೊಳ್ಳಬೇಕಾಗಿರುವುದು
ಟೆಂಡರ್ ಉಲ್ಲೇಖದ ರೀತ್ಯಾ ಟೆಂಡರ್ ಪ್ರಕಟಣೆ ಮತ್ತು ಪ್ರಸ್ತಾವನೆ ಕೋರಿಕೆ ದಾಖಲೆಗಳಂತೆ www.eproc.karnataka.gov.in ಎಂದು ನಮೂದಿಸಲಾಗಿತ್ತು	ಹೊಸ ಕೆಪಿಪಿಪಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ರೀತ್ಯಾ ಟೆಂಡರ್ ಪ್ರಕಟಣೆ ಮತ್ತು ಆರ್‌ಎಫ್‌ಪಿ ದಾಖಲೆಗಳನ್ನು https://kppp.karnataka.gov.in ನಲ್ಲಿ ವೀಕ್ಷಿಸಬಹುದು

ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ ಪೂರ್ವ)

High Court of Karnataka
Bengaluru.

No.GOB(I)8/2022 Date: 22.08.2023

INTIMATION

In pursuance of this notification dated 20.09.2022 inviting online applications for filling up of 16 vacant posts of District Judges by direct recruitment in accordance with the Karnataka Judicial Service (Recruitment) Rules, 2004 and Amendment Rules 2011, 2015 & 2016, the list of candidates selected for the post of District Judges by direct recruitment, is published on the High Court of Karnataka **Website: https://karnatakajudiciary.kar.nic.in/recruitment.php.**

By Order,
(K.S. Bharath Kumar)
Registrar General

DIPR/CP/RO1040/AAPL/2023-24

GOVERNMENT OF INDIA
OFFICE OF THE PRINCIPAL CHIEF COMMISSIONER OF INCOME TAX, KARNATAKA AND GOA REGION, BENGALURU
Central Revenue Building, No. 1, Queens Road, Bengaluru – 560001.

ENGAGEMENT OF TALENTED YOUNG GRADUATES IN LAW AND ACCOUNTANCY TO ASSIST THE INCOME TAX DEPARTMENT BEFORE INCOME TAX APPELLATE TRIBUNAL

With a view to augment departmental representation in ITAT, the Young Professional Scheme, 2023 envisions engagement of Young Graduates in Law & Accountancy who are rich in domain knowledge. Such professionals would aid the departmental officers in preparation of the cases admitted for hearing in Tribunals. In addition, they will also take up research/study work encompassing critical areas of tax litigation for effective litigation management. There are two positions under this scheme on full time basis for a period of one year extendable by one year subject to performance. One position is for law and another for accountancy graduate, carrying a monthly lumpsum stipend of **Rs.40,000/-** The Notification is available at **https://www.incometaxbengaluru.org/.** The detailed application form will be made available on **https://www.incometaxbengaluru.org/** from **01.09.2023** onwards.

Sd/-
Commissioner of Income Tax (Admin & TPS)
O/o. Pr. Chief Commissioner of Income Tax,
Karnataka and Goa Region

ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ವಿಜಯಪುರ

ಪ್ರಕಟಣೆ

2023–24ನೇ ಸಾಲಿನ ರಾಜ್ಯ ವಲಯ ಮೀನು ಸಲಕರಣೆ ಕಿಟ್ ಯೋಜನೆಯಡಿಯಲ್ಲಿ ವಿಜಯಪುರ ಜಿಲ್ಲೆಯ ಮೀನುಗಾರಿಕೆ ಸಹಾಯಕ ನಿರ್ದೇಶಕರು ವಿಜಯಪುರ ವಲಯದ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯ ತಾಲೂಕ ಮಟ್ಟದ ಕಚೇರಿಗೆ ಸಾಮಗ್ರಿ ಖರೀದಿಸಿ ಫಲಾನುಭವಿಗಳಿಗೆ ಪೂರೈಸಬೇಕಾಗಿದ್ದು, ಈ ಕೆಳಗೆ ಕಾಣಿಸಿದ ಕಿಟ್/ಹರಿಗೋಲು ಸಾಮಗ್ರಿಗಳನ್ನು ಪೂರೈಸಲು ಸರಬರಾಜುದಾರರಿಗೆ ತಮ್ಮ ಕನಿಷ್ಠ ದರಗಳನ್ನು ಸಾಮಗ್ರಿಗಳ ಅನುಸಾರವಾಗಿ ಅಲ್ಪಾವಧಿ ಟೆಂಡರ್ ದರಪಟ್ಟಿ ಪೂರೈಸಬೇಕಾದ ಸಾಮಗ್ರಿಗಳ ವಿವರ. **(1)** Nylon monofilament net, (0.16 mesh size,80 mm, 100MD double knot,double salvage,.**(2)** Nylon monofilament net, (0.16 mesh size,100 mm, 50MD double knot,double salvage, **(3)** Nylon monofilament net,(0.16 mesh size,115mm, 50MD double knot,double salvage,) **(4)** Nylon monofilament net ,(0.20 mesh size,115mm, 40MD double knot,double salvage).**(5)** Nylon monofilament net,(0.20 mesh size,130mm, 40MD double knot,double salvage)**(6)** Nylon monofilament net(0.23mesh size,140mm, 40MD double knot,double salvage)**(7)** Nylon monofilament net (0.23mesh size,150mm, 40MD double knot,double salvage)**(8)** Nylon monofilament net (0.23mesh size,160mm, 40MD double knot,double salvage)**(9)** Plastic crate(ISI certified 650*450*325 mm).**(10)** IRON Weiging scale with stones Approved from weights and measures department 5kg capacity with 2kg,1kg,500g,200g,100g.50g, weighing butts **(11)** Fiber Glass-Coracle + 2 oars (6 feet). **(12)** Life Jacket

ಕಛೇರಿಗೆ ನಿಗಧಿಪಡಿಸಿದ ಗುರಿಗಳ ವಿವರ (ಆರ್ಥಿಕ ರೂ. ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆ / ತಾಲೂಕು	ಮೀನುಗಾರಿಕೆ ಸಹಾಯಕ ನಿರ್ದೇಶಕರು ವಿಜಯಪುರ	
		ಆರ್ಥಿಕ	ಭೌತಿಕ
2	ರಾಜ್ಯ ವಲಯ ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ 2405–00–110–0–02	2.50	25

1) ಕಛೇರಿಗೆ ನಿಗಧಿಪಡಿಸಿದ ಆರ್ಥಿಕ ಗುರಿ ಅನ್ವಯ ಶೇಕಡಾ 2.5 ರಷ್ಟು ಇ ಎಂ ಡಿ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕಿನ ನಗದು ಹುಂಡಿಯನ್ನು ಕಚೇರಿಗೆ ಸಲ್ಲಿಸಬೇಕು. 2) ರೂ.200/– ಗಳನ್ನು ನಗದಾಗಿ ಪಾವತಿಸಿ ಟೆಂಡರ್ ಫಾರಂಗಳನ್ನು ಕಛೇರಿ ವೇಳೆಯಲ್ಲಿ ಪಡೆಯತಕ್ಕದ್ದು. 3) ಕಛೇರಿಯಿಂದ ಟೆಂಡರ್ ಅರ್ಜಿ ಪಡೆದು, ನಿಗಧಿತ ಗುರಿ ಪ್ರಕಾರ ಕಚೇರಿಗೆ ಟೆಂಡರ್ ಅರ್ಜಿ ಸಲ್ಲಿಸುವುದು. 4) ಖಾಲಿ ಟೆಂಡರ್ ಅರ್ಜಿ ಫಾರಂಗಳನ್ನು ವಿತರಿಸುವಕೊನೆಯ ದಿನಾಂಕ: 24.08.2023 ರ ಸಂಜೆ 4:00 ಘಂಟೆಯವರೆಗೆ. 5) ಅರ್ಜಿತುಂಬಿದ ಹಾಗೂ ಶೀಲ್ಡ್ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸುವಕೊನೆಯ ದಿನಾಂಕ: 30.08.2023 ರ ಮಧ್ಯಾಹ್ನ 1:00 ಘಂಟೆಯವರೆಗೆ. 6) ದಿನಾಂಕ: 31.08.2023 ರಂದುಮಧ್ಯಾಹ್ನ 4:00 ಕ್ಕೆ ಶೀಲ್ಡ ಕವರುಗಳನ್ನು ತೆರೆಯಲಾಗುವುದು. ಸಾಧ್ಯವಾಗದೇ ಇದ್ದಲ್ಲಿ ಮುಂದಿನ ಕಛೇರಿಯ ದಿನದಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಸಕರು ವಿಜಯಪುರ ತಾಲೂಕ ಮಟ್ಟದ ಕಚೇರಿಯನ್ನು ಸಂಪರ್ಕಿಸಲು ಕೋರಿದೆ.

ಸಹಿ/–
ಮೀನುಗಾರಿಕೆ ಸಹಾಯಕ ನಿರ್ದೇಶಕರು, ವಿಜಯಪುರ

ವಾಸಾಸಂಇ/ವಿಜಯಪುರ/117/ಕೆಎಸ್‌ಎಂಸಿಎ/2023–24

MSPL LIMITED
a Baldota Group Company,

ಪ್ರಸ್ತಾವನೆಗಾಗಿ ವಿನಂತಿ

MSPL Limited, a Baldota Group Company, ಕಬ್ಬಿಣದ ಅದಿರು ಗಣಿಗಾರಿಕೆ ಬೆನಿಫಿಶಿಯೇಶನ್ ಮತ್ತು ಪೆಲೆಟೈಸೇಶನ್‌ನಲ್ಲಿ ತೊಡಗಿಸಿಕೊಂಡಿದೆ. 1.2 mtpa ಪೆಲೆಟ್ ಪ್ಲಾಂಟ್ ಮತ್ತು ಬೆನಿಫಿಸಿಯೇಶನ್ ಪ್ಲಾಂಟ್ ಭಾರತದ ಕರ್ನಾಟಕ, ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ, ಕಬ್ಬಿಣದ ಅದಿರು ಬೆನಿಫಿಸಿಯೇಶನ್ ಟೈಲಿಂಗ್‌ಗಳನ್ನು ಬಳಸಿಕೊಂಡು ಇಟ್ಟಿಗೆ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಕಂಪನಿಯು **'ಪ್ರಸ್ತಾವನೆಗಾಗಿ ವಿನಂತಿ'**ಯನ್ನು ಆಹ್ವಾನಿಸುತ್ತಿದೆ. ಇಟ್ಟಿಗೆಗಳ ಸ್ಥಾವರವು ದಿನಕ್ಕೆ ಕನಿಷ್ಠ 50,000 ಇಟ್ಟಿಗೆಗಳನ್ನು ಉತ್ಪಾದನಾ ಸಾಮರ್ಥ್ಯವುಳ್ಳದ್ದಾಗಿರಬೇಕು.
ಆಸಕ್ತರು ಮೂರು ವಾರಗಳಲ್ಲಿ ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಬಹುದು. ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ಕೆಳಗೆ ತಿಳಿಸಲಾದ ಪ್ರತಿನಿಧಿಗಳನ್ನು ಸಂಪರ್ಕಿಸಿ ಮತ್ತು ಮೇಲ್ ಮೂಲಕ ಪ್ರಸ್ತಾವನೆಯ ಸಾಫ್ಟ್ ಕಾಪಿ ಮತ್ತು ಕೆಳಗಿನ ವಿಳಾಸಕ್ಕೆ ಹಾರ್ಡ್ ಕಾಪಿಯನ್ನು ಕಳುಹಿಸಿರಿ.

ರಾಮಕೃಷ್ಣ ಜಿ. GM	ಹೇಮಂತ್ AGM
+91 81068 51085	+91 90086 43219
ramakrishna.j@rmml.in	hemanth.kumar@rmml.in

Address: MSPL Limited, Business Development Department, Corporate office, Baldota Group, Baldota Enclave, Abheraj Baldota Road, Hospet – 583203, Karnataka, India.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ: ಆರ್‌ಜಿಯು/ಇಎಸ್‌ಟಿ/32/2023–24 ದಿನಾಂಕ: 24.08.2023

ಅಧಿಸೂಚನೆ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗಕ್ಕೆ **ಒಬ್ಬರು ಗ್ರಂಥಪಾಲಕರನ್ನು** ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ನೇಮಕಾತಿ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಆದುದರಿಂದ ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ತಮ್ಮ ಸ್ವವಿರಗಳನ್ನೊಳಗೊಂಡ (Resume/Curriculum Vitae) ಸಂಪೂರ್ಣ ಮಾಹಿತಿಯೊಂದಿಗೆ ಅರ್ಜಿಯನ್ನು ದಿನಾಂಕ **11–09–2023**ರೊಳಗೆ ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಬೆಂಗಳೂರು ಇವರಿಗೆ ಇ–ಮೇಲ್(registrar@rguhs.ac.in) ಮುಖಾಂತರ ಸಲ್ಲಿಸುವುದು.

ಸಹಿ/–
ಕುಲಸಚಿವರು

ವಾ.ಸಾ.ಸಂ.ಇ/1042/2023–24

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ, 7ನೇ ಮಹಡಿ,
ಕ.ಗೃ.ಮಂ ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು–560 009

ಸಂ: ಜಅಇ/ಜಂ.ನಿ(ಪ)/ಆರ್‌ಎಫ್‌ಪಿ–1/ವಿವ–24/2023–24 ದಿನಾಂಕ: 24.08.2023

ಟೆಂಡರ್ ಆಹ್ವಾನಿಸುವ ಸೂಚನೆ

"ಜಲಾನಯನ ಅಭಿವೃದ್ಧಿ ಇಲಾಖೆಯ ಅಡಿಯಲ್ಲಿ ವಿವಿಧ ಪಶುಸಂಗೋಪನೆ ಚಟುವಟಿಕೆಗಳಿಗೆ ಡೈರಿ ಸಲಕರಣೆಗಳ (ಹಾಲು ಕರೆಯುವ ಯಂತ್ರ, ರಬ್ಬರ್ ಮ್ಯಾಟ್ ಮತ್ತು ಮೇವು ಕತ್ತರಿಸುವ ಯಂತ್ರಗಳು) ಪೂರೈಕೆ ಮತ್ತು ಅನುಸ್ಥಾಪನೆ"

ಕರ್ನಾಟಕ ಇ–ಸಂಗ್ರಹಣ ವೇದಿಕೆ ಮೂಲಕ ಜಲಾನಯನ ಅಭಿವೃದ್ಧಿ ಇಲಾಖೆಯು ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ಹಾಲು ಕರೆಯುವ ಯಂತ್ರ, ರಬ್ಬರ್ ನೆಲದ ಹಾಸುಗಳು ಮತ್ತು ಮೇವು ಕತ್ತರಿಸುವ ಯಂತ್ರಗಳನ್ನು ಸರಬರಾಜು ಮಾಡಲು **Short term Request for Proposal (RFP)** ಆಹ್ವಾನಿಸುತ್ತಿದೆ. **Short term Request for Proposal (RFP)** ದಾಖಲಾತಿಗಳೊಂದಿಗೆ ವಿವರವಾದ ಮಾಹಿತಿಯನ್ನು ಕರ್ನಾಟಕ ಇ–ಸಂಗ್ರಹಣೆ ವೇದಿಕೆ **(https://eproc.karnataka.gov.in)** ಯಲ್ಲಿ ಅಳವಡಿಸಲಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅವಲೋಕಿಸಿ ಸಲ್ಲಿಸುವುದು. **Short term Request for Proposal (RFP)** ದಾಖಲಾತಿಗಳು ಲಭ್ಯವಾಗುವ ದಿನಾಂಕ: **24.08.2023** ಮತ್ತು **Short term Request for Proposal (RFP)** ಸಲ್ಲಿಸುವ ಕೊನೆಯ ದಿನಾಂಕ: **14.09.2023** ರಂದು ಸಾಯಂಕಾಲ **4.30** ಗಂಟೆಯವರೆಗೆ ಇರುತ್ತದೆ. ಪ್ರಿಬಿಡ್ ಸಭೆಯ ದಿನಾಂಕ: **31.08.2023** ರಂದು ಬೆಳಗ್ಗೆ **11.00** ಗಂಟೆಗೆ ನಿಗಧಿಯಾಗಿರುತ್ತದೆ.

ಸಹಿ/–
ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು

DIPR/CP/1041/Zenkar/2023-24

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–03/ಎಇ–2/2023–24/1203 ದಿನಾಂಕ:– 21.08.2023

ಇ–ಪ್ರೊಕೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–03/ಎಇ–2/2023–24 ದಿನಾಂಕ: 21.08.2023.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ, ಹರಿಹರ, ಚನ್ನಗಿರಿ, ಜಗಳೂರು ಮತ್ತು ಹೊನ್ನಾಳಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಒಟ್ಟು 20 ಕಾಮಗಾರಿಗಳಿಗೆ ಕನಿಷ್ಟ ಮೊತ್ತ 2.00 ಲಕ್ಷ, ಗರಿಷ್ಟ ಮೊತ್ತ ರೂ. 49.50 ಲಕ್ಷ, 3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಒಟ್ಟು 36 ಕಾಮಗಾರಿಗಳಿಗೆ ಕನಿಷ್ಟ ಮೊತ್ತ 2.00 ಲಕ್ಷ, ಗರಿಷ್ಟ ಮೊತ್ತ ರೂ. 28.65 ಲಕ್ಷ, 3054–ರಾಜ್ಯ ಹೆದ್ದಾರಿ ರಸ್ತೆ ಸೇತುವೆ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಒಟ್ಟು 07 ಕಾಮಗಾರಿಗಳಿಗೆ ಕನಿಷ್ಟ ಮೊತ್ತ 2.00 ಲಕ್ಷ, ಗರಿಷ್ಟ ಮೊತ್ತ ರೂ. 21.00 ಲಕ್ಷ, 3054–ಜಿಲ್ಲಾ ಮುಖ್ಯ ರಸ್ತೆ ಸೇತುವೆ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಒಟ್ಟು 09 ಕಾಮಗಾರಿಗಳಿಗೆ ಕನಿಷ್ಟ ಮೊತ್ತ 3.80 ಲಕ್ಷ, ಗರಿಷ್ಟ ಮೊತ್ತ ರೂ. 14.00 ಲಕ್ಷ, ಮತ್ತು 8443– ಠೇವಣಿ ವಂತಿಕೆಯಡಿ ಒಟ್ಟು 2 ಕಾಮಗಾರಿಗಳಿಗೆ ಕನಿಷ್ಟ ಮೊತ್ತ 1.50 ಲಕ್ಷ, ಗರಿಷ್ಟ ಮೊತ್ತ ರೂ. 5.36 ಲಕ್ಷ,** ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕಲಕೋಟೆ ಪದ್ದತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಗಳ ಇಎಂಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಬೆಲೆಯನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:– 31.08.2023 ಸಂಜೆ 4.00 ಗಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ:– 01.09.2023 ಸಂಜೆ 4.30 ಗಂಟೆಯವರೆಗೆ

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿಪಿಜಿ/198/ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ದಾವಣಗೆರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಕಾರ್ಯಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ –581301.
ದೂರವಾಣಿ: 08382–228935 ಫ್ಯಾಕ್ಸ್: 229735 E-mail: eerdwsd.uk@gmail.com
ನಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ–1/ಅಲ್ಪಾವಧಿ ಟೆಂಡರ/JJM/2023–24/853 ದಿನಾಂಕ: 23.08.2023

ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ/ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document KW-3 & 4** ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು: (1) INDENT2259 (2) INDENT2332 (3) INDENT1995 (4) INDENT2366 (5) INDENT2271 (6) INDENT2243 (7) INDENT2258 (8) INDENT2336 (9) INDENT1994 (10) INDENT2255 (11) INDENT2269 (12) INDENT2470 (13) INDENT2495/CALL-2 (14) INDENT2268 (15) INDENT2350 (16) INDENT2305 (17) INDENT2360 (18) INDENT2388 (19) INDENT2267 (20) INDENT2494 (21) INDENT2287 (22) INDENT2346 (23) INDENT2353 (24) INDENT2264 (25) INDENT2496 (26) INDENT2498 (27) INDENT2475 (28) INDENT2011 (29) INDENT2275 (30) INDENT2277 (31) INDENT2387 (32) INDENT2254 (33) INDENT2434 (34) INDENT2016 (35) INDENT2276 (36) INDENT2314 (37) INDENT2369 (38) INDENT2493 (39) INDENT2499 (40) INDENT2246 (41) INDENT2234 (42) INDENT2235 (43) INDENT2377 (44) INDENT2278 (45) INDENT2334 (46) INDENT2280 (47) INDENT2694 (48) INDENT3387

1) Downloading of document through e-proc portal: **24.08.2023 to 31.08.2023 up to 16.30 Hrs.** (2) Time & date of Pre-Bid Conference: **28.08.2023 Time: 11.30 Hrs.** Venue: O/o. Executive Engineer, Rural Drinking Water & Sanitation Division, Po: Habbuwada, Karwar- Uttara Kannada Dist. (3) Last Date & Time for Receipt of Bids: **31.08.2023 Time : 16.30 Hrs.** (4) Date & Time of Technical Bid Opening: **01.09.2023 Time : 17:00 Hrs.** (5) Date & Time of Financial Bid Opening: Will be informed technically qualified bidders after, approval of Technical Bid.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಕಾರವಾರ (ಉ. ಕ. ಜಿಲ್ಲೆ).

DIPR/KWR/KSMCA176/23-24 dt.23.08.2023



ಸುಭಾಷಿತ

ಅರಿವು ಎಂಬುದು ಸೂರ್ಯನ ಕಿರಣದಂತೆ ಇರಬೇಕು;
ಎಲ್ಲೆಡೆಯೂ ಪಸರಿಸುತ್ತಾ ಎಲ್ಲರತ್ತಲೂ ಬೆಳಕು ಚೆಲ್ಲುತ್ತಾ.
-ಬಿ.ಕೆ.ಎಸ್. ಅಯ್ಯಂಗಾರ್

ಚಂದ್ರನೆಲಕ್ಕೆ ಭಾರತದ ಪದಾರ್ಪಣ ಹೊಸ ಸಾಧ್ಯತೆಗಳ ಹನುಮಲಂಘನ

ಚಂದ್ರನ ಮೇಲೆ ವಿಕ್ರಮ್ ಹೂವಿನಂತೆ ಇಳಿದಿದ್ದನ್ನು ಕಂಡು ಇಡೀ ದೇಶವೇ ಸಂಭ್ರಮಿಸಿದೆ. ನಮ್ಮ ನಮ್ಮೊಳಗಿನ ಎಲ್ಲ ಭೇದಗಳನ್ನು ಬದಿಗೊತ್ತಿ ಇಡೀ ಭಾರತವೇ ಏಕತ್ರವಾಗಿ ಜೈಕಾರ ಹಾಕಿದ್ದು, ಮೇಲಾಗಿ ಜಗತ್ತಿನಾದ್ಯಂತ ಅದು ಮೊಳಗಿದ್ದು ಇತ್ತೀಚಿನ ದಶಕಗಳಲ್ಲಿ ಇದೇ ಮೊದಲಿರಬೇಕು. ಹಾಗಾಗಿ, 23.8.23 ಎಂಬುದು ಮರೆಯಲಾಗದ ದಿನವಾಗಿ ಚರಿತ್ರೆಯಲ್ಲಿ ದಾಖಲಾಗಿ ಉಳಿಯಲಿದೆ. ಚಂದ್ರನ ಮೇಲೆ ನವಿರಾಗಿ ಇಳಿಯಲು ಜಪಾನ್ ದೇಶಕ್ಕೆ ಈ ನಾಲ್ಕು ವರ್ಷಗಳಲ್ಲಿ ಸಾಧ್ಯವಾಗಲಿಲ್ಲ; ದಕ್ಷಿಣ ಕೊರಿಯಾಕ್ಕೆ, ಇಸ್ರೇಲಿಗೂ ಸಾಧ್ಯವಾಗಿರಲಿಲ್ಲ. ಅಷ್ಟೇಕೆ, ರಷ್ಯನ್ನರ ಇಳಿಯಂತ್ರ 'ಲೂನಾ-25' ಕೂಡ ಮೊನ್ನೆಯಷ್ಟೇ ಧೊಪ್ಪೆಂದು ಬಿದ್ದಿದೆ. ತಂತ್ರಜ್ಞಾನದಲ್ಲಿ ದಾಪುಗಾಲಿಡುತ್ತಲೇ ಬಂದಿದ್ದ ದೇಶಗಳು ಎಡವಿದ ಲೋಕದಲ್ಲಿ ಭಾರತವೂ ಎಡವಿತ್ತಾದರೂ ಅದನ್ನೇ ಯಶಸ್ಸಿನ ಸೋಪಾನವನ್ನಾಗಿಸಿ ಮತ್ತೆ ಮೇಲೆದ್ದು ಈಗ ದೃಢವಾದ ಹೆಜ್ಜೆ ಮೂಡಿಸಿದೆ. ಅದೂ ದುರ್ಭರ ದಕ್ಷಿಣ ಧ್ರುವದಲ್ಲಿ ಬರೀ 615 ಕೋಟಿ ರೂಪಾಯಿಗಳ ನಗಣ್ಯ ವೆಚ್ಚದಲ್ಲಿ ಇದನ್ನು ಸಾಧ್ಯವಾಗಿಸಿದ್ದು ಮುಂದೆ ಬಾಹ್ಯಾಕಾಶದತ್ತ ವಾಣಿಜ್ಯದ ಹೆಬ್ಬಾಗಿಲನ್ನೇ ತೆರೆಯಬಹುದಾಗಿದೆ. ಭಾರತೀಯ ಪ್ರಚ್ಛನ್ನ ಪ್ರತಿಭೆಗಳು ನಮ್ಮ ನೆಲದಲ್ಲಿ ಮಂಕಾಗಿದ್ದರೂ ವಿದೇಶಿ ನೆಲದಲ್ಲಿ ಪ್ರಜ್ವಲಿಸುತ್ತವೆ ಎಂಬ ಮಿಥ್ಯೆಯನ್ನು ಹಿಂದಿನಿಂದಲೂ ಭಗ್ನಗೊಳಿಸುತ್ತಲೇ ಬೆಳೆದಿದ್ದು ಇಸ್ರೊ ಸಂಸ್ಥೆ. ಅಂದು 1963ರಲ್ಲಿ ಸೈಕಲ್ ಮೇಲೆ ಕ್ಷಿಪಣಿಯ ಬಿಡಿಭಾಗಗಳನ್ನು, ನಂತರ ಎತ್ತಿನ ಬಂಡಿಯಲ್ಲಿ ಆಪಲ್ ಉಪಗ್ರಹದ ಮಾದರಿಯನ್ನು ಸಾಗಿಸುತ್ತ ಸಾಧನೆಯ ದಾರಿಯಲ್ಲಿ ಮೇಲೇರುತ್ತ ಇಸ್ರೊ ವಿಜ್ಞಾನಿಗಳ ಪಡೆ ಚಂದ್ರನ ಮೇಲೂ ಬಾವುಟವನ್ನು ನೆಟ್ಟು ದೇಶಕ್ಕೇ ಹೆಮ್ಮೆ ತಂದಿದೆ. ನಮ್ಮಲ್ಲೂ ಪ್ರತಿಭೆಗೆ, ಪರಿಶ್ರಮಕ್ಕೆ ಅಂಕುಶವಿಲ್ಲ ಎಂಬ ಭರವಸೆ ಯುವಮನಸ್ಸುಗಳಲ್ಲಿ ಅರಳುವಂತೆ ಮಾಡಿದೆ.



ಚಂದ್ರಯಾನ-3ರ ಯಶಸ್ಸು ಭಾರತದ ಮಹಾಕನಸುಗಳನ್ನು ನನಸು ಮಾಡುವ ದಿಸೆಯಲ್ಲಿ ಹನುಮಲಂಘನವೇ ಆಗಬಹುದಾಗಿದೆ

1969ರಲ್ಲಿ ಚಂದ್ರನ ಮೇಲೆ ಕಾಲಿಟ್ಟ ನೀಲ್ ಆರ್ಮ್‌ಸ್ಟ್ರಾಂಗ್, 'ಮನುಷ್ಯನೊಬ್ಬನಿಗೆ ಇದೊಂದು ಪುಟ್ಟ ಹೆಜ್ಜೆ; ಆದರೆ ಮನುಕುಲಕ್ಕೆ ಇದು ಹನುಮಲಂಘನ' ಎಂದು ಹೇಳಿದ್ದು ಅಮರವಾಣಿ ಎನ್ನಿಸಿದೆ. ಈಗಿನ ಚಂದ್ರಯಾನ-3ರ ಯಶಸ್ಸು ಕೂಡ ಭಾರತದ ಮಹಾಕನಸುಗಳನ್ನು ನನಸು ಮಾಡುವ ದಿಸೆಯಲ್ಲಿ ಹನುಮಲಂಘನವೇ ಆಗಬಹುದಾಗಿದೆ. ಈಗಾಗಲೇ ಸುಮಾರು 140 ನವೋದ್ಯಮಗಳು ಅಂಥ ಲಂಘನಕ್ಕೆ ರೆಕ್ಕೆಪುಕ್ಕ ಕಟ್ಟತೊಡಗಿವೆ. ಇನ್ನೇನು, ರಾಕೇಶ್ ಶರ್ಮಾ ಸೋವಿಯತ್ ರಷ್ಯಾದ ಬಾಹ್ಯಾಕಾಶ ನೌಕೆಯಲ್ಲಿ 1984ರಲ್ಲಿ ಭೂಕಕ್ಷೆಯನ್ನು ಸುತ್ತಿದ ಹಾಗೆ, ನಮ್ಮದೇ ನೌಕೆಯಲ್ಲಿ ಯುವ ಸಾಹಸಿಯನ್ನು ಸುತ್ತಿಸಬೇಕು; ಚಂದ್ರನ ಮೇಲೆ ನಾವೊಂದು ದೂರದರ್ಶಕವನ್ನು ಸ್ಥಾಪಿಸಿ, ಅಲ್ಲಿನ ನಿರಭ್ರ ಗಗನದಲ್ಲಿ ದೃಷ್ಟಿಹಾಯಿಸಿ, ಪೃಥ್ವಿಯನ್ನು ಹೋಲಬಲ್ಲ ಗ್ರಹಗಳು ಸೌರಲೋಕದಾಚೆ ಇವೆಯೇ ಎಂಬುದನ್ನು ನೋಡಬೇಕು. ಗುರುತ್ವ ಬಲ ಕಮ್ಮಿ ಇರುವ ಚಂದ್ರನೆಲದಿಂದ ಮಂಗಳ ಮತ್ತು ಅದರಾಚಿನ ಗ್ರಹಗಳಿಗೆ ನೌಕೆಗಳನ್ನು ಚಿಮ್ಮಿಸಬೇಕು; ಅದಕ್ಕೆ ಬೇಕಾದ ಅಟ್ಟಣಿಗೆಗಳನ್ನು ಇತರ ದೇಶಗಳಿಗೂ ನಾವೇ ಅಲ್ಲಿ ಕಟ್ಟಿಕೊಡಬೇಕು. ಬಾಹ್ಯಾಕಾಶದಲ್ಲಿ 'ಪೈಪೋಟಿ'ಯ ಬದಲು ಜಾಗತಿಕ ಸಹಕಾರ ಏರ್ಪಡುವಂತೆ ಮಾಡುವಲ್ಲಿ ಭಾರತ ತನ್ನ ನಾಯಕತ್ವವನ್ನು ಸ್ಥಾಪಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಚಂದ್ರನಲ್ಲಿ ಹೇರಳವಾಗಿ ಲಭ್ಯವಿದೆ ಎನ್ನಲಾದ ಹೀಲಿಯಂ ಅನಿಲವನ್ನು ಹೆಪ್ಪುಗಟ್ಟಿಸಿ ತಂದು ಭಾರತವನ್ನು ಅಕ್ಷಯ ಶಕ್ತಿಯ ಭಂಡಾರವನ್ನಾಗಿಸಬೇಕು.

ನನಸಾಗಬೇಕಾದ ಕನಸುಗಳು ತುಂಬ ಇವೆ. ಬಾಹ್ಯಾಂತರಿಕ್ಷದಲ್ಲಷ್ಟೇ ಅಲ್ಲ, ಈ ನೆಲದ ಮೇಲೂ ಇವೆ. ವಿಕ್ರಮ್ ಲ್ಯಾಂಡರ್ ನೌಕೆಯಲ್ಲಿ ಖಚಿತ ಹವಾಮುನ್ಸೂಚನೆ ನೀಡಬಲ್ಲ ಸಾಧನಗಳಿವೆ. ಅಂಥವು ನಮ್ಮ ಪಂಚಾಯಿತಿ ಮಟ್ಟದಲ್ಲಿ ರೈತರಿಗೆ ಸದ್ಯದ ಭವಿಷ್ಯದಲ್ಲಿ ಸಿಗಬಲ್ಲವೇ? ಚಂದ್ರನ ಮೇಲೆ ಚಲಿಸುತ್ತಿರುವ ಪ್ರಜ್ಞಾನ್ ಹೆಸರಿನ ಪುಟ್ಟ, ಕುಶಾಗ್ರ ಪ್ರಯೋಗಶಾಲೆಯೊಂದು ಅಲ್ಲಿನ ಕ್ಷೀಣ ಬಿಸಿಲಿನಲ್ಲೂ 50 ವಾಟ್ ವಿದ್ಯುತ್ ಉತ್ಪಾದನೆ ಮಾಡುತ್ತ ಮಣ್ಣು-ಮರಳನ್ನು ಪರೀಕ್ಷಿಸುತ್ತ, ಖನಿಜಗಳನ್ನು ಗುರುತಿಸುತ್ತ, ಚಂದ್ರಕಂಪನಗಳನ್ನು ಅಳೆಯುತ್ತ ವಿಡಿಯೊ ವರದಿ ಮಾಡುತ್ತಿದೆ. ನಮ್ಮ ವಿಶ್ವವಿದ್ಯಾಲಯಗಳ ಲ್ಯಾಬ್‌ಗಳಲ್ಲೂ ಲಭ್ಯ ಇಲ್ಲದ ಅಂಥ ಸಾಧನಗಳು ಕ್ರಮೇಣ ಹೈಸ್ಕೂಲುಗಳಲ್ಲೂ ಸಿಗುವಂತಾಗಬೇಕು. ಈ ನೆಲದ ಗುಣಧರ್ಮಗಳನ್ನೂ ಅಳೆದು ನೋಡುವ ಕ್ಷಮತೆ ಎಳೆಯ ವಿದ್ಯಾರ್ಥಿಗಳಿಗೂ ಬರಬೇಕು. ಇಷ್ಟಕ್ಕೂ ನಮ್ಮ ಬಾಹ್ಯಾಕಾಶದ ಎಲ್ಲ ಕನಸುಗಳನ್ನೂ ನನಸು ಮಾಡಬೇಕಾದವರು ಈ ಎಳೆಯರು. ಅವರನ್ನು ವಿಜ್ಞಾನದತ್ತ ಸೆಳೆಯುವಂತೆ ಮಾಡಲು ಉತ್ಕೃಷ್ಟ ಮೂಲ ಸೌಕರ್ಯ, ಪ್ರಾಯೋಗಿಕ ಸಲಕರಣೆಗಳು ಬೇಕಿವೆ. ಅವುಗಳನ್ನು ಒದಗಿಸುವ ಪ್ರಯತ್ನವು ರಾಜಕೀಯ ಇಚ್ಛಾಶಕ್ತಿಯನ್ನು ಅವಲಂಬಿಸಿದೆ. ತಿಂಗಳನಲ್ಲಿ ಮೂಡಿದ ಬೆಳಕು ನಮ್ಮ ಕತ್ತಲನ್ನೂ ಸರಿಸಬೇಕು.

ಅರ್ಥ ವ್ಯವಸ್ಥೆ ಪುಟಿದೇಳುತ್ತದೆ ಎಂಬ ಚೀನೀಯರ ಭಾವನೆ ಹುಸಿಯಾಗಿದ್ದೇಕೆ?

ಚೀನಾದಲ್ಲಿ ನಿರಾಸೆಯ ಕಾರ್ಮೋಡ

ವಿಶ್ಲೇಷಣೆ

ಲಿ ಯುವಾನ್

ಕೋವಿಡ್-19 ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತರಲಾಗಿದ್ದ ಕಠಿಣ ನಿರ್ಬಂಧಗಳನ್ನು ಸರ್ಕಾರವು ಇದ್ದಕ್ಕಿದ್ದಂತೆ ತೆರವು ಮಾಡಿದಾಗ, ಅರ್ಥ ವ್ಯವಸ್ಥೆಯು ಪುಟಿದೇಳುತ್ತದೆ ಎಂದು ಚೀನೀಯರಲ್ಲಿ ಹಲವರು ಭಾವಿಸಿದ್ದರು. ಆದರೆ, ಎಂಟು ತಿಂಗಳ ನಂತರದಲ್ಲಿ, ಚೀನಾದಲ್ಲಿ ಕೆಟ್ಟ ಸುದ್ದಿಗಳೇ ಹೆಚ್ಚು ಕಾಣಿಸುತ್ತಿವೆ. ಯುವಕರಲ್ಲಿನ ನಿರುದ್ಯೋಗ ಪ್ರಮಾಣ ದಾಖಲೆಯ ಮಟ್ಟಕ್ಕೆ ತಲುಪಿದೆ, ಮನೆಗಳಿಗೆ ಬೇಡಿಕೆ ತಗ್ಗಿದೆ, ಜನರು ಹೆಚ್ಚು ಹಣ ಖರ್ಚು ಮಾಡುತ್ತಿಲ್ಲ, ಉತ್ಪನ್ನಗಳ ತಯಾರಿಕಾ ವೆಚ್ಚ ತಗ್ಗದಿದ್ದರೂ ಮಾರುಕಟ್ಟೆಯಲ್ಲಿ ಅವುಗಳ ಬೆಲೆ ಮಾತ್ರ ಕುಸಿಯುತ್ತಿದೆ.

ಇದು ಚೀನೀಯರಲ್ಲಿ ಹಲವರಿಗೆ ಒಂದು ಆಘಾತ. ಅಲ್ಲಿನ ಅರ್ಥ ವ್ಯವಸ್ಥೆಯು ಬೆಳೆಯುತ್ತಲೇ ಇತ್ತು. ಜನರ ಜೀವನಮಟ್ಟವು ಆ ಅರ್ಥ ವ್ಯವಸ್ಥೆಯ ಬೆಳವಣಿಗೆಯ ಜೊತೆಯಲ್ಲಿ ಏರಿಕೆ ಕಾಣುತ್ತಲೇ ಇತ್ತು. ಈ ಸ್ಥಿತಿಗೆ ಚೀನೀಯರು ಒಗ್ಗಿಕೊಂಡಿದ್ದರು. ಈಗ ಅವರು ವಾಣಿಜ್ಯ ವಹಿವಾಟುಗಳ ಕುಸಿತ ಹಾಗೂ ವೈಯಕ್ತಿಕವಾಗಿ ಖರ್ಚಿಗೆ ಹಣ ಕಡಿಮೆ ಆಗುತ್ತಿರುವ ಪರಿಸ್ಥಿತಿಯೊಂದಿಗೆ ಹೆಣಗಾಟ ನಡೆಸುತ್ತಿದ್ದಾರೆ.

ಅರ್ಥ ವ್ಯವಸ್ಥೆಯ ಭವಿಷ್ಯ ಹಾಗೂ ದೇಶದ ಭವಿಷ್ಯದ ವಿಚಾರವಾಗಿ ಅವರಲ್ಲಿನ ವಿಶ್ವಾಸ ಬಹಳ ಕುಸಿದಿದೆ. ತಾವು ಕಲ್ಪಿಸಿಕೊಳ್ಳಲೂ ಸಿದ್ಧವಿಲ್ಲದ ಕೆಟ್ಟ ಪರಿಸ್ಥಿತಿಯೊಂದರ ಆರಂಭ ಇದು ಎಂಬ ಚಿಂತೆ ಅವರಲ್ಲಿದೆ. ಇದಕ್ಕೆ ಸರ್ಕಾರದ ಬಳಿ ಮದ್ದಿಲ್ಲ, ಕೆಟ್ಟ ಸುದ್ದಿಗಳು ಬರುತ್ತಲೇ ಇರುತ್ತವೆ ಎಂದು ಚಿಂತಿತರಾಗಿದ್ದಾರೆ. 'ನನ್ನ ಸುತ್ತಲಿನ ಯಾರಿಗೂ ಮುಂದೆ ಏನು ಮಾಡಬೇಕು ಎಂಬುದು ಗೊತ್ತಿಲ್ಲ. ಇದು ಬಹಳ ಹೆದರಿಕೆ ಹುಟ್ಟಿಸುವಂಥದ್ದು' ಎಂದು ವಾಹನ ಬಿಡಿಭಾಗಗಳ ಸಗಟು ವ್ಯಾಪಾರದಲ್ಲಿ ತೊಡಗಿರುವ ರಿಚರ್ಡ್ ಲಿ ಹೇಳುತ್ತಾರೆ.

2023ರ ಮೊದಲಾರ್ಧದಲ್ಲಿ ಲಿ ಅವರು ಇರುವ, 1 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ನಗರದಲ್ಲಿ ವಾರಗಳ ಕಾಲ ಲಾಕ್‌ಡೌನ್ ಹೇರಿದ್ದಾಗ, ಅವರು ವ್ಯಾಪಾರದಿಂದ ಗಳಿಸುವ ಆದಾಯವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 15ರಷ್ಟು ತಗ್ಗಿತು. ಇತರ ಕಂಪನಿಗಳು ಕೂಡ ಸಂಕಷ್ಟದಲ್ಲಿವೆ ಎಂಬುದು ಲಿ ಅವರಿಗೆ ಗೊತ್ತಾಯಿತು. ಲಿ ಅವರ ಗ್ರಾಹಕರಾದ ವಾಹನ ರಿಪೇರಿ ಶಾಪ್‌ಗಳು ಬಾಗಿಲು ಮುಚ್ಚಿದವು. ಏಕೆಂದರೆ ವಾಹನಗಳ ಮಾಲೀಕರು ಹೆಚ್ಚು ಖರ್ಚು ಮಾಡುತ್ತಿರಲಿಲ್ಲ. ಲಿ ಅವರು ನಾಲ್ಕು ಮಳಿಗೆಗಳನ್ನು ಹೊಂದಿದ್ದರು. ಅವುಗಳಲ್ಲಿ ಎರಡು ಮಳಿಗೆಗಳ ಬಾಗಿಲು ಮುಚ್ಚಿದರು. ತಮ್ಮ ಮೂರನೆಯ ಎರಡರಷ್ಟು ನೌಕರರನ್ನು ಕೆಲಸದಿಂದ ತೆಗೆದರು. ಹೊರಗಡೆ ಊಟ ಮಾಡುವುದನ್ನು, ಸ್ನೇಹಿತರ ಜೊತೆ ಸುತ್ತಾಟವನ್ನು ಕಡಿಮೆ ಮಾಡಿದರು. ಹಣಕಾಸಿನ ಸಂಕಷ್ಟಕ್ಕೆ ಸಿಲುಕಿದ ಲಿ, 2020ರಲ್ಲಿ ಹೂಡಿಕೆಯ ಉದ್ದೇಶದಿಂದ ಖರೀದಿಸಿದ್ದ ಅಪಾರ್ಟ್‌ಮೆಂಟ್ ಮಾರಲು ತೀರ್ಮಾನಿಸಿದರು. ಆದರೆ ಅಪಾರ್ಟ್‌ಮೆಂಟ್ ಬೆಲೆಯನ್ನು 1 ಲಕ್ಷ ಡಾಲರ್‌ನಷ್ಟು ಕಡಿಮೆ ಮಾಡಿದರೂ, ಅದನ್ನು ಖರೀದಿಸಲು ಹೆಚ್ಚು ಜನ ಆಸಕ್ತಿ ತೋರಿಸಲಿಲ್ಲ.

ದೇಶದ ಅರ್ಥ ವ್ಯವಸ್ಥೆಯಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಸರ್ಕಾರವನ್ನು ನೆಚ್ಚಿಕೊಳ್ಳುವುದು ಲಿ ಅವರಿಗೆ ಕಷ್ಟವಾಗುತ್ತಿದೆ. ಸರ್ಕಾರವು ತಾನು ವರ್ಷಗಳಿಂದ ಬಿಡುಗಡೆ ಮಾಡುತ್ತಿದ್ದ ಅಂಕಿ-ಅಂಶಗಳನ್ನು ತಡೆಹಿಡಿದಿದೆ. ಯುವಕರಲ್ಲಿನ ನಿರುದ್ಯೋಗ ಪ್ರಮಾಣವು ಜೂನ್‌ನಲ್ಲಿ ಶೇ 21.3ಕ್ಕೆ ಏರಿಕೆಯಾದ ನಂತರ ಚೀನಾ ಸರ್ಕಾರವು ಅದಕ್ಕೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಹಂಚಿಕೊಳ್ಳುವುದನ್ನು ಸ್ಥಗಿತಗೊಳಿಸಿತು. ಆದರೆ, ಜುಲೈ ತಿಂಗಳಿಗೆ ಸಂಬಂಧಿಸಿದ ಕೆಲವು ಅಂಕಿ-ಅಂಶಗಳನ್ನು ಬಹಿರಂಗಪಡಿಸಲು ಚೀನಾ ಸರ್ಕಾರ ಸಮ್ಮತಿಸಿತು. ಆ ಅಂಕಿ-ಅಂಶಗಳು ಒಳ್ಳೆಯದೇನನ್ನೂ ಹೇಳಲಿಲ್ಲ.

ಜೂನ್‌ಗೆ ಹೋಲಿಸಿದರೆ, ಜುಲೈನಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆಯು ಶೇ 89ರಷ್ಟು ತಗ್ಗಿದೆ. ಮನೆಗಳ ಮಾರಾಟವು ವರ್ಷದ ಮೊದಲ ಏಳು ತಿಂಗಳುಗಳಲ್ಲಿ ಕಡಿಮೆ ಆಗಿದೆ. ಕುಟುಂಬಗಳ ಐದನೆಯ ಮೂರರಷ್ಟು ಆಸ್ತಿಯು ರಿಯಲ್ ಎಸ್ಟೇಟ್ ರೂಪದಲ್ಲಿ ಇರುವ ಚೀನಾದಲ್ಲಿ ಮನೆಗಳ ಮಾರಾಟ ಕಡಿಮೆ ಆಗಿರುವುದು ಎಚ್ಚರಿಕೆಯ ಕರೆಗಂಟೆ. ಚೀನಾ ಸರ್ಕಾರ ಜಾರಿಗೆ ತಂದಿದ್ದ 'ಶೂನ್ಯ ಕೋವಿಡ್' ನೀತಿಯು ಕಳೆದ ವರ್ಷದಲ್ಲಿ ಬೇಡಿಕೆಯನ್ನು, ವಾಣಿಜ್ಯ ಚಟುವಟಿಕೆಗಳನ್ನು ಬಹುವಾಗಿ ಹತ್ತಿಕ್ಕಿತು. ಇದರಿಂದಾಗಿ ಚೀನಾದಲ್ಲಿ ಉತ್ಪನ್ನಗಳ ತಯಾರಿಕಾ ವೆಚ್ಚದಲ್ಲಿ ಇಳಿಕೆ ಆಗದಿದ್ದರೂ, ಮಾರುಕಟ್ಟೆಯಲ್ಲಿ ಆ ಉತ್ಪನ್ನಗಳಿಗೆ ಬೆಲೆ ತಗ್ಗಿಹೋಗಿದೆ.

ಹಣದುಬ್ಬರದ ಇಳಿತವು ಏಕೆ ಕೆಟ್ಟ ಪರಿಣಾಮ ಉಂಟುಮಾಡಬಹುದು ಎಂಬುದನ್ನು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞ ಚೆಂಗಾಂಗ್ ಕ್ಸು ವಿವರಿಸುತ್ತಾರೆ. 'ಹೀಗೊಂದು ಸಂದರ್ಭವನ್ನು ಊಹಿಸಿಕೊಳ್ಳಿ. ಬೆಲೆ ಇಳಿಕೆ ಆಗುತ್ತಲೇ ಇರುತ್ತದೆ ಎಂದು ಎಲ್ಲರೂ ನಿರೀಕ್ಷಿಸಲು ಆರಂಭಿಸುತ್ತಾರೆ. ಉದ್ಯೋಗ ಅಥವಾ ತಮ್ಮ ವಾಣಿಜ್ಯ ವಹಿವಾಟಿನ ಅಸ್ತಿತ್ವದ ಕುರಿತ ಭೀತಿಯು ಅವರು ಇನ್ನಷ್ಟು ಹಣ ಉಳಿತಾಯ ಮಾಡುವಂತೆ, ಖರ್ಚನ್ನು ಮತ್ತಷ್ಟು ತಗ್ಗಿಸುವಂತೆ ಮಾಡುತ್ತದೆ. ಆಗ ಅರ್ಥ ವ್ಯವಸ್ಥೆಯು ಹಣದುಬ್ಬರ ಇಳಿತದ ಸುಳಿಗೆ ಸಿಲುಕುತ್ತದೆ' ಎಂದು ಅವರು ವಿವರಿಸುತ್ತಾರೆ.

ತಮ್ಮ ಕಂಪನಿಯ ವರಮಾನವು ಈ ವರ್ಷದಲ್ಲಿ ಹೆಚ್ಚಳವನ್ನೇ ಕಂಡಿಲ್ಲ ಎಂದು ಶಿಕ್ಷಣ ಕ್ಷೇತ್ರದ ನವೋದ್ಯಮವೊಂದರ ಸಂಸ್ಥಾಪಕ ಕಾಬ್ ಲಿಯು ಹೇಳಿದರು. ಅವರ ಕಂಪನಿಯು ಮೊದಲು ವಾರ್ಷಿಕ ಶೇ 40ರಷ್ಟು ಬೆಳವಣಿಗೆ ಸಾಧಿಸುತ್ತಿತ್ತು. ಅವರು 2019ರಲ್ಲಿ ಅಪಾರ್ಟ್‌ಮೆಂಟ್‌ಗಳನ್ನು ಖರೀದಿಸಿದರು. ಆದರೆ, ಅದರ ಬಿಲ್ಡರ್‌ಗಳು ದುಡ್ಡು ಖಾಲಿಯಾದ ಕಾರಣ, ಅಪಾರ್ಟ್‌ಮೆಂಟ್ ನಿರ್ಮಾಣವನ್ನು ಅರ್ಧಕ್ಕೆ ಸ್ಥಗಿತಗೊಳಿಸಿದರು. ಚೀನಾದಲ್ಲಿ ಗೃಹ ನಿರ್ಮಾಣ ಉದ್ಯಮದಲ್ಲಿನ ಬೆಳವಣಿಗೆಯು ಹಠಾತ್ತನೆ ಸ್ಥಗಿತಗೊಂಡ ನಂತರದಲ್ಲಿ ಸಹಸ್ರಾರು ಮಂದಿ ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಅರ್ಥ ವ್ಯವಸ್ಥೆಯಲ್ಲಿನ ಕುಸಿತವು ವರ್ಷಗಳವರೆಗೆ ಹೀಗೇ ಮುಂದುವರಿಯಬಹುದು ಎಂದು ಲಿಯು ಭಾವಿಸಿದ್ದಾರೆ. ಅವರು ತಮ್ಮಲ್ಲಿದ್ದ ಚೀನಿ ಕಂಪನಿಗಳ ಅಷ್ಟೂ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಚೀನಾ ಕಂಪನಿಗಳ ಷೇರುಗಳು ಇನ್ನು ನ್ಯೂಯಾರ್ಕ್ ಅಥವಾ ಹಾಂಗ್‌ಕಾಂಗ್ ಷೇರುಪೇಟೆಗಳಲ್ಲಿ ವಹಿವಾಟು ನಡೆಸಲಾರಂಭಿಸಿದರೂ, ಅವುಗಳನ್ನು ಮುಟ್ಟಲು ಹೋಗುವುದಿಲ್ಲ ಎಂದು ಲಿಯು ಹೇಳುತ್ತಾರೆ. ಚೆನ್ನಾಗಿ ವಹಿವಾಟು ನಡೆಸುತ್ತಿರುವ ಉದ್ಯಮಿಗಳು ಕೂಡ ಭವಿಷ್ಯ ಅನಿಶ್ಚಿತವಾಗಿದೆ ಎಂಬ ಕಾರಣಕ್ಕೆ, ಹೊಸದಾಗಿ ಸಾಲ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ.

ಹಣಕಾಸು ಸಲಹಾ ಸಂಸ್ಥೆಯನ್ನು ನಡೆಸುತ್ತಿರುವ ಮಾರ್ಕ್ ಫು ಅವರು ತಮ್ಮ ವಹಿವಾಟುಗಳು ಈ ವರ್ಷ ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿದ್ದಾರೆ. ಶ್ರೀಮಂತರು ತಮ್ಮ ಹಣಕಾಸಿನ ಆಸ್ತಿಗಳನ್ನು ಚೀನಾದಿಂದ ಹೊರಗಡೆ ಸಾಗಿಸಲು ನೆರವು ಯಾಚಿಸುತ್ತಿದ್ದಾರೆ. ಹಲವು ಬ್ಯಾಂಕ್‌ಗಳು ಫು ಅವರಿಗೆ ಸಾಲ ನೀಡಲು ಮುಂದೆ ಬಂದಿದ್ದರೂ, ಸಾಲ ತೆಗೆದುಕೊಳ್ಳಲು ಫು ಸಿದ್ಧರಿಲ್ಲ.

ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಅದೆಷ್ಟರಮಟ್ಟಿಗೆ ನಕಾರಾತ್ಮಕತೆಯನ್ನು ಬಿಂಬಿಸುತ್ತಿವೆಯೆಂದರೆ, ಚೀನಾ 'ಸೆಕ್ಯುರಿಟೀಸ್ ಡೈಲಿ' ಪತ್ರಿಕೆಯು ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಸಂಕಷ್ಟಗಳ ಬಗ್ಗೆ ಊಹೆಯ ಆಧಾರದಲ್ಲಿ ಅನಿಸಿಕೆಗಳನ್ನು ಹಂಚಿಕೊಂಡಿರುವ ಪೋಸ್ಟ್‌ಗಳನ್ನು ಅಳಿಸಿಹಾಕಬೇಕು ಎಂದು ಕರೆ ನೀಡಿದೆ. ವದಂತಿಗಳನ್ನು ಹರಡುವ ಕೆಲಸಗಳಿಂದಾಗಿ ಮಾರುಕಟ್ಟೆಯಲ್ಲಿ ಏರಿಳಿತ ಕಂಡುಬರುತ್ತಿದೆ ಎಂದು ಅದು ಹೇಳಿದೆ. ಆದರೆ, ಈ ಇಳಿಜಾರಿನ ಹಾದಿಯಿಂದ ಚೀನಾ ಹೇಗೆ ಹೊರಬರುತ್ತದೆ ಎಂಬುದನ್ನು ಕಲ್ಪಿಸಿಕೊಳ್ಳಲು ಜನರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಅವರಲ್ಲಿ ವಿಶ್ವಾಸ ಮೂಡುತ್ತಿಲ್ಲ. ಚೀನಾದ ಪರಮೋಚ್ಚ ನಾಯಕ ಷಿ ಜಿನ್‌ಪಿಂಗ್ ಅವರ ಸಿದ್ಧಾಂತಗಳೇ ಸಮಸ್ಯೆಗಳಿಗೆ ಕಾರಣ ಎಂದು ಜನ ಭಾವಿಸಿದ್ದಾರೆ. ಜಿನ್‌ಪಿಂಗ್ ಅವರು ಖಾಸಗಿ ವಲಯವನ್ನು ಇಷ್ಟಪಡುವಂತೆ ಕಾಣುತ್ತಿಲ್ಲ.

35 ವರ್ಷ ವಯಸ್ಸಿನ ಆ್ಯಂಡಿ ವಾಂಗ್ ಅವರು ತಮ್ಮ ಬ್ಯಾಂಕ್ ನೌಕರಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಅವರು ಆಸ್ಟ್ರೇಲಿಯಾದಲ್ಲಿ ಪದವಿ ಕಾಲೇಜು ಸೇರಲು ಅರ್ಜಿ ಸಲ್ಲಿಸಿದ್ದಾರೆ. ವಾಂಗ್ ಅವರ ಪಾಲಕರು ಶ್ರೀಮಂತರು. ಆದರೆ ವಾಂಗ್ ಅವರು ನಿರಾಶೆಯಲ್ಲಿದ್ದಾರೆ. ಹಿಂದೆ ತಮಗೆ ಸಿಗುತ್ತಿದ್ದ ಅವಕಾಶಗಳು ಈಗ ಸಿಗಲಿಕ್ಕಿಲ್ಲ ಎಂಬ ನಿರಾಶೆ ಅವರಲ್ಲಿ ಮನೆ ಮಾಡಿದೆ. 'ಈ ದೇಶದಲ್ಲಿ ಹಣ ಮಾಡಲು ನನಗೆ ದಾರಿಗಳು ಕಾಣಿಸುತ್ತಿಲ್ಲ' ಎಂದು ಅವರು ಹೇಳುತ್ತಾರೆ.

ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ



ಚಂದ್ರನ ಮೇಲೆ ಚಿಯರ್ಸ್!

• ಬಿ.ಎನ್. ಮಲ್ಲೇಶ್

ಚಂದ್ರನ ಮೇಲೆ ತಡವರಿಸುತ್ತ ಕಾಲಿಟ್ಟ ತೆಪರೇಸಿ, 'ಮೆಲ್ಲಕೆ ಇಳೀರಲೆ, ನಾವೇ ಫಸ್ಟ್ ಬರ್ತಿರೋದು... ಇಲ್ಲಿ ಎಲ್ಲೆಲ್ಲಿ ಏನೈತೋ ಗೊತ್ತಿಲ್ಲ' ಎಂದ. ಹರಟೆ ಸದಸ್ಯರೆಲ್ಲ ಒಬ್ಬೊಬ್ಬರಾಗಿ ಚಂದ್ರನ ಮೇಲಿಳಿದು ಸುತ್ತಲೂ ಕಣ್ಣಾಯಿಸಿದರು.

'ಇದೇನಲೆ ಇಲ್ಲಿ ಬೆಳದಿಂಗಳೇ ಇಲ್ಲ?' ಗುಡ್ಡೆಗೆ ಆಶ್ಚರ್ಯ.

'ಲೇಯ್, ಬೆಳದಿಂಗಳು ಭೂಮಿ ಮ್ಯಾಗೆ ಬೀಳೋದು, ಇಲ್ಲಲ್ಲ' ತೆಪರೇಸಿ ಸ್ಪಷ್ಟನೆ ಕೊಟ್ಟ.

'ಅಲ್ಲ ಇದೇನಿದು, ಎಲ್ಲಿ ನೋಡಿದ್ರೂ ಬರೀ ಗುಂಡಿ ಗೊಟರು'.

'ಇಲ್ಲಿ ಮುನ್ಸಿಪಾಲ್ಟಿಯೋರು ಇಲ್ಲಲ್ಲಲೆ, ಅದ್ಕೆ ಅನುಸ್ತೆ, ಸುಮ್ನೆ ಬಾ'.

'ಅಲ್ಲ, ಇಲ್ಲಿ ನಾವೇ ಮೊದ್ಲೋ ಅಥ್ವ ನಿಮ್ ಟೀವಿಯೋರು ಮೈಕ್ ಹಿಡ್ಕಂಡು ಆಗ್ಲೇ ಬಂದುಗಿಂದಾರೋ?' ದುಬ್ಬೀರ ನಕ್ಕ.

'ಅಬಾಬಬ... ಅಲ್ಲಿ ನೋಡ್ರಲೆ, ಗುರು, ಶುಕ್ರ, ಮಂಗಳ ಎಲ್ಲ ಎಷ್ಟು ಹತ್ತಿರದಿಂದ ಕಾಣ್ತದಾವು. ಭೂಮಿನೂ ಐತಲ್ಲೋ' ತೆಪರೇಸಿಗೆ ಆಶ್ಚರ್ಯ.

'ಅದ್ರಾಗೆ ನಿನ್ನೆಂಡ್ತಿ ಕಾಣ್ತದಾಳೇನೋ ನೋಡೋ' ಕೊಟ್ರೇಶಿ ಕಿಸಕ್ಕೆಂದ.

'ಇಲ್ಲಿ ಸೈಟ್ ಮಾಡಿದ್ರೆ ಭರ್ಜರಿ ರೊಕ್ಕ ಆಗ್ತಾವು ಕಣ್ರಲೆ' ಗುಡ್ಡೆ ಒಳಗೇ ಲೆಕ್ಕ ಹಾಕಿದ.

'ಅಲ್ಲ, ಇಲ್ಲಿ ಹೋಟ್ಲು ಮಾಡಿದ್ರೆ ನಡೀತತಾ?' ಮಂಜಮ್ಮಗೆ ಡೌಟು.

'ಹಂಗೇ ಈರುಳ್ಳಿ, ಟಮೊಟೋ ಬೆಳೆದ್ರೆ ಹೆಂಗೆ?' ದುಬ್ಬೀರ ಕೇಳಿದ.

'ನಿಮ್ತೆಲಿ, ಚಂದ್ರನ ಮೇಲೆ ಬಂದ್ರೂ ನಿಮ್ ಚಿಲ್ರೆ ಬುದ್ಧಿ ಬಿಡಲ್ಲಲ್ರಲೆ. ಮೊದ್ಲು ಖುಷಿಗೆ ಪಾರ್ಟಿ ಮಾಡಾಣ, ಆಮೇಲೆ ಎಲ್ಲ ನೋಡಾಣ' ಎಂದ ತೆಪರೇಸಿ, ಬ್ಯಾಗಿನಿಂದ ಒಂದೊಂದೇ ಐಟಂ ಹೊರತೆಗೆದ. ಎಲ್ರಿಗೂ ಗುಂಡು ಹಾಕಿಕೊಟ್ಟು ಕಪ್ಪೆತ್ತಿ 'ಚಿಯರ್ಸ್!' ಎಂದ.

ಇದ್ದಕ್ಕಿದ್ದಂತೆ ತೆಪರೇಸಿ ತಲೆ ಮೇಲೆ ಯಾರೋ ಬಕೆಟ್ ನೀರು ಸುರಿದಂತಾಗಿ ಬೆಚ್ಚಿ ಕಣ್ಣು ಬಿಟ್ಟ. ನೋಡಿದರೆ ಎದುರಿಗೆ ಹೆಂಡ್ತಿ ಪಮ್ಮಿ! 'ಏನದು ಚಿಯರ್ಸ್? ಕನಸಾ? ಯಾವ ಲೋಕದಾಗಿದ್ರಿ?'

ತೆಪರೇಸಿ ತಡವರಿಸಿದ 'ಅಲ್ಲ, ನೀನ್ಯಾವಾಗ ಇಲ್ಲಿಗೆ ಬಂದೆ? ನನ್ ಕಪ್ ಎಲ್ಲಿ?'

ದಿನದ ಟ್ವೀಟ್

ದತ್ತಾಂಶದ ಕಡೆಗಣನೆ ಸಲ್ಲ

ಭಾರತವು 1950 ಮತ್ತು 60ರ ದಶಕಗಳಿಂದಲೂ ವಿಶ್ವ ದರ್ಜೆಯ ದತ್ತಾಂಶ ಮತ್ತು ಅಂಕಿಅಂಶಗಳಿಗೆ ಹೆಸರಾಗಿದೆ. ಅದು ಭಾರತದಲ್ಲಿ ವಿಜ್ಞಾನವನ್ನು ಇಂದು ಈ ಮಟ್ಟಕ್ಕೆ ಬೆಳೆಸಿದೆ. ಆದರೆ, ಈಗ ನಾವು ದತ್ತಾಂಶವನ್ನು ತಡೆಹಿಡಿಯುತ್ತಿರುವುದು (ಉದಾಹರಣೆಗೆ, ಜನಗಣತಿ) ಮತ್ತು ವಿಶ್ಲೇಷಣೆಗಳಿಗೆ ಲಗಾಮು ಹಾಕುತ್ತಿರುವುದು ದುಃಖದ ಸಂಗತಿ. ದತ್ತಾಂಶಗಳ ಜಾಗಕ್ಕೆ ಘೋಷಣೆಗಳನ್ನು ತಂದು ಕೂರಿಸುವ ಹಂತವನ್ನು ನಾವು ತಲುಪಬಾರದು.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ

ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು. ಈಗ ಮಧ್ಯಪ್ರದೇಶದಲ್ಲಿನ ಅವರದ್ದೇ ಪಕ್ಷದ ನೇತೃತ್ವದ ಸರ್ಕಾರ ನಮ್ಮ ಮಾದರಿಯಲ್ಲಿ ಗ್ಯಾರಂಟಿ ಯೋಜನೆ ಜಾರಿಗೊಳಿಸಿದೆ. ಇದಕ್ಕೆ ಪ್ರಧಾನಿ ಏನು ಹೇಳುತ್ತಾರೆ?



ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 25-8-1998

• **ರಾಜೀವ್ ಹತ್ಯೆ ಸಂಚು: ಕರುಣಾನಿಧಿ ಹೆಸರು ಕೈಬಿಡಲು ಕೇಂದ್ರ ನಿರ್ಧಾರ**

ಚೆನ್ನೈ, ಆಗಸ್ಟ್ 24- ಜೈನ್ ಆಯೋಗದ ಅಂತಿಮ ವರದಿಯ ಸಂಬಂಧ ಸರ್ಕಾರ ಪ್ರಕಟಿಸಿದ 'ಕ್ರಮ ಕೈಗೊಂಡ ವರದಿ'ಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿ ಅವರ ಹೆಸರು ಅಚಾತುರ್ಯದಿಂದಾಗಿ ಸೇರ್ಪಡೆ ಆಗಿರುವುದನ್ನು ಶೀಘ್ರವೇ ಸರಿಪಡಿಸಲಾಗುವುದು ಎಂದು ಗೃಹ ಸಚಿವ ಎಲ್.ಕೆ. ಅಡ್ವಾಣಿ ತಿಳಿಸಿದ್ದಾರೆ.

ಅಡ್ವಾಣಿ ಅವರ ಈ ಬಗೆಯ ಹೇಳಿಕೆಯಿಂದಾಗಿ ಎಐಎಡಿಎಂಕೆ ಮತ್ತು ಬಿಜೆಪಿ ನಡುವಿನ ವಿರಸ ಮತ್ತಷ್ಟು ಹೆಚ್ಚುವ ಸಾಧ್ಯತೆಗಳು ಕಂಡುಬಂದಿವೆ.

ಕೇಂದ್ರದ ಮಾಜಿ ಸಚಿವ ಮತ್ತು ಡಿಎಂಕೆ ಸಂಸದೀಯ ಪಕ್ಷದ ನಾಯಕ ಮುರಸೋಳಿ ಮಾರನ್ ಅವರಿಗೆ ಬರೆದ ಪತ್ರದಲ್ಲಿ ಗೃಹ ಸಚಿವರು ಈ 'ಪ್ರಮಾದ'ವನ್ನು ಒಪ್ಪಿಕೊಂಡಿದ್ದಾರೆ. ಅಡ್ವಾಣಿ ಅವರ ಪತ್ರದ ಪ್ರತಿಗಳನ್ನು ಮುರಸೋಳಿ ಮಾರನ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಇಂದು ಬಿಡುಗಡೆ ಮಾಡಿದರು.

• **ಹೊಸೂರು ಕಳ್ಳಬಟ್ಟಿ ದುರಂತ ಸತ್ತವರ ಸಂಖ್ಯೆ 54ಕ್ಕೆ ಏರಿಕೆ**

ಚೆನ್ನೈ, ಆಗಸ್ಟ್ 24 (ಪಿಟಿಐ, ಯುಎನ್‌ಐ)- ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರಿನಲ್ಲಿ ಶನಿವಾರ ಕಳ್ಳಬಟ್ಟಿ ಸೇವಿಸಿದ್ದರಿಂದ ಸತ್ತವರ ಸಂಖ್ಯೆ ಈಗ 54ಕ್ಕೆ ಏರಿದೆ ಎಂದು ಇಲ್ಲಿನ ಶಾಸಕ ಬಿ. ವೆಂಕಟಸ್ವಾಮಿ ಅವರು ತಿಳಿಸಿದ್ದಾರೆ.

ಕಳ್ಳಬಟ್ಟಿ ಸೇವನೆಯಿಂದ ಅಸ್ವಸ್ಥರಾಗಿರುವವರಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ. ಹೊಸೂರು ಮತ್ತು ಕೃಷ್ಣಗಿರಿ ಆಸ್ಪತ್ರೆಗಳಲ್ಲಿ ಸುಮಾರು 125 ಮಂದಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 25-8-1973

• **ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸಲು ಇಂದಿರಾ ಗಾಂಧಿ ಕರೆ**

ನವದೆಹಲಿ, ಆಗಸ್ಟ್ 24- ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಆಲ್ಜಿಯರ್ಸ್‌ನಲ್ಲಿ ನಡೆಯುವ ಅಲಿಪ್ತ ರಾಷ್ಟ್ರಗಳ ಸಮ್ಮೇಳನ ವಿವೇಚಿಸಬೇಕು ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಹೇಳಿದ್ದಾರೆ.

ವಿಶೇಷವಾಗಿ ಏಷ್ಯಾ, ಆಫ್ರಿಕಾದಲ್ಲಿರುವ ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ರಫ್ತುಗಳಿಗೆ ಉತ್ತಮ ಪ್ರತಿಫಲ ಪಡೆಯುವಂತೆ ಹಾಗೂ ಬಡತನ ನೀಗುವಂಥ ವಿಶ್ವ ಆರ್ಥಿಕ ಶಕ್ತಿಗಳ ಮೇಲೆ ಈ ಸಮ್ಮೇಳನ ಪ್ರಭಾವ ಬೀರಬೇಕೆಂದು ಅವರು 'ತನ್ಜುಗ್' ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

• **ಬೆಲೆ ಏರಿಕೆಗೆ ಆಹಾರಧಾನ್ಯ ಉತ್ಪಾದನೆ ಕುಗ್ಗಿದ್ದೇ ಕಾರಣ: ಚವಾಣ್**

ನವದೆಹಲಿ, ಆಗಸ್ಟ್ 24- ಇತ್ತೀಚಿನ ಬೆಲೆ ಏರಿಕೆಗೆ ಮೂಲಭೂತವಾಗಿ ಆಹಾರಧಾನ್ಯ, ಖಾದ್ಯ ತೈಲ ಇತ್ಯಾದಿ ಅಗತ್ಯ ವಸ್ತುಗಳ ಉತ್ಪಾದನೆ ಕುಗ್ಗಿದ್ದೇ ಕಾರಣವೆಂದು ಅರ್ಥ ಸಚಿವ ವೈ.ಬಿ. ಚವಾಣರು ಇಂದು ಲೋಕಸಭೆಯಲ್ಲಿ ತಿಳಿಸಿದರು.

ಬೆಲೆ ಏರಿಕೆಗೆ ಇತಿಮಿತಿ ಇಲ್ಲದೆ ಸಾಲ ಸೌಲಭ್ಯ ವಿಸ್ತರಿಸಿದ್ದೇ ಕಾರಣ ಅಲ್ಲವೆಂದು ಅವರು ಹೇಳಿದರು.

ದಾಸಚೌಧುರಿ ಅವರ ಪ್ರಶ್ನೆಗೆ ಉತ್ತರ ಕೊಟ್ಟ ಸಚಿವರು, ಸಾಲ ನೀತಿ ಕ್ರಮಗಳು ಬೆಲೆ ಏರಿಕೆ ತಡೆಗಟ್ಟುವುದರಲ್ಲಿ ಸಹಾಯಕವಾಗಬಲ್ಲವಷ್ಟೇ ಎಂದು ನುಡಿದರು.

ಸಂಗತ

ಸಹಜ ಕಲೆಗೆ ಸಿಗಲಿ ಪ್ರೋತ್ಸಾಹ

ಇಂದು ಸಿನಿಮಾ, ಟಿ.ವಿ. ಸೇರಿದಂತೆ ಮನರಂಜನೆಗಾಗಿ ಹಲವಾರು ಮಾಧ್ಯಮಗಳಿದ್ದರೂ ಅವು ನಾಟಕದಷ್ಟು ಪರಿಣಾಮಕಾರಿಯಲ್ಲ

• ಪಾರ್ವತಿ ಪಿಟಗಿ

ಇತ್ತೀಚೆಗಷ್ಟೇ ಒಂದು ಒಳ್ಳೆಯ ನಾಟಕವನ್ನು ನೋಡಿದೆ. ವೃತ್ತಿ ರಂಗಭೂಮಿಯ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಎಂಬ ನಾಟಕ ಕಂಪನಿ ಮೂರ್ನಾಲ್ಕು ತಿಂಗಳುಗಳಿಂದ ಬೆಳಗಾವಿಯಲ್ಲಿ ಬೀಡುಬಿಟ್ಟಿದೆ. 'ಪೋಜು ಕೊಟ್ಟಾಳೋ ಫೋನ ನಂಬರ್ ಕೊಟ್ಟಾಳೋ' ಎಂಬ ನಾಟಕದ ಪ್ರತಿಯೊಂದು ಪಾತ್ರವೂ ಅದ್ಭುತ ಹಾಗೂ ಅನನ್ಯವೆನ್ನಿಸಿತು. ಅದಕ್ಕಿಂತ ಮಿಗಿಲಾದದ್ದು ಅಭಿನಯ ಹಾಗೂ ಕಥಾವಸ್ತು.

ಒಟ್ಟಿನಲ್ಲಿ, ನಾಟಕ ಆರಂಭದಿಂದ ಹಿಡಿದು ಅಂತ್ಯದವರೆಗೂ ಜನರ ಮೇಲೆ ಗಾಢ ಪರಿಣಾಮ ಬೀರಿದಂತೆನ್ನಿಸಿತು. ಹಾಗಾಗಿಯೇ ಅಮೋಘ ಸಂಭಾಷಣೆಗಾಗಿ ಜೋರಾದ ಚಪ್ಪಾಳೆ, ಆಗಾಗ ಕೇಕೆಹಾಕಿ ನಕ್ಕು ನಲಿವ ಸದ್ದು, ಗಂಭೀರ ಪ್ರಸಂಗಗಳಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದ ಇರುತ್ತಿತ್ತು. ಅಂತಿಮ ದೃಶ್ಯ ಮುಗಿದು ರಂಗಮಂದಿರದಲ್ಲಿ ಬೆಳಕು ಹುಟ್ಟಿದಾಗಲಂತೂ ಎಲ್ಲರ ಕಣ್ಣಲ್ಲೂ ನೀರಾಡಿದ್ದು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಇಂದು ಸಿನಿಮಾ, ಟಿ.ವಿ. ಸೇರಿದಂತೆ ಮನರಂಜನೆಗಾಗಿ ಹಲವಾರು ಮಾಧ್ಯಮಗಳಿದ್ದರೂ ಅವು ನಾಟಕದಷ್ಟು ಪರಿಣಾಮಕಾರಿಯಲ್ಲ. ಕಾರಣವಿಷ್ಟೇ, ನಾಟಕಗಳು ಬದುಕಿನ ಸೌಂದರ್ಯ, ಬವಣೆ ಸೇರಿದಂತೆ ಎಲ್ಲ ಮಗ್ಗುಲುಗಳನ್ನೂ ನಮ್ಮ ಕಣ್ಣೆದುರೇ ಬಗೆದು ತೋರುವುದರ ಜೊತೆಗೆ ಸರಿ ತಪ್ಪು, ಒಳಿತು ಕೆಡುಕುಗಳನ್ನೂ ಅನಾವರಣಗೊಳಿಸುತ್ತವೆ. ಉತ್ತಮ ಮೌಲ್ಯಗಳನ್ನು ಹೊತ್ತ ನಾಟಕ ಜನರಿಗೆ ಸನ್ಮಾರ್ಗವನ್ನು ತೋರುವ ರಹದಾರಿ ಆಗಬಲ್ಲದು. ಅಂತೆಯೇ ಈ ನಾಟಕಗಳು ಹಿಂದಿನ ಕಾಲದಿಂದಲೂ ಜನರಿಗೆ ಮನರಂಜನೆಯ ಜೊತೆಗೆ ಬದುಕಿನ ಮರ್ಮವನ್ನೂ ಅರುಹಿ, ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂದು ತಿಳಿಹೇಳುವ ಪಾಠಗಳಾಗಿದ್ದವು. ಇದರಿಂದ ಸಮಾಜ ತನ್ನಿಂದ ತಾನೇ ಸುಧಾರಿಸಿಕೊಳ್ಳಲು ಸಹಾಯವಾಗುತ್ತಿತ್ತು.

ಮತ್ತೊಂದು ಅರ್ಥದಲ್ಲಿ, ನಾಟಕಗಳು ಸತ್ಯ, ಧರ್ಮ, ನ್ಯಾಯ, ನೀತಿಯಂತಹ ಮೌಲ್ಯಗಳನ್ನೂ ಎತ್ತಿ ತೋರಿಸುತ್ತಿದ್ದವು. ಇಂದಿನ ಭರಾಟೆಯ ದಿನಮಾನಗಳ ಕೃತ್ರಿಮತೆ, ಕೃತಕತೆಯ ಹವ್ಯಾಸಗಳ ಮಧ್ಯೆ ರಂಗಭೂಮಿಯ ನಾಟಕ ಎನ್ನುವ ಜೀವಂತ ಕಲೆ ನೇಪಥ್ಯಕ್ಕೆ ಸರಿಯುತ್ತಿದೆ.

ಪ್ರತಿಯೊಬ್ಬರ ಅಂಗೈ ಮೇಲೆ ನಲಿದಾಡುವ ಮೊಬೈಲ್ ಇಂದಿನವರಿಗೆ ಸರ್ವಸ್ವ. ಮನರಂಜನೆಗಷ್ಟೇ ಅಲ್ಲ, ಎಲ್ಲದಕ್ಕೂ ಅದು ಅನಿವಾರ್ಯ ಎಂಬಂತಾಗಿದೆ. ಇಂದು ಕೂಡು ಕುಟುಂಬ ಹೋಗಲಿ, ಅಪ್ಪ ಅಮ್ಮ ಮಗುವಷ್ಟೇ ಇರುವ ಕುಟುಂಬದಲ್ಲಿಯೂ ಅವರವರ ಜಗತ್ತು ಅವರವರ ಮೊಬೈಲ್ ಎಂಬಂತೆ ಆಗಿದೆ. ಹೀಗಿರುವಾಗ, ಮನೆಯವರೆಲ್ಲ ಒಟ್ಟಾಗಿ ಬೆರೆತು ನಲಿವ ಅವಕಾಶವಾದರೂ ಎಲ್ಲಿ? ಒಂದೇ ಮನೆಯಲ್ಲಿ ಒಟ್ಟಾಗಿ ಬದುಕದೇ ಇರುವಂತಹವರು ಇನ್ನು ಅಕ್ಕಪಕ್ಕದ ಜನರೊಟ್ಟಿಗಾಗಲಿ, ಊರಿನ ಜನರೊಂದಿಗಾಗಲಿ ಬೆರೆಯುವುದಾದರೂ ಎಂದು? ಇಂತಹ ಸ್ಥಿತಿಯಲ್ಲಿ ಸಾಮರಸ್ಯ, ಸೌಹಾರ್ದವಾದರೂ ಎಲ್ಲಿಂದ ಹುಟ್ಟಿಕೊಳ್ಳುತ್ತದೆ?

ಅಂದಿನ ದಿನಮಾನಗಳಲ್ಲಿ ಮನೆಮಂದಿಗೆಲ್ಲ ಮುದ ನೀಡುವಂತಿದ್ದ ನಾಟಕಗಳನ್ನು ಇಡೀ ಓಣಿ ಅಥವಾ ಊರಿನವರೆಲ್ಲ ಒಟ್ಟಾಗಿ ನೋಡಿ ಒಟ್ಟಾಗಿಯೇ ಗುಣ ಅವಗುಣಗಳನ್ನು ಅಳೆಯುತ್ತಿದ್ದರು. ತಮ್ಮೊಟ್ಟಿಗೆ ಇರುತ್ತಿದ್ದ ಚಿಕ್ಕವರಿಗೆ 'ನೋಡಿರಿಲ್ಲೊ, ಕೆಟ್ಟ ಕೆಲಸಾ ಹ್ಯಾಂಗ ಕೆಟ್ಟದ್ದನ್ನ ಮಾಡತೈತಿ? ಚೊಲೊ ಕೆಲಸಾ ಮಾಡುವಾರನ್ನ ದೇವರಾ ಎಂದೂ ಕೈ ಬಿಡುದಿಲ್ಲ' ಎಂದೆಲ್ಲ, ನಾಟಕದಿಂದ ಪ್ರೇರಿತರಾದ ದೊಡ್ಡವರು ಮೌಲ್ಯಗಳ ಮಹತ್ವವನ್ನು ಅರಹುತ್ತಿದ್ದರು. ಈ ಮಾತುಗಳು ಮಕ್ಕಳ ಮುಗ್ಧ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತಿದ್ದವು.

ಸರಿದಾರಿಯಲ್ಲಿ ನಡೆಯಬೇಕೆಂಬ ಹಂಬಲವು ಸಮುದಾಯ ಪ್ರಜ್ಞೆಯ ಭಾಗವಾದರೆ ಅಂಥ ಕಡೆ ಜನರ ಮಧ್ಯೆ ಜಗಳಗಳೂ ಕಡಿಮೆ ಇರುತ್ತವೆ. ಅಕಸ್ಮಾತ್ ಏನಾದರೂ ಅರಿವಿನ ಕೊರತೆಯಿಂದ ಜಗಳ ಹುಟ್ಟಿಕೊಂಡಲ್ಲಿ, ಸಮಾಜದ ಹಿರಿಯರು ತಿದ್ದಿ ಬುದ್ಧಿ ಹೇಳುತ್ತಿದ್ದರು. ಆ ವ್ಯಾಜ್ಯ ಅಲ್ಲಿಗೇ ಕೊನೆಗೊಳ್ಳುತ್ತಿತ್ತು. ಆದರೆ ಇಂದು ಸಣ್ಣಪುಟ್ಟ ಜಗಳಕ್ಕೂ ಕೋರ್ಟಿನ ಮೆಟ್ಟಿಲೇರುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ, ನೈತಿಕ ಹೊಣೆಗಾರಿಕೆ ಹಾಗೂ ಸಾಮಾಜಿಕ ಪ್ರಜ್ಞೆಯ ಕೊರತೆ, ಎಲ್ಲಕ್ಕಿಂತ ಮಿಗಿಲಾಗಿ, ಬದುಕಿನಲ್ಲಿ ಹಣವೇ ಮುಖ್ಯ, ಅದನ್ನು ಯಾವ ಮಾರ್ಗದಿಂದ ಗಳಿಸಿದರೂ ಸರಿ ಎನ್ನುವ ಭ್ರಾಂತಿ.

ಇಂತಹ ಕೆಟ್ಟ ವ್ಯವಸ್ಥೆಯನ್ನು ಸುಧಾರಿಸಲು ನಾಟಕಗಳು ಸಹಕಾರಿಯಾಗಬಲ್ಲವು. ಯಾಕೆಂದರೆ ಮೊದಲಿನಿಂದಲೂ ನಾಟಕಗಳು ಉತ್ತಮ ಹಾಗೂ ಆರೋಗ್ಯಕರ ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಅತಿ ವಿರಳವೆಂಬಂತೆ ಕಲೆಗಾಗಿಯೇ ಹುಟ್ಟಿ ಕಲೆಗಾಗಿಯೇ ಬದುಕಿ ಕಲೆಗಾಗಿಯೇ ಉಸಿರಾಡುವ ಕೆಲವೊಂದಿಷ್ಟು ಹುಟ್ಟುಕಲಾವಿದರ ಹಾಗೂ ಕೆಲವು ಕಲಾ ಪೋಷಕರ ಜೀವಂತಿಕೆಯಿಂದಲೇ ಈಗ ಇಷ್ಟಾದರೂ ನಾಟಕಗಳು ಕಾಣಸಿಗುತ್ತವೆ. ಆದರೆ ಈ ಕಲಾವಿದರು ಬಹಳ ಕಷ್ಟದಿಂದಲೇ ಬದುಕುತ್ತಿದ್ದಾರೆ. ಇನ್ನು ಕಂಪನಿ ಮಾಲೀಕರ ಕಷ್ಟವಂತೂ ಹೇಳತೀರದು. ಕಲಾವಿದರ ವೇತನ ಸೇರಿದಂತೆ ಹಲವಾರು ದೊಡ್ಡ ಮೊತ್ತದ ಖರ್ಚನ್ನು ನಾಟಕದಿಂದ ಸಿಗುವ ಆದಾಯದಿಂದಷ್ಟೇ ನಿಭಾಯಿಸಬೇಕಾಗುತ್ತದೆ.

ನಿರ್ದಿಷ್ಟವಾದ ನೆಲೆ ಇಲ್ಲದೆ, ಊರೂರು ಅಲೆಯುತ್ತಾ ಪ್ರತಿ ಬಾರಿಯೂ ಹೊಸ ಸ್ಥಳದಲ್ಲಿ ಅಭ್ಯಾಸ ಮಾಡಿಕೊಂಡು, ದೊಡ್ಡ ದೊಡ್ಡ ಸವಾಲುಗಳನ್ನು ಎದುರಿಸುತ್ತಾ ಬದುಕುತ್ತಿರುವ ನಾಟಕ ಕಲಾವಿದರನ್ನು ಜನರು ಪ್ರೋತ್ಸಾಹಿಸಬೇಕಿದೆ. ಅವರನ್ನು ಪೋಷಿಸಿ, ಸಹಜ ಕಲೆಗೆ ಬೆಲೆ ಕೊಟ್ಟು ಬದುಕಿಸಬೇಕಿದೆ.

ವಾಚಕರ ವಾಣಿ

ವಾಣಿಜ್ಯ ವಿಷಯ ಕಲಿಕೆ: ಬದಲಾಗಲಿ ಆದ್ಯತೆ

ಕರ್ನಾಟಕದಲ್ಲಿ ಶಿಕ್ಷಣ ನೀತಿ ಯಾವುದಿರಬೇಕು ಎಂಬ ವಾಗ್ವಾದದಲ್ಲಿ ಕೆಲವು ವಿಷಯಗಳು ಮಾತ್ರ ಪದೇಪದೇ ಮುನ್ನೆಲೆಗೆ ಬರುತ್ತಿವೆ. ಮುಂದಿನ ವರ್ಷಗಳಲ್ಲಿ ಉದ್ಯೋಗ ಲಭ್ಯತೆ, ಅದಕ್ಕೆ ಅಗತ್ಯವಾಗುವ ಕೌಶಲ ಹಾಗೂ ಮನೋಭಾವ ಮುಖ್ಯ ಎನ್ನುವುದಾದರೆ, ಬ್ಯಾಂಕಿಂಗ್‌ನಂತಹ ವಿಷಯಗಳನ್ನು ಈ ವಿವಾದದಿಂದ ಹೊರಗಿಡಬೇಕು. ಸುಮಾರು ಒಂದೂವರೆ ದಶಕ ಆ ಕ್ಷೇತ್ರದಲ್ಲಿದ್ದು, ಕೆಲ ಕಾಲ ಅದರ ಬಗೆಗೆ ಬರೆದ ನಾನು, ಈಚೆಗಿನ ವರ್ಷಗಳಲ್ಲಿ ಗಮನಿಸಿದ್ದೇನೆಂದರೆ- ತಂತ್ರಜ್ಞಾನ, ಪ್ರಕ್ರಿಯೆಗಳ ಸರಳೀಕರಣ ಮುಂದುವರಿದಿದ್ದರೂ ಬ್ಯಾಂಕ್ ಸಿಬ್ಬಂದಿಯಲ್ಲಿ ತಯಾರಿ, ತರಬೇತಿ ಸಾಲದು. ವಾಣಿಜ್ಯ ಪದವಿಯ ಕೊನೆಯ ಹಂತದಲ್ಲಾದರೂ ತಕ್ಕ ಮಟ್ಟಿನ ಪ್ರಾರಂಭಿಕ ಜ್ಞಾನ ದೊರೆತಿರಬೇಕು. ಆದರೆ ಹೆಚ್ಚಿನ ಉಪನ್ಯಾಸಕರು ಅವಲಂಬಿಸಿರುವ ಪಠ್ಯಪುಸ್ತಕಗಳು ಹಳೆಯವು. ಹಳೆಯ ಪದ್ಧತಿ ಬದಲಾಗಿಯೇ ಒಂಬತ್ತು ವರ್ಷಗಳಾಗಿವೆ. ಇನ್ನು ಪುಸ್ತಕಗಳೋ ಅಲ್ಲಿ ಇಲ್ಲಿ ಒಂದಿಷ್ಟು ಭಾಗ ಸೇರ್ಪಡೆ ಮಾಡಿ ಪರಿಷ್ಕೃತ ಎಂದು ಹೇಳಿಕೊಂಡವು. ಪ್ರಕಾಶಕರೂ ಬೆರಳೆಣಿಕೆಯಷ್ಟಿದ್ದಾರೆ. ಸ್ಕಿಲ್ ಡೆವಲಪ್‌ಮೆಂಟ್ ಎಂದು ಕೆಲ ಚಟುವಟಿಕೆಗಳನ್ನು ಸೇರಿಸಿದ್ದರೂ ಇತ್ತೀಚಿನ ಬೆಳವಣಿಗೆ, ಹೊಸ ಶೋಧಗಳ ಬಗ್ಗೆ ಉಲ್ಲೇಖ ಅತಿ ಅಲ್ಪ. ಒಟ್ಟಾರೆ, ಎನ್‌ಇಪಿಯಲ್ಲಿ ಪಠ್ಯಕ್ರಮ ಸ್ವಲ್ಪ ಸುಧಾರಿಸಿದೆ. ನೋಟು ರದ್ದತಿ, ಅನುತ್ಪಾದಕ ಆಸ್ತಿಗಳು ಗಂಭೀರ ಮಟ್ಟ ತಲುಪಿದ ಅವಧಿ ಹಾಗೂ ಕಾರಣ- ಇಂತಹ ವಿಷಯಗಳ ವಿಶ್ಲೇಷಣೆ ಪಠ್ಯಪುಸ್ತಕಗಳಲ್ಲೂ ಇರಬೇಕು. ಬಿಎಸ್‌ಆರ್‌ಬಿ ಬದಲು ಐಬಿಪಿಎಸ್ ಪರೀಕ್ಷೆ, ಡಿ.ಡಿ.ಬದಲು ನೆಫ್ಟ್ ಬಂದಂತೆ ಬ್ಯಾಂಕಿಂಗ್ ವಿಷಯ ಕಲಿಕೆಯೂ ಬದಲಾಗಬೇಕಿದೆ. ಈ ದಿಸೆಯಲ್ಲಿ ಈಗ ಕರ್ನಾಟಕ ಸರ್ಕಾರ ರಚಿಸಲಿರುವ ಸಮಿತಿಯು ವಿಷಯನಿಷ್ಠವಾಗಿ ಇಂತಹ ಅಂಶಗಳನ್ನು ಪರಿಶೀಲಿಸಬೇಕು. ಪಠ್ಯವು ಸರ್ಕಾರಿ ಯೋಜನೆಗಳ (ಉದಾಹರಣೆಗೆ, ಜನಧನ್) ಬಗೆಗೆ ಮಾಹಿತಿ ಅಲ್ಲದೆ ಸಂತುಲಿತ ವಿಶ್ಲೇಷಣೆಯನ್ನೂ ಒಳಗೊಂಡಿದೆ ಎಂದು ಖಾತರಿಪಡಿಸಿಕೊಳ್ಳುವುದೂ ಅಗತ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಅಜ್ಞಾತ ವ್ಯಕ್ತಿಗೆ...

ಇಂಗ್ಲಿಷ್ ಭಾಷೆಯಲ್ಲಿ ಒಂದು
ಗಾದೆ ಮಾತು ಇಂತಿದೆ:
'ನೀವು ತಾರೆಗಳ ಕಡೆಗೆ
ಗುರಿ ಇಟ್ಟರೆ, ಚಂದ್ರನ
ಮೇಲೆ ತಲುಪುವಿರಿ'.
ಬಹುಶಃ ನಮ್ಮ ಇಸ್ರೊ
ತಂಡದ ವಿಜ್ಞಾನಿಗಳು
ಭವಿಷ್ಯದಲ್ಲಿ ಮುಂದೊಂದು
ದಿನ ಈ ವಿಜಯ ಸಾಧಿಸುತ್ತಾರೆ
ಎಂದು ತಿಳಿದೇ ಈ ಗಾದೆ
ಮಾತನ್ನು ಹೇಳಿರಬಹುದಾದ
ಆ ಅಜ್ಞಾತ ವ್ಯಕ್ತಿಗೆ ಅನಂತ ನಮನ!

ಮುರುಗೇಶ ಹನಗೋಡಿಮಠ, ಹುಬ್ಬಳ್ಳಿ

ಕಾವೇರಿ ವಿವಾದ: ಬೇಕು ಸಂಕಷ್ಟಸೂತ್ರ

ಶತಮಾನಗಳಷ್ಟು ಹಳೆಯದಾದ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಮಧ್ಯದ ಕಾವೇರಿ ನೀರು ಹಂಚಿಕೆ ಸಮಸ್ಯೆಯು ಕಾವೇರಿ ನ್ಯಾಯಮಂಡಳಿಯ ದಶಕಗಳ ವಿಚಾರಣೆ ಮತ್ತು ಸುಪ್ರೀಂ ಕೋರ್ಟ್ ಆದೇಶದ ನಂತರವೂ ಮುಂದುವರಿಯುತ್ತಿರುವುದು ವಿಷಾದದ ಸಂಗತಿ. ನೀರಿನ ಸಮಸ್ಯೆ ಉದ್ಭವವಾಗುವುದೇ ಮಳೆ ಕೊರತೆಯಾದಾಗ ಮತ್ತು ಅಣೆಕಟ್ಟುಗಳು ಭರ್ತಿ ಆಗದಿರುವಾಗ. ಈ ಮೂಲ ಸಮಸ್ಯೆಗೆ ಇಷ್ಟು ವರ್ಷಗಳ ನಂತರವೂ ಸಮರ್ಪಕ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದಿರುವುದು ಒಟ್ಟಾರೆ ನಮ್ಮ ವ್ಯವಸ್ಥೆಯ ಕಾರ್ಯನಿರ್ವಹಣೆಗೆ ಹಿಡಿದ ಕನ್ನಡಿ. ಮತ್ತೆ ನೀರು ಹರಿಸುವ ಕುರಿತು ತಮಿಳುನಾಡಿನಿಂದ ಅದೇ ರಾಗ ಅದೇ ಹಾಡು ಮುಂದುವರಿಯುತ್ತಿದೆ. ಇದರಲ್ಲಿ ರಾಜಕೀಯವೂ ಬೆರೆತುಕೊಳ್ಳುತ್ತಿದೆ.

ಸಂಕಷ್ಟವನ್ನು ಸಮನಾಗಿ ಹಂಚಿಕೊಳ್ಳಬೇಕೆಂಬುದು ಸಾಮಾನ್ಯ ತಿಳಿವಳಿಕೆ ಮತ್ತು ಗ್ರಹಿಕೆ. ಹೀಗಿದ್ದೂ ನ್ಯಾಯಮಂಡಳಿಯ ಹಂಚಿಕೆಯಂತೆ ನೀರು ಬಿಡಲೇಬೇಕೆಂದು ತಮಿಳುನಾಡು ಒತ್ತಾಯಿಸುವುದು ಸಮಂಜಸವಲ್ಲ. ಇಷ್ಟೆಲ್ಲ ವಿಚಾರಣೆಗಳ ನಂತರವೂ ಈ ಮೂಲ ಸಂಕಷ್ಟಸೂತ್ರ ನಿರೂಪಿತವಾಗದಿರುವುದು ಅಚ್ಚರಿಯ ಸಂಗತಿ. ಸುಪ್ರೀಂ ಕೋರ್ಟಿನಿಂದ ರಚಿತಗೊಂಡಿರುವ ವಿಶೇಷ ಪೀಠದಿಂದಲಾದರೂ ಈ ಸಮಸ್ಯೆ ಶಾಶ್ವತವಾಗಿ ಬಗೆಹರಿಯಬಹುದೆಂದು ಆಶಿಸಬಹುದೇನೊ.

ವೆಂಕಟೇಶ ಮಾಚಕನೂರ, ಧಾರವಾಡ

ಜಾ'ಮೂನ್'!

ವಿಕ್ರಮ್ ಲ್ಯಾಂಡರ್‌ನ ಚಂದ್ರ ಸ್ಪರ್ಶವನ್ನು ಮನೆ ಮಂದಿಯೆಲ್ಲಾ ಒಟ್ಟಿಗೇ ಟಿ.ವಿ.ಯಲ್ಲಿ ವೀಕ್ಷಿಸುತ್ತಿದ್ದೆವು. ಗುರಿ ಮುಟ್ಟಿದ ಖುಷಿಗೆ ಸಿಹಿ ತಿನ್ನಲು ಮೈಸೂರ್ ಪಾಕ್, ಸೋನ್ ಪಾಪ್ಡಿ, ಜಿಲೇಬಿ, ಜಹಾಂಗೀರ್, ಬರ್ಫಿ... ಎಂದು ಒಬ್ಬೊಬ್ಬರು ಒಂದೊಂದು ಹೆಸರು ಹೇಳಿದರು. ಅಜ್ಜಿಯಂತೂ 'ನನಗೆ ಜಾಮೂನ್ ಇರಲಿ, ಯಾಕೆಂದರೆ, ಅದರಲ್ಲಿ 'ಮೂನ್' ಇದೆ ತಾನೇ!?' ಅಂದಾಗ ಅಜ್ಜಿಯ ಸಮಯೋಚಿತ ಸಲಹೆಗೆ ಎಲ್ಲರೂ ತಲೆದೂಗಿದರು. ಬಳಿಕ ಸಹಮತದ ಒಪ್ಪಿಗೆ ನೀಡಿ ಎಲ್ಲರೂ 'ಜಾಮೂನ್' ಮೆಲ್ಲುವಂತಾಯಿತು.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಗಾಂಧಿಮಾರ್ಗ ಕಾಣಲಿಲ್ಲವೇಕೆ?

ಕನಕಪುರ ತಾಲ್ಲೂಕಿನಲ್ಲಿ ಇಬ್ಬರು ಪೌರಕಾರ್ಮಿಕರು ಬಾಕಿ ವೇತನ ಪಾವತಿಸಬೇಕೆಂದು ಒತ್ತಾಯಿಸಿ, ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿರುವ ಸುದ್ದಿ ಚಿತ್ರಸಹಿತ ವರದಿಯಾಗಿದೆ (ಪ್ರ.ವಾ., ಆ. 23). ಈ ವರದಿ ಓದಿದ, ಚಿತ್ರ ನೋಡಿದ ಯಾರಿಗಾದರೂ ಮನಸ್ಸು ಹಿಂಸೆಯಿಂದ ಹಿಂಡಿಹೋಗುತ್ತದೆ. ಜೊತೆಗೆ, ಪ್ರತಿಭಟನೆಗೆ ಇಂಥ ಮಾರ್ಗವನ್ನು ಆಯ್ಕೆ ಮಾಡಿಕೊಂಡ ಪೌರಕಾರ್ಮಿಕರ ಮೇಲೂ ಪೌರಕಾರ್ಮಿಕರು ಇಂಥ ಪ್ರತಿಭಟನೆಗೆ ಇಳಿಯುವಂತಹ ವಾತಾವರಣ ಸೃಷ್ಟಿಸಿದ ಪಂಚಾಯಿತಿ ಅಧಿಕಾರಿಗಳ ಮೇಲೂ ಒಟ್ಟಿಗೆ ಕೋಪ ಉಕ್ಕುತ್ತದೆ.

ಪ್ರಪಂಚಕ್ಕೇ ಮಾದರಿಯಾದ ಪ್ರತಿಭಟನೆಯ ಗಾಂಧಿಮಾರ್ಗ ಕಣ್ಮುಂದೆಯೇ ಇರುವಾಗ, ಈ ರೀತಿ ಮಲ ಸುರಿದುಕೊಂಡು ಪ್ರತಿಭಟಿಸುವ ಅಸಹ್ಯವೂ ಅವಮಾನಕರವೂ ಆದ ಮಾರ್ಗವೊಂದು ಚಾಲ್ತಿಗೆ ಬಂದಿರುವುದು ದುರದೃಷ್ಟಕರ. ಕೆಳ ಹಂತದ ನೌಕರರಿಗೆ ವಿನಾಕಾರಣ ವೇತನ ತಡೆಹಿಡಿಯುವ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ಆನಂದ' ಮಾರ್ಗದಲ್ಲಿ ಪ್ರಜ್ಞಾನಂದ

• ಸುಕೃತ ಎಸ್.



ಎದುರಾಳಿಯಾದವರು ಎಂಥವರೇ ಆಗಿರಲಿ, ಎಷ್ಟೇ ದೊಡ್ಡ ಆಟಗಾರನಾಗಿರಲಿ ಪ್ರಜ್ಞಾನಂದ ಧೃತಿಗೆಡುವುದಿಲ್ಲ. ಆಟದಲ್ಲಿ ಎಂಥದ್ದೇ ಕಷ್ಟದ ಸಂದರ್ಭ ಎದುರಾದರೂ ತನ್ನ ಬುದ್ಧಿಶಕ್ತಿಯಿಂದ ಅದನ್ನು ಎದುರಿಸುತ್ತಾನೆ. ಇದು ಆತನ ಬಹುದೊಡ್ಡ ಶಕ್ತಿ...

– ಹೀಗೆಂದು ಮುಕ್ತಕಂಠದಲ್ಲಿ ಹೊಗಳಿದವರು, ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆದ ಫಿಡೆ ವಿಶ್ವಕಪ್ ಚೆಸ್ ಟೂರ್ನಿಯ ಭಾರತೀಯ ತಂಡದೊಂದಿಗೆ ಹೋಗಿದ್ದ ಕೋಚ್, ಗ್ರ್ಯಾಂಡ್‌ಮಾಸ್ಟರ್ ಎಂ. ಶ್ಯಾಮ್‌ಸುಂದರ್.

ಟೂರ್ನಿ ನಡೆಯುತ್ತಿರುವಾಗಲೇ ಅಂದರೆ ಆಗಸ್ಟ್ 10ಕ್ಕೆ ಪ್ರಗ್ಗು (ಆತನ ಮುದ್ದಿನ ಹೆಸರು) 18ಕ್ಕೆ ಕಾಲಿಟ್ಟಿದ್ದ. ಪ್ರಗ್ಗುವಿನದು ಚೆನ್ನೈನ ಮಧ್ಯಮವರ್ಗದ ಕುಟುಂಬ. ತಂದೆ ರಮೇಶ್ ಬಾಬು, ತಾಯಿ ನಾಗಲಕ್ಷ್ಮಿ, ಆತನಿಗೆ ವೈಶಾಲಿ ಎಂಬ ಅಕ್ಕ ಕೂಡ ಇದ್ದಾರೆ.

ಅಕ್ಕನಿಗೆ ಟಿ.ವಿ ನೋಡುವ ಹುಚ್ಚು ಹತ್ತಿಕೊಂಡಿತ್ತು. ವೈಶಾಲಿಯ ಈ ಚಟವನ್ನು ಬಿಡಿಸಲು ಮನೆಯ ಹತ್ತಿರದ ಚೆಸ್ ಅಕಾಡೆಮಿಗೆ ಆಕೆಯನ್ನು ಕಳುಹಿಸುವ ಉಪಾಯವನ್ನು ರಮೇಶ್ ಮಾಡಿದರು. ಕೆಲವೇ ವರ್ಷಗಳಲ್ಲಿ ವೈಶಾಲಿ ದೊಡ್ಡ ಸಾಧನೆ ಮಾಡಿ ಗೆದ್ದರು. 12 ಹಾಗೂ 14 ವರ್ಷದ ಒಳಗಿನ ವಿಶ್ವ ಚಾಂಪಿಯನ್‌ಶಿಪ್ ಅನ್ನು ಹಾಗೂ ನ್ಯಾಷನಲ್ ಚಾಲೆಂಜರ್ಸ್ ಅನ್ನು ಗೆದ್ದುಕೊಂಡರು. ಅಕ್ಕ ವೈಶಾಲಿಯ ಆಟವನ್ನು ನೋಡುತ್ತಲೇ ಪ್ರಗ್ಗು ಕೂಡ ಚೆಸ್ ಆಟಕ್ಕೆ ಆಕರ್ಷಿತನಾಗಿದ್ದ. ಅಕ್ಕನ ಆಟದ ಪ್ರಭಾವಕ್ಕೆ ಒಳಗಾಗಿದ್ದ. ಇದೇ ಕಾರಣಕ್ಕೆ, ಪ್ರಗ್ಗುವಿಗೆ ಸುಮಾರು ನಾಲ್ಕೂವರೆ ವರ್ಷ ಇರಬಹುದು ಆಗ ಅವನನ್ನೂ ಅಕಾಡೆಮಿಗೆ ಸೇರಿಸದೆ ಬೇರೆ ದಾರಿ ಇಲ್ಲದಾಯಿತು.

'ಪ್ರಗ್ಗುವನ್ನು ಚೆಸ್ ಆಡಲು ಕಳುಹಿಸಲು ಇಷ್ಟವಿರಲಿಲ್ಲ. ನನಗೆ ಪೋಲಿಯೊ ಆಗಿತ್ತು. ತಮಿಳುನಾಡು ರಾಜ್ಯ ಸಹಕಾರಿ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಕೆಲಸ ಮಾಡುತ್ತೇನೆ. ಚೆಸ್ ಬಡವರ ಆಟವಲ್ಲ. ಇದಕ್ಕೆ ಬಹಳ ಖರ್ಚಾಗುತ್ತದೆ. ಅದನ್ನು ಭರಿಸುವ ಶಕ್ತಿ ಇರಲಿಲ್ಲ. ವೈಶಾಲಿಯನ್ನು ಹೇಗೊ ಮುಂದೆ ತಂದೆವು. ಆದರೆ, ಪ್ರಗ್ಗುವನ್ನೂ ಇದೇ ಆಟದಲ್ಲಿ ಮುಂದೆ ತರುವುದು ಕಷ್ಟ ಎನಿಸಿತ್ತು. ಆದರೆ, ಚೆಸ್ ಆಡುವ ಪ್ರಜ್ಞಾನಂದನ ಆಸೆಯು ನನ್ನ ಹಿಂಜರಿಕೆಯನ್ನು ಹಿಮ್ಮೆಟಿಸಿತು' ಎನ್ನುತ್ತಾರೆ ತಂದೆ ರಮೇಶ್ ಬಾಬು.

ಹಲವು ಮೊದಲುಗಳನ್ನು ಗಳಿಸಿದ ಪ್ರಗ್ಗು: ನಾಲ್ಕೂವರೆ ವರ್ಷಕ್ಕೆ ಚೆಸ್ ಆಡಲು ಆರಂಭಿಸಿದ ಪ್ರಜ್ಞಾನಂದ, ಕೆಲವೇ ವರ್ಷಗಳಲ್ಲಿ ಹಲವು ಮೈಲಿಗಲ್ಲುಗಳನ್ನು ಸಾಧಿಸಿದ್ದ. 7 ವರ್ಷದ ಒಳಗಿನವರ ಟೂರ್ನಿಯಲ್ಲಿ ಚಾಂಪಿಯನ್ ಆದ. ನಂತರ ತನ್ನ 10ನೇ ವರ್ಷದಲ್ಲಿ 'ಇಟರ್‌ನ್ಯಾಷನಲ್ ಮಾಸ್ಟರ್' ಆಗಿ ಹೊರಹೊಮ್ಮಿದ್ದ. ಇದಾದ ಎರಡೇ ವರ್ಷಕ್ಕೆ ಗ್ರ್ಯಾಂಡ್‌ಮಾಸ್ಟರ್ ಕೂಡ ಆಗಿದ್ದ! ಇವೆಲ್ಲ ಆಗಿದ್ದು ಕೆಲವೇ ವರ್ಷಗಳಲ್ಲಿ. ಅತಿ ಕಿರಿಯ ವಯಸ್ಸಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ಆದ ಎರಡನೇ ಆಟಗಾರ ಪ್ರಗ್ಗು.

2019ರಲ್ಲಿ ಅಂದರೆ, ತನ್ನ 14 ವರ್ಷ 3 ತಿಂಗಳ ವಯಸ್ಸಿನಲ್ಲಿಯೇ 2600 ಎಲೊ ರೇಟಿಂಗ್ ಪಡೆದುಕೊಂಡಿದ್ದ. 2020ರ ನಂತರ ಕೋವಿಡ್ ಆತನ ಶ್ರೇಯಸ್ಸಿನ ವೇಗವನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಿತು. ಅಂತಾದರೂ ಆನ್‌ಲೈನ್ ಟೂರ್ನಿಗಳಲ್ಲಿ ಆತ ತನ್ನ ಗೆಲುವಿನ ಹಾದಿಯನ್ನು ಕ್ರಮಿಸಿದ. ಚೆಸ್‌ನಲ್ಲಿ ಅಗ್ರಗಣ್ಯರು ಎಂದೇ ಕರೆಯುವ ಸರ್ಗಿ ಕಜಾಕಿನ್, ಟೀಮೊರ್ ರಾಜ್‌ಬೋವ್, ಜ್ಯಾನ್ ಕ್ರಿಸ್ಟೋಫ್ ಡೂಡಾ ಅವರನ್ನು ಈ ಪುಟ್ಟ ಬಾಲಕ ಸೋಲಿಸಿದ.

ಆತನ ಸಾಧನೆಗೆ ಗರಿ ಎಂಬಂತೆ 2022ರಲ್ಲಿ ಆತ ವಿಶ್ವದ ನಂಬರ್ ಒನ್ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದ. ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಹಾಗೂ ಪಿ. ಹರಿಕೃಷ್ಣನ್ ನಂತರದಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದ ಮೂರನೇ ಆಟಗಾರ ಎನಿಸಿದ!

'ವಿಶ್ವ ಟೂರ್ನಿಯಲ್ಲಿನ ಆತನ ಆಟಗಳನ್ನು ಗಮನಿಸಿದರೆ ಆತನ ಆಟದ ಗುಣಮಟ್ಟ ತಿಳಿಯುತ್ತದೆ. ಬಹಳ ನಾಚಿಕೆ ಸ್ವಭಾವದ ಶಾಂತ ಚಿತ್ತದ ಹುಡುಗ, ಆಟಕ್ಕೆಂದು ಟೇಬಲ್ ಮುಂದೆ ಕುಳಿತರೆ ಆತ ಆಕ್ರಮಣಕಾರಿ ಆಟಗಾರ' ಎನ್ನುತ್ತಾರೆ ಆತನ ಆಟವನ್ನು ಹತ್ತಿರದಿಂದ ನೋಡಿದವರು. ಇದಕ್ಕೆ ಸಾಕ್ಷಿ ಎಂಬಂತೆ ಆತನ ಸಾಧನೆಗಳು ನಮ್ಮ ಕಣ್ಣಮುಂದಿವೆ. ಇಷ್ಟು ಸಣ್ಣ ವಯಸ್ಸಿಗೆ ತನಗಿಂತ ಹಿರಿಯರ ಜೊತೆ ಬಹಳ ಆತ್ಮವಿಶ್ವಾಸದಿಂದ ಆಡುವುದನ್ನು ಕಂಡಿದ್ದ ಹಲವರು ಆತನ ಶಕ್ತಿಯನ್ನು ಬಹಳ ಹಿಂದೆಯೇ ಊಹಿಸಿದ್ದರು.

ವಿಶ್ವನಾಥನ್ ಆನಂದ್, ದೇಶದಲ್ಲಿ ಹೆಸರು ಮಾಡಿರುವ ಕೋಚ್ ಆರ್.ಬಿ. ರಮೇಶ್ ಅವರಂಥವರ ತೆಕ್ಕೆಯಲ್ಲಿ ಬೆಳೆಯುತ್ತಿರುವ ಪ್ರಜ್ಞಾನಂದ, ಚೆಸ್ ಜಗತ್ತಿನ ದೊಡ್ಡ ತಾರೆಯಾಗುವುರಲ್ಲಿ ಅನುಮಾನವಿಲ್ಲ. 'ದೈಹಿಕವಾಗಿ ಸಣಕಲು ವ್ಯಕ್ತಿಯಾಗಿದ್ದರೂ, ಪ್ರತಿಭೆಯಲ್ಲಿ ಬಲಾಢ್ಯ' ಎಂದು ರಮೇಶ್ ಅವರು ಪ್ರಜ್ಞಾನಂದನ ಕುರಿತು ಬಹಳ ಹೆಮ್ಮೆಯಿಂದಲೇ ಹೇಳುತ್ತಾರೆ.

ತಾಯಿಯೇ ಬೆನ್ನೆಲುಬು

ವಿಶ್ವ ಚೆಸ್ ಟೂರ್ನಿಯ ಪಂದ್ಯವೊಂದರಲ್ಲಿ ಗೆದ್ದು ಹೊರಗೆ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಪ್ರಜ್ಞಾನಂದನನ್ನು ಅಲ್ಲೇ ತುಸು ದೂರದಲ್ಲಿ ಮರೆಯಲ್ಲಿ ನಿಂತು ನಗುಮೊಗದಿಂದ, ಕಣ್ಣುಗಳ ತುಂಬ ಹೆಮ್ಮೆಯನ್ನೇ ತುಂಬಿಕೊಂಡು ನೋಡುತ್ತಿದ್ದ ತಾಯಿ ನಾಗಲಕ್ಷ್ಮಿ ಅವರ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿತ್ತು. ಮಗನೊಂದಿಗೆ ಇದೇ ನಗುಮೊಗದೊಂದಿಗೆ ಪ್ರತಿ ಪಂದ್ಯದಲ್ಲೂ ಜೊತೆ ಇರುತ್ತಾರೆ ತಾಯಿ ನಾಗಲಕ್ಷ್ಮಿ.

'ನನ್ನವರು ನನ್ನ ಜೊತೆ ಇರುವುದು ನನಗೆ ಹಿತ ಎನಿಸುತ್ತದೆ. ನನ್ನ ತಾಯಿ ಸದಾ ನನ್ನ ಬೆನ್ನೆಲುಬು. ನಾನು ಪಂದ್ಯದಲ್ಲಿ ಸೋತರೂ ಅವಳು ನನ್ನನ್ನು ಸಂಭಾಳಿಸುತ್ತಾಳೆ. ನನಗೆ ಮಾತ್ರವಲ್ಲ ನನ್ನ ಅಕ್ಕನಿಗೂ ನನ್ನ ತಾಯಿತೇ ಬೆನ್ನೆಲುಬು' ಎನ್ನುತ್ತಾನೆ ಪ್ರಜ್ಞಾನಂದ.

ಭವ್ಯ ಭರವಸೆ ಮೂಡಿಸಿರುವ ಪ್ರತಿಭಾನ್ವಿತರ ದಂಡು

• ನಾಗೇಶ್ ಶೆಣೈ

ರೌನಕ್ ಸಾಧ್ವಾನಿ

ಕಳೆದ ದಶಕದ ಮಧ್ಯದಿಂದ ಭಾರತದ ಉದಯೋನ್ಮುಖ ಆಟಗಾರರು ವಿಶ್ವ ಚೆಸ್ ಲೋಕದಲ್ಲಿ ಹೆಜ್ಜೆ ಗುರುತುಗಳನ್ನು ಮೂಡಿಸುತ್ತ ಬಂದಿದ್ದಾರೆ. ತಮಿಳುನಾಡಿನ ಆರ್.ಪ್ರಜ್ಞಾನಂದ, ಡಿ. ಗುಕೇಶ್, ತೆಲಂಗಾಣದ ಅರ್ಜುನ್ ಎರಿಗೇಶಿ, ಕೇರಳದ ನಿಹಾಲ್ ಸರೀನ್, ಮಹಾರಾಷ್ಟ್ರದ ರೌನಕ್ ಸಾಧ್ವಾನಿ ಮೊದಲಾದ ಹದಿಹರೆಯದ ಆಟಗಾರರನ್ನು ಈ ನಿಟ್ಟನಲ್ಲಿ ಹೆಸರಿಸಬಹುದು.

1988ರಲ್ಲಿ ಭಾರತದ ಮೊದಲ ಗ್ರ್ಯಾಂಡ್‌ಮಾಸ್ಟರ್ ಆದ ವಿಶ್ವನಾಥನ್ ಆನಂದ್ ದೇಶದಲ್ಲಿ ಚೆಸ್ ಕ್ರಾಂತಿಗೆ ನಾಂದಿ ಹಾಡಿದರು. ಈಗಲೂ ಹಲವಾರು ಆಟಗಾರರಿಗೆ ಅವರೇ ಆದರ್ಶಪ್ರಾಯ. 52 ವರ್ಷ ದಾಟಿದರೂ ಆನಂದ್ ಈಗಲೂ ಸಕ್ರಿಯ ಆಟಗಾರ. ನಂತರದ ದಿನಗಳಲ್ಲಿ ಕೃಷ್ಣನ್ ಶಶಿಕಿರಣ್, ಪಿ.ಹರಿಕೃಷ್ಣ, ಕೋನೇರು ಹಂಪಿ, ದ್ರೋಣವಲ್ಲಿ ಹಾರಿಕಾ ವಿಶ್ವಮಟ್ಟದಲ್ಲಿ ಛಾಪು ಮೂಡಿಸಿದರು. ದೇಶದಲ್ಲಿ ಗ್ರ್ಯಾಂಡ್‌ಮಾಸ್ಟರ್‌ಗಳ ಸಂಖ್ಯೆ ಪ್ರಸ್ತುತ 83 ಆಗಿದೆ.

ಆದರೆ ಕಳೆದ ದಶಕದ ಮಧ್ಯದಲ್ಲಿ ಕೆಲವೇ ವರ್ಷಗಳ ಅಂತರದಲ್ಲಿ ಪ್ರತಿಭಾವಂತರು ಸಾಲಾಗಿ ಪ್ರವರ್ಧಮಾನಕ್ಕೆ ಬಂದಿದ್ದು, ಭಾರತದ ಚೆಸ್ ಕ್ಷೇತ್ರಕ್ಕೆ ಭವ್ಯ ಭರವಸೆಯನ್ನು ಮೂಡಿಸಿದೆ. 12–13 ವರ್ಷ ಇರುವಾಗಲೇ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಗಿಟ್ಟಿಸಿದ ಪ್ರಜ್ಞಾನಂದ, ಗುಕೇಶ್ ಅವರು ದಿಗ್ಗಜ ಆಟಗಾರರನ್ನು ಅಚ್ಚರಿಗೊಳಿಸುತ್ತ ಸುದ್ದಿ ಮಾಡಿದವರು. ವಿಶ್ವದ ಪ್ರತಿಷ್ಠಿತ ಟೂರ್ನಿಗಳಲ್ಲಿ ಗಮನಾರ್ಹ ಸಾಧನೆ ಮಾಡಿದರು.

ಗುಕೇಶ್ ಇತ್ತೀಚೆಗಷ್ಟೇ ವಿಶ್ವನಾಥನ್ ಆನಂದ್ ಅವರ ದೀರ್ಘ ಆಧಿಪತ್ಯಕ್ಕೆ ಕೊನೆಹಾಡಿ ಭಾರತದ (ಲೈವ್ ರೇಟಿಂಗ್) ಅಗ್ರಮಾನ್ಯ ಆಟಗಾರ ಎನಿಸಿದರು. ಈ ತಿಂಗಳ ಕೊನೆಗೆ ಫಿಡೆ ರೇಟಿಂಗ್ ಪಟ್ಟಿ ಪ್ರಕಟವಾಗಲಿದ್ದು ಪರಿಷ್ಕೃತ ರ‍್ಯಾಂಕಿಂಗ್ ಪ್ರಕಟವಾಗಲಿದೆ.

ಪ್ರಜ್ಞಾನಂದ ಅವರು ಬಾಕುವಿನ ವಿಶ್ವಕಪ್ ಫೈನಲ್‌ನಲ್ಲಿ ಕಾರ್ಲ್‌ಸನ್ ಎದುರು ಟೈಬ್ರೇಕ್‌ನಲ್ಲಿ ಸೋತರೂ, ಫೈನಲ್ ದಾರಿಯಲ್ಲಿ ಹಿಕಾರು ನಕಾಮುರಾ, ಫ್ಯಾಬಿಯಾನೊ ಕರುವಾನ ಅಂಥ ಘಟಾನುಘಟಿ ಆಟಗಾರರನ್ನು ಸೋಲಿಸಿದ್ದು ಗೊತ್ತೇ ಇದೆ.

ಡಿ. ಗುಕೇಶ್

ತೃಶೂರಿನ ನಿಹಾಲ್ ಸರೀನ್ ಅವರು 2600 ರೇಟಿಂಗ್ ದಾಟಿದ ವಿಶ್ವದ ನಾಲ್ಕನೇ ಅತಿ ಕಿರಿಯ ಆಟಗಾರ ಎನಿಸಿದರು. 2019ರಲ್ಲಿ ವಿಶ್ವಕಪ್ ಟೂರ್ನಿಯಲ್ಲಿ ಆಡಿದ ಭಾರತದ ಅತಿ ಕಿರಿಯ ಆಟಗಾರ ಎನಿಸಿದರು. ಪ್ರಸ್ತುತ 19 ವರ್ಷದ ಆಟಗಾರ ವಿಶ್ವಕ್ರಮಾಂಕದಲ್ಲಿ 51ನೇ ಸ್ಥಾನದಲ್ಲಿದ್ದಾರೆ. ಈ ವಿಶ್ವಕಪ್‌ನಲ್ಲಿ ಅವರು ವಿಶ್ವ ಚಾಂಪಿಯನ್‌ಷಿಪ್ ರನ್ನರ್ ಅಪ್ ನಿಪೊಮ್‌ನಿಯಾಷಿ ಎದುರು ಸೋತಿದ್ದರು.

ನಿಹಾಲ್ ಸರೀನ್

ಪ್ರಜ್ಞಾನಂದ (ರೇಟಿಂಗ್: 2707) ಅವರು 29ನೇ ಸ್ಥಾನದಲ್ಲಿದ್ದರೆ, ತೆಲಂಗಾಣದ ಅರ್ಜುನ್ ಎರಿಗೇಶಿ (2704) ಅವರು 32ನೇ ಸ್ಥಾನದಲ್ಲಿದ್ದಾರೆ.

ನಾಗ್ಪುರದವರಾದ 18 ವರ್ಷದ ರೌನಕ್ ಸಾಧ್ವಾನಿ (2624) ಅವರು ಫಿಡೆ ರೇಟಿಂಗ್ ಪಟ್ಟಿಯಲ್ಲಿ 136ನೇ ಕ್ರಮಾಂಕದಲ್ಲಿದ್ದಾರೆ.

28 ವರ್ಷದ ವಿದಿತ್ ಗುಜರಾತಿ 2723 ರೇಟಿಂಗ್ ಪಾಯಿಂಟ್ಸ್ ಹೊಂದಿದ್ದು ಭಾರತದ ಆಟಗಾರರ ಪೈಕಿ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ.

ಗಮನಾರ್ಹ ಎಂದರೆ ಪುರುಷರ ವಿಭಾಗದಲ್ಲಿ ಪ್ರತಿಭಾನ್ವಿತ ಆಟಗಾರರ ದಂಡು ಕಂಡುಬಂದರೆ, ಮಹಿಳೆಯರ ವಿಭಾಗದಲ್ಲಿ ಅದೇ ಮಾತು ಹೇಳುವಂತಿಲ್ಲ. ದ್ರೋಣವಲ್ಲಿ ಹಾರಿಕಾ ಕೆಲದಿನಗಳ ಹಿಂದೆ ಈ ಬಗ್ಗೆ ಬೇಸರ ವ್ಯಕ್ತಪಡಿಸಿದ್ದರು. ಅಪವಾದ ಎಂಬಂತೆ ಕಳೆದ ಡಿಸೆಂಬರ್‌ನಲ್ಲಿ ಕಜಕಸ್ತಾನದ ಅಲ್ಮಾಟಿಯಲ್ಲಿ ನಡೆದ ವಿಶ್ವ ರ‍್ಯಾಪಿಡ್ ಚಾಂಪಿಯನ್‌ಷಿಪ್‌ನಲ್ಲಿ ತಮಿಳುನಾಡಿನ, 15 ವರ್ಷದ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಬಿ.ಸವಿತಾಶ್ರೀ ಕಂಚಿನ ಪದಕ ಗೆದ್ದು ಸುದ್ದಿ ಮಾಡಿದ್ದರು.

ಸಿನಿ ಬಿಟ್ಸ್

ಮತ್ತೆ ಸಿನಿಮಾ ಸೆಟ್‌ಗೆ ನಿಖಿಲ್

ನಿಖಿಲ್, ಯುಕ್ತಿ ತರೇಜ

'ರೈಡರ್' ಸಿನಿಮಾದ ನಂತರ ರಾಜಕೀಯ ಕಾರಣದಿಂದ ಸಿನಿಮಾ ಕೆಲಸಗಳಿಂದ ದೀರ್ಘ ಬ್ರೇಕ್ ತೆಗೆದುಕೊಂಡಿದ್ದ ನಿಖಿಲ್ ಕುಮಾರ್, ಇದೀಗ ಹೆಸರಿಡದ ನೂತನ ಚಿತ್ರದ ಮೂಲಕ ಮತ್ತೆ ಬೆಳ್ಳಿತೆರೆಗೆ ಮರಳಿದ್ದಾರೆ.

ನಿಖಿಲ್ ಕುಮಾರ್ ನಾಯಕರಾಗಿ ನಟಿಸುತ್ತಿರುವ ನೂತನ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ನೆರವೇರಿತು. ಈ ಚಿತ್ರದ ಮೂಲಕ ದಕ್ಷಿಣ ಭಾರತದ ಹೆಸರಾಂತ ನಿರ್ಮಾಣ ಸಂಸ್ಥೆ ಲೈಕಾ ಪ್ರೊಡಕ್ಷನ್ಸ್ ಕನ್ನಡ ಚಿತ್ರರಂಗಕ್ಕೆ ಕಾಲಿಡುತ್ತಿದೆ. ತಮಿಳಿನಲ್ಲಿ 'ಬೋಗನ್', 'ಭೂಮಿ' ಚಿತ್ರಗಳನ್ನು ನಿರ್ದೇಶಿಸಿದ್ದ ಲಕ್ಷ್ಮಣ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಎಚ್.ಡಿ. ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಸಮಾರಂಭದಲ್ಲಿ ಹಾಜರಿದ್ದು ನಿಖಿಲ್‌ಗೆ ಶುಭ ಹಾರೈಸಿದರು. ಯುಕ್ತಿ ತರೇಜ ಚಿತ್ರದ ನಾಯಕಿ. 'ಸೆಪ್ಟೆಂಬರ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದ್ದು, ಒಂದು ವರ್ಷದಿಂದ ಈ ಚಿತ್ರಕ್ಕಾಗಿ ನಿರ್ದೇಶಕರು ಕೆಲಸ ಮಾಡುತ್ತಿದ್ದಾರೆ. ಬಹಳ ಭರವಸೆ ಇರುವ ಚಿತ್ರ. ಮುಂದಿನ ದಿನಗಳಲ್ಲಿ ಚಿತ್ರರಂಗದಲ್ಲಿ ಸಕ್ರಿಯನಾಗಿ ವರ್ಷಕ್ಕೆ ಮೂರು ಸಿನಿಮಾ ಮಾಡುತ್ತೇನೆ' ಎಂದರು ನಿಖಿಲ್.

'ನಾನು ಮಗನಿಗಾಗಿಯೇ ಒಂದು ಕಥೆ ಮಾಡಿಸಿದ್ದೆ. ನಮ್ಮದೇ ನಿರ್ಮಾಣ ಸಂಸ್ಥೆಯಿಂದ ಆ ಸಿನಿಮಾ ಮಾಡಬೇಕು ಎಂದಿತ್ತು. ಆದರೆ ನಿಖಿಲ್ ಆ ಚಿತ್ರ ಮಾಡಲು ಒಪ್ಪಲಿಲ್ಲ. ಅದರಿಂದ ಆಡಿಕೊಳ್ಳುವವರ ಬಾಯಿಗೆ ಆಹಾರವಾಗುತ್ತೀವಿ ಎಂಬ ಭಯ ಆತನಲ್ಲಿತ್ತು. ಈಗಲೂ ಆತ ಒಪ್ಪಿದರೆ ನಮ್ಮದೇ ನಿರ್ಮಾಣ ಸಂಸ್ಥೆಯಿಂದ ಚಿತ್ರವೊಂದು ತಯಾರಾಗಲಿದೆ' ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಅಜನೀಶ್ ಲೋಕನಾಥ್ ಸಂಗೀತ, ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕಿದೆ.

ಸೆಟ್ಟೇರಿತು 'ಅಧಿಪತ್ರ'

ಜಾಹ್ನವಿ ಹಾಗೂ ರೂಪೇಶ್

ಬಿಗ್‌ಬಾಸ್ ವಿಜೇತ ರೂಪೇಶ್ ಶೆಟ್ಟಿ ನಟನೆಯ 'ಅಧಿಪತ್ರ' ಸಿನಿಮಾ ಸೆಟ್ಟೇರಿದೆ. ರೂಪೇಶ್‌ಗೆ ನಾಯಕಿಯಾಗಿ 'ಬೃಹತಿ' ಎಂಬ ಪಾತ್ರದಲ್ಲಿ ಜಾಹ್ನವಿ ಈ ಸಿನಿಮಾದಲ್ಲಿ ನಟಿಸಲಿದ್ದು, ಗಣೇಶ ಚತುರ್ಥಿ ಬಳಿಕ ಸಿನಿಮಾದ ಶೂಟಿಂಗ್ ಆರಂಭವಾಗಲಿದೆ.

'ಬಿಗ್‌ಬಾಸ್ ಆದಮೇಲೆ ಕನ್ನಡ ಸಿನಿಮಾ ಯಾವಾಗ ಎಂದು ಎಲ್ಲರೂ ಕೇಳುತ್ತಿದ್ದರು. ಬಿಗ್‌ಬಾಸ್‌ಗೂ ಮುನ್ನ 'ಸರ್ಕಸ್' ಎಂಬ ತುಳು ಸಿನಿಮಾ ನಿರ್ದೇಶನ ಮಾಡಿ ನಟಿಸಿದ್ದೆ. ಆ ಚಿತ್ರದ ಕೆಲಸ ತುಂಬಾ ಇತ್ತು. ಈ ಚಿತ್ರದ ಕೆಲಸ ಮುಗಿಸಿ ಬೇರೆ ಸಿನಿಮಾದ ಒಪ್ಪಿಕೊಳ್ಳುವುದು ಎಂದು ತೀರ್ಮಾನ ಮಾಡಿದ್ದೆ. 'ಸರ್ಕಸ್' ದೊಡ್ಡಮಟ್ಟದಲ್ಲಿ ಹಿಟ್ ಆಗಿದೆ. 150 ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ಕಂಡಿದೆ. 'ಅಧಿಪತ್ರ' ಸಿನಿಮಾ ನಿರ್ದೇಶಕ ಚಹನ್ ಶೆಟ್ಟಿ ಕಥೆ ಹೇಳಿದಾಗ ಕುತೂಹಲ ಹುಟ್ಟಿಸುವ ಕಥೆ ಎನಿಸಿತು. ಅವರ ಮೊದಲ ಸಿನಿಮಾವಾದರೂ ಸ್ಕ್ರೀನ್ ಪ್ಲೇ ವಿವರಿಸಿದಾಗ ಅವರ ತಯಾರಿ ಬಗ್ಗೆ ಹೆಮ್ಮೆಯಾಯಿತು. ಅದನ್ನು ನೋಡಿ ಸಿನಿಮಾ ಒಪ್ಪಿಕೊಳ್ಳುವ ಧೈರ್ಯ ಬಂತು. ಈ ಚಿತ್ರಕ್ಕಾಗಿ ನನ್ನ ಗೆಟಪ್ ಬದಲಾಗಲಿದೆ' ಎನ್ನುತ್ತಾರೆ ರೂಪೇಶ್.

ಕೆ ಆರ್ ಸಿನಿ ಕಂಬೈನ್ಸ್ ಬ್ಯಾನರ್ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದು, ನೈಜ ಘಟನೆಯಿಂದ ಸ್ಫೂರ್ತಿ ಪಡೆದು ಸಸ್ಪೆನ್ಸ್ ಥ್ರಿಲ್ಲರ್ ಶೈಲಿಯಲ್ಲಿ ಸಿನಿಮಾ ಮೂಡಿಬರಲಿದೆ ಎಂದಿದೆ ಚಿತ್ರತಂಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **'ನೋಡಿ, ಹರಿಯಾಣದ** ಶಮಾ ಬಿರಿಯಾನಿ ಡಾಬಾದಲ್ಲಿ ಚರಂಡಿ ನೀರನ್ನು ಬಿರಿಯಾನಿ ಮಾಡಲು ಬಳಸುತ್ತಾರೆ. ಮುಸ್ಲಿಮರು ಆಹಾರದಲ್ಲಿ ಉಗುಳುವುದಕ್ಕಷ್ಟೇ ತೃಪ್ತರಾಗಿಲ್ಲ, ಈಗ ಇಂತಹ ಕೀಳುಮಟ್ಟಕ್ಕೆ ಇಳಿದಿದ್ದಾರೆ' ಎಂಬ ವಿವರ ಇರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ವಿಡಿಯೊದಲ್ಲಿ ಚರಂಡಿ ಒಂದರಿಂದ ಪಂಪ್ ಮತ್ತು ಕೊಳವೆ ಬಳಸಿ ನೀರನ್ನು ಹೊರಗೆ ಹಾಕುತ್ತಿರುವ ದೃಶ್ಯವಿದೆ. ಆದರೆ ಇದು ತಿರುಚಲಾದ ಮಾಹಿತಿ.

✓ **'ಇದು ಹರಿಯಾಣದ** ಪಂಚಕುಲಾ ಜಿಲ್ಲೆಯ ಪಿಂಜೋರ್ ಪಟ್ಟಣದಲ್ಲಿರುವ ಶಮಾ ಬಿರಿಯಾನಿ ಡಾಬಾ. ಇದೇ ಆಗಸ್ಟ್ 14ರಂದು ಡಾಬಾದ ಹೊರಗೆ ಇರುವ ಚರಂಡಿಯ ಛೇಂಬರ್ ಕಟ್ಟಿಕೊಟ್ಟಿದ್ದರಿಂದ ಪಂಪ್ ಮತ್ತು ಕೊಳವೆ ಬಳಸಿ, ಛೇಂಬರ್‌ನಲ್ಲಿದ್ದ ಕೊಳಚೆ ನೀರನ್ನು ಹೊರಕ್ಕೆ ಬಿಡಲಾಗಿತ್ತು. ಅದನ್ನು ಸ್ವಚ್ಛಗೊಳಿಸಬೇಕಿದ್ದ ವ್ಯಕ್ತಿಗೆ ತೋರಿಸುವ ಸಲುವಾಗಿ ವಿಡಿಯೊ ಚಿತ್ರೀಕರಿಸಲಾಗಿತ್ತು. ಆದರೆ, ಆ ವಿಡಿಯೊವನ್ನೇ ತಪ್ಪು ಮಾಹಿತಿಗಳೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ ಎಂದು ಡಾಬಾದ ಮಾಲೀಕ ಮಾಹಿತಿ ನೀಡಿದ್ದಾರೆ. ಚರಂಡಿಯನ್ನು ಸ್ವಚ್ಛಮಾಡಬೇಕಿದ್ದ ನೌಕರ ಸಹ ಇದನ್ನು ದೃಢಪಡಿಸಿದ್ದಾರೆ. ಆ ವಿಡಿಯೊವನ್ನು ಹಾದಿತಪ್ಪಿಸುವ ರೀತಿಯಲ್ಲಿ ಹಂಚಿಕೊಳ್ಳಲಾಗುತ್ತಿದೆ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಬಹಳ ಜನಕ್ಕೆ ಅರ್ಥವೇ ಆಗುವುದಿಲ್ಲ...

ಪ್ರೊ.ಎಂ. ಕೃಷ್ಣೇಗೌಡ

ಇದು ಮೂರ್ನಾಲ್ಕು ವರ್ಷಗಳ ಹಿಂದೆ ನಡೆದದ್ದು, ಇದೇ ನಮ್ಮ ಬೆಂಗಳೂರಿನಲ್ಲಿ. ಹೇಳಿದವರು ನನಗೆ ಪರಿಚಯದರು. ಅವರು ಭಾರಿ ಕಂಟ್ರಾಕ್ಟುದಾರರು. ಬೇಜಾನ್ ಶ್ರೀಮಂತರು ಕೂಡ. ಅವರು ಮಂಗಳೂರಿನ ಕಡೆಯವರು. ಕತೆಯನ್ನು ಅವರ ಮಾತಿನಲ್ಲೇ ಕೇಳಿ-

ಏನಾಯ್ತು ಗೊತ್ತಾ? ನನ್ನದು ಐದಾರು ಸೈಟು ಉಂಟು ಬೆಂಗಳೂರಿನಲ್ಲಿ. ಮತ್ತೆ ಇನ್ನೊಂದು ಸೈಟು ತೆಕ್ಕೊಂಡೆ. ನಾಲ್ಕೂವರೆ ಕೋಟಿ. ಡಾಕ್ಯುಮೆಂಟ್ಸ್ ಎಲ್ಲ ಪಕ್ಕಾ ನೋಡಿ ರಿಜಿಸ್ಟರ್ ಮಾಡಿಕೊಂಡದ್ದು. ಒಂದೂವರೆ ವರ್ಷ ಆದಮೇಲೆ ಯಾರೊ ಒಬ್ಬ ಪಾಪಿ ಒಂದು ತಕರಾರು ಹಾಕಿಬಿಟ್ಟ. ಮತ್ತೆ ನನಗೆ ಅವನಿಗೆ 'ಹೋ' ಅಂತ ಆಯ್ತು. ಅವ ಕೊಟ್ಟ ರೆಕಾರ್ಡ್ ಉಂಟಲ್ಲ, ಅದೆಲ್ಲ ನಕಲಿ. ಮತ್ತೆ ನನಗೆ ಬಿಡಿಎ ಕಾರ್ಪೊರೇಷನ್ ಅಂತ ಓಡಾಡ್ಲಿಕ್ಕಾಯ್ತು. ಅಲ್ಲಿ ಒಬ್ಬ ಕ್ಲರ್ಕು ಮಾರಾಯ್ರೇ. ನನ್ನ ಫೈಲು ಅವನ ಕೈಯಲ್ಲಿ ಹೋಯ್ತು. ಮತ್ತೆ ಅವ ನನ್ನ ಎದುರು ಪಾರ್ಟಿಯಲ್ಲಿ ಹಣ ತೆಕ್ಕೊಂಡು ನನ್ನ ಫೈಲಿನ ಮೇಲೆ ಒಂದು ಟಿಪ್ಪಣಿ ಬರೆದ ಅಂದರೆ ನನ್ನ ಕೇಸು ಫಡ್ಚ!!

ಆಗ ನಾನು ಆ ಗುಮಾಸ್ತನ ಮನೆ ಎಲ್ಲಿ ಅಂತ ಪತ್ತೆ ಮಾಡಿದೆ. ಅದು ಒಂದು ಕೊಂಪೆಯಲ್ಲಿ ಒಂದು ಸಣ್ಣ ಮನೆ. ಅಲ್ಲಿ ಕೂರಲಿಕ್ಕೆ ಒಂದು ಒಳ್ಳೆ ಫರ್ನಿಚರ್ ಅಂತ ಇಲ್ಲ. ಅಲ್ಲಿ ಹೋಗಿ ಅವನಿಗೆ ಕೈ ಮುಗಿದು ಹೇಳಿದೆ- ನೋಡಿ ರಾಯ್ರೆ, ನನ್ನದು ಡಾಕ್ಯುಮೆಂಟ್ ಎಲ್ಲ ಪಕ್ಕ ಉಂಟು. ಅವ ಯಾರೋ ಕಳ್ಳ. ಅವನದ್ದು ಎಲ್ಲ ನಕಲಿ. ನನ್ನಿಂದ ಹಣ ಕಸಿಯಲಿಕ್ಕೆ ಇದೆಲ್ಲ ಆಟ. ನಿಮ್ಮ ಕೈ ಮುಗೀತೇನೆ ಆಯ್ತು, ನನ್ನ ಫೈಲಿನ ಮೇಲೆ ಸಮಾ ಟಪ್ಪಣಿ ಬರಿಯಬೇಕು. ನಿಮಗೆ ಐದು ಲಕ್ಷ ಕೊಡ್ತೇನೆ. ಇಲ್ಲಂದ್ರೆ ಕೇಳಿ ಮತ್ತೆ ಐದು ಲಕ್ಷ ಕೊಡ್ತೇನೆ... - ಅಂತ ಅವನಿಗೆ ಕೈ ಮುಗಿದು ಬ್ಯಾಗಿನಿಂದ ಐನೂರರದು ಹತ್ತು ಬಂಡಲ್ ತೆಗೆದು ಅವನ ಮುಂದೆ ಇಟ್ಟೆ.

ಅವ ಹೇಳಿದ- ಸ್ವಾಮಿ, ನನಗೆ ಈ ಹಾಳು ದುಡ್ಡಿನ ಆಸೆ ತೋರಿಸಬೇಡಿ. ಸರ್ಕಾರ ಹೊಟ್ಟೆ ಬಟ್ಟೆಗಾಗುವಷ್ಟು ಸಂಬಳ ಕೊಡ್ತಾ ಇದೆ. ನಿಮ್ಮ ಡಾಕ್ಯುಮೆಂಟ್ ಚೆಕ್ ಮಾಡಿ ಎಲ್ಲಾ ಸರಿಯಿದ್ರೆ ಹಾಗೇ ಬರೀತೀನಿ. ಇದಕ್ಕೆ ದೈವಸಾಕ್ಷಿ. ಪ್ಲೀಸ್, ನಿಮ್ಮ ಹಣ ವಾಪಸ್ ತೆಕ್ಕೊಂಡು ಹೋಗಿ.

ನನಗೆ ಅನ್ನಿಸ್ತು, ನನ್ನ ಕೆಲಸ ಆಗುದಿಲ್ಲ, ಇವ ಆಗಲೇ ಎದುರು ಪಾರ್ಟಿ ಹತ್ತಿರ ಹಣ ತೆಕ್ಕೊಂಡುಬಿಟ್ಟಿದ್ದಾನೆ ಅಂತ... ಆದರೆ ಕಡೇಗೆ ಏನಾಯ್ತು ಗೊತ್ತುಂಟ? ಅವ ನನ್ನ ಫೈಲಿನ ಮೇಲೆ ನನ್ನ ಪರವಾಗಿ ಬರೆದಿದ್ದ. ಕೇಸು ನನ್ನ ಪರ ಆಯ್ತು.

ಅಲ್ಲ, ಹಣ ಸಂಪಾದನೆ ಮಾಡಲಿಕ್ಕೆ ಭಾಳ ಸುಲಭ, ಆದರೆ ಸುಲಭವಾಗಿ ಬರುವ ಹಣವನ್ನು ಬೇಡ ಅನ್ನಲಿಕ್ಕೆ ಎಷ್ಟು ಕಷ್ಟ ಅಲ್ವ. ಅದೂ ನೂರು ಸಾವಿರ ಅಲ್ಲ.. ಹತ್ತು ಲಕ್ಷ. ನಾನು ಶ್ರೀಮಂತ. ಅಷ್ಟು ಹಣ ನನಗೇ ಬೇಡ ಅನ್ಲಿಕ್ಕೆ ಆಗುದಿಲ್ಲ. ಅವ ಬಡವ, ಅವನಿಗೆ ಹಣ ಖಂಡಿತ ಬೇಕಿರ್ತದೆ. ಆದರೂ ಬೇಡ ಅನ್ನೋದು ಹ್ಯಾಗೆ. ಬೆಂಗಳೂರಿನಲ್ಲಿ ನನ್ನ ಹಾಗೆ ಹಣ ಮಾಡಿರುವಂಥವರು ಸಾವಿರ ಸಾವಿರ ಜನ ಉಂಟು, ಮನೆ ಬಾಗಿಲಿಗೆ ಬಂದ ಸುಲಭದ ಹಣ ಬೇಡ ಅಂತ ಅನ್ನಲಿಕ್ಕೆ ಎಷ್ಟು ಜನ ಉಂಟು ಮಾರಾಯ್ರೇ? ಸತ್ಯ ಹೇಳ್ತೆನೆ, ಹಣ ಬೇಡ ಅಂತ ಅವ ಹೇಳಿದ್ದು ಹೇಗೆ? ಅದು ನನಗೆ ಅರ್ಥವೇ ಆಗುದಿಲ್ಲ ಮಾರಾಯ್ರೇ.

ನಮ್ಮಲ್ಲಿ ಬಹಳ ಜನಕ್ಕೆ ಇದು ಯಾವಾಗಲೂ ಅರ್ಥವೇ ಆಗುವುದಿಲ್ಲ. ಅಲ್ವ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಆಗಸ್ಟ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ನವಮಿ ಗಂ.26-03 ನಕ್ಷತ್ರ: ಅನುರಾಧ ಗಂ.09-14 ಯೋಗ: ವೈಧೃತಿ ಗಂ.18-50 ಕರಣ: ಬಾಲವ ಗಂ.14-43, ಸಿಂಹ ಮಾಸದ 08 ನೇ ದಿನ, ಮಳೆನಕ್ಷತ್ರ: ಮಘಾ 3. ರಾಹುಕಾಲ : ಬೆಳಗ್ಗೆ 10-30–12-00, ಸೂರ್ಯೋದಯ : 06-22 ಸೂರ್ಯಾಸ್ತ : 06-43 ಮುಸ್ಲಿಂ ದಿನಾಂಕ : 08 ಸಫರ್, ದಿನ ವಿಶೇಷ : ವರಮಹಾಲಕ್ಷ್ಮಿ ವ್ರತ (ದಕ್ಷಿಣ ಭಾರತ)
ಅದೃಷ್ಟ ಸಂಖ್ಯೆ : 11, 1

ಮೇಷ: ಆತ್ಮೀಯರು ಹೇಳಿದ ಸಲಹೆ ಸೂಚನೆಗಳನ್ನು ಪಾಲಿಸಲಾಗದೇ ಬಿಡಲೂ ಆಗದೇ ಚಡಪಡಿಸುವ ಪರಿಸ್ಥಿತಿ ನಿಮ್ಮದಾಗುತ್ತದೆ. ಹಿಂದೆ ತೆಗೆದುಕೊಂಡ ಸಾಲವನ್ನು ಹಿಂದಿರುಗಿಸುವ ಆಲೋಚನೆಯನ್ನು ಮಾಡಿ.

ವೃಷಭ: ಅನಿವಾರ್ಯ ಕಾರಣಗಳಿಂದಾಗಿ ಸಂಸಾರದಲ್ಲಿ ನಿಮ್ಮ ಜವಾಬ್ದಾರಿ ಈ ದಿನ ಜಾಸ್ತಿಯಾಗುವುದು. ಎಲ್ಲವನ್ನೂ ನಿಭಾಯಿಸುವ ಸಾಮರ್ಥ್ಯ ಇದ್ದು, ಸೋಮಾರಿತನ ಕಾಡಬಹುದು. ಸಂಜೆಯ ವೇಳೆ ಶುಭವಾಗಲಿದೆ.

ಮಿಥುನ: ರಾಜಕೀಯರಂಗದಲ್ಲಿ ಯಶಸ್ಸು ದೊರೆಯಲಿದೆ. ಮನೆಯವರ ಆರೋಗ್ಯ ಸುಧಾರಣೆಯಾಗುತ್ತದೆ. ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನ ತೆಗೆದುಕೊಳ್ಳಬೇಡಿ.

ಕರ್ಕಾಟಕ: ಯಾವುದೇ ಹೊಸ ಉದ್ಯೋಗ ಅಥವಾ ಕರಾರಿಗೆ ಆತುರದಲ್ಲಿ ಸಹಿ ಹಾಕಬೇಡಿ. ಆಹಾರದಲ್ಲಿ ವಿಷದ ಅಂಶವು ಸೇರಿ ಆರೋಗ್ಯ ಹದಗೆಡುವ ಸಾಧ್ಯತೆಯಿದೆ. ವಿದ್ಯಾರ್ಥಿಗಳಿಗೆ ಶ್ರದ್ಧಾ ಶಕ್ತಿ, ಮೇಧಾ ಶಕ್ತಿ ಹೆಚ್ಚುವುದು.

ಸಿಂಹ: ಹಿಂದೆ ಮಾಡಿದ ತಪ್ಪುಗಳಿಗೆ ಪಶ್ಚಾತಾಪ ಪಡುತ್ತಿದ್ದರೂ ತಪ್ಪುಗಳು ಪುನರಾವರ್ತನೆಯಾಗುತ್ತದೆ. ಆದ್ದರಿಂದ ವೃತ್ತಿಯಲ್ಲಿ ಎಚ್ಚರವಹಿಸುವುದು ಲೇಸು. ಹವ್ಯಾಸಿ ಉಪನ್ಯಾಸಕರಿಗೆ ಹೇರಳ ಅವಕಾಶ ಲಭ್ಯವಾಗುತ್ತದೆ.

ಕನ್ಯಾ: ಒಮ್ಮೊಮ್ಮೆ ಸಾಮಾಜಿಕ ರಂಗದಲ್ಲಿ ಮುಜುಗರದ ಸನ್ನಿವೇಶಗಳು ಸೃಷ್ಟಿಯಾದೀತು ಜಾಗ್ರತೆ ವಹಿಸಿ. ಭೂ ಖರೀದಿಯಂತಹ ಅಥವಾ ಗೃಹ ನಿರ್ಮಾಣ ಕಾರ್ಯದಂತಹ ಯೋಚನೆಗಳು ಕಾರ್ಯರೂಪಕ್ಕೆ ಬರಲಿವೆ.

ತುಲಾ: ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಹೊಂದಿಕೊಳ್ಳುವುದು ಕಷ್ಟಕರ ಎಂದು ಅನಿಸಲಿದೆ. ಮಾಡುವ ಕೆಲಸದಲ್ಲಿ ಶ್ರದ್ಧೆ ಇರಲಿ. ಸ್ನೇಹಿತರೊಂದಿಗೆ ಸಂತೋಷ ಕೂಟದಲ್ಲಿ ಭಾಗಿಯಾಗುವ ಅವಕಾಶ ಸಿಗಲಿದೆ.

ವೃಶ್ಚಿಕ: ಷೇರು ಮಾರುಕಟ್ಟೆಯಲ್ಲಿನ ಬದಲಾವಣೆಗಳನ್ನು ಗಮನಿಸಿಕೊಂಡು ನೀವು ತೆಗೆದುಕೊಂಡಂಥ ತೀರ್ಮಾನ ಸರಿಯಾಗಿರಲಿದೆ. ವಿದ್ಯಾರ್ಥಿ ಜೀವನ ನಡೆಸುತ್ತಿರುವವರಿಗೆ ಹೊಸ ವಿಚಾರದ ಮಾಹಿತಿ ಸಿಗಲಿದೆ.

ಧನು: ರೈತರು ತಮ್ಮ ತಮ್ಮ ಬೆಳೆಗಳ ಅಭಿವೃದ್ಧಿ, ರಕ್ಷಣೆಯ ಬಗ್ಗೆ ಗಮನಹರಿಸುವುದು ಒಳ್ಳೆಯದು. ಹೈನುಗಾರಿಕೆಯನ್ನು ಉಪವೃತ್ತಿಯಾಗಿ ಮಾಡಿಕೊಳ್ಳಬಹುದು. ದಿನಸಿ ವರ್ತಕರಿಗೆ ಉತ್ತಮ ಮಾರಾಟದೊಂದಿಗೆ ಲಾಭವೂ ಇರುವುದು.

ಮಕರ: ಸಹಚರರಿಂದ ಅಥವಾ ಅಧಿಕಾರಿಗಳಿಂದ ನಿಮಗೆ ಅಸಹಕಾರದ ಪರಿಸ್ಥಿತಿ ಎದುರಾಗಬಹುದು. ಆದರೆ ಸಮಸ್ಯೆಗಳ ನಡುವೆಯು ಕಾರ್ಯ ಸಾಧನೆ ಮಾಡಿದ ಹೆಮ್ಮೆ ನಿಮ್ಮದಾಗಲಿದೆ. ಮಹಾ ಗಣಪತಿ ಆರಾಧಿಸಿ ಶುಭವಾಗುತ್ತದೆ.

ಕುಂಭ: ನೂತನ ಕೆಲಸಗಳಿಗೆ ವಿಘ್ನ ಕಾಡಲಿದೆ. ಸಿದ್ಧ ಉಡುಪು ಮಾರಾಟಗಾರರಿಗೆ ದೊಡ್ಡ ಪ್ರಮಾಣದಲ್ಲಿ ಸಂಗ್ರಹಣೆ ಮಾಡಲು ಈ ದಿನ ಉತ್ತಮವಾಗಿರಲಿದೆ. ವಿವಾಹ ಅಪೇಕ್ಷಿಗಳಿಗೆ ಶುಭ ಸುದ್ದಿ ಕೇಳಿಬರುವುದು.

ಮೀನ: ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸುವ ನಿಮ್ಮ ಅಭ್ಯಾಸ ಈ ದಿನ ವ್ಯತ್ಯಾಸ ಆಗುವುದು. ಯಂತ್ರಗಳ ಬಳಕೆಯಲ್ಲಿ ಅಪಾಯವಾಗಬಹುದು. ಮಾಡುವ ಕೆಲಸಗಳಲ್ಲಿ ಏಕಾಗ್ರತೆ ಜತೆ ಆತ್ಮವಿಶ್ವಾಸವಿದ್ದರೆ ಯಶಸ್ವಿಯಾಗುವಿರಿ.

ಪದಬಂಧ 5421

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸ್ಲೇಟಿನ ಮೇಲೆ ಬರೆಯುವ ಸಾಧನ (3)
3.ಜೈನ ದೇವಾಲಯ (3)
5.ರಾಮನ ಮಗನಿಂದ ಬಂದಿರುವ ಹುರುಪು! (5)
7.ಈಕೆ ಮನ್ಮಥನ ಪತ್ನಿ (2)
9.ಪ್ರತೀ ವಾರ ನದಿಯ ದಡವನ್ನು ಹುಡುಕಿ! (2)
10.ಪಿನಾಕದ ಹತ್ತಿರವಿರುವ ಕೋಗಿಲೆ (2)
12.ನಗರದಲ್ಲಿರುವ ಮನುಷ್ಯ (2)
14.ಅಡಿಪಾಯದ ಮಾದರಿಯಿದು (5)
16.ಹರನಿಂದ ಸಿಕ್ಕಿರುವ ಆಶೀರ್ವಾದ (3)
17.ನಯವಾಗಿ ಹೊಳೆಯುವ ಕಣ್ಣು (3)

ಮೇಲಿಂದ ಕೆಳಕ್ಕೆ

1.ಬರದಲ್ಲಿ ತೋರುತ್ತಿರುವ ಒಣ ಜಂಬ! (4)
2.ತೆಳುವಾದ ಸೀರೆ (3)
3.ಬಯಲಲ್ಲಿರುವಾಗ ಮೂಡಿದ ಆಸೆ! (3)
4.ಸೂರ್ಯನ ಇನ್ನೊಂದು ಹೆಸರು (4)
6.ಲಕ್ಷಾಧಿಪತಿಯತ್ತ ನೆಟ್ಟಿರುವ ಗುರಿ! (2)
8.ಈತ ತಿರುಪೆ ಬೇಡುವವನು (3)
9.ಮಾನವಂತ ಕೈಗೊಂಡ ನಿಶ್ಚಯ (3)
10.ತಂದೆಯ ತಂದೆ (4)
11. ಸಂಸಾರ ಬಂಧನಕ್ಕೆ ಒಳಗಾದವನು (2)
13.ಬಾಳೆ ಹಣ್ಣಿನಿಂದ ಮಾಡಿರುವ ಖಾದ್ಯ (4)
14.ಅಡಿಕೆ ಹಾಳೆಯಿಂದ ಮಾಡಿರುವ ತಟ್ಟೆ (3)
15.ಮಾನವಂತನಿಗೆ ಮಾಡುತ್ತಿರುವ ಆದರ (3)



5420ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಚ್ಛ್ವಾಸ
3.ಗಾವುದ 5.ಭಿನ್ನಾಭಿಪ್ರಾಯ
7.ಕ್ಷುಲ್ಲಕ 8.ಕಹಳೆ
9.ಓರಿಗೆ 11.ಗರತಿ
13.ಆಹ್ವಾನ 15.ಶುಕ್ತಿಕೆ
16.ವಿಮಾನಯಾನ
17.ಕಂದೀಲು 18.ಕದಿರು

ಮೇಲಿಂದ ಕೆಳಕ್ಕೆ:
2.ಸಭಿಕ 3.ಗಾಯಕ
6.ಭಿಕಾರಿ 9.ಓದುಗ
10.ಗೆಳತಿ 12.ರಸನ
14.ನವಿಲು 15.ಶುನಕ

ಸುಡೊಕು 5807

4		6			8	5		1
			2	1			7	
1		2			5	3		8
6		9				8		
			5	4	6			
3		5				2		7
		4				1		2
			1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5806 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಅರಿಸಿನಕ್ಕೆ ಬಂಪರ್ ಬೆಲೆ

• ಜಗನ್ನಾಥ ಡಿ. ಶೇರಿಕಾರ

ಚಿಂಚೋಳಿ (ಕಲಬುರಗಿ ಜಿಲ್ಲೆ): ಮಾರುಕಟ್ಟೆಯಲ್ಲಿ ಅರಿಸಿನಕ್ಕೆ ಬಂಪರ್ ಬೆಲೆ ಬಂದಿದೆ. ಪಕ್ಕದ ಮಹಾರಾಷ್ಟ್ರದ ಸಾಂಗ್ಲಿ ಮಾರುಕಟ್ಟೆಯಲ್ಲಿ ಸಂಸ್ಕರಿಸಿದ ಅರಿಸಿನದ ಬೆಲೆ ಎರಡು ತಿಂಗಳಲ್ಲಿ ಮೂರುಪಟ್ಟು ಹೆಚ್ಚಾಗಿದ್ದು, ಪ್ರತಿ ಕ್ವಿಂಟಲ್‌ಗೆ ಗರಿಷ್ಠ ₹18 ಸಾವಿರದವರೆಗೂ ಮಾರಾಟವಾಗುತ್ತಿದೆ.

ಜೂನ್ ಅಂತ್ಯದಲ್ಲಿ ಚಾಮರಾಜನಗರ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ ಗರಿಷ್ಠ ₹6,469ಕ್ಕೆ ಮಾರಾಟವಾಗಿದ್ದ ಅರಿಸಿನದ ಬೆಲೆಯು ಆಗಸ್ಟ್ 17ರಂದು ಗರಿಷ್ಠ ₹12,479ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಬಳಕೆಗೆ ಸಿದ್ಧವಾದ ಉತ್ಕೃಷ್ಟ ಗುಣಮಟ್ಟದ ಅರಿಸಿನದ ಕಡ್ಡಿ ಬೆಂಗಳೂರಿನ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹11,000ದಿಂದ ₹ 22,000ಕ್ಕೆ ಏರಿಕೆಯಾಗಿದೆ ಎಂದು ಎಪಿಎಂಸಿ ದಾಖಲೆಗಳು ಹೇಳುತ್ತವೆ.

ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 355 ಹೆಕ್ಟೇರ್‌ನಲ್ಲಿ ಅರಿಶಿನ ಬೆಳೆಯಿದ್ದು, ಚಿಂಚೋಳಿ ಮತ್ತು ಆಳಂದ ತಾಲ್ಲೂಕುಗಳಲ್ಲೇ ಹೆಚ್ಚು ಬೆಳೆಯಲಾಗುತ್ತಿದೆ. ಆದರೆ, ಮಾರುಕಟ್ಟೆ ಇಲ್ಲದ ಕಾರಣ ರೈತರು ತಮ್ಮ ಉತ್ಪನ್ನವನ್ನು ಮಾರಲು ತೆಲಂಗಾಣ, ಮಹಾರಾಷ್ಟ್ರದ ದಲ್ಲಾಳಿಗಳನ್ನೇ ಅವಲಂಬಿಸಿದ್ದಾರೆ.

‘ಚಿಂಚೋಳಿ ತಾಲ್ಲೂಕಿನಲ್ಲಿ ದಲ್ಲಾಳಿಗಳು ಕ್ವಿಂಟಲ್‌ಗೆ ₹14 ಸಾವಿರ ದರಕ್ಕೆ ಅರಿಸಿನ ಖರೀದಿಸುತ್ತಿದ್ದಾರೆ. ಮಹಾರಾಷ್ಟ್ರದ ತುಳಜಾಪುರ ಸುತ್ತಲೂ ಬೆಳೆದ ಸೇಲಂ ತಳಿಯ ಉತ್ತಮ ಗುಣಮಟ್ಟದ ಅರಿಸಿನ ಸಾಂಗ್ಲಿ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ ಗರಿಷ್ಠ ₹18 ಸಾವಿರಕ್ಕೆ ಮಾರಾಟವಾಗುತ್ತಿದೆ. ಇದು ಕಳೆದ 10 ವರ್ಷಗಳ ಗರಿಷ್ಠ ದರ. ಅಲ್ಲಿ ಎರಡು ತಿಂಗಳ ಹಿಂದೆ ಕ್ವಿಂಟಲ್‌ಗೆ ₹6,000 ಇದ್ದ ಸಂಸ್ಕರಿಸಿದ ಅರಿಸಿನದ ಬೆಲೆ ಈಗ ಮೂರು ಪಟ್ಟು ಹೆಚ್ಚಾಗಿದೆ. ಒಂದೂವರೆ ತಿಂಗಳಿನಿಂದ ದರ ಏರುತ್ತಲೇ ಇದೆ. ಮಾರುಕಟ್ಟೆಯಲ್ಲಿ ಅರಿಸಿನ ಕೊರತೆಯೇ ದರ ಹೆಚ್ಚಳಕ್ಕೆ ಕಾರಣ’ ಎಂದು ಚಿಂಚೋಳಿ ತಾಲ್ಲೂಕಿನ ಕೊಳ್ಳೂರಿನ ಅರಿಸಿನ ಬೆಳೆಗಾರ ಭೀಮರಡ್ಡಿ ಯಂಗಮನೋರ ತಿಳಿಸಿದ್ದಾರೆ.

ಚಿಂಚೋಳಿ ತಾಲ್ಲೂಕಿನಲ್ಲಿ ವಿವಿಧ ತಳಿಯ ಅರಿಸಿನ ಬೆಳೆಯಲಾಗುತ್ತಿದೆ. ಪ್ರತಿ ಎಕರೆಗೆ 25 ಕ್ವಿಂಟಲ್ ಸಂಸ್ಕರಿಸಿದ ಅರಿಸಿನ ಇಳುವರಿ ಬರುತ್ತದೆ.

ಷೇರುಪೇಟೆ ವಹಿವಾಟು ▼181



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,444
ಇಂದಿನ ಅಂತ್ಯ	19,387
▼	57
ದಿನದ ಕನಿಷ್ಠ	19,369

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹482

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1820(1840)
ಸೋಯಾ (ರಿಫೈನ್ಡ್)	₹935(940)
ಸೂರ್ಯಕಾಂತಿ (ರಿಫೈನ್ಡ್)	₹945(940)
ಪಾಮೋಲಿನ್	₹850(848)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹133.50
ಗುಡ್ ಲಾಟ್	₹119.50

ಅಂತರಿಕ್ಷಯಾನ, ರಕ್ಷಣಾ ವಲಯದ ಕಂಪನಿಗಳ ಷೇರು ಮೌಲ್ಯ ಹೆಚ್ಚಳ

ಚಂದ್ರಯಾನ ಯಶಸ್ಸು: ಸೆಂಟಮ್ ಗಳಿಕೆ

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಚಂದ್ರಯಾನ–3 ಯೋಜನೆಯ ಬಾಹ್ಯಾಕಾಶ ನೌಕೆಯನ್ನು ಅಭಿವೃದ್ಧಿಪಡಿಸುವಲ್ಲಿ ಕೊಡುಗೆ ನೀಡಿದ ಹಲವು ಕಂಪನಿಗಳ ಷೇರುಗಳು ಗುರುವಾರದ ವಹಿವಾಟಿನಲ್ಲಿ ಗಳಿಕೆ ಕಂಡುಕೊಂಡವು. ಆದರೆ, ಕೆಲವು ಕಂಪನಿಗಳ ಷೇರುಗಳು ಲಾಭ ಗಳಿಕೆಯ ವಹಿವಾಟಿನ ಕಾರಣದಿಂದಾಗಿ ಇಳಿಕೆ ಕಾಣುವಂತಾಯಿತು.

ಸೆಂಟಮ್ ಎಲೆಕ್ಟ್ರಾನಿಕ್ಸ್, ಪಾರಸ್ ಡಿಫೆನ್ಸ್ ಆ್ಯಂಡ್ ಸ್ಪೇಸ್ ಟೆಕ್ನಾಲಜೀಸ್ ಲಿಮಿಟೆಡ್, ಎಂಟಿಎಆರ್ ಟೆಕ್ನಾಲಜೀಸ್, ಭಾರತ್ ಫೋರ್ಜ್ ಕಂಪನಿಗಳ ಷೇರು ಮೌಲ್ಯ ಹೆಚ್ಚಾಗಿದ್ದರೆ, ಬಿಎಚ್‌ಇಎಲ್, ಹಿಂದುಸ್ತಾನ್ ಏರೊನಾಟಿಕ್ಸ್ ಕಂಪನಿ (ಎಚ್‌ಎಎಲ್) ಷೇರುಗಳು ಲಾಭ ಗಳಿಕೆಗೆ ಒಳಗಾಗಿ ಇಳಿಕೆ ಕಂಡಿವೆ. ಗುರುವಾರದ ವಹಿವಾಟಿನಲ್ಲಿ ಬಹುತೇಕ ಕಂಪನಿಗಳು 52 ವಾರಗಳ ಗರಿಷ್ಠ ಮಟ್ಟವನ್ನು ಮುಟ್ಟಿದ್ದವು.

ಅಂತರಿಕ್ಷಯಾನ ಮತ್ತು ರಕ್ಷಣಾ ವಲಯಕ್ಕೆ ಸಂಬಂಧಿಸಿದ ಕಂಪನಿಗಳ ಷೇರು ಮೌಲ್ಯವು ಬುಧವಾರದ ವಹಿವಾಟಿನಲ್ಲಿಯೂ ಏರಿಕೆ ಕಂಡಿತ್ತು.

ಐದು ದಿನಗಳ ವಹಿವಾಟಿನಲ್ಲಿ ಸೆಂಟಮ್ ಎಲೆಕ್ಟ್ರಾನಿಕ್ಸ್ ಷೇರು ಮೌಲ್ಯ ಶೇ 25.17ರಷ್ಟು ಏರಿಕೆ ಕಂಡಿದೆ. ಪಾರಸ್ ಡಿಫೆನ್ಸ್ ಆ್ಯಂಡ್ ಸ್ಪೇಸ್ ಟೆಕ್ನಾಲಜೀಸ್ ಲಿಮಿಟೆಡ್ ಷೇರು ಮೌಲ್ಯ ಶೇ 13.73ರಷ್ಟು, ಎಂಟಿಎಆರ್ ಟೆಕ್ನಾಲಜೀಸ್ ಶೇ 1.80ರಷ್ಟು ಏರಿಕೆ ಕಂಡಿದೆ.

ಲಾಭ ಗಳಿಕೆ: ವಹಿವಾಟಿನ ಆರಂಭದಲ್ಲಿ ಉತ್ತಮ ಗಳಿಕೆ ಕಂಡಿದ್ದ ಕೆಲವು ಕಂಪನಿಗಳ ಷೇರುಗಳು ವಹಿವಾಟಿನ ಅಂತ್ಯದ ವೇಳೆಗೆ ಲಾಭ ಗಳಿಕೆಯ ಒತ್ತಡಕ್ಕೆ ಒಳಗಾಗಿ ಇಳಿಕೆ ಕಂಡಿವೆ. ಮಿಶ್ರ ಧಾತು ನಿಗಮ್ ಲಿಮಿಟೆಡ್ (ಶೇ 2.54ರಷ್ಟು), ಬಿಎಚ್‌ಇಎಲ್ (ಶೇ 1.78), ಹಿಂದುಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಶೇ 1.60), ಎಲ್ ಆ್ಯಂಡ್ ಟಿ (ಶೇ 1.10), ಅಸ್ತ್ರಾ ಮೈಕ್ರೊವೇವ್ ಪ್ರಾಡಕ್ಟ್ಸ್ (ಶೇ 0.10) ಇಳಿಕೆ ಕಂಡಿವೆ.

ಅಮೆರಿಕದ ಆರ್ಥಿಕತೆಯು ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಲ್ಲುವ ನಿರೀಕ್ಷೆಯು ಜಾಗತಿಕ ಮಟ್ಟದಲ್ಲಿ ಹೂಡಿಕೆದಾರರ ಮೇಲೆ ಪ್ರಭಾವ ಬೀರಿದೆ. ಇದರ ಜೊತೆಗೆ ಚಂದ್ರಯಾನ–3ರ ಯಶಸ್ಸು ಭಾರತದಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಈ ಬೆಳವಣಿಗೆಗಳು ಅಲ್ಪಾವಧಿಯಲ್ಲಿ ಮಾರುಕಟ್ಟೆಯ ಮುನ್ನೋಟವನ್ನು ನಿಸ್ಸಂಶಯವಾಗಿ ಸಕಾರಾತ್ಮಕವಾಗಿಸಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಗುರುವಾರದ ವಹಿವಾಟಿನಲ್ಲಿ ಕಂಪನಿಗಳ ಷೇರುಗಳ ಗಳಿಕೆ (%)



ಚಂದ್ರಯಾನ–3 ಯೋಜನೆಗೆ ಬಾಹ್ಯಾಕಾಶ ನೌಕೆಯನ್ನು ಅಭಿವೃದ್ಧಿಪಡಿಸಲು ಇಸ್ರೊಗೆ ಹಲವು ಕಂಪನಿಗಳು ನೆರವಾಗಿವೆ. ಅವುಗಳ ವಿವರ

- ಟಾಟಾ ಕನ್ಸಲ್ಟಿಂಗ್ ಎಂಜಿನಿಯರ್ಸ್ ಲಿಮಿಟೆಡ್
- ಲಾರ್ಸನ್ ಆ್ಯಂಡ್ ಟೂಬ್ರೊ
- ವಾಲ್ಚಂದ್‌ನಗರ್ ಇಂಡಸ್ಟ್ರೀಸ್
- ಗೋದ್ರೆಜ್ ಆ್ಯಂಡ್ ಬಾಯ್ಸ್
- ಸೆಂಟಮ್ ಎಲೆಕ್ಟ್ರಾನಿಕ್ಸ್
- ಅನಂತ್ ಟೆಕ್ನಾಲಜೀಸ್
- ಒಮ್ನಿಪ್ರೆಸೆಂಟ್ ರೊಬೊಟಿಕ್ ಟೆಕ್ನಾಲಜೀಸ್ ಲಿ.
- ಸೆಮಿಕಂಡಕ್ಟರ್ ಲ್ಯಾಬೊರೇಟರಿ
- ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್
- ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್
- ಎಂಟಿಎಆರ್ ಟೆಕ್ನಾಲಜೀಸ್
- ಮಿಶ್ರ ಧಾತು ನಿಗಮ
- ಕೆಲ್ಟ್ರಾನ್
- ಕೇರಳ ಮಿನರಲ್ಸ್ ಆ್ಯಂಡ್ ಮೆಟಲ್ಸ್
- ಕೋರ್ಟಸ್ ಇಂಡಸ್ಟ್ರೀಸ್ ಪ್ರೈ.ಲಿ.
- ವಜ್ರ ರಬ್ಬರ್ ಪ್ರಾಡಕ್ಟ್ಸ್

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

4ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಿಂಗಮ್ಮ (ಮಾವಳ್ಳಿ)
(ದಿ. ವೀರಭದ್ರಪ್ಪನವರ ಪತ್ನಿ)
ನಿಧನ: 25–08–2019
ನೀವು ನಮ್ಮನ್ನಗಲಿ ನಾಲ್ಕು ವರ್ಷ ಕಳೆದಿದೆ.
ಆದರೂ ನಿಮ್ಮ ನೆನಪುಗಳು ನಮ್ಮಿಂದ ಎಂದಿಗೂ ದೂರಾಗದು.
ನೀವು ನೀಡಿದ ಅಗಾದ ಪ್ರೀತಿ, ವಾತ್ಸಲ್ಯ
ನಮ್ಮ ಹೃದಯದಲ್ಲಿ ಯಾವಾಗಲೂ ನೆಲೆಸಿರುತ್ತದೆ.
ದುಃಖತಪ್ತರು: ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ

ಶ್ರೀ ಬಿ. ಕೆ. ನಾರಾಯಣಸ್ವಾಮಿ
ದಿ: 16.08.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ಇವರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 26.08.2023ರಂದು ಬೆಳಿಗ್ಗೆ 10.00 ಗಂಟೆಗೆ ಸಂಗೀತಾ, ನಂ.11, ರಿರ್ಸವಾಯರ್ ಸ್ಟ್ರೀಟ್, ಬಸವನಗುಡಿ, ಬೆಂಗಳೂರು–04 ನಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು: ಕುಟುಂಬವರ್ಗದವರು ಮತ್ತು ಬಂಧುಮಿತ್ರರು

ಟಿವಿಎಸ್ ಎಕ್ಸ್ ಇ.ವಿ. ಬಿಡುಗಡೆ

ದುಬೈ (ಪಿಟಿಐ): ಮಿಲೆನಿಯಲ್‌ಗಳು ಹಾಗೂ ಮೂವತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನವರನ್ನು ಗುರಿಯಾಗಿಸಿಕೊಂಡು ಟಿವಿಎಸ್ ಮೋಟರ್ ಕಂಪನಿಯು ಹೊಸ ವಿದ್ಯುತ್ ಚಾಲಿತ (ಇ.ವಿ) ದ್ವಿಚಕ್ರ ವಾಹನ ‘ಟಿವಿಎಸ್ ಎಕ್ಸ್’ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ವಾಹನದ ಪರಿಚಯಾತ್ಮಕ ಬೆಲೆ ₹2.5 ಲಕ್ಷ. ನಿಲುಗಡೆಯ ಸ್ಥಿತಿಯಿಂದ ಗಂಟೆಗೆ 40 ಕಿ.ಮೀ. ವೇಗವನ್ನು ಇದು 2.6 ಸೆಕೆಂಡ್‌ಗಳಲ್ಲಿ ತಲುಪಬಲ್ಲದು. ಇದು ಗಂಟೆಗೆ ಗರಿಷ್ಠ 105 ಕಿ.ಮೀ. ವೇಗದಲ್ಲಿ ಸಾಗಬಲ್ಲದು.

ಬ್ಯಾಟರಿಯನ್ನು ಟಿವಿಎಸ್ ಕಂಪನಿಯು ತಾನೇ ಅಭಿವೃದ್ಧಿಪಡಿಸಿದ್ದು, ಸುರಕ್ಷಿತವಾಗಿದೆ ಹಾಗೂ ಹೆಚ್ಚು ಅವಧಿಗೆ ಬಾಳಿಕೆ ಬರುವಂತಿದೆ ಎಂದು ತಿಳಿಸಿದೆ.

ಕಂಪನಿಯ ವೆಬ್‌ಸೈಟ್ ಮೂಲಕ ಈ ವಾಹನ ಬುಕ್ ಮಾಡಬಹುದು. ನವೆಂಬರ್‌ನಿಂದ ಇದನ್ನು ಗ್ರಾಹಕರಿಗೆ ಹಸ್ತಾಂತರಿಸುವ ಪ್ರಕ್ರಿಯೆ ಶುರುವಾಗಲಿದೆ. ಈ ವಾಹನಕ್ಕೆ ಫೇಮ್ ಯೋಜನೆಯ ಅಡಿಯಲ್ಲಿ ಯಾವುದೇ ಸಬ್ಸಿಡಿ ಸಿಗುವುದಿಲ್ಲ.

1981ರಿಂದ 1996ರ ನಡುವೆ ಜನಿಸಿದವರನ್ನು ಮಿಲೆನಿಯಲ್‌ಗಳು ಎಂದು, 1996ರ ನಂತರ ಜನಿಸಿದವರನ್ನು ಜೆನ್ ಜೆಡ್ ಎಂದು ಗುರುತಿಸಲಾಗುತ್ತಿದೆ.

ಹೊಸ ಮಾದರಿಯನ್ನು ಅಭಿವೃದ್ಧಿಪಡಿಸಲು ಕಂಪನಿಯು ₹250 ಕೋಟಿ ಹೂಡಿಕೆ ಮಾಡಿದೆ.

ಈ ವಾಹನವನ್ನು ಬಾಂಗ್ಲಾದೇಶ, ನೇಪಾಳ, ಯುರೋಪ್, ಲ್ಯಾಟಿನ್ ಅಮೆರಿಕಕ್ಕೆ ರಫ್ತು ಮಾಡುವ ಉದ್ದೇಶವನ್ನು ಕಂಪನಿ ಹೊಂದಿದೆ.

ಮುಂಬೈ ಧಾರಣೆ

ಶೇಂಗಾ

24–8–2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12500-12600
ದಪ್ಪ ಮಧ್ಯಪ್ರದೇಶ(ಹೊಸ)	13200-13300
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1830(1850)
ಒಂದು ವಾರದ ಡೆಲಿವರಿ	1825(1845)
ಸೋಯಾ ಕಚ್ಚಾ	875(890)
ಪಾಮ್ ವಾರದ ಡೆಲಿವರಿ	848(846)
ಸೂರ್ಯಕಾಂತಿ ಎಣ್ಣೆ ಕಚ್ಚಾ	870(870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ10ಗ್ರಾಂ	58,400 (58,400)
ಬೆಳ್ಳಿ ಕೆ.ಜಿ	73,600 (72,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇನ್ಫೊಸಿಸ್‌ಗೆ ನಡಾಲ್ ರಾಯಭಾರಿ

ನವದೆಹಲಿ (ಪಿಟಿಐ): ಟೆನ್ನಿಸ್ ತಾರೆ ರಫೇಲ್ ನಡಾಲ್ ಅವರು ಐ.ಟಿ. ಸೇವಾ ಕಂಪನಿ ಇನ್ಫೊಸಿಸ್‌ಗೆ ಮೂರು ವರ್ಷಗಳ ಅವಧಿಗೆ ರಾಯಭಾರಿ ಆಗಿರಲಿದ್ದಾರೆ.

ವ್ಯಕ್ತಿಗಳು ಹಾಗೂ ವಾಣಿಜ್ಯೋದ್ಯಮ ನಾಯಕರು ಬೆಳವಣಿಗೆ ಸಾಧಿಸಲು ಬೇಕಿರುವ ಗುಣಗಳ ಮೂರ್ತ ರೂಪ ನಡಾಲ್ ಎಂದು ಕಂಪನಿ ಹೇಳಿದೆ. ‘ಇನ್ಫೊಸಿಸ್ ಜೊತೆ ಕೆಲಸ ಮಾಡಲು ನನಗೆ ಸಂತಸವಾಗುತ್ತಿದೆ’ ಎಂದು ನಡಾಲ್ ಪ್ರತಿಕ್ರಿಯಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ವಿವಿಧ ದೇಶಗಳ ಮುಖಂಡರ ಜೊತೆಗೆ ಮೋದಿ ಚರ್ಚೆ • ಬಾಂಧವ್ಯ ವೃದ್ಧಿಗೆ ಒತ್ತು

ಬ್ರಿಕ್ಸ್: 6 ರಾಷ್ಟ್ರಗಳ ಸೇರ್ಪಡೆಗೆ ಸಮ್ಮತಿ

ಜೋಹಾನಸ್‌ಬರ್ಗ್ (ಎಎಫ್‌ಪಿ): ‘ಬ್ರಿಕ್ಸ್’ ಸಮೂಹಕ್ಕೆ ಆರು ರಾಷ್ಟ್ರಗಳನ್ನು ಹೊಸದಾಗಿ ಸೇರ್ಪಡೆಗೊಳಿಸುವ ಐತಿಹಾಸಿಕ ನಿರ್ಧಾರವನ್ನು ಭಾರತ ಸೇರಿದಂತೆ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಮುಖ್ಯಸ್ಥರು ಗುರುವಾರ ಪ್ರಕಟಿಸಿದ್ದಾರೆ.

ಭೌಗೋಳಿಕ ಪ್ರಭಾವ, ನೆಲೆ ವಿಸ್ತರಿಸುವ ಉದ್ದೇಶದ ಆರು ರಾಷ್ಟ್ರಗಳ ಸೇರ್ಪಡೆ ಜನವರಿ 1ರಿಂದ ಜಾರಿಗೆ ಬರಲಿದೆ. ಹಾಲಿ ಸದಸ್ಯತ್ವ ಹೊಂದಿರುವ ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ ರಾಷ್ಟ್ರಗಳು ಈ ನಿರ್ಧಾರಕ್ಕೆ ಸಮ್ಮತಿಸಿವೆ. ಈ ಪ್ರಕಾರ, ಅರ್ಜೆಂಟೀನಾ, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ, ಈಜಿಪ್ಟ್, ಯುಎಇ ರಾಷ್ಟ್ರಗಳು ಬ್ರಿಕ್ಸ್ ಒಕ್ಕೂಟ ಸೇರಲಿವೆ.

ಈ ಕುರಿತು ವಿವರ ನೀಡಿದ, ಆತಿಥೇಯ ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರು, ‘ಬ್ರಿಕ್ಸ್ ವ್ಯಾಪ್ತಿ ವಿಸ್ತರಣೆ ಸಂಬಂಧಿತ ಮಾರ್ಗದರ್ಶಿ ನೀತಿಗಳು, ಗುಣಮಟ್ಟ, ಮಾನದಂಡ ಪ್ರಕ್ರಿಯೆಗಳಿಗೂ ಮುಖ್ಯಸ್ಥರು ಒಪ್ಪಿದರು’ ಎಂದು ತಿಳಿಸಿದರು.

‘ಹೊಸ ಸದಸ್ಯರ ಸೇರ್ಪಡೆಗೆ ಬ್ರಿಕ್ಸ್ ಮುಕ್ತವಾಗಿದೆ’ ಎಂದು ಬ್ರೆಜಿಲ್ ಅಧ್ಯಕ್ಷ ಲ್ಯೂಜ್ ಇನಾಸಿಯೊ ಲುಲಾ ಡಿಸಿಲ್ವಾ ತಿಳಿಸಿದರು. ಅರ್ಜೆಂಟೀನಾ ಸೇರ್ಪಡೆ ಕುರಿತು ಇವರು ವ್ಯಕ್ತಿಗತವಾಗಿ ಮುತುವರ್ಜಿ ವಹಿಸಿದ್ದರು.

ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು, ‘ಸದಸ್ಯತ್ವ ವಿಸ್ತರಣೆಯು ಐತಿಹಾಸಿಕ ನಿರ್ಧಾರ’ ಎಂದು ಪ್ರತಿಕ್ರಿಯಿಸಿದ್ದಾರೆ. ‘ಬ್ರಿಕ್ಸ್ ರಾಷ್ಟ್ರಗಳ ಸಹಕಾರದಲ್ಲಿ ಹೊಸ ಆರಂಭವಾಗಿದೆ. ವಿಶ್ವಶಾಂತಿ ಮತ್ತು ಅಭಿವೃದ್ಧಿಗೆ ಹೆಚ್ಚಿನ ಬಲ ನೀಡಲಿದೆ’ ಎಂದು ಅವರು ಹೇಳಿದರು.

ಆಫ್ರಿಕಾದಲ್ಲಿ 2ನೇ ಅಧಿಕ ಜನಸಂಖ್ಯೆಯುಳ್ಳ ಇಥಿಯೋಪಿಯಾದ ಪ್ರಧಾನಿ ಅಬಿ ಅಹ್ಮದ್, ‘ದೇಶದ ದೃಷ್ಟಿಯಿಂದ ಇದು ಅದ್ಭುತ ಕ್ಷಣ’ ಎಂದರು. ಇರಾನ್‌ನ ಅಧ್ಯಕ್ಷರ ಹಿರಿಯ ಸಲಹೆಗಾರ ಮೊಹಮ್ಮದ್ ಜಮ್‌ಷಿಡಿ, ‘ಇದು ಐತಿಹಾಸಿಕ ಹೆಜ್ಜೆಯಾಗಿದೆ’ ಎಂದರು.

> **ಬಹುಸದಸ್ಯತ್ವವುಳ್ಳ ಸಂಸ್ಥೆಗಳು ನಿಜವಾಗಿಯೂ ಜಾಗತಿಕ ಸಂಸ್ಥೆಗಳಾಗಿ ಉಳಿಯಲು ಒಟ್ಟು ಸಾಮರ್ಥ್ಯ ಮತ್ತು ಆರ್ಥಿಕತೆ ಕುರಿತ ವಸ್ತುಸ್ಥಿತಿಯನ್ನು ಸುಧಾರಿಸಬೇಕು.**
> **ಆಂಟೊನಿಯೊ ಗುಟೆರಸ್,** ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ

ಆರು ರಾಷ್ಟ್ರಗಳ ಸೇರ್ಪಡೆ ಕುರಿತ ತೀರ್ಮಾನ ಪ್ರಕಟಗೊಂಡರೂ, ಸೌದಿ ಅರೇಬಿಯಾ ಈ ಕುರಿತು ಬದ್ಧ ನಿರ್ಧಾರ ಪ್ರಕಟಿಸಿಲ್ಲ. ವಿದೇಶಾಂಗ ಸಚಿವ, ರಾಜ ಫೈಸಲ್ ಬಿನ್ ಫರ್ಹಾನ್ ಅವರು, ‘ಆಹ್ವಾನವನ್ನು ಪರಿಶೀಲಿಸಲಾಗುತ್ತಿದ್ದು, ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಬ್ರಿಕ್ಸ್ ಸದಸ್ಯತ್ವ ಕೋರಿ ಸುಮಾರು 12 ರಾಷ್ಟ್ರಗಳು ಮನವಿ ಸಲ್ಲಿಸಿದ್ದವು. ಇಲ್ಲಿ ನಡೆದ 15ನೇ ಶೃಂಗಸಭೆಯಲ್ಲಿ ಆಹ್ವಾನದ ಮೇರೆಗೆ 50ಕ್ಕೂ ಹೆಚ್ಚು ರಾಷ್ಟ್ರಗಳ ಮುಖ್ಯಸ್ಥರು ಭಾಗವಹಿಸಿದ್ದರು.

ಉಕ್ರೇನ್ ಜೊತೆಗಿನ ಯುದ್ಧ ಕುರಿತಂತೆ ಪಶ್ಚಿಮದ ರಾಷ್ಟ್ರಗಳ ಜೊತೆಗೆ ಭಿನ್ನ ನಿಲುವು ಹೊಂದಿರುವುದು ಹಾಗೂ ಕೆಲ ಸದಸ್ಯ ರಾಷ್ಟ್ರಗಳ ಬೆಂಬಲವನ್ನು ರಷ್ಯಾ ಹೊಂದಿರುವುದರ ಬಗ್ಗೆ ಶೃಂಗಸಭೆಯಲ್ಲಿ ಚರ್ಚೆಯಾಯಿತು.

ಉಕ್ರೇನ್ ಮೇಲೆ ರಷ್ಯಾದ ಅತಿಕ್ರಮಣವನ್ನು ದಕ್ಷಿಣ ಆಫ್ರಿಕಾ, ಚೀನಾ, ಭಾರತ ಈವರೆಗೆ ಖಂಡಿಸಿಲ್ಲ. ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಕೆ ಅಥವಾ ರಷ್ಯಾಗೆ ನಿರ್ಬಂಧ ಹೇರುವ ಕುರಿತು ಪಾಶ್ಚಿಮಾತ್ಯ ದೇಶಗಳ ಜೊತೆ ಕೈಜೋಡಿಸಲು ಬ್ರೆಜಿಲ್ ನಿರಾಕರಿಸಿದೆ.

2009ಲ್ಲಿ ಸ್ಥಾಪನೆಯಾದ ಬ್ರಿಕ್ಸ್, ದಕ್ಷಿಣ ಆಫ್ರಿಕಾ ಸೇರ್ಪಡೆಯೊಂದಿಗೆ ನಂತರದ ವರ್ಷ ವಿಸ್ತರಣೆಗೊಂಡಿತು. ಅಮೆರಿಕ ನೇತೃತ್ವದ ಶ್ರೀಮಂತ ದೇಶಗಳ ಒಕ್ಕೂಟ ಜಿ7 ಶೃಂಗಕ್ಕೆ ಪರ್ಯಾಯವಾಗಿ ‘ಬ್ರಿಕ್ಸ್’ ಬೆಳೆಸಲು ಚೀನಾ ಹೆಚ್ಚಿನ ಆಸಕ್ತಿ ವಹಿಸಿದೆ.

‘ಸೇನೆ ಹಿಂತೆಗೆತ ಚುರುಕುಗೊಳಿಸಲು ಸಮ್ಮತಿ’

ಜೋಹಾನಸ್‌ಬರ್ಗ್ (ಪಿಟಿಐ): ಪೂರ್ವ ಲಡಾಖ್‌ನಲ್ಲಿ, ಗಡಿರೇಖೆಗೆ ಹೊಂದಿಕೊಂಡಂತೆ ಸಹಜ ಸ್ಥಿತಿ ಮರುಸ್ಥಾಪಿಸುವ ಕ್ರಮವಾಗಿ ಸೇನಾ ತುಕಡಿಗಳನ್ನು ಹಿಂದೆ ಕರೆಸುವ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಭಾರತ–ಚೀನಾ ನಿರ್ಧರಿಸಿವೆ.

ಸಂಬಂಧಿತ ಅಧಿಕಾರಿಗಳಿಗೆ ಈ ಸಂಬಂಧ ಸ್ಪಷ್ಟ ನಿರ್ದೇಶನ ನೀಡಲು ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಸಮ್ಮತಿಸಿದರು ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಅವರು ತಿಳಿಸಿದರು.

‘ಬ್ರಿಕ್ಸ್ ಶೃಂಗಸಭೆಗೆ ಆಗಮಿಸಿರುವ ಉಭಯ ಮುಖಂಡರು ಇಲ್ಲಿ ಚರ್ಚಿಸಿದರು. ಉಭಯ ದೇಶಗಳ ನಡುವೆ ಸಹಜ ಬಾಂಧವ್ಯ ಮೂಡಲು,ಗಡಿಯಲ್ಲಿ ಶಾಂತಿ ಮರುಸ್ಥಾಪಿಸಲು ವಾಸ್ತವ ನಿಯಂತ್ರಣ ರೇಖೆಯನ್ನು ಗೌರವಿಸುವುದು ಅಗತ್ಯ ಎಂದು ಮೋದಿ ಪ್ರತಿಪಾದಿಸಿದರು’ ಎಂದು ಕ್ವಾತ್ರಾ ಅವರು ಸುದ್ದಿಗಾರರಿಗೆ ತಿಳಿಸಿದರು.

ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ (ಮಧ್ಯ) ಅವರು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ಈ ವೇಳೆ ಇದ್ದರು –ಎಪಿ/ಪಿಟಿಐ ಚಿತ್ರ

ಬಾಂಧವ್ಯ ವೃದ್ಧಿಗೆ ನಾಯಕರೊಂದಿಗೆ ಸರಣಿ ಸಭೆ

ಜೋಹಾನಸ್‌ಬರ್ಗ್ (ಪಿಟಿಐ): ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ವಿವಿಧ ರಾಷ್ಟ್ರಗಳ ಮುಖಂಡರ ಜೊತೆ ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಕುರಿತು ಗುರುವಾರ ಸರಣಿ ಸಭೆ ನಡೆಸಿದರು.

ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ, ಸೆನೆಗಲ್ ಅಧ್ಯಕ್ಷ ಮ್ಯಾಕಿ ಸಲ್ ಅವರ ಜೊತೆಗೂ ಮೋದಿ ಪ್ರತ್ಯೇಕವಾಗಿ ಸಮಾನ ಆಸಕ್ತಿಯ ಕ್ಷೇತ್ರಗಳು, ಬಾಂಧವ್ಯ ವೃದ್ಧಿ, ಸಹಕಾರ ಕುರಿತ ಕ್ಷೇತ್ರಗಳ ಬಗ್ಗೆ ಪ್ರಧಾನಿ ಚರ್ಚಿಸಿದರು.

ಬ್ರಿಕ್ಸ್ ಸಮೂಹಕ್ಕೆ ಇಥಿಯೋಪಿಯಾ ಸೇರ್ಪಡೆ ಕುರಿತ ತೀರ್ಮಾನ ಹೊರಬಿದ್ದ ದಿನವೇ ಪ್ರಧಾನಿ ಮೋದಿ ಅವರು ಇಥಿಯೋಪಿಯಾ ಪ್ರಧಾನಿ ಅಬಿ ಅಹ್ಮದ್ ಅಲಿ ಅವರೊಂದಿಗೂ ಚರ್ಚೆ ನಡೆಯಿತು.

‘ಉಭಯ ರಾಷ್ಟ್ರಗಳ ಬಾಂಧವ್ಯ ಕುರಿತು ಆಶಯ ಮೂಡಿದೆ. ಮುಖಂಡರ ಮಾತುಕತೆ ಫಲಪ್ರದವಾಗಿದೆ. ಭಾರತದ ಬೆಂಬಲವನ್ನು ಇಥಿಯೋಪಿಯಾ ಪ್ರಧಾನಿ ಕೊಂಡಾಡಿದ್ದಾರೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಭೇಟಿ ಕುರಿತಂತೆ ‘ಎಕ್ಸ್’ ಜಾಲತಾಣದಲ್ಲಿ ಸಂದೇಶ ಪೋಸ್ಟ್ ಮಾಡಿದ್ದಾರೆ.

ಗ್ರೀಸ್‌ಗೆ ಭೇಟಿ: ಪ್ರಧಾನಿ ಮೋದಿ ಶುಕ್ರವಾರ (ಆ.25) ಗ್ರೀಸ್‌ಗೆ ತೆರಳಲಿದ್ದಾರೆ. 40 ವರ್ಷಗಳ ನಂತರ ಗ್ರೀಸ್‌ಗೆ ಭೇಟಿ ನೀಡುತ್ತಿರುವ ಭಾರತದ ಪ್ರಧಾನಿ ಎಂಬ ಹಿರಿಮೆಗೂ ಮೋದಿ ಪಾತ್ರರಾಗಲಿದ್ದಾರೆ.

ಮೋದಿ –ಶೇಖ್ ಹಸೀನಾ ಭೇಟಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಗುರುವಾರ ಇಲ್ಲಿ ಮುಖಾಮುಖಿಯಾಗಿದ್ದು, ಶುಭಾಶಯ ವಿನಿಮಯದ ಜೊತೆಗೆ ಪರಸ್ಪರ ಆರೋಗ್ಯ ಕುಶಲೋಪರಿ ವಿಚಾರಿಸಿಕೊಂಡರು.

‘ಪ್ರಧಾನಿ ಮೋದಿ ಅವರು ಭೋಜನಕೂಟದಲ್ಲಿ ಕೆಲಅಡಿಗಳ ಅಂತರದಲ್ಲಿ ಆಸೀನರಾಗಿದ್ದ ಶೇಖ್ ಹಸೀನಾರತ್ತ ತೆರಳಿ ಶುಭಾಶಯ ಕೋರಿದರು’ ಎಂದು ಬಾಂಗ್ಲಾದೇಶದ ವಿದೇಶಾಂಗ ಸಚಿವರ ಹೇಳಿಕೆಯನ್ನು ಆಧರಿಸಿ ಬಾಂಗ್ಲಾದ ಸುದ್ದಿಸಂಸ್ಥೆ ವರದಿ ಮಾಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel
ವ್ಯವಸ್ಥಿತ ಪ್ರವಾಸಗಳು: 06.10.2023 18.10.2023 ರಿಂದ 15 ದಿನಗಳ ಚಾರ್ಧಾಮ್. 01.10.2023 16.10.2023 ರಿಂದ 8/12 ದಿನಗಳ ಕಾಶಿ,ಗಯಾ ಅಲಹಾಬಾದ್. 22.09.2023 28.10.2023 ರಿಂದ 10 ದಿನಗಳ ಮಧ್ಯಪ್ರದೇಶ. 16.10.2023 20.10.2023 17.11.2023 ರಿಂದ 8/17 ದಿನಗಳ ಗುಜರಾತ್,ರಾಜಸ್ಥಾನ್ 01.10.2023 16.10.2023 ರಿಂದ 7/12 ದಿನಗಳ ವೈಷ್ಣೋದೇವಿ,ಕಾಶ್ಮೀರ್ ಅಮೃತ್ಸರ್. 16.10.2023 20.11.2023 ರಿಂದ 11 ದಿನಗಳ ನೇಪಾಳ ಮುಕ್ತಿನಾಥ,ಕಾಶಿ. 24.09.2023 19.10.2023 ರಿಂದ 5 ದಿನಗಳ ದುಬೈ,ಅಬುದಾಬಿ. 25.10.2023 17.11.2023 ರಿಂದ 8/10 ದಿನಗಳ ವಿಯೆಟ್ನಾಂ,ಕಾಂಬೋಡಿಯ. 25.10.2023 20.11.2023 ರಿಂದ 7/11 ದಿನಗಳ ಸಿಂಗಾಪುರ,ಮಲೇಶಿಯಾ ಥೈಲ್ಯಾಂಡ್ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಭವಿಷ್ಯ
Astrology
ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್‌ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899
★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ಉದ್ಯೋಗಾವಕಾಶ
Wanted
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 18,800-78,000/-. 9964435081, 9964435077

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 6366430266, 6366430366
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ASTRO YATRA
ಶ್ರೀ ಜ್ಯೋತಿಷ್ಯಾಲಯ

ಉಚಿತ ಭವಿಷ್ಯ ಖಚಿತ ಪರಿಹಾರ
ಫೋನಿನ ಮೂಲಕ ಪರಿಹಾರ
ಸುಖ ಜೀವನಕ್ಕೆ ಶಾಶ್ವತ ಪರಿಹಾರ
ನಿಮ್ಮ ಕೌಟುಂಬಿಕ ಸಮಸ್ಯೆಗಳಾದ
ಸ್ತ್ರೀ ಪುರುಷ ಪ್ರೇಮ ವಿಚಾರ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಗಂಡ–ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ, ಅತ್ತೆ–ಸೊಸೆ ಕಿರಿಕಿರಿ, ಡೈವೋರ್ಸ್ ಪ್ರಾಬ್ಲಂ, ಮಾಟ–ಮಂತ್ರ, ಸಿನಿಮಾ ರಂಗ, ರಾಜಕೀಯ, ಉದ್ಯೋಗ, ಹಣಕಾಸಿನ ಸಮಸ್ಯೆ ಹಾಗೂ ಇನ್ನೂ ನಿಮ್ಮ ಯಾವುದೇ ಗುಪ್ತ, ಕಠಿಣ ಸಮಸ್ಯೆಗಳಿದ್ದರೂ ಕೇರಳ ಹಾಗೂ ಕೊಳ್ಳೇಗಾಲದ ರುಂಡಮಾಲಿನಿ ಪೂಜಾ ಶಕ್ತಿಯಿಂದ ಕೆಲವೇ ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡಲಾಗುತ್ತದೆ.
ಪಂಡಿತ್ ಸುರೇಶ್ ಭಟ್
ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ.
ಸಂಪರ್ಕಿಸಿ : 9686330981

ನೇಪಾಳದಲ್ಲಿ ಬಸ್ ಅಪಘಾತ: ಆರು ಮಂದಿ ಭಾರತೀಯರ ಸಾವು

ಕಠ್ಮಂಡು (ಪಿಟಿಐ): ನೇಪಾಳದ ಮಧೇಶ್ ಪ್ರಾಂತ್ಯದ ಬಾರಾ ಜಿಲ್ಲೆಯಲ್ಲಿ ಬಸ್ ಕಂದಕಕ್ಕೆ ಉರುಳಿ ಭಾರತದ ಆರು ಮಂದಿ ಯಾತ್ರಿಕರು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ.

ರಾಜಸ್ಥಾನದ ಯಾತ್ರಿಕರು ಸೇರಿದಂತೆ 26 ಮಂದಿ ಪ್ರಯಾಣಿಕರಿದ್ದ ಬಸ್ ಗುರುವಾರ ಬೆಳಿಗ್ಗೆ ಚುರಿಯಾ ಮಾಯಿ ದೇವಾಲಯದ ಸಮೀಪದ ನದಿ ದಂಡೆಯ ಬಳಿಯ ರಸ್ತೆಯಿಂದ 50 ಮೀಟರ್ ಆಳದ ಕಂದಕಕ್ಕೆ ಉರುಳಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಅಪಘಾತದಲ್ಲಿ 19 ಮಂದಿ ಗಾಯಗೊಂಡಿದ್ದು, ಅವರನ್ನು ಹೆಟೌಡಾದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಬಸ್ ಚಾಲಕ ಸೇರಿದಂತೆ ಮೂವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	650
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-44500
ಹಳತು	46000-48000
ಕಾರ್ಕಳ	
ಹೊಸತು	30000-45000
ಹಳತು	40000-48500
ಸಾಗರ	
ಬಿಳಿಗೋಟು	22569-33909
ಚಾಲಿ	32799-39110
ಕೋಕ	18786-36099
ಕೆಂಪುಗೋಟು	28299-38099
ರಾಶಿ	34899-50219
ಸಿಪ್ಪೆಗೋಟು	12110-21899
ಶಿವಮೊಗ್ಗ	
ರಾಶಿ	34299-51621
ಬೆಟ್ಟೆ	47899-53199
ಸರಕು	50099-81569
ಸಿದ್ದಾಪುರ	
ಬಿಳಿಗೋಟು	30199-35599
ಚಾಲಿ	40299-42599
ಕೋಕ	22699-34699
ಕೆಂಪುಗೋಟು	33199-33199
ರಾಶಿ	47109-50099
ತಟ್ಟಿಬೆಟ್ಟೆ	38689-44699
ಶಿರಸಿ	
ಬೆಟ್ಟೆ	38090-44919
ಬಿಳಿಗೋಟು	26309-36813
ಚಾಲಿ	38399-43299
ಕೆಂಪುಗೋಟು	24699-25499
ರಾಶಿ	47299-50469
ಯಲ್ಲಾಪುರ	
ಬಿಳಿಗೋಟು	20218-36699
ಚಾಲಿ	37269-43169
ಕೋಕ	21718-33699
ಕೆಂಪುಗೋಟು	21899-37306
ರಾಶಿ	47609-55825
ತಟ್ಟಿಬೆಟ್ಟೆ	38969-47319

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13250	13400	13425	152.95 ಸೆಂಟ್ಸ್
ಎಸಿ	7000	6800	6725	
ಆರ್‌ಪಿ	10000	10000	10050	ಲಂಡನ್
ಆರ್‌ಸಿ	5830	240	5900	2528 ಡಾಲರ್ಸ್

ಕಣ್ಗಾವಲು ಸಮಿತಿ ಮುಂದೆ ರಿಷಿ ಸುನಕ್ ಕ್ಷಮೆಯಾಚನೆ

ಲಂಡನ್ (ಪಿಟಿಐ): ಸರ್ಕಾರದ ಬಜೆಟ್‌ನಿಂದ ಆರ್ಥಿಕ ನೆರವು ಪಡೆದು ಶಿಶುಪಾಲನಾ ಸೇವೆ ಒದಗಿಸುವ ಏಜೆನ್ಸಿಯಲ್ಲಿ ತನ್ನ ಪತ್ನಿ ಅಕ್ಷತಾ ಮೂರ್ತಿ ಹೊಂದಿರುವ ಷೇರುಗಳನ್ನು ಘೋಷಿಸುವಲ್ಲಿ ನಿರ್ಲಕ್ಷ್ಯವಹಿಸಿದ ಆರೋಪ ಹೊತ್ತಿದ್ದ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು, ಕೊನೆಗೂ ಸಂಸತ್‌ನ ಕಣ್ಗಾವಲು ಸಮಿತಿ ಮುಂದೆ ಕ್ಷಮೆಯಾಚಿಸಿದ್ದಾರೆ.

ಸರ್ಕಾರದ ನೆರವು ಪಡೆಯುವ 6 ಏಜೆನ್ಸಿಗಳ ಪೈಕಿ ‘ಕೋರು ಕಿಡ್ಸ್’ ಕೂಡ ಒಂದಾಗಿದೆ. ಅಕ್ಷತಾ ಇದರಲ್ಲಿ ಷೇರು ಹೊಂದಿದ್ದಾರೆ. ಆದರೆ, ಇದರ ಘೋಷಣೆ ಮಾಡುವಲ್ಲಿ ರಿಷಿ ಅಚಾತುರ್ಯ ಎಸಗಿದ್ದ ಬಗ್ಗೆ ಆರೋಪ ಕೇಳಿಬಂದಿತ್ತು. ಈ ಬಗ್ಗೆ ಸಂಸತ್‌ನ ಕಣ್ಗಾವಲು ಸಮಿತಿಯ ಕಮಿಷನರ್ ಡೇನಿಯಲ್ ಗ್ರೀನ್‌ಬರ್ಗ್ ತನಿಖೆ ಆರಂಭಿಸಿದ್ದರು. ರಿಷಿ ತಪ್ಪು ಎಸಗಿರುವುದು ಬುಧವಾರ ಬಿಡುಗಡೆಯಾಗಿರುವ ತನಿಖಾ ವರದಿಯಲ್ಲಿ ಬಯಲಾಗಿದೆ. ಮುಂದಿನ ನಿರ್ಧಾರಕ್ಕಾಗಿ ಇದನ್ನು ಸಂಸತ್‌ನ ಕೆಳಮನೆಗೆ ಸಲ್ಲಿಸಲಾಗಿದೆ.



ರಿಷಿ ಸುನಕ್

‘ನನ್ನ ಪತ್ನಿಯ ಷೇರುಗಳ ಬಗ್ಗೆ ವಿವರ ನೀಡುವಲ್ಲಿ ನಿಯಮಗಳ ಉಲ್ಲಂಘನೆಯಾಗಿರುವುದು ನಿಜ. ಇದಕ್ಕೆ ಕ್ಷಮೆ ಕೋರುತ್ತೇನೆ. ತಪ್ಪು ಸರಿಪಡಿಸಿಕೊಳ್ಳುವಂತೆ ಕಮಿಷನರ್ ಸಲ್ಲಿಸಿರುವ ಪ್ರಸ್ತಾವವನ್ನೂ ಒಪ್ಪಿಕೊಳ್ಳುತ್ತೇನೆ. ಇದನ್ನು ಮರುಪ್ರಶ್ನಿಸುವ ಪ್ರಮೇಯವೇ ಇಲ್ಲ’ ಎಂದು ಸಮಿತಿಗೆ ರಿಷಿ ಪತ್ರ ಬರೆದಿದ್ದಾರೆ.

‘ಮಾರ್ಚ್ 28ರಂದು ಸಂಸತ್‌ನ ಸಾಮಾನ್ಯ ಆಯ್ಕೆ ಸ್ಥಾಯಿಸಮಿತಿಯಿಂದ ನಡೆದ ವಿಚಾರಣೆಯಲ್ಲೂ ನಾನು ಮಂಡಿಸಿದ ಅಭಿಪ್ರಾಯವನ್ನು ಸಮ್ಮತಿಸಿದ್ದಕ್ಕೆ ಆಭಾರಿಯಾಗಿದ್ದೇನೆ. ಸರ್ಕಾರದ ನೀತಿ ಮತ್ತು ಕೋರು ಕಿಡ್ಸ್ ನಡುವಿನ ಆರ್ಥಿಕ ನೆರವಿನ ಬಗ್ಗೆ ನನಗೆ ಅರಿವು ಇರಲಿಲ್ಲ. ಆರೋಪ ಕೇಳಿ ಬಂದಾಗಲಷ್ಟೇ ಇದು ನನ್ನ ಗಮನಕ್ಕೆ ಬಂದಿದೆ’ ಎಂದು ವಿವರಿಸಿದ್ದಾರೆ.

ಸದನ ಅಥವಾ ಅದರ ಸಮಿತಿಗಳ ಮುಂದೆ ಸದಸ್ಯರು ಆಸ್ತಿ ಹಾಗೂ ಇತರೆ ಆದಾಯ ಮೂಲಗಳ ಬಗ್ಗೆ ಘೋಷಿಸುವಾಗ ಮುಕ್ತವಾಗಿರಬೇಕು ಎಂದು ಬ್ರಿಟನ್‌ನ ಸಂಸತ್ ನಿಯಮಗಳು ಹೇಳುತ್ತವೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹350-585
ದ್ವಿತಳಿ (ಬಿ.ವಿ)	₹340-680

ಕೊಬ್ಬರಿ ಧಾರಣೆ

ಪುತ್ತೂರು	₹4500-7300
ತಿಪಟೂರು	₹8200-8920
ತುರುವೇಕೆರೆ	₹9000-9000

ಫಿಡೆ ಚೆಸ್ ವಿಶ್ವಕಪ್ ಟೂರ್ನಿ: ಪ್ರಜ್ಞಾನಂದ 'ಕನಸಿನ ಓಟ'ಕ್ಕೆ ಅಂತಿಮ ಹಂತದಲ್ಲಿ ತಡೆ

ಕಾರ್ಲ್‌ಸನ್‌ಗೆ ಚೊಚ್ಚಲ ಕಿರೀಟ

• ಮನಿಷಾ ಮೋಹಿತೆ

ಬಾಕುನಲ್ಲಿ ನಡೆದ ಚೆಸ್ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಆರ್. ಪ್ರಜ್ಞಾನಂದ –ಪಿಟಿಐ ಚಿತ್ರಗಳು

ಮ್ಯಾಗ್ನಸ್ ಕಾರ್ಲ್‌ಸನ್ ಅವರು ಟೈಬ್ರೇಕ್ ಫೈನಲ್‌ನಲ್ಲಿ ಆರ್.ಪ್ರಜ್ಞಾನಂದ ಅವರನ್ನು 1.5–0.5 ರಿಂದ ಸೋಲಿಸಿ ತಮಗೆ ಕೈಗೆಟಕದೇ ಉಳಿದಿದ್ದ ಏಕೈಕ ಪ್ರಮುಖ ಟ್ರೋಫಿಯಾದ ವಿಶ್ವಕಪ್ ಗೆದ್ದುಕೊಂಡರು. ಮಂಗಳವಾರ ಮತ್ತು ಬುಧವಾರ ನಡೆದ ಕ್ಲಾಸಿಕಲ್ ಮಾದರಿಯ ಪಂದ್ಯಗಳು ಡ್ರಾ ಆಗಿದ್ದ ಕಾರಣ ಗುರುವಾರ ಟೈಬ್ರೇಕ್ ಪಂದ್ಯಗಳನ್ನು ನಡೆಸಲಾಯಿತು.

18 ವರ್ಷದ 'ಪ್ರಗ್ಗು' ಅವರ ಕನಸಿನ ಓಟ ಕೊನೆಗೊಂಡರೂ, ಅವರು ಅಜರ್‌ಬೈಜಾನ್‌ನ ರಾಜಧಾನಿ ಬಾಕು ನಗರದಲ್ಲಿ ನಡೆದ ಈ ಟೂರ್ನಿಯಲ್ಲಿ ಚೆಸ್ ಕೌಶಲ ಮತ್ತು ಹೋರಾಟದ ಸ್ಫೂರ್ತಿಯನ್ನು ಮೆರೆದು ಕೋಟ್ಯಂತರ ಕ್ರೀಡಾಪ್ರಿಯರ ಹೃದಯ ಗೆದ್ದರು. ಇದು ಚೆಸ್ ಲೋಕದಲ್ಲಿ ಭಾರತೀಯ ಎಳೆಯ ಆಟಗಾರನೊಬ್ಬನ ಅತ್ಯಂತ ಪ್ರೇರಣಾದಾಯಕ ಪ್ರದರ್ಶನ ಎನಿಸಿತು.

ಐದು ಬಾರಿಯ ವಿಶ್ವ ಚಾಂಪಿಯನ್ ಪಟ್ಟದ ಜೊತೆಗೆ, ದಶಕದಿಂದ ವಿಶ್ವ ಕ್ರಮಾಂಕದಲ್ಲಿ ತುತ್ತತುದಿಯಲ್ಲಿರುವ 32 ವರ್ಷದ ಕಾರ್ಲ್‌ಸನ್ ಅದಕ್ಕೆ ಅನುಗುಣವಾಗಿಯೇ ಆಡಿದರು. ಇಂದು ಆಡಿದ ಎರಡೂ ಪಂದ್ಯಗಳಲ್ಲಿ ಅವರ ಅನುಭವದ ಜೊತೆಗೆ ಚೆಸ್ ಚಾತುರ್ಯವೂ ಕಾಣಸಿಕ್ಕಿತು. ನಾಲ್ಕು ದಿನಗಳ ಹಿಂದೆಯಷ್ಟೇ ಈ ಆಟಗಾರ ಹೊಟ್ಟೆಕೆಟ್ಟು ತೊಂದರೆ ಅನುಭವಿಸಿದ್ದರು. ಬುಧವಾರವೂ ಅವರು ಕ್ಷಿಪ್ರ ಡ್ರಾಕ್ಕೆ ಮುಂದಾಗಿದ್ದರು.

ವಿರೋಚಿತ ಸಾಧನೆಯೊಡನೆ ಪ್ರಜ್ಞಾನಂದ ಅವರು ಎರಡನೇ ಸ್ಥಾನ ಪಡೆದರು. ವಿಶ್ವ ಚಾಂಪಿಯನ್ (ಪ್ರಸ್ತುತ ಚೀನಾದ ಡಿಂಗ್ ಲಿರೆನ್) ಆಟಗಾರನಿಗೆ ಸವಾಲಿಗನನ್ನು ನಿರ್ಧರಿಸಲು ನಡೆಯುವ ಎಂಟು ಆಟಗಾರರ ಕ್ಯಾಂಡಿಡೇಟ್ಸ್ ಟೂರ್ನಿಗೆ ಅವರು ಅರ್ಹತೆ ಪಡೆದರು. ವಿಶ್ವಕಪ್ ಫೈನಲ್ ಆಡಿದ ಅತಿ ಕಿರಿಯ ಆಟಗಾರ ಮತ್ತು ಭಾರತದ ಎರಡನೇ (ವಿಶ್ವನಾಥನ್ ಆನಂದ್ ಮೊದಲಿಗರು) ಆಟಗಾರ ಎಂಬ ಹಿರಿಮೆಯನ್ನು ಚಿಕ್ಕ ವಯಸ್ಸಿನಲ್ಲೇ ದಾಖಲಿಸಿದರು. ಈ ಟೂರ್ನಿಯ ಮಧ್ಯೆಯೇ (ಆಗಸ್ಟ್ 10ರಂದು) ಅವರು 18ನೇ ವರ್ಷಕ್ಕೆ ಕಾಲಿಟ್ಟಿದ್ದರು.

ಅವರು ಈ ಟೂರ್ನಿಯಲ್ಲಿ ಎರಡನೇ ಕ್ರಮಾಂಕದ ಹಿಕಾರು ನಕಾಮುರ ಮತ್ತು ಮೂರನೇ ಕ್ರಮಾಂಕದ ಫ್ಯಾಬಿಯಾನೊ ಕರುವಾನ ಅವರನ್ನು ಹೊರದೂಡಿದ್ದು ಅವರು ಸ್ಮರಣೀಯ ಸಾಧನೆಯಾಗಿದೆ.

ಮೊದಲ ಪಂದ್ಯದಲ್ಲಿ ಪ್ರಗ್ಗು ಬಿಳಿ ಕಾಯಿಗಳಲ್ಲಿ ಆಡಿದ್ದು, ಓಪನಿಂಗ್ ಹಂತದಲ್ಲಿ ಕಾರ್ಲ್‌ಸನ್ ಸಾಕಷ್ಟು ಸಮಯ ತೆಗೆದುಕೊಂಡು ಕಾಯಿಗಳನ್ನಿರಿಸಿದರು. ಭಿನ್ನವಾದ ನಡೆಗಳನ್ನಿಟ್ಟು ಎದುರಾಳಿ ರಾಜನತ್ತ ದಾಳಿ ನಡೆಸಿದರು. ಸಮಯದ ಒತ್ತಡದಲ್ಲಿದ್ದರೂ, ಅವರ 15ನೇ ನಡೆ ಸಾಹಸದ್ದಾಗಿದ್ದು, ಪ್ರಜ್ಞಾನಂದ ಅವರಿಗೆ ಚುರುಕುಮುಟ್ಟಿಸಿತು. ಕ್ವೀನ್‌ಗಳು ಬೋರ್ಡ್‌ನಿಂದ ಇಳಿದವು. ಈ ಹಂತದಲ್ಲಿ ಕಾರ್ಲ್‌ಸನ್ ಅವರ ಕೌಶಲ ಮೆರೆದರು. ರೂಕ್ (ಆನೆ) ಮೂಲಕ ದಾಳಿ ನಡೆಸಿ ಎದುರಾಳಿಗೆ ತಲೆನೋವು ತಂದರು. 47ನೇ ನಡೆಯಲ್ಲಿ ಚೆಕ್‌ಮೇಟ್ ಬಲೆಗೆ ಕೆಡವಿದರು.

ಎರಡನೇ ಪಂದ್ಯದಲ್ಲಿ ಕಾರ್ಲ್‌ಸನ್ ಅವರನ್ನು ಕಪ್ಪು ಕಾಯಿಗಳಲ್ಲಿ ಆಡಿ ಸೋಲಿಸುವುದು ಪ್ರಜ್ಞಾನಂದ ಅವರ ಪಾಲಿಗೆ ಸವಾಲೇ ಆಗಿತ್ತು. ಆರಂಭದಿಂದಲೇ ಕಾರ್ಲ್‌ಸನ್ ಎದುರಾಳಿ ದಾಳಿಗಿಳಿಯದಂತೆ ನಿಯಂತ್ರಿಸಿದರು.

ಮುಖ್ಯಾಂಶಗಳು

- ಕಾರ್ಲ್‌ಸನ್‌ಗೆ ಟ್ರೋಫಿ ಜೊತೆ ₹91 ಲಕ್ಷ ನಗದು ಬಹುಮಾನ
- ಪ್ರಜ್ಞಾನಂದಗೆ ₹66 ಲಕ್ಷ ನಗದು ಬಹುಮಾನ
- ಕರುವಾನಗೆ ಮೂರನೇ ಸ್ಥಾನ

23ನೇ ನಡೆಯಲ್ಲಿ ರೂಕ್, ನೈಟ್, ಬಿಷಪ್ ಮತ್ತು ನಾಲ್ಕು ಕಾಲಾಳುಗಳು ಉಳಿದಿದ್ದು ನಿರ್ಣಾಯಕ ಫಲಿತಾಂಶದ ಸಾಧ್ಯತೆ ಇಲ್ಲದ ಕಾರಣ ಪ್ರಜ್ಞಾನಂದ 'ಕದನ ವಿರಾಮ'ಕ್ಕೆ ಸಹಿಹಾಕಿದರು.

ಮೂರನೇ ಸ್ಥಾನ: ಪ್ರಜ್ಞಾನಂದ ಎದುರು ಸೆಮಿಫೈನಲ್‌ನಲ್ಲಿ ಸೋತಿದ್ದ ಅಮೆರಿಕದ ಆಟಗಾರ ಫ್ಯಾಬಿಯಾನೊ ಕರುವಾನ ಅವರು ಆತಿಥೇಯ ಆಟಗಾರ ನಿಜತ್ ಅಬಸೋವ್ ಅವರನ್ನು ಟೈಬ್ರೇಕ್‌ನಲ್ಲಿ ಮಣಿಸಿ ಮೂರನೇ ಸ್ಥಾನ ಪಡೆದರು.

ಮೊದಲ ಮೂರು ಸ್ಥಾನ ಪಡೆದ ಆಟಗಾರರು ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡಲು ಅವಕಾಶ ಪಡೆಯುತ್ತಾರೆ. ಕಾರ್ಲ್‌ಸನ್ ಆಡದಿದ್ದರೆ, ನಾಲ್ಕನೇ ಸ್ಥಾನದಲ್ಲಿ ಟೂರ್ನಿ ಮುಗಿಸಿದ ಅಬಸೋವ್ ಅವರಿಗೆ ಅವಕಾಶವಾಗಲಿದೆ.

ಡ್ರ್ಯಾಗನ್ಸ್‌ಗೆ ಮಣಿದ ಲಯನ್ಸ್

ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿ: ತಿಪ್ಪಾರೆಡ್ಡಿ ಮಿಂಚು

ಪ್ರಜಾವಾಣಿ ವಾರ್ತೆ

ತಿಪ್ಪಾ ರೆಡ್ಡಿ ಬ್ಯಾಟಿಂಗ್

ಬೆಂಗಳೂರು: ಎಡಗೈ ಬ್ಯಾಟರ್ ತಿಪ್ಪಾರೆಡ್ಡಿ ಅಮೋಘ ಬ್ಯಾಟಿಂಗ್ ಬಲದಿಂದ ಮಂಗಳೂರು ಡ್ರ್ಯಾಗನ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮಂಗಳೂರು ತಂಡವು 15 ರನ್‌ಗಳಿಂದ ಶಿವಮೊಗ್ಗ ಲಯನ್ಸ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ಶಿವಮೊಗ್ಗ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಂಗಳೂರು ತಂಡವು ಆರಂಭದಲ್ಲಿಯೇ ಆಘಾತ ಅನುಭವಿಸಿತು. ಆದರೆ, ನಾಲ್ಕನೇ ಕ್ರಮಾಂಕದ ಬ್ಯಾಟರ್ ತಿಪ್ಪಾರೆಡ್ಡಿ (82; 47ಎ, 4X11, 6X2) ಮತ್ತು ಅನಿರುದ್ಧ ಜೋಶಿ (34; 20ಎ, 4X4, 6X1) ತಂಡಕ್ಕೆ ಆಸರೆಯಾದರು. ಇದರಿಂದಾಗಿ ಮಂಗಳೂರು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 191 ರನ್ ಗಳಿಸಿತು. ಇದಕ್ಕುತ್ತರವಾಗಿ ಶಿವಮೊಗ್ಗ ಲಯನ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 176 ರನ್ ಗಳಿಸಿ ಸೋತಿತು.

ಬೆಂಗಳೂರಿಗೆ ಮತ್ತೊಂದು ಸೋಲು: ಮಯಂಕ್ ಅಗರವಾಲ್ ನಾಯಕತ್ವದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಸತತ ಎರಡನೇ ಪಂದ್ಯದಲ್ಲಿ ಸೋತಿತು. ಗುರುವಾರ ನಡೆದ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ತಂಡವು 5 ವಿಕೆಟ್‌ಗಳಿಂದ ಬೆಂಗಳೂರು ತಂಡವನ್ನು ಸೋಲಿಸಿತು.

ಅಭಿಲಾಷ್ ಶೆಟ್ಟಿ (19ಕ್ಕೆ3) ಮತ್ತು ಡಿ. ಅವಿನಾಶ್ (22ಕ್ಕೆ3) ಅವರ ಅಮೋಘ ಬೌಲಿಂಗ್ ಬಲದಿಂದ ಗುಲ್ಬರ್ಗ ತಂಡವು ಬೆಂಗಳೂರನ್ನು 113 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿತು. ಗುರಿ ಬೆನ್ನಟ್ಟಿದ ಗುಲ್ಬರ್ಗ ತಂಡವು 14.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 114 ರನ್ ಗಳಿಸಿ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 191 (ತಿಪ್ಪಾರೆಡ್ಡಿ 82, ಅನಿರುದ್ಧ ಜೋಶಿ 34, ಶ್ರೇಯಸ್ ಗೋಪಾಲ್ 35ಕ್ಕೆ2, ಆದಿತ್ಯ ಸೋಮಣ್ಣ 38ಕ್ಕೆ3) **ಶಿವಮೊಗ್ಗ ಲಯನ್ಸ್:** 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 176 (ರೋಹನ್ ಕದಂ 25, ಕೆ. ರೋಹಿತ್ ಕುಮಾರ್ 23, ಅಭಿನವ್ ಮನೋಹರ್ 25, ಪ್ರಣವ್ ಭಾಟಿಯಾ 39, ಕ್ರಾಂತಿಕುಮಾರ್ 21, ಸಂಕಲ್ಪ ಶೆಟ್ಟೆಣ್ಣವರ 37ಕ್ಕೆ2, ಆನಂದ ದೊಡ್ಡಮನಿ 31ಕ್ಕೆ2, ಪಾರಸ್ ಗುರುಬಕ್ಷ್ ಆರ್ಯ 29ಕ್ಕೆ2) **ಫಲಿತಾಂಶ:** ಮಂಗಳೂರು ಡ್ರ್ಯಾಗನ್ಸ್‌ಗೆ 15 ರನ್ ಜಯ.

ಬೆಂಗಳೂರು ಬ್ಲಾಸ್ಟರ್ಸ್: 19.3 ಓವರ್‌ಗಳಲ್ಲಿ 113 (ಡಿ. ನಿಶ್ಚಲ್ 36, ಮಯಂಕ್ ಅಗರವಾಲ್ 15, ಸೂರಜ್ ಅಹುಜಾ 15, ಅಮನ್ ಖಾನ್ [illegible] 18, ಅಭಿಲಾಷ್ ಶೆಟ್ಟಿ 19ಕ್ಕೆ3, ಶರಣ್ ಗೌಡ 28ಕ್ಕೆ2, ಡಿ. ಅವಿನಾಶ್ 22ಕ್ಕೆ3) **ಗುಲ್ಬರ್ಗ ಮಿಸ್ಟಿಕ್ಸ್:** 14.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 114 (ಎಲ್.ಆರ್. ಚೇತನ್ 18, [illegible] 28, ಆರ್. ಸ್ಮರಣ್ 29, ಶುಭಾಂಗ್ ಹೆಗ್ಡೆ 28ಕ್ಕೆ1) **ಫಲಿತಾಂಶ:** ಗುಲ್ಬರ್ಗ ಮಿಸ್ಟಿಕ್ಸ್‌ಗೆ 5 ವಿಕೆಟ್ ಜಯ.

ಇಂದಿನ ಪಂದ್ಯಗಳು

ಮೈಸೂರು ವಾರಿಯರ್ಸ್–ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 1); ಶಿವಮೊಗ್ಗ ಲಯನ್ಸ್–ಹುಬ್ಬಳ್ಳಿ ಟೈಗರ್ಸ್ (ಸಂಜೆ 5.30); **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್

'ಪ್ರಗ್ಗು' ಸಾಧನೆ: ಮೋದಿ ಅಭಿನಂದನೆ

ಚೆನ್ನೈ: 'ಫಿಡೆ ಚೆಸ್ ವಿಶ್ವಕಪ್‌ನಲ್ಲಿ ಪ್ರಜ್ಞಾನಂದ ಅವರ ಅಸಾಧಾರಣ ಸಾಧನೆ ನಮಗೆಲ್ಲಾ ಹೆಮ್ಮೆ ಮೂಡಿಸಿದೆ. ತಮ್ಮ ಕೌಶಲಗಳ ಮೂಲಕ ಪ್ರಬಲ ಆಟಗಾರ ಕಾರ್ಲ್‌ಸನ್ ಅವರಿಗೆ ಕಠಿಣ ಹೋರಾಟ ನೀಡಿದರು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದನೆ ಸಲ್ಲಿಸಿದ್ದಾರೆ.

'ಅವರಿಗೆ ಮುಂಬರುವ ಟೂರ್ನಿಗಳಲ್ಲಿ ಶುಭಹಾರೈಸುವೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೂ ವಿಶ್ವಕಪ್ ರನ್ನರ್ ಅಪ್ ಪ್ರಜ್ಞಾನಂದ ಅವರನ್ನು ಅಭಿನಂದಿಸಿದ್ದಾರೆ.

ಕ್ರಿಕೆಟ್ ಕಣ್ಮಣಿ ಸಚಿನ್ ತೆಂಡೂಲ್ಕರ್, ಮಾಜಿ ಕೇಂದ್ರ ಸಚಿವ ಹಾಗೂ ಒಲಿಂಪಿಕ್ ಶೂಟಿಂಗ್ ಬೆಳ್ಳಿ ವಿಜೇತ ರಾಜ್ಯವರ್ಧನ್ ಸಿಂಗ್ ರಾಥೋಡ್, ಚೆಸ್ ಪ್ರಿಯ ಕ್ರಿಕೆಟಿಗ ಯಜುವೇಂದ್ರ ಚಾಹಲ್ ಅಭಿನಂದನೆ ಸಲ್ಲಿಸಿದ್ದಾರೆ.

* * *

ಸ್ವಯಂ ಸಿದ್ಧತೆ ಮಾಡುತ್ತಿದ್ದ ಪ್ರಗ್ಗು: ಚೆನ್ನೈ (ಪಿಟಿಐ): 'ವಿಶ್ವಕಪ್‌ನಲ್ಲಿ ಇಷ್ಟೆಲ್ಲಾ ಒತ್ತಡದಲ್ಲೂ ಪ್ರಜ್ಞಾನಂದ ಸಂಯಮದಿಂದ ಇದ್ದು ತನ್ನ ದಿನಚರಿಯ ಜೊತೆಗೆ ಆಟದ ತಯಾರಿಯನ್ನೂ ತಾನೇ ಮಾಡಿಕೊಳ್ಳುತ್ತಿದ್ದ. ನಾನು ವಾಟ್ಸ್‌ಆ್ಯಪ್‌ನಲ್ಲಿ ಸಂವಹನ ನಡೆಸುತ್ತಿದ್ದೆ' ಎಂದು ಅವರ ಕೋಚ್ ಆರ್.ಬಿ.ರಮೇಶ್ ಹೇಳಿದ್ದಾರೆ.

ಪ್ರಜ್ಞಾನಂದ ಬಾಕುವಿನಲ್ಲಿ ಇದ್ದರೆ, ಅವರ ಕೋಚ್ ರುಮೇನಿಯಾದ ಬುಕಾರೆಸ್ಟ್‌ನಲ್ಲಿದ್ದರು. 'ಪ್ರಗ್ಗು ಜೊತೆಗೆ ತಾಯಿ ನಾಗಲಕ್ಷ್ಮಿ ಅವರಿದ್ದರೂ, ಆಟಕ್ಕೆ ಬೇಕಾದ ತಂತ್ರಗಳನ್ನು ತಾನೇ ಹೆಣೆಯುತ್ತಿದ್ದ' ಎಂದರು.

* * *

ತೇಜ್ ಮೆಚ್ಚುಗೆ: 'ಪ್ರಜ್ಞಾನಂದ ಅವರು ಆಟದಲ್ಲಿ ಹಿನ್ನಡೆ ಕಂಡಾಗಲೂ ಎದುರಾಳಿಗಳಿಗೆ ಪಂದ್ಯವನ್ನು ಸುಲಭವಾಗಿ ಬಿಟ್ಟುಕೊಡುತ್ತಿರಲಿಲ್ಲ. ರಕ್ಷಣೆ ಮಾಡಿ ನಂತರ ಪಂದ್ಯ ಗೆದ್ದ ಹಲವು ಉದಾಹರಣೆಗಳಿವೆ' ಎಂದು ಕರ್ನಾಟಕದ ಮೊದಲ ಜಿಎಂ ಎಂ.ಎಸ್. ತೇಜಕುಮಾರ್ ಹೇಳಿದ್ದಾರೆ.

ಆದರೆ ಕಾರ್ಲ್‌ಸನ್ ಮೂರೂ ಮಾದರಿಯಲ್ಲಿ ವಿಶ್ವ ಚಾಂಪಿಯನ್ ಆದವರು. ಹೀಗಾಗಿ ಅವರನ್ನು ಸೋಲಿಸುವುದು ಸುಲಭವೂ ಆಗಿರಲಿಲ್ಲ ಎಂದು ಹೇಳಿದರು.

ಆಲೂರಿನಲ್ಲಿ ಭಾರತ ತಂಡದ ಆಟಗಾರರಿಗೆ ದೈಹಿಕ ಸಾಮರ್ಥ್ಯ ಪರೀಕ್ಷೆ

ಯೋ ಯೋ ಟೆಸ್ಟ್‌ನಲ್ಲಿ ಕಿಂಗ್ ಕೊಹ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಯೋ ಯೋ ಫಿಟ್‌ನೆಸ್ ಟೆಸ್ಟ್‌ನಲ್ಲಿ ಅತಿ ಹೆಚ್ಚು ಅಂಕ ಪಡೆದಿದ್ದಾರೆ.

ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದ ಆಟಗಾರರಿಗೆ ಗುರುವಾರ ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರಿಕೆಟ್ ಮೈದಾನದಲ್ಲಿ ನಡೆದ ಯೋ ಯೋ ಟೆಸ್ಟ್‌ನಲ್ಲಿ ವಿರಾಟ್ 17.2 ಅಂಕಗಳನ್ನು ಗಳಿಸಿದರು.

ಅವರು ಬಿಸಿಸಿಐ ನಿಗದಿ ಮಾಡಿರುವ ಅರ್ಹತಾ ಮಟ್ಟವನ್ನು (16.5 ಅಂಕ) ಮೀರಿನಿಲ್ಲುವಲ್ಲಿ ಯಶಸ್ವಿಯಾದರು ಎಂದು ಮೂಲಗಳು ತಿಳಿಸಿವೆ. ಆರು ದಿನಗಳವರೆಗೆ ಇಲ್ಲಿ ಆರೋಗ್ಯ, ಫಿಟ್‌ನೆಸ್ ಮತ್ತು ಕೌಶಲ ಪರೀಕ್ಷಾ ಶಿಬಿರ ನಡೆಯಲಿದೆ. ಈ ಪರೀಕ್ಷೆಯಲ್ಲಿ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಉಪನಾಯಕ ಹಾರ್ದಿಕ್ ಪಾಂಡ್ಯ ಕೂಡ ಭಾಗವಹಿಸಿದ್ದರು.

'ಪರೀಕ್ಷೆಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಬಿಸಿಸಿಐಗೆ ವರದಿಯನ್ನು ಶೀಘ್ರದಲ್ಲಿ ಸಲ್ಲಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಐರ್ಲೆಂಡ್‌ನಲ್ಲಿ ನಡೆದ ಟಿ20 ಕ್ರಿಕೆಟ್ ಸರಣಿಯಲ್ಲಿ ಆಡಿದ ಜಸ್‌ಪ್ರೀತ್ ಬೂಮ್ರಾ, ಪ್ರಸಿದ್ಧಕೃಷ್ಣ, ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಶುಕ್ರವಾರ ಬೆಂಗಳೂರಿಗೆ ಮರಳುತ್ತಿದ್ದಾರೆ. ಅವರಿಗೆ ಯೋ ಯೋ ಟೆಸ್ಟ್ ಬದಲು ಕೌಶಲ ಟೆಸ್ಟ್ ನೀಡಬೇಕಿದೆ.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಗುರುವಾರ ಯೋ ಯೋ ಟೆಸ್ಟ್ ನಲ್ಲಿ ಭಾಗವಹಿಸಿದ್ದ ವಿರಾಟ್ ಕೊಹ್ಲಿ –ಇನ್‌ಸ್ಟಾಗ್ರಾಂ ಚಿತ್ರ

ಈ ಶಿಬಿರದಲ್ಲಿ ಎಲ್ಲ ಆಟಗಾರರ ಆರೋಗ್ಯ ತಪಾಸಣೆಯನ್ನೂ ಮಾಡಲಾಗುತ್ತಿದೆ. ಲಿಪಿಡ್ ಪ್ರೊಫೈಲ್, ರಕ್ತದಲ್ಲಿ ಸಕ್ಕರೆ ಪ್ರಮಾಣ (ಊಟದ ಮುನ್ನ ಮತ್ತು ನಂತರ) ಯೂರಿಕ್ ಆಮ್ಲ, ಕ್ಯಾಲ್ಸಿಯಂ, ವಿಟಮಿನ್ ಬಿ12 ಮತ್ತು ಡಿ, ಕ್ರಿಯೆಟಿನೈನ್, ಟೆಸ್ಟೊಸ್ಟೆರಾನ್ ಮತ್ತು ಡೆಕ್ಸಾ ಟೆಸ್ಟ್‌ಗಳನ್ನು ಮಾಡಲಾಗುತ್ತಿದೆ.

ಗಾಯದಿಂದಾಗಿ ದೀರ್ಘ ಕಾಲದಿಂದ ಆಟದಂಗಳದಿಂದ ಹೊರಗುಳಿದಿರುವ ಕೆ.ಎಲ್. ರಾಹುಲ್ ಅವರ ದೈಹಿಕ ಸಾಮರ್ಥ್ಯದ ಬಗ್ಗೆ ಬಿಸಿಸಿಐ ಹೆಚ್ಚು ನಿಗಾ ವಹಿಸಿದೆ.

ಗಾಯದಿಂದ ಚೇತರಿಸಿಕೊಂಡಿರುವ ಅವರನ್ನು ಏಷ್ಯಾ ಕಪ್ ಟೂರ್ನಿಯಲ್ಲಿ ಆಡುವ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಅವರಿಗೆ ಮತ್ತೆ ಸಣ್ಣಪ್ರಮಾಣದ ಗಾಯದ ಸಮಸ್ಯೆ ಕಾಣಿಸಿಕೊಂಡಿತ್ತು. ಆದರೆ ಹಳೆಯ ಗಾಯದ ಸಮಸ್ಯೆಗೆ ಅದು ಸಂಬಂಧಿಸಿದ್ದಾಗಿರಲಿಲ್ಲ. ಒಂದೊಮ್ಮೆ ರಾಹುಲ್ ಫಿಟ್ ಆಗದಿದ್ದರೆ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವಕಾಶ ಪಡೆಯುವ ಸಾಧ್ಯತೆ ಇದೆ. ಆದರೆ ರಾಹುಲ್ ಬ್ಯಾಟಿಂಗ್ ಕೌಶಲ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದಾರೆಂದು ಎನ್‌ಸಿಎ ಮೂಲಗಳು ತಿಳಿಸಿವೆ. ಇದೇ 29ರಂದು ಈ ಶಿಬಿರವು ಮುಕ್ತಾಯವಾಗಲಿದೆ. 30ರಂದು ತಂಡವು ಕೊಲಂಬೊಗೆ ತೆರಳುವ ಸಾಧ್ಯತೆ ಇದೆ.

ಬಿಯುಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಬೆಂಗಳೂರು ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ 3–1ರಿಂದ ಯಂಗ್ ಚಾಲೆಂಜರ್ಸ್ ತಂಡವನ್ನು ಮಣಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಬಿಯುಎಫ್‌ಸಿ ತಂಡವು 2 ಗೋಲುಗಳ ಅಂತರದ ಜಯ ಸಾಧಿಸಿತು. ಆ ತಂಡದ ಎಚ್. ಬಿಶಾಲ್ (38ನೇ), ಇ. ಲಾಲ್ರೆಮ್ ರುವಾಟಾ (44ನೇ) ಸನ್ನಿ ಕುಮಾರ್ (63ನೇ) ತಲಾ ಒಂದು ಗೋಲು ಗಳಿಸಿದರೆ, ಚಾಲೆಂಜರ್ಸ್ ತಂಡದ ಪರ ಏಕೈಕ ಗೋಲನ್ನು ಶಾಮಿಲ್ ಶಮ್ನಾಸ್ (90+3ನೇ) ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು 1–1ರಿಂದ ಕೊಡಗು ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

ಸ್ಟೂಡೆಂಟ್ಸ್ ತಂಡದ ಆದಿತ್ಯ ಪ್ರತಾಪ್ ಸಿಂಗ್ (29ನೇ), ಕೊಡಗು ತಂಡದ ಜೆಮ್ಸೀಡ್ ಅಲಿ (85ನೇ) ತಲಾ ಒಂದು ಗೋಲು ಗಳಿಸಿದರು.

ಸೆಮಿಫೈನಲ್‌ಗೆ ನಾರ್ತ್ ಈಸ್ಟ್ ತಂಡ

ಗುವಾಹಟಿ: ಕೊನ್ಸಮ್ ಫಲ್ಗುಣಿ ಸಿಂಗ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು 132ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಂಡಿಯನ್ ಆರ್ಮಿ ಫುಟ್‌ಬಾಲ್ ತಂಡವನ್ನು ಮಣಿಸಿ, ಸೆಮಿಫೈನಲ್ ಪ್ರವೇಶ ಪಡೆಯಿತು.

ಇಲ್ಲಿನ ಇಂದಿರಾ ಗಾಂಧಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಮೊದಲ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಾರ್ತ್ ಈಸ್ಟ್ ತಂಡವು ಒಂದು ಗೋಲಿನ ಅಂತರದಿಂದ ಜಯ ಸಾಧಿಸಿತು.

ದ್ವಿತೀಯಾರ್ಧದಲ್ಲಿ ಕೊನ್ಸಮ್ ಫಲ್ಗುಣಿ ಸಿಂಗ್ (51ನೇ) ಗೆಲುವಿನ ಗೋಲು ದಾಖಲಿಸಿದರು. ಆ ಮುನ್ನಡೆಯನ್ನು ಕೊನೆಯವರೆಗೂ ಉಳಿಸುವಲ್ಲಿ ನಾರ್ತ್ ಈಸ್ಟ್ ತಂಡದ ಆಟಗಾರರು ಯಶಸ್ವಿಯಾದರು.

₹ 7,800 ಕೋಟಿ ಮೌಲ್ಯದ ಸೇನಾ ಪರಿಕರ ಖರೀದಿಗೆ ಒಪ್ಪಿಗೆ

ನವದೆಹಲಿ: ಸೇನೆಯ ಶಸ್ತ್ರಾಸ್ತ್ರ ಕಾರ್ಯಾಚರಣೆಯ ಸಾಮರ್ಥ್ಯವನ್ನು ವೃದ್ಧಿಸುವ ಕ್ರಮವಾಗಿ ₹ 7,800 ಕೋಟಿ ಮೌಲ್ಯದ ಶಸ್ತ್ರಾಸ್ತ್ರ, ಪರಿಕರಗಳ ಖರೀದಿಗೆ ರಕ್ಷಣಾ ಸಚಿವಾಲಯದ ರಕ್ಷಣಾ ಖರೀದಿ ಮಂಡಳಿಯು (ಡಿಎಸಿ) ಗುರುವಾರ ಅನುಮೋದನೆ ನೀಡಿದೆ.

ಎಂಐ–17 ವಿ5 ಹೆಲಿಕಾಪ್ಟರ್‌ಗಳಲ್ಲಿ ಬ್ಯಾಟರಿ ಬಾಳಿಕೆ ಅವಧಿಯನ್ನು ವೃದ್ಧಿಸುವ, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸಂಸ್ಥೆಯು ಅಭಿವೃದ್ಧಿ ಪಡಿಸಿರುವ ವಿದ್ಯುನ್ಮಾನ ವಾರ್‌ಫೇರ್ ಸ್ಯೂಟ್ ಕೂಡಾ ಈ ಪರಿಕರಗಳಲ್ಲಿ ಪ್ರಮುಖವಾಗಿ ಸೇರಿದೆ.

ನೆಲದಲ್ಲಿ ಕಾರ್ಯಾಚರಣೆ ನಡೆಸುವ ಯಾಂತ್ರಿಕೃತ ಇನ್‌ಫೆಂಟ್ರಿ ಮತ್ತು ಶಸ್ತ್ರಸಜ್ಜಿತ ರೆಜಿಮೆಂಟ್‌ಗಳಿಗಾಗಿ ಮೊದಲ ಹಂತದಲ್ಲಿ ಸೇನಾ ಪರಿಕರ ಖರೀದಿಸುವ ಪ್ರಸ್ತಾವಕ್ಕೂ ಡಿಎಸಿ ಅನುಮೋದನೆ ನೀಡಿದೆ. ಮಾನವರಹಿತ ಕಣ್ಗಾವಲು ವ್ಯವಸ್ಥೆ, ಶಸ್ತ್ರಾಸ್ತ್ರಗಳ ಸಾಗಣೆ– ವಿತರಣೆ ಚಟುವಟಿಕೆ ಹಾಗೂ ಇಂಧನ, ಬಿಡಿಭಾಗಗಳ ಖರೀದಿ ಇದರಲ್ಲಿ ಸೇರಿದೆ. 7.62x51 ಎಂ.ಎಂ ಹಗುರ ಮಷಿನ್ ಗನ್‌ಗಳು, ನೌಕಾಪಡೆಗೆ ಬಳಸಲು ಎಂಎಚ್–60ಆರ್ ಹೆಲಿಕಾಪ್ಟರ್‌ಗಳಿಗಾಗಿ ಶಸ್ತ್ರಾಸ್ತ್ರಗಳ ಖರೀದಿ, ಯಾಂತ್ರಿಕೃತ ಪಡೆಗಳ ಕ್ಷಿಪ್ತ ಚಲನೆಗಾಗಿ ಒತ್ತು ನೀಡುವ ಬ್ರಿಜ್ ಲೇಯಿಂಗ್ ಟ್ಯಾಂಕ್‌ಗಳ ಖರೀದಿಯೂ ಇದರಲ್ಲಿ ಸೇರಿದೆ.

ಪ್ರಾಜೆಕ್ಟ್ ಶಕ್ತಿ ಯೋಜನೆಯಡಿ ಲ್ಯಾಪ್‌ಟಾಪ್ ಮತ್ತು ಟ್ಯಾಬ್ಲೆಟ್‌ಗಳ ಖರೀದಿಗೂ ಡಿಎಸಿ ಸಮ್ಮತಿಸಿದೆ. ಈ ಎಲ್ಲವನ್ನು ದೇಶೀಯ ಉತ್ಪಾದಕರಿಂದಲೇ ಖರೀದಿಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಶೇ 25ರಷ್ಟು ವಿದ್ಯಾರ್ಥಿಗಳಿಗೆ ಸಿಗದ ಶಿಷ್ಯವೇತನ: ಸಮೀಕ್ಷೆ

ನವದೆಹಲಿ (ಪಿಟಿಐ): 'ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ನಾತಕೋತ್ತರ ವೈದ್ಯಕೀಯ ಪದವಿ ವಿದ್ಯಾರ್ಥಿಗಳ ಪೈಕಿ ಶೇ 25ರಷ್ಟು ವಿದ್ಯಾರ್ಥಿಗಳಿಗೆ ಶಿಷ್ಯವೇತನ (ಸ್ಟೈಪೆಂಡ್) ಸಿಗುತ್ತಿಲ್ಲ' ಎನ್ನುವ ಅಂಶ ರಾಷ್ಟ್ರೀಯ ವೈದ್ಯಕೀಯ ಆಯೋಗದ ಸಮೀಕ್ಷೆಯಲ್ಲಿ (ಎನ್‌ಎಂಸಿ) ಗೊತ್ತಾಗಿದೆ.

'ತಮ್ಮ ತಮ್ಮ ರಾಜ್ಯಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ದೊರೆಯುವ ಸ್ಟೈಪೆಂಡ್ ಮೊತ್ತಕ್ಕೆ ಸಮನಾಗಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸ್ಟೈಪೆಂಡ್ ದೊರೆಯುತ್ತಿಲ್ಲ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಶೇ 50ರಷ್ಟು ವಿದ್ಯಾರ್ಥಿ ಗಳು ಹೇಳಿದ್ದಾರೆ' ಎಂದು ಗುರುವಾರ ಎನ್‌ಎಂಸಿ ಹಂಚಿಕೊಂಡಿರುವ ಸಮೀಕ್ಷೆಯಲ್ಲಿ ತಿಳಿದುಬಂದಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪದವಿ ಇಂಟರ್ನಿಗಳು ಮತ್ತು ಸ್ನಾತಕೋತ್ತರ ವೈದ್ಯಕೀಯ ಪದವಿ ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ಕುರಿತು ಎನ್‌ಎಂಸಿ ಗೂಗಲ್ ಫಾರ್ಮ್‌ಗಳ ಮೂಲಕ ಆನ್‌ಲೈನ್ ಸಮೀಕ್ಷೆಯನ್ನು ನಡೆಸಿತ್ತು.

ಸಮೀಕ್ಷೆಯಲ್ಲಿ ಒಟ್ಟು 10,178 ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿದ್ದಾರೆ. ಇದರಲ್ಲಿ 7,901 ವಿದ್ಯಾರ್ಥಿಗಳು 19 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಸೇರಿದ್ದಾರೆ.

7,901 ವಿದ್ಯಾರ್ಥಿಗಳ ಪೈಕಿ 2,110 ವಿದ್ಯಾರ್ಥಿ ಗಳು ತಮಗೆ ಸ್ಟೈಪೆಂಡ್ ಸಿಗುತ್ತಿಲ್ಲವೆಂದಿದ್ದಾರೆ. 4,288 ವಿದ್ಯಾರ್ಥಿಗಳು ತಮಗೆ ತಮ್ಮ ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ದೊರೆಯುವಷ್ಟು ಸಮಾನ ಮೊತ್ತದ ಸ್ಟೈಪೆಂಡ್ ಸಿಗುತ್ತಿಲ್ಲ ಎಂದು ದೂರಿದ್ದಾರೆ.

ವಿಶೇಷ ಸ್ಥಾನಮಾನ: 'ಸುಪ್ರೀಂ'ನಲ್ಲಿ ಕೇಂದ್ರದ ವಾದ

'ಸಾಂವಿಧಾನಿಕ ಲೋಪವಾಗಿಲ್ಲ'

ನವದೆಹಲಿ (ಪಿಟಿಐ): 'ಸಂವಿಧಾನದ 370ನೇ ವಿಧಿಯಡಿ ಈ ಹಿಂದಿನ ಜಮ್ಮು–ಕಾಶ್ಮೀರ ರಾಜ್ಯಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವಲ್ಲಿ ಸಾಂವಿಧಾನಿಕ ಲೋಪವಾಗಿಲ್ಲ' ಎಂದು ಸುಪ್ರೀಂಕೋರ್ಟ್‌ನಲ್ಲಿ ಕೇಂದ್ರ ಸರ್ಕಾರ ಗುರುವಾರ ಪ್ರತಿಪಾದಿಸಿದೆ.

ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, 'ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವುದು ಅಗತ್ಯವಾಗಿತ್ತು. ಈ ವಿಚಾರವಾಗಿ ಅನುಸರಿಸಿದ್ದ ಪ್ರಕ್ರಿಯೆಯಲ್ಲಿ ಯಾವುದೇ ದೋಷಗಳಿರಲಿಲ್ಲ' ಎಂದು ಹೇಳಿದರು.

ಸಂವಿಧಾನದ 370ನೇ ವಿಧಿಯಡಿ ಈ ಹಿಂದಿನ ಜಮ್ಮು–ಕಾಶ್ಮೀರ ರಾಜ್ಯಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಕೇಂದ್ರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಪೀಠ ನಡೆಸಿತು.

'ವಿಶೇಷ ಸ್ಥಾನಮಾನ ಹಿಂಪಡೆಯಲು ಅನುಸರಿಸಿದ ಮಾರ್ಗ ಸಮಂಜಸವಾಗಿರಬೇಕು' ಎಂದು ಸಿಜೆಐ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ವೆಂಕಟರಮಣಿ, 'ಈ ವಿಷಯದಲ್ಲಿ ಪ್ರಕ್ರಿಯೆಗಳನ್ನು ಅನುಸರಿಸಲಾಗಿದೆ. ಅರ್ಜಿದಾರರು ಆರೋಪಿಸಿರುವಂತೆ ಯಾವುದೇ ಸಾಂವಿಧಾನಿಕ ಲೋಪವಾಗಿಲ್ಲ' ಎಂದರು.

'370ನೇ ವಿಧಿಯ ಕಲಂ 2ರಡಿ ಇದ್ದ 'ಸಂವಿಧಾನ ರಚನಾ ಸಭೆ' ಎಂಬ ಪದವನ್ನು 2019ರ ಆಗಸ್ಟ್ 5ರಂದು 'ಶಾಸಕಾಂಗ ಸಭೆ' ಎಂಬುದಾಗಿ ಬದಲಾಯಿಸಲಾಯಿದ್ದು ಹೇಗೆ ಎಂಬುದನ್ನು ವಿವರಿಸಿ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಉದ್ದೇಶಿಸಿ ಚಂದ್ರಚೂಡ್ ಹೇಳಿದರು.

'ಸಾಂವಿಧಾನಿಕ ಸಂಸ್ಥೆಗಳಾದ ರಾಜ್ಯ ಸರ್ಕಾರ ಮತ್ತು ರಾಷ್ಟ್ರಪತಿ ಪರಸ್ಪರ ಸಮಾಲೋಚನೆ ನಡೆಸುವ ಮೂಲಕ, ಸಂವಿಧಾನದ ಯಾವುದೇ ಭಾಗಕ್ಕೆ ತಿದ್ದುಪಡಿ ತರಬಹುದು ಹಾಗೂ ಅದನ್ನು ಅಗತ್ಯಕ್ಕೆ ತಕ್ಕಂತೆ ಜಮ್ಮು–ಕಾಶ್ಮೀರಕ್ಕೆ ಅನ್ವಯಿಸಬಹುದು' ಎಂದು ಮೆಹ್ತಾ ಹೇಳಿದರು.

ವಾದ ಮಂಡನೆ ಅಪೂರ್ಣವಾದ ಹಿನ್ನೆಲೆಯಲ್ಲಿ ನ್ಯಾಯಪೀಠವು ವಿಚಾರಣೆಯನ್ನು ಆಗಸ್ಟ್ 28ಕ್ಕೆ ಮುಂದೂಡಿತು.

ಚಂದಿರನ ಶೋಧ ಶುರು

ಒಂದನೇ ಪುಟದಿಂದ

ಗುರುವಾರ ಬೆಳಿಗ್ಗೆ 'ಎಕ್ಸ್' ಮಾಡಿದ ಇಸ್ರೊ,'ಮೇಡ್ ಇನ್ ಇಂಡಿಯಾ, ಮೇಡ್ ಫಾರ್ ಮೂನ್! ರೋವರ್ ರ್‍ಯಾಂಪ್‌ನಿಂದ ಇಳಿಯಿತು. ಭಾರತ ಚಂದ್ರನ ಮೇಲೆ ನಡೆದಾಡಿತು' ಎಂದು ಹೇಳಿತು.

ಸೂರ್ಯೋದಯದ ಬಳಿಕ 'ಮರುಜನ್ಮ'?: ಚಂದ್ರನ ಒಂದು ದಿನ ಮುಗಿದ ಮಾರನೇ ದಿನದ ಸೂರ್ಯೋದಯಕ್ಕೆ 'ಚಮತ್ಕಾರ'ದ ಶಕ್ತಿ ಇದೆ. ಅಂದರೆ ಸಂಜೆಗೆ ಲ್ಯಾಂಡರ್ ಮತ್ತು ರೋವರ್ ತನ್ನ ಕೆಲಸವನ್ನು ನಿಲ್ಲಿಸಿಬಿಡುವುದಿಲ್ಲ. ಮಾರನೇ ಸೂರ್ಯೋದಯಕ್ಕೆ ಮತ್ತೆ ಲ್ಯಾಂಡರ್ ಮತ್ತು ರೋವರ್ ಮರುಜೀವ ತಳೆಯುವ ಆಸೆ ಚಿಗುರಿದೆ. ಹೀಗಾಗಿ ಚಂದ್ರನ ಒಂದು ದಿನಕ್ಕೂ ಹೆಚ್ಚು ಕಾಲ ವೈಜ್ಞಾನಿಕ ಪ್ರಯೋಗ ಮತ್ತು ಅಧ್ಯಯನ ನಡೆಸುವ ವಿಶ್ವಾಸ ಗರಿಗೆದರಿದೆ.

ಚಂದ್ರನ ಒಂದು ದಿನದ ಅವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಅಧ್ಯಯನ ಮತ್ತು ಪ್ರಯೋಗಗಳನ್ನು ನಡೆಸುವ ತರಾತುರಿ ಇದ್ದರೂ ಸೂರ್ಯನ ಬೆಳಕು ಮರೆಯಾದ ಬಳಿಕ ಅಲ್ಲಿ ಚಳಿ ಮತ್ತು ಕಾರ್ಗತ್ತಲು ಆವರಿಸಲಿದೆ. ಆಗ ವಿಕ್ರಮ್ ಮತ್ತು ಪ್ರಜ್ಞಾನ್ ಇವೆರಡೂ ತಮ್ಮ ಕೆಲಸ ನಿಲ್ಲಿಸಿ ಬಿಡುತ್ತವೆ.

ಮಾರನೇ ಬೆಳಿಗ್ಗೆ ಸೂರ್ಯೋದಯದಿಂದ ಚೈತನ್ಯ ಸಿಕ್ಕಿ ಮರುಜೀವ ಪಡೆಯಬಹುದು ಎಂಬ ನಿರೀಕ್ಷೆ ಇದೆ. ಭಾರತದ ಮಂಗಳಯಾನ–1 ರ ಕಕ್ಷೆಗಾಮಿಯನ್ನು (ಆರ್ಬಿಟರ್) ಆರು ತಿಂಗಳಿಗೆಂದು ವಿನ್ಯಾಸಗೊಳಿಸಲಾಗಿತ್ತು. ಆದರೆ, ಅದು ಎಲ್ಲರ ನಿರೀಕ್ಷೆ ಮೀರಿ 7 ವರ್ಷಗಳ ಕಾಲ ಕಕ್ಷೆಯಲ್ಲಿ ಪರಿಭ್ರಮಣ ನಡೆಸಿ ಭೂಮಿಗೆ ಮಾಹಿತಿಯನ್ನು ರವಾನಿಸಿತು. ಚಂದ್ರಯಾನ–2 ಕಕ್ಷೆಗಾಮಿಯೂ 2019ರಿಂದ ಪರಿಭ್ರಮಣ ನಡೆಸಿ ಮಾಹಿತಿ ನೀಡುತ್ತಿದೆ. ಚಂದ್ರಯಾನ– 3 ವಿಕ್ರಮ್ ಜತೆಗೂ ಸಂಪರ್ಕದಲ್ಲಿದೆ. ಅದೇ ರೀತಿ ವಿಕ್ರಮ್ ಮತ್ತು ಪ್ರಜ್ಞಾನ್ ಕಾರ್ಯ ನಿರ್ವಹಿಸಬಹುದು ಎಂಬ ಆಶಾವಾದ ವಿಜ್ಞಾನಿಗಳಲ್ಲಿದೆ.

ಹೊಸ ಗ್ರಹಗಳ ಅನ್ವೇಷಣೆಗೆ ಮುನ್ನುಡಿ

'ಚಂದ್ರಯಾನ–3ರ ಯಶಸ್ಸು ಇಸ್ರೊದ ಪರಿಪೂರ್ಣ ಸಾಮರ್ಥ್ಯದ ಪ್ರತೀಕ. 21ನೇ ಶತಮಾನದಲ್ಲಿ ಹೊಸ ಗ್ರಹಗಳ ಅನ್ವೇಷಣೆ ಮಾಡುವ ಮನುಕುಲದ ಮಹತ್ವಾಕಾಂಕ್ಷೆಯನ್ನು ಈಡೇರಿಸಲು ಈ ಸಾಧನೆ ಮಹತ್ವದ್ದು' ಎಂದು ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ.ಕಸ್ತೂರಿ ರಂಗನ್ ಅಭಿಪ್ರಾಯ ಪಟ್ಟಿದ್ದಾರೆ.

'ಇಸ್ರೊದ 50 ವರ್ಷಗಳ ಪಯಣದಲ್ಲಿ ಈ ಸಾಧನೆ ಮೈಲಿಗಲ್ಲು. ಮೊದಲ ಬಾರಿಗೆ ಭೂಮಿಯಿಂದ ಹೊರಗೆ ಸೌರಮಂಡಲದ ಮತ್ತೊಂದು ಕಾಯವೊಂದರಲ್ಲಿ ಲ್ಯಾಂಡರ್ ಇಳಿಸಿರುವುದು ನಿಜಕ್ಕೂ ಇಸ್ರೊ ಸಾಮರ್ಥ್ಯದ ಅನಾವರಣ' ಎಂದಿದ್ದಾರೆ.

'ದಕ್ಷಿಣ ಧ್ರುವದಲ್ಲಿ ಅನ್ವೇಷಣೆ ಅತ್ಯಂತ ಮಹತ್ವದ್ದು. ಏಕೆಂದರೆ ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸೂರ್ಯನ ಬೆಳಕು ಬೀಳುವುದಿಲ್ಲ. ಎರಡು ಶತಕೋಟಿ ವರ್ಷಗಳ ಹಿಂದೆಯೇ ಚಂದ್ರ ವಿಕಾಸಗೊಳ್ಳುವುದು ನಿಂತು ಹೋಯಿತು. ದಕ್ಷಿಣ ಧ್ರುವ ಅತ್ಯಂತ ಪ್ರಾಚೀನ ಪ್ರದೇಶ' ಎಂದು ವಿವರಿಸಿದರು.

ಆರಂಭಗೊಂಡ ಕೆಲಸಗಳು ಯಾವುವು?

- **ರಂಭಾ (RAMBHA);** ಇದು ಚಂದ್ರನಲ್ಲಿನ ಪ್ಲಾಸ್ಮಾ ಪರಿಸರವನ್ನು ವಿಶ್ಲೇಷಿಸುತ್ತದೆ. ಪ್ಲಾಸ್ಮಾದ ಸಾಂದ್ರತೆ ಮತ್ತು ಸಮಯ ಕಳೆದಂತೆ ಅದರಲ್ಲಾಗುವ ಬದಲಾವಣೆಯನ್ನು ಅಧ್ಯಯನ ಮಾಡುತ್ತದೆ.
- **ಚಾಸ್ಟೆ (ChaSTE);** ಚಂದ್ರನ ಮೇಲ್ಮೈಯ ಉಷ್ಣವಾಹಕತೆಯ ಅಧ್ಯಯನ ನಡೆಸುತ್ತದೆ. ಅದರಲ್ಲೂ ಚಂದ್ರನ ಧ್ರುವ ಪ್ರದೇಶದಲ್ಲಿ ಉಷ್ಣ ಗುಣಲಕ್ಷಣಗಳನ್ನು ಮಾಪನ ಮಾಡಲಿದೆ. ಇಲ್ಲಿ ಹಗಲಿನಲ್ಲಿ ಸುಡು ಬಿಸಿಲು ಇದ್ದು, ಅತ್ಯಧಿಕ ಉಷ್ಣಾಂಶವಿರುತ್ತದೆ.
- **ಇಲ್ಸಾ (ILSA);** ಇದು ಚಂದ್ರನಲ್ಲಿನ ಕಂಪನವನ್ನು ಅಭ್ಯಾಸ ಮಾಡುತ್ತದೆ. ಮುಖ್ಯವಾಗಿ ಲ್ಯಾಂಡಿಂಗ್ ಆದ ಪ್ರದೇಶದ ಸುತ್ತಮುತ್ತ ಚಂದ್ರ ಕಂಪನವನ್ನು ಮಾಪನ ಮಾಡಲಿದೆ. ಇದರಿಂದ ಚಂದ್ರನ ರಚನೆಯಲ್ಲಿ ಆಗುವ ಬದಲಾವಣೆಗಳು ಬಗ್ಗೆಯೂ ಗಮನಹರಿಸಲಿದೆ.
- **ರೋವರ್ ಉಪಕರಣಗಳು:** ರೋವರ್ ಚಕ್ರಗಳನ್ನು ಹೊಂದಿದ ಪುಟಾಣಿ ರೋಬಾಟ್ ವಾಹನ. ಇದರಲ್ಲಿ ಎರಡು ವೈಜ್ಞಾನಿಕ ಉಪಕರಣಗಳಿವೆ (APXS, LIBS). ಇದರಲ್ಲಿ ಒಂದು ಲೇಸರ್ ಉಪಕರಣವಾಗಿದ್ದು, ಮತ್ತೊಂದು ಕ್ಷ–ಕಿರಣ ಸಾಧನ. ಇವೆರಡೂ ಪ್ರತ್ಯೇಕ ವಿಧಾನಗಳ ಮೂಲಕ ಚಂದ್ರನ ಮೇಲಿನ ಧಾತುಗಳ ಸಂಯೋಜನೆ ಕುರಿತು ಅಧ್ಯಯನ ನಡೆಸಲಿವೆ.

'777 ಚಾರ್ಲಿ' ಅತ್ಯುತ್ತಮ ಚಿತ್ರ

ಒಂದನೇ ಪುಟದಿಂದ

ಅತ್ಯುತ್ತಮ ಸ್ಪೆಷಲ್ ಎಫೆಕ್ಟ್ಸ್, ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿಗಳೂ ಇದರಲ್ಲಿ ಒಳಗೊಂಡಿವೆ. 'ಗಂಗೂಬಾಯಿ ಕಾಠಿಯಾವಾಡಿ' ಸಿನಿಮಾ ಐದು ಪ್ರಶಸ್ತಿಗಳನ್ನು ಪಡೆದಿದೆ.

ಪ್ರಶಸ್ತಿಗಾಗಿ 28 ಭಾಷೆಗಳಿಂದ 280 ಫೀಚರ್ ಸಿನಿಮಾಗಳು ಬಂದಿದ್ದವು. 2021ರಲ್ಲಿ ಸೆನ್ಸಾರ್ ಆದ ಸಿನಿಮಾಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗಿತ್ತು.

'ಜವಾಬ್ದಾರಿ ಹೆಚ್ಚಿದೆ'

ನಮ್ಮ ಇಡೀ ತಂಡಕ್ಕೆ '777 ಚಾರ್ಲಿ' ಒಂದು ವಿಶೇಷ ಸಿನಿಮಾವಾಗಿತ್ತು. ಐದು ವರ್ಷಗಳ ಪಯಣ ಇದು. ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾದಾಗಲೇ ನಮ್ಮ ಪರಿಶ್ರಮಕ್ಕೆ ಪ್ರತಿಫಲ ಸಿಕ್ಕಿತ್ತು. ಇದೀಗ ರಾಷ್ಟ್ರ ಪ್ರಶಸ್ತಿ ಸಿಕ್ಕಿದೆ. ನನ್ನ ಚೊಚ್ಚಲ ಸಿನಿಮಾ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವುದಕ್ಕೆ ಖುಷಿ ಇದೆ. ಪರಂವಃ ಸ್ಟುಡಿಯೋಸ್, ರಕ್ಷಿತ್ ಶೆಟ್ಟಿ ಈ ಯಶಸ್ಸಿನ ಹಿಂದೆ ಇದ್ದಾರೆ. ಪ್ರಶಸ್ತಿಗಳು ನನ್ನ ಮುಂದಿನ ಜವಾಬ್ದಾರಿ ಹೆಚ್ಚಿಸಿವೆ. ಈ ರಾಷ್ಟ್ರ ಪ್ರಶಸ್ತಿ ನನ್ನ ಮೇಲಿನ ಜವಾಬ್ದಾರಿಯನ್ನು ಬೆಟ್ಟದಷ್ಟು ಹೆಚ್ಚಿಸಿದೆ.

ಕಿರಣ್ ರಾಜ್ ಕೆ., ನಿರ್ದೇಶಕ

'ನಿಯಮ ಬದಲಾಗಲಿ'

ಇದನ್ನು ದೇವರ ಅನುಗ್ರಹ ಎಂದು ಭಾವಿಸುತ್ತೇನೆ. ನನ್ನ ಮೂರು ವರ್ಷಗಳ ಪರಿಶ್ರಮ ಇದು. ನೂರಕ್ಕೂ ಹೆಚ್ಚು ಅಮ್ಮನ ಸಿನಿಮಾಗಳನ್ನು ನೋಡಿ ಇದನ್ನು ಸಿದ್ಧಪಡಿಸಿದ್ದೆ. ಕಲಾವಿದರೊಬ್ಬರ ಬಗ್ಗೆ ಇರುವ ಸುದೀರ್ಘ ಸಾಕ್ಷ್ಯಚಿತ್ರವಿದು. ಹೀಗಾಗಿಯೇ ಮೂರು ದಾಖಲೆಗಳು ಇದರ ಮೇಲಿದೆ. ನಮ್ಮಲ್ಲಿ ಸಾಕಷ್ಟು ಕಲಾವಿದರು, ಪ್ರತಿಭೆಗಳಿದ್ದಾರೆ. ಇವರ ಬಗ್ಗೆ ಇಂತಹ ಒಂದು ದಾಖಲೆ ಸಿದ್ಧಪಡಿಸಲು, ನನ್ನ ಈ ಪ್ರಯತ್ನ ಒಂದು ನಾಂದಿಯಾಗಬೇಕು. ಇಂತಹ ಸಾಕ್ಷ್ಯಚಿತ್ರ ನಮ್ಮ ಹಿರಿಯರ ಬಗ್ಗೆ ಒಂದು ದಾಖಲೆ ಇದ್ದಂತೆ. ರಾಜ್ಯ ಪ್ರಶಸ್ತಿಯಲ್ಲಿ ಸಾಕ್ಷ್ಯಚಿತ್ರಕ್ಕೆ 30 ನಿಮಿಷ ಅವಧಿಯ ನಿಯಮವಿದೆ. ಈ ನಿಯಮವನ್ನು ರಾಜ್ಯ ಸರ್ಕಾರ ಬದಲಾಯಿಸಬೇಕು.

ಅನಿರುದ್ಧ ಜತ್ಕರ್, ನಟ

ಈ ಸಂತೋಷವನ್ನು ಪದಗಳಲ್ಲಿ ಹೇಳಿ ಅದಕ್ಕೆ ನ್ಯಾಯ ಕೊಡಿಸಲು ಸಾಧ್ಯವಿಲ್ಲ. ಇದು ಇಡೀ ಪರಂವಃ ಕುಟುಂಬಕ್ಕೆ ಹೆಮ್ಮೆಯ ಸಮಯ. ಕಿರಣ್‌ರಾಜ್‌ಗೆ ಅಭಿನಂದನೆ.

ರಕ್ಷಿತ್ ಶೆಟ್ಟಿ, ನಟ

ಮೂರನೇ ಬಾರಿ ಪ್ರಶಸ್ತಿ

ಕೋವಿಡ್ ಸಮಯದಲ್ಲಿ ಹಲವು ಆರೋಗ್ಯ ಸಮಸ್ಯೆಗಳನ್ನು ನೋಡಿದ್ದೇವೆ. ಕ್ರೀಡೆಯ ಮೂಲಕ ಈ ಸಮಸ್ಯೆಗಳಿಂದ ಹೇಗೆ ಹೊರಬರಬಹುದು ಎನ್ನುವುದನ್ನು 'ಆಯುಷ್ಮಾನ್' ಮುಖೇನ ತಿಳಿಸುವ ಪ್ರಯತ್ನ ಮಾಡಿದ್ದೇವೆ. ನಾನು ಪುನೀತ್ ರಾಜಕುಮಾರ್ ಅವರ ಜತೆ ಸಿನಿಮಾ ಮಾಡಬೇಕಿತ್ತು. ಚಿತ್ರ ಇನ್ನೇನು ಘೋಷಣೆ ಮಾಡಬೇಕು ಎನ್ನುವಷ್ಟರಲ್ಲಿ ಅವರು ನಿಧನರಾದರು. ಹೀಗಾಗಿ ನಾನು ಸಿನಿಮಾಗಳಿಂದ ಕೆಲ ತಿಂಗಳ ಕಾಲ ದೂರ ಹೋದೆ. ವಾಪಸ್ಸಾದಾಗ ಮಾಡಿದ ಸಿನಿಮಾ 'ಆಯುಷ್ಮಾನ್'. ಇದು ನನ್ನ ಮೂರನೇ ರಾಷ್ಟ್ರ ಪ್ರಶಸ್ತಿ ಎನ್ನುವ ಹೆಮ್ಮೆ ಇದೆ.

ಜೇಕಬ್ ವರ್ಗೀಸ್, ನಿರ್ದೇಶಕ.

69ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ

ಅತ್ಯುತ್ತಮ ಸಿನಿಮಾ	ರಾಕೆಟ್ರಿ–ದಿ ನಂಬಿ ಎಫೆಕ್ಟ್ (ಹಿಂದಿ) ನಿರ್ದೇಶಕ:ಆರ್.ಮಾಧವನ್
ಅತ್ಯುತ್ತಮ ನಟ	ಅಲ್ಲು ಅರ್ಜುನ್ (ಚಿತ್ರ: ಪುಷ್ಪ–ದಿ ರೈಸ್ ಪಾರ್ಟ್ 1)
ಅತ್ಯುತ್ತಮ ನಟಿ	ಆಲಿಯಾ ಭಟ್ (ಚಿತ್ರ:ಗಂಗೂಬಾಯಿ ಕಾಠಿಯಾವಾಡಿ, ಹಿಂದಿ) ಹಾಗೂ ಕೃತಿ ಸೆನನ್ (ಚಿತ್ರ:ಮಿಮಿ, ಹಿಂದಿ)
ಅತ್ಯುತ್ತಮ ಪೋಷಕ ನಟ	ಪಂಕಜ್ ತ್ರಿಪಾಠಿ (ಚಿತ್ರ: ಮಿಮಿ)
ಅತ್ಯುತ್ತಮ ಪೋಷಕ ನಟಿ	ಪಲ್ಲವಿ ಜೋಶಿ (ಚಿತ್ರ: ದಿ ಕಾಶ್ಮೀರ್ ಫೈಲ್ಸ್)
ಅತ್ಯುತ್ತಮ ನಿರ್ದೇಶನ	ಗೋದಾವರಿ–ದಿ ಹೋಲಿ ವಾಟರ್ (ಮರಾಠಿ), ನಿರ್ದೇಶಕ:ನಿಖಿಲ್ ಮಹಾಜನ್
ಅತ್ಯುತ್ತಮ ಸಂಗೀತ ನಿರ್ದೇಶನ	ದೇವಿ ಶ್ರೀ ಪ್ರಸಾದ್: ಚಿತ್ರ–ಪುಷ್ಪ (ಹಾಡುಗಳು) ಹಾಗೂ ಎಂ.ಎಂ.ಕೀರವಾಣಿ: ಚಿತ್ರ:ಆರ್‌ಆರ್‌ಆರ್ (ಹಿನ್ನೆಲೆ ಸಂಗೀತ)
ಅತ್ಯುತ್ತಮ ಹಿಂದಿ ಸಿನಿಮಾ	ಚಿತ್ರ: ಸರ್ದಾರ್ ಉಧಮ್ ನಿರ್ದೇಶಕ:ಸುಜಿತ್ ಎಸ್.
ಅತ್ಯುತ್ತಮ ಮಲಯಾಳಂ ಸಿನಿಮಾ	ಚಿತ್ರ: ಹೋಂ, ನಿರ್ದೇಶಕ:ರೋಜಿನ್ ಪಿ.ಥಾಮಸ್
ಅತ್ಯುತ್ತಮ ತಮಿಳು ಸಿನಿಮಾ	ಚಿತ್ರ: ಕಡೈಸಿ ವ್ಯವಸಾಯಿ, ನಿರ್ದೇಶಕ:ಎಂ. ಮಣಿಕಂಠನ್
ಅತ್ಯುತ್ತಮ ಚೊಚ್ಚಲ ಸಿನಿಮಾ	ಚಿತ್ರ: ಮೇಪಡಿಯನ್ (ಮಲಯಾಳಂ), ನಿರ್ದೇಶಕ:ವಿಷ್ಣು ಮೋಹನ್
ಅತ್ಯುತ್ತಮ ಮನರಂಜನಾ ಸಿನಿಮಾ	ಚಿತ್ರ: ಆರ್‌ಆರ್‌ಆರ್ (ತೆಲುಗು), ನಿರ್ದೇಶಕ:ಎಸ್.ಎಸ್.ರಾಜಮೌಳಿ
ರಾಷ್ಟ್ರೀಯ ಭಾವೈಕ್ಯತೆ ಸಾರುವ ಅತ್ಯುತ್ತಮ ಸಿನಿಮಾ	ಚಿತ್ರ: ದಿ ಕಾಶ್ಮೀರ್ ಫೈಲ್ಸ್ (ಹಿಂದಿ), ನಿರ್ದೇಶಕ: ವಿವೇಕ್ ರಂಜನ್ ಅಗ್ನಿಹೋತ್ರಿ
ಅತ್ಯುತ್ತಮ ಮಕ್ಕಳ ಚಿತ್ರ	ಚಿತ್ರ: ಗಾಂಧಿ ಆ್ಯಂಡ್ ಕಂ. (ಗುಜರಾತಿ), ನಿರ್ದೇಶಕ:ಮನೀಶ್ ಸೈನಿ
ಅತ್ಯುತ್ತಮ ನೃತ್ಯ ನಿರ್ದೇಶನ	ಪ್ರೇಮ್ ರಕ್ಷಿತ್, ಚಿತ್ರ:ಆರ್‌ಆರ್‌ಆರ್
ಅತ್ಯುತ್ತಮ ಗಾಯಕ	ಕಾಲಭೈರವ, ಚಿತ್ರ:ಆರ್‌ಆರ್‌ಆರ್
ಅತ್ಯುತ್ತಮ ಗಾಯಕಿ	ಶ್ರೇಯ ಘೋಷಾಲ್, ಚಿತ್ರ:ಇರವಿನ್ ನಿಳಲ್
ಅತ್ಯುತ್ತಮ ಛಾಯಾಚಿತ್ರಗ್ರಹಣ	ಅವಿಕ್ ಮುಖೋಪಾಧ್ಯಾಯ, ಚಿತ್ರ: ಸರ್ದಾರ್ ಉಧಮ್(ಹಿಂದಿ)
ಅತ್ಯುತ್ತಮ ಸಂಕಲನ	ಸಂಜಯ್ ಲೀಲಾ ಬನ್ಸಾಲಿ, ಚಿತ್ರ:ಗಂಗೂಬಾಯಿ ಕಾಠಿಯಾವಾಡಿ(ಹಿಂದಿ)

ಚುನಾವಣೆ ವಿಳಂಬಕ್ಕೆ ಯುಡಬ್ಲ್ಯುಡಬ್ಲ್ಯು ಕ್ರಮ: ಪೈಲ್ವಾನರಿಗೆ ತಟಸ್ಥರಾಗಿ ಸ್ಪರ್ಧಿಸಲು ಅವಕಾಶ

ಭಾರತ ಕುಸ್ತಿ ಫೆಡರೇಷನ್ ಅಮಾನತು

ನವದೆಹಲಿ (ಪಿಟಿಐ): ಚುನಾವಣೆ ನಡೆಸಲು ವಿಳಂಬ ಮಾಡಿರುವ ಭಾರತ ಕುಸ್ತಿ ಫೆಡರೇಷನ್ ಅನ್ನು ಸಂಯುಕ್ತ ವಿಶ್ವ ಕುಸ್ತಿ ಫೆಡರೇಷನ್ (ಯುಡಬ್ಲ್ಯುಡಬ್ಲ್ಯು) ಗುರುವಾರ ಅಮಾನತು ಮಾಡಿದೆ.

ಇದರಿಂದಾಗಿ ಭಾರತದ ಕುಸ್ತಿಪಟುಗಳು ಮುಂಬರುವ ಅಂತರ-ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರ ಧ್ವಜದಡಿಯಲ್ಲಿ ಸ್ಪರ್ಧಿಸುವ ಅವಕಾಶದಿಂದ ವಂಚಿತರಾಗಲಿದ್ದಾರೆ. ಸೆ. 16ರಿಂದ ನಡೆಯಲಿರುವ ವಿಶ್ವ ಕುಸ್ತಿ ಕ್ವಾಲಿಫೈಯರ್‌ನಲ್ಲಿಯೂ ಅವರು ತಟಸ್ಥ ಅಥ್ಲೀಟ್‌ಗಳಾಗಿ ಭಾಗವಹಿಸಬೇಕಾಗಿದೆ.

ಭೂಪಿಂದರ್ ಸಿಂಗ್ ಬಾಜ್ವಾ ನೇತೃತ್ವದ ಡಬ್ಲ್ಯುಎಫ್‌ಐ ಅಡ್‌ಹಾಕ್ ಸಮಿತಿಗೆ ಚುನಾವಣೆ ನಡೆಸಲು 45 ದಿನಗಳ ಗಡುವು ನೀಡಲಾಗಿತ್ತು. ಆದರೆ, ಈ ಅವಧಿಯಲ್ಲಿ ಚುನಾವಣೆ ನಡೆಸುವಲ್ಲಿ ಸಮಿತಿಯು ವಿಫಲವಾಗಿದೆ. ನಿಗದಿಯ ಅವಧಿಯ ಒಳಗೆ ಚುನಾವಣೆ ನಡೆಸದಿದ್ದರೆ ಅಮಾನತು ವಿಧಿಸಲಾಗುವುದು ಎಂದು ಏಪ್ರಿಲ್ 28ರಂದೇ ಯುಡಬ್ಲ್ಯುಡಬ್ಲ್ಯು ಎಚ್ಚರಿಕೆ ನೀಡಿತ್ತು.

ಹೋದ ಏಪ್ರಿಲ್ 17ರಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಡ್‌ಹಾಕ್ ಸಮಿತಿಯನ್ನು ನೇಮಕ ಮಾಡಿತ್ತು.

'ಬುಧವಾರ ರಾತ್ರಿ ಯುಡಬ್ಲ್ಯುಡಬ್ಲ್ಯು ಅಡ್‌ಹಾಕ್ ಸಮಿತಿಗೆ ಅಮಾನತು ಮಾಡಿರುವ ವಿಷಯ ತಿಳಿಸಿದೆ. ಅಮಾನತು ಆದೇಶ ನೀಡಿದೆ' ಎಂದು ಐಒಎ ಮೂಲಗಳು ತಿಳಿಸಿವೆ.

ಅನ್ಶು ಮಲಿಕ್ ಮತ್ತು ಸರಿತಾ ಹಣಾಹಣಿ –ಪಿಟಿಐ ಸಂಗ್ರಹ ಚಿತ್ರ

ಕಳೆದ ಮೇ 7ರಂದೇ ಚುನಾವಣೆ ನಿಗದಿಯಾಗಿತ್ತು. ಆದರೆ, ಕ್ರೀಡಾ ಸಚಿವಾಲಯವು ಅದನ್ನು ಅನೂರ್ಜಿತಗೊಳಿಸಿತ್ತು. ಅದರ ನಂತರವೂ ಕೆಲವು ರಾಜ್ಯ ಕುಸ್ತಿ ಸಂಸ್ಥೆಗಳು ತಕರಾರು ಎತ್ತಿ ಕೋರ್ಟ್ ಮೆಟ್ಟಲೇರಿ-ದ್ದವು. ಅದರಿಂದಾಗಿಯೂ ಎರಡು, ಮೂರು ಬಾರಿ ಚುನಾವಣೆಯನ್ನು ಮುಂದೂಡಲಾಗಿತ್ತು.

25ರಿಂದ ಟ್ರಯಲ್ಸ್: ವಿಶ್ವ ಚಾಂಪಿಯನ್‌ಷಿಪ್‌ಗಾಗಿ ಆಯ್ಕೆ ಟ್ರಯಲ್ಸ್ ಪೂರ್ವನಿಗದಿಯಾದಂತೆ ಇದೇ 25 ಮತ್ತು 26ರಂದು ನಡೆಯಲಿದೆ ಎಂದು ಗುರುವಾರ ಬಜ್ವಾ ತಿಳಿಸಿದ್ದಾರೆ. ಪಟಿಯಾಲಾದಲ್ಲಿ ಟ್ರಯಲ್ಸ್ ನಡೆಯುವುದು.

'ಈ ಪರಿಸ್ಥಿತಿ ಬರದಂತೆ ತಡೆಯಬಹುದಿತ್ತು. ಸಮಿತಿಯು ಇದನ್ನು ಸಮರ್ಥವಾಗಿ ನಿಭಾಯಿಸಿಲ್ಲ. ಟ್ರಯಲ್ಸ್ ಮುಂದೂಡುವ ಅಗತ್ಯ ಇಲ್ಲ. ಏಕೆಂದರೆ ಈಗಾಗಲೇ ಕೆಲವು ಬಾರಿ ಮುಂದೂಡಲಾಗಿದೆ' ಎಂದು ಸಮಿತಿಯ ಸದಸ್ಯ ಜಿಯಾನ್ ಸಿಂಗ್ ಹೇಳಿದರು.

'ಅಡ್‌ಹಾಕ್ ಸಮಿತಿಯ ಸದಸ್ಯರು ಯುಡಬ್ಲ್ಯುಡಬ್ಲ್ಯು ಮುಂದೆ ಇಲ್ಲಿಯ ಪರಿಸ್ಥಿತಿಯನ್ನು ವಿವರಿಸುವಲ್ಲಿ ಸಫಲವಾಗಿಲ್ಲ. ಕೋರ್ಟ್ ಆದೇಶಗಳಿಂದ ಚುನಾವಣೆಗಳನ್ನು ಮುಂದೂಡಲಾಗುತ್ತಿದೆ. ನ್ಯಾಯಾಲಯದ ಸೂಚನೆ ಮೀರಿ ಚುನಾವಣೆ ನಡೆಸಿದರೆ ನ್ಯಾಯಾಂಗ ನಿಂದನೆಗೊಳಗಾಗಬೇಕಾಗುತ್ತದೆ. ಆದರೆ 45 ದಿನಗಳ ಗಡುವನ್ನು ವಿಸ್ತರಿಸುವಂತೆ ಕೇಳಿಕೊಳ್ಳಬೇಕಿತ್ತು' ಎಂದೂ ಸಿಂಗ್ ಹೇಳಿದರು.

'ಈ ಸಮಸ್ಯೆಯನ್ನು ಆದಷ್ಟು ಶೀಘ್ರ ಪರಿಹರಿಸಬೇಕು. ಅದರಿಂದ ವಿಶ್ವ ಚಾಂಪಿಯನ್‌ಷಿಪ್ ನಲ್ಲಿರುವ ಒಲಿಂಪಿಕ್ ಕೋಟಾ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಲು ದೇಶದ ಕುಸ್ತಿಪಟುಗಳಿಗೆ ಅನುಕೂಲವಾಗುತ್ತದೆ. ನಿಯಮಬದ್ಧವಾಗಿ ಚುನಾವಣೆಗಳನ್ನು ನಡೆಸಿ ಆಡಳಿತ ಸಮಿತಿಯನ್ನು ರಚಿಸಿದರೆ ಸಮಸ್ಯೆ ಪರಿಹಾರವಾಗಲಿದೆ' ಎಂದು ಅಡ್‌ಹಾಕ್ ಕಮಿಟಿಯ ಸದಸ್ಯರೊಬ್ಬರು ಹೇಳಿದ್ದಾರೆ.

ಸ್ಪೇನ್ ಸ್ಪರ್ಧಿಗಳ ಪ್ರಾಬಲ್ಯ

ವಿಶ್ವ ಅಥ್ಲೆಟಿಕ್ಸ್: 35 ಕಿ.ಮೀ. ರೇಸ್‌ವಾಕ್ ಗೆದ್ದ ಮಾರ್ಟಿನ್

ಬುಡಾಪೆಸ್ಟ್ (ಎಎಫ್‌ಪಿ): ಆಲ್ವಾರೊ ಮಾರ್ಟಿನ್ ಮತ್ತು ಮರಿಯಾ ಪೆರೆಝ್ ಅವರು ಗುರುವಾರ ನಡೆದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 35 ಕಿ.ಮೀ. ರೇಸ್‌ವಾಕ್ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡರು. ಆ ಮೂಲಕ ನಡಿಗೆ ಸ್ಪರ್ಧೆಯ ಎಲ್ಲಾ ನಾಲ್ಕೂ ಚಿನ್ನಗಳನ್ನು ಸ್ಪೇನ್ ಅಥ್ಲೀಟುಗಳು ಗುಡಿಸಿಹಾಕಿದರು.

ಕೊನೆಯ ಐದು ಕಿ.ಮೀ. ಇರುವಾಗ ಈಕ್ವೆಡೋರ್‌ನ ಬ್ರಯಾನ್ ಡೇನಿಯಲ್ ಪಿಂಟಾಡೊ ಅವರಿಂದ ಅತ್ಯಂತ ತುರುಸಿನ ಪೈಪೋಟಿ ಎದುರಿಸಿದ ಮಾರ್ಟಿನ್ 2ಗಂಟೆ 24 ನಿಮಿಷ 30 ಸೆಕೆಂಡುಗಳಲ್ಲಿ ಗುರಿತಲುಪಿ ಬಂಗಾರದ ಮನುಷ್ಯ ಎನಿಸಿದರು. ಪಿಂಟಾಡೊ (2 ಗಂಟೆ, 24 ನಿ. 34 ಸೆ.) ಕೂದಲೆಳೆ ಅಂತರದಿಂದ ಅಗ್ರಸ್ಥಾನ ಕಳೆದುಕೊಂಡು ಬೆಳ್ಳಿಯ ಪದಕ ಕೊರ-

ಪುರುಷರ 35 ಕಿ.ಮೀ. ರೇಸ್ ವಾಕ್ ಪ್ರಶಸ್ತಿ ಗೆದ್ದ ಸ್ಪೇನ್‌ನ ಆಲ್ವಾರೊ ಮಾರ್ಟಿನ್

ಳಿಗೇರಿಸಿಕೊಂಡರು.

ಯುಜೀನ್‌ನಲ್ಲಿ ನಡೆದ ಕಳೆದ ವರ್ಷದ ಚಾಂಪಿಯನ್‌ಷಿಪ್‌ನ-ಲ್ಲಿ ಒಂದು ಸೆಕೆಂಡಿನಿಂದ ಸ್ವರ್ಣ ಪದಕ ಕಳೆದುಕೊಂಡಿದ್ದ ಜಪಾನ್‌ನ ಮಸಾಟೊರ ಕವಾನೊ ಇಲ್ಲಿ 2ಗಂ 25ನಿ.12 ಸೆ.ಗಳಲ್ಲಿ ಅಂತರ ಕ್ರಮಿಸಿ ಕಂಚಿನ ಪದಕ ಪಡೆದರು.

ಈ ಚಾಂಪಿಯನ್‌ಷಿಪ್‌ನ ಆರಂಭದ ದಿನವಾದ ಆಗಸ್ಟ್ 19ರಂದು ಮಾರ್ಟಿನ್ ಅವರು 20 ಕಿ.ಮೀ. ರೇಸ್‌ವಾಕ್‌ನಲ್ಲಿ ಚಿನ್ನ ಗೆದ್ದುಕೊಂಡಿದ್ದರು.

ಮಹಿಳೆಯರ ವಿಭಾಗದಲ್ಲಿ ಮಾತ್ರ, 27 ವರ್ಷದ ಪೆರೆಝ್ ಅಂಥ ಪೈಪೋಟಿ ಎದುರಿಸಲಿಲ್ಲ. ಅವರು 2ಗಂ. 38ನಿ. 40 ಸೆ.ಗಳಲ್ಲಿ ಗುರಿಮುಟ್ಟಿದರು. ಕಳೆದ ಚಾಂ-ಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡಿದ್ದ ಪೆರುವಿನ ಕಿಂಬರ್ಲಿ ಗಾರ್ಸಿಯಾ ಈ ಬಾರಿ 2ಗಂ 40ನಿ 52 ಸೆ.ಗಳಲ್ಲಿ ದೂರ ಕ್ರಮಿಸಿ ಎರಡನೇ ಸ್ಥಾನ ಪಡೆದರು.

ಯುರೋಪಿನ ಚಾಂಪಿಯನ್ ಅಂತಿಗೋನಿ ಟ್ರಿಸ್‌ಪಿಯೊಟಿ (ಗ್ರೀಸ್) ಅವರು 2ಗಂ.42ನಿ. 22 ಸೆ.ಗಳಲ್ಲಿ ಗುರಿಮುಟ್ಟಿ ಕಂಚಿನ ಪದಕ ಪಡೆದರು. ಪೆರೆಝ್ 35 ಕಿ.ಮೀ. ನಡಿಗೆಯಲ್ಲಿ ಕಳೆದ ಮೇ ತಿಂಗಳಲ್ಲಿ ಗಾರ್ಸಿಯಾ ಅವರ ಹೆಸರಿನಲ್ಲಿ ವಿಶ್ವದಾಖಲೆ ಮುರಿದಿದ್ದರು.

ಎಂಟರ ಘಟ್ಟಕ್ಕೆ ಸಾತ್ವಿಕ್–ಚಿರಾಗ್

ವಿಶ್ವ ಬ್ಯಾಡ್ಮಿಂಟನ್: ಟ್ರೀಸಾ–ಗಾಯತ್ರಿ ಜೋಡಿಗೆ ನಿರಾಸೆ

ಕೋಪೆನ್‌ಹೇಗನ್ (ಪಿಟಿಐ): ಭಾರತದ ಸ್ಟಾರ್ ಡಬಲ್ ಜೋಡಿಯಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿ-ಪ್‌ನಲ್ಲಿ ಮತ್ತೆ ಪದಕ ಗೆಲ್ಲುವ ಹಾದಿಯಲ್ಲಿ ಹೆಜ್ಜೆಯಿಟ್ಟರು. ಗುರುವಾರ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಅವರು ಇಂಡೊನೇಷ್ಯಾದ ಲಿಯೊ ರೋಲಿ ಕಾರ್ನಂಡೊ – ಡೇನಿಯಲ್ ಮಾರ್ಟಿನ್ ಜೋಡಿಯನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಎಚ್‌.ಎಸ್. ಪ್ರಣಯ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರೆ, ಲಕ್ಷ್ಯ ಸೇನ್ 16ರ ಘಟ್ಟದಲ್ಲೇ ನಿರ್ಗಮಿಸಿದರು. ಮಹಿಳಾ ಡಬಲ್ಸ್‌ನಲ್ಲಿ ಟ್ರಿಸಾ ಜೋಲಿ–ಗಾಯತ್ರಿ ಗೋಪಿಚಂದ್ ಸವಾಲು ಅಂತ್ಯಗೊಂಡಿತು.

ವಿಶ್ವದ ಎರಡನೇ ಕ್ರಮಾಂಕದ ಜೋಡಿಯಾದ ಸಾತ್ವಿಕ್-ಚಿರಾಗ್ 21-15, 19-21, 21-9 ರಿಂದ 10ನೇ ಕ್ರಮಾಂಕದ ಎದುರಾಳಿಗಳ ವಿರುದ್ಧ ಗೆಲ್ಲಲು ಸುಮಾರು ಒಂದು ಗಂಟೆ ತೆಗೆದುಕೊಂಡರು. ಭಾರತದ ಆಟಗಾರರು ಈ ಹಿಂದಿನ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಕಂಚಿನ ಪದಕ ಗಳಿಸಿದ್ದರು.

ಈ ಋತುವಿನಲ್ಲಿ 4 ಪ್ರಶಸ್ತಿಗಳನ್ನು ಗೆದ್ದು ಉತ್ತಮ ಲಯದಲ್ಲಿರುವ ಸಾತ್ವಿಕ್-ಚಿರಾಗ್ ಕ್ವಾರ್ಟರ್‌ಫೈನಲ್‌ನಲ್ಲಿ ಡೆನ್ಮಾರ್ಕ್‌ನ ಕಿಮ್ ಅಸ್ಟ್ರುಪ್- ಆ್ಯಂಡರ್ಸ್ ಸ್ಕಾರುಪ್ ರಸ್ಮುಸ್ಸೆನ್ ಜೋಡಿಯನ್ನು ಎದುರಿಸಲಿದ್ದಾರೆ. 11ನೇ ಶ್ರೇಯಾಂಕದ ಈ ಜೋಡಿ 21-15, 21-10ರಿಂದ 7ನೇ ಶ್ರೇಯಾಂಕದ ಒಂಗ್ ಯೆ ಸಿನ್-ಟಿಯೊ ಇ ಯಿ (ಮಲೇಷ್ಯಾ) ಜೋಡಿಯನ್ನು ಸೋಲಿಸಿತು.

ಇದಕ್ಕೆ ಮೊದಲು ನಡೆದ ಮಹಿಳೆಯರ ಡಬಲ್ಸ್‌ನಲ್ಲಿ ಟ್ರಿಸಾ ಜೋಲಿ 14-21, 9-21 ರಿಂದ ಅಗ್ರ ಶ್ರೇಯಾಂಕದ ಚೆನ್ ಕ್ವಿಂಗ್ ಚೆನ್- ಜಿಯಾ ಯಿ ಫಾನ್ ಜೋಡಿಯನ್ನು ಸೋಲಿಸಿತು. ಚೀನಾದ ಈ ಜೋಡಿ ವಿಶ್ವ ಚಾಂಪಿಯನ್‌ಷಿಪ್‌ನ-ಲ್ಲಿ ಮೂರನೇ ಬಾರಿ ಚಿನ್ನದ ಪದಕದ ಗೆಲ್ಲುವ ಹುಮ್ಮಸ್ಸಿನಲ್ಲಿದೆ. ಈ ಋತುವಿನಲ್ಲಿ ಮೂರು ಪ್ರಶಸ್ತಿಗಳನ್ನು ಮತ್ತು ಮೂರು ಬಾರಿ ರನ್ನರ್ ಅಪ್ ಸ್ಥಾನ ಪಡೆದು ಉತ್ತಮ ಲಯದಲ್ಲಿದೆ.

ಚೀನಾದ ಈ ಜೋಡಿ ಎದುರು ಇದು ಭಾರತದ ಆಟಗಾ-ರ್ತಿಯರಿಗೆ ಎರಡನೇ ಸೋಲು. ಈ ಹಿಂದೆ ಜರ್ಮನ್ ಓಪನ್‌ನಲ್ಲೂ ಅಗ್ರ ಕ್ರಮಾಂಕದ ಜೋಡಿ ಜಯಗಳಿಸಿತ್ತು.



ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ –ಬಿಎಐ 'ಎಕ್ಸ್' ಚಿತ್ರ

ಕ್ವಾರ್ಟರ್‌ಗೆ ಪ್ರಣಯ್ ಲಗ್ಗೆ

ಪುರುಷರ ಸಿಂಗಲ್ಸ್‌ನಲ್ಲಿ 9ನೇ ಕ್ರಮಾಂಕದ ಎಚ್.ಎಸ್. ಪ್ರಣಯ್ ಅವರು 7ನೇ ಕ್ರಮಾಂಕದ ಲೋಹ್ ಕೀನ್ ಯೂ (ಸಿಂಗಪುರ) ಅವರನ್ನು 21-18, 15-21, 21-19 ರಿಂದ ಮಣಿಸಿ, ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಮೂರನೇ ಬಾರಿಗೆ ಕ್ವಾರ್ಟರ್ ಫೈನಲ್ ಪ್ರವೇಶ ಪಡೆದರು.

ಲಕ್ಷ್ಯಸೇನ್ ನಿರ್ಗಮನ: ಮತ್ತೊಂದು ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 11ನೇ ಕ್ರಮಾಂಕದ ಲಕ್ಷ್ಯ ಸೇನ್ ಅವರು ಮೂರನೇ ರ‍್ಯಾಂಕ್‌ನ ಕುನ್ಲವುಟ್ ವಿಟಿಡ್ಸರ್ನ್ (ಥಾಯ್ಲೆಂಡ್) ವಿರುದ್ಧ 14-21, 21-16, 13-21 ರಿಂದ ಪರಾಭವಗೊಂಡು, ನಿರ್ಗಮಿಸಿದರು. ಸೇನ್ ಅವರು 2021ರ ಆವೃತ್ತಿಯಲ್ಲಿ ಕಂಚಿನ ಪದಕ ಗೆದ್ದಿದ್ದರು.

ಸ್ಪ್ಯಾನಿಷ್ ಅಧ್ಯಕ್ಷ ಲೂಯಿಸ್ ವಿರುದ್ಧ ಪ್ರಕರಣ ದಾಖಲು

ಜಿನೆವಾ(ಎಪಿ): ಸ್ಪ್ಯಾನಿಷ್ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಲೂಯಿಸ್ ರುಬೇಲ್ಸ್ ಅವರ ವಿರುದ್ಧ ಫಿಫಾ ಶಿಸ್ತು ಸಮಿತಿಯು ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದೆ.

ಈಚೆಗೆ ಫಿಫಾ ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದ ಸ್ಪೇನ್ ತಂಡದ ಆಟಗಾರ್ತಿ ಜೆನಿಫರ್ ಹೆರ್ಮೊಸೊ ಅವರ ತುಟಿಗೆ ಚುಂಬಿಸಿದ್ದ ಲೂಯಿಸ್ ವ್ಯಾಪಕ ಟೀಕೆಗೊಳಗಾ-ಗಿದ್ದರು. ಸ್ಪೇನ್ ಪ್ರಧಾನಿ ಕೂಡ ಕಿಡಿ ಕಾರಿದ್ದರು. ತಾವು ಉದ್ದೇಶಪೂರ್ವ-ಕವಾಗಿ ಈ ರೀತಿ ವರ್ತಿಸಿಲ್ಲ. ತಂಡದ ಗೆಲುವಿನ ಸಂಭ್ರಮದಲ್ಲಿ ಈ ರೀತಿ ಆಗಿದೆ. ಅದಕ್ಕಾಗಿ ಕ್ಷಮೆ ಯಾಚಿಸುವುದಾಗಿಯೂ ಅವರು ಹೇಳಿದ್ದರು.

'ಕ್ರೀಡೆಯಲ್ಲಿರುವ ಎಲ್ಲ ಆಟಗಾರರು, ಆಟಗಾರ್ತಿಯರ

ಲೂಯಿಸ್

ಆತ್ಮಗೌರವಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಲು ಫೆಡರೇಷನ್ ಬದ್ಧವಾಗಿದೆ. ಯಾವುದೇ ಅಶಿಸ್ತಿನ ನಡವಳಿಕೆಯನ್ನು ಸಹಿಸುವುದಿಲ್ಲ' ಎಂದು ಫಿಫಾ ಹೇಳಿದೆ.

ಕೊಲಂಬಿಯಾದ ವಕೀಲ ಹಾಗೂ ಕಾರ್ಮಿಕ ನ್ಯಾಯಾಲಯದ ಮಾಜಿ ಜಾರ್ಜ್ ಪೆಲಾಸಿಯೊ ನೇತೃತ್ವದ ಶಿಸ್ತು ಸಮಿತಿಯು ವಿಚಾರಣೆ ನಡೆಸಲಿದೆ.

ಹುದ್ದೆ ತ್ಯಜಿಸಿದ ರುಬೇಲ್ಸ್: ಪ್ರಕರಣಕ್ಕೆ ಸಂಬಂಧಿಸಿದಂತೆ ತೀವ್ರ ಖಂಡನೆ ವ್ಯಕ್ತವಾದ ಹಿನ್ನೆಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರುಬೇಲ್ಸ್ ರಾಜೀನಾಮೆ ನೀಡಿದ್ದಾರೆ ಎಂದು ಗುರುವಾರ ಹಲವು ಮಾಧ್ಯಮಗಳು ವರದಿ ಮಾಡಿವೆ.

ಸಿಎಂಆರ್ ವಿಶ್ವವಿದ್ಯಾಲಯವು ಬೆಂಗಳೂರು ನಗರದ ಬಾಗಲೂರಿನ ಲೇಕ್‌ಸೈಡ್ ಕ್ಯಾಂಪಸ್‌ನಲ್ಲಿ ನಿರ್ಮಿಸಿದ ನೂತನ ಕ್ರಿಕೆಟ್ ಸ್ಟೇಡಿಯಂ ಮತ್ತು ಜಿಮ್ನಾಷಿಯಂ ಅನ್ನು ಮಾಜಿ ಕ್ರಿಕೆಟಿಗ ಬ್ರಿಜೇಶ್ ಪಟೇಲ್ ಗುರುವಾರ ಲೋಕಾರ್ಪಣೆ ಮಾಡಿದರು. ಸಿಎಂಆರ್ ವಿವಿಯ ಚೇರ್ಮನ್ ಡಾ.ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಕೆ.ಆರ್. ಜಯದೀಪ್, ಡಾ.ಎಚ್.ಬಿ. ರಾಘವೇಂದ್ರ, ಡಾ.ಸುಬ್ಬಾರೆಡ್ಡಿ, ಡಾ.ಪ್ರವೀಣ್ ಇದ್ದರು.

ರಾಜೇಶ್ವರಿ ಕುಮಾರಿ

ಶೂಟಿಂಗ್: ಒಲಿಂಪಿಕ್ಸ್‌ಗೆ ರಾಜೇಶ್ವರಿ ಕುಮಾರಿ

ಬಾಕು (ಪಿಟಿಐ): ಟ್ರ್ಯಾಪ್ ಶೂಟಿಂಗ್ ಕ್ರೀಡಾಪಟು ರಾಜೇಶ್ವರಿ ಕುಮಾರಿ ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಲು ಅರ್ಹತೆ ಗಳಿಸಿದ್ದಾರೆ.

ಗುರುವಾರ ಇಲ್ಲಿ ನಡೆದ ಐಎಸ್‌ಎಸ್‌ಎಫ್ ವಿಶ್ವ ಚಾಂ-ಪಿಯನ್‌ಷಿಪ್‌ನಲ್ಲಿ ರಾಜೇಶ್ವರಿ ಐದನೇ ಸ್ಥಾನ ಪಡೆದರು. ಅದರೊಂದಿಗೆ ಒಲಿಂಪಿಕ್ ಅರ್ಹತೆ ಗಿಟ್ಟಿಸಿದರು.

ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಳಿಸಿದ ಏಳನೇ ಶೂಟರ್ ಎಂಬ ಹೆಗ್ಗಳಿಕೆ ಅವರದ್ದಾಯಿತು. ಶಾಟ್‌ಗನ್ ವಿಭಾಗದ ದಿಗ್ಗಜ ಮತ್ತು ಕ್ರೀಡಾ ಪದಾಧಿಕಾರಿ ರಣದೀರ್ ಸಿಂಗ್ ಅವರ ಮಗಳು ರಾಜೇಶ್ವರಿ ಟ್ರ್ಯಾಪ್ ವಿಭಾಗದಲ್ಲಿ ಒಲಿಂಪಿಕ್ ಅರ್ಹತೆ ಗಳಿಸಿದ ಎರಡನೇ ಶೂಟರ್ ಆಗಿದ್ದಾರೆ. ಇದಕ್ಕೂ ಮುನ್ನ ಶಗುನ್ ಚೌಧರಿ ಸ್ಥಾನ ಗಿಟ್ಟಿಸಿದ್ದರು.

ಈ ಚಾಂಪಿಯನ್‌ಷಿಪ್‌ನ ಫೈನಲ್ ಸುತ್ತಿನಲ್ಲಿ ಅವರು 30 ಶಾಟ್‌ಗಳ ಪೈಕಿ 19 ಮಾತ್ರ ಗಳಿಸಿದರು.